एवं शब्दस्यार्थस्य च सम्बन्धविषये पुनः ततोऽपि विभिन्नाः विलक्षणाः पक्षाः विलसन्त्येव।

तस्य प्रामाण्यविषयेऽपि प्रामाण्यमेव नास्ति पृथक्प्रामाण्यं नास्ति अस्त्येव प्रामाण्यमित्यादयः पक्षभेदास्सन्त्येव।

शब्दवृत्तिविषयेऽपि बहवः पक्षभेदास्सन्ति। वर्णात्मकशब्दस्य पदत्वम् वाक्यत्वं वा कीदृशमित्यत्रापि सन्ति बहवः पक्षाः।

एवमतिजटिलेऽस्मिन् विषये कतिपयघण्टाकालिक्याऽनया किमधिकं साधयितुं शक्यम् ?

1. प्रथमं सर्वेषां पक्षाणां यथावदध्ययनमावश्यकम्।
2. अनन्तरं तेषां तेषाम् आशयः अन्वेषणीयः।
3. अनन्तरं तेषां तेषां कक्षा कीदृशीत्यन्वेषणीया।
4. अनन्तरं तत्तत्कक्ष्यानुरोधेन प्रमेयो निर्णेतव्यः।
5. एवं कृते सर्वेषामेषामविरोधेनार्थनिर्णयः सुकरः स्यादेव।

एवं सत्येव इति नानाप्रसङ्ख्यानं तत्त्वानामृषयो विदुः।
सर्वं न्याय्यं युक्तिमत्त्वात् विदुषां किमशोभनम्॥

(भाग. ११-२२-२५)

इति वचनस्य मर्म ज्ञातुं शक्यम्। परं तु किञ्चिदिव वैज्ञानिकीदृष्टिरावश्यकी । नो चेत् सर्वं हास्यास्पदं स्यात् विदुषां किमशोभनम् इति वदता अविदुषामशोभनमेव इत्यप्युक्तप्रायमेव।

एतावता कालेन कुत एवं विचारो न कृतः ? इति प्रश्नः स्यात्।

सन्ति बहूनि कारणानि। मुख्यं तु कारणम् “तादृशः कालो नायातः" इत्येव।

इदानीं कालः आगतो वा? आगत एव कः संशयः ? अत्र वयमेव किल साक्षिणः।

अतश्च प्रवर्ततां विचारः इति यदादावुद्घोषितम् तस्योद्घोषः पुनरपि भवतु प्रवर्ततां पुनरपि विचारः इति। एवं यावदर्थनिर्णयम् उद्घोष्यताम् ! तदानीमेव पुण्येनैतद्भारतस्य निजं स्वरूपमाविष्कृतं भवेत्॥ अतः _

प्रवर्ततां पुनः पुनरपि विचारः !
आयोजयतात् पुनः पुनर्विदुषः श्रीलक्ष्मीताताचार्यः !!
सङ्घटयतात् भगवान् तदनुगुणसामग्रीः !!!
पश्येम शरदश्शतम्। जीवेम शरदश्शतम् ॥

****

ग्रन्थर्णम्

पदशक्तिः

Proceedings of the Vidvadgoshthi

Melukote* 25 & 26, December 1994

संस्कृतसंशोधनसंसत्, यादवगिरि(मेलुकोटे)

विज्ञापना

सन्ति बहूनि निदानानि ग्रन्थरचनायाम्। प्राचीने काले - दया, वात्सल्यं, देवप्रेरणा इत्यादीनि, अद्यतने च प्रायः ख्यातिः पूजा, द्वेषः, असूया इत्यादीनि। को वा ह्यद्यतनग्रन्थकर्तृषु तत्तादृशतत्त्वसाक्षात्कर्ता यः दयाभिरेव ग्रन्थं रचयेत्। सर्वोऽपि हि पण्डितलोकः केवलसम्प्रदायैकशरणः कतिपयवाक्यानि शुकवदावर्तयन् स्वाभिमतमर्थं तदुपर्यारोपयन् द्वेषासूयादिभिः स्वान्तःकरणं पूरयंश्च तावतैवात्मानं ज्ञानिनामग्रेसरं मन्यते। परन्तु प्रकृतश्रीकण्ठसमालोचनरचनायां निदानं तु नैतेष्वन्यतममपि, किन्तु निर्वेद एव॥

लोके हि सामान्यत एव ज्ञानिनः अतीव विरलाः। तत्राप्यध्यात्ममार्गे किमु !

मनुष्याणां सहस्रेषु कश्चिद्यतति सिद्धये।

यततामपि सिद्धानां कश्चिन्मां वेत्ति तत्त्वतः॥

इति भगवद्वचनं कदा वा कथं वा वितथं स्यात् ? एतादृशो ज्ञानी स्ववचनाचरणादिभिः इतरान् सामान्यजनान् क्रमशः सन्मार्गे प्रवर्तयितुमलं भवति॥

यद्यदाचरति श्रेष्ठस्तत्तदेवेतरो जनः।
स यत् प्रमाणं कुरुते लोकस्तदनुवर्तते॥

इति तु अक्षरशः सत्यमेव। तदेवं लोकानामादर्शत्वेन तैः परिगृहीतस्य

नरस्य भारः अनन्यसाधारण एव भवति। 'स्वोक्त्या स्वाचारेण यः कश्चित्सामान्यजन अबुद्धिपूर्वकं वा अपथे कदाचित् अवतरेद्वा' इति प्रतिपदम् आत्मा शोधनीयः तादृशेन नरेण॥

एवं वस्तुतत्त्वे सति तादृशः कश्चित् लोकानामादर्शत्वेन गृहीतः स्वयं च युक्तायुक्तविवेचनशक्तियुक्तोऽपि स्वयं नष्टः बुद्धिपूर्वकमेव सर्वान् प्रतारयामास च तेन प्रतारिताश्च बहवो विपथे प्रवृत्ताः इति प्रत्यक्षतः पश्यतः कस्य वा हृदये 'अहो! कलेर्महिमा' इति विस्मयः, ततो निर्वेदश्चावकाशं कथं न प्राप्नुयात् ? को वा तादृशः? इति प्रश्नस्य उत्तरदानाय लेखन्यपि किञ्चित् सङ्कुचति। तत्तादृशाः सुप्रसिद्धाः अप्पयदीक्षिताः एवं सर्वान् प्रतारयामासुः' इति कथनं ममापि चेतः खेदयति। को वा प्रतीयादिदं मर्मपरिज्ञानवतोऽन्यः ? परन्त्विदं गुरूपह्नवं सत्यमेव। बहूनां मनस्सु विपरीते संस्कारे रूढमूले सति नेदं हितं भूयादिति जानाम्येव। प्रत्युत पुनरपि भूयः आत्मानं बुद्धिपूर्वकमेव। कालुष्यदुष्कूपे पातयन्तः आत्मद्रोहेणैव यथेच्छं निन्देयुरित्यपि जानामि। अथापि यः कश्चिद्वा प्रामाणिकः पतत्प्रबन्धेन कदापि प्रसन्नहृदयो भवेदेवेति तावतैवात्मनः प्रयत्नं सफलं मनुतेऽयं जनः।

तत्तादृशाः आदर्शत्वेन गृहीताः स्वयं पण्डिता अपि केनचिदल्पोपाधिना आत्मद्रोहिणो बभूवुः किल ! तदनन्तरकालिका अपि बहवः पण्डिताः तत्त्वं जानन्तोऽपि स्वजनान् प्रतारयन्त एव खलु वर्तन्ते !! इति महतो निर्वेदात् कुत्रचित् तदनुगुणा शब्दाः अवशादेव पतिताः। अतः तादृशानाम् अक्षरार्थो न ग्राह्यः, किन्तु तन्मूलभूतो निर्वेद एव सरणीय इति प्रार्थये। एवम् अजामित्वयैव मध्ये मध्ये ग्रथिता

मर्मोक्तयोऽपि न कमपि स्पृशन्तीति च हार्दमावेदयामि।

इदन्त्वत्र कदापि न विस्मरणीयम् - नायं ग्रन्थः एकस्य मतस्य सम्प्रदायस्य वा दूषणभूषणोद्देशेन प्रवृत्तः। किन्तु सामान्यजनानाम् अनुकरणीया विद्वांसः करणत्रयशुद्धिमन्तो नाभूवन् किल ! इति निर्वेदस्य परिवाह एवायं ग्रन्थः। अत एव यः कश्चिदत्रत्यं विषयं निन्दन् प्रथमतः आत्मानं शोधयतु। यदि च तादृशः कश्चित्पुरुषधौरेयः ग्रन्थस्यास्यातिसङ्क्षिप्तत्वात् तत्र तत्र सुलभावकाशात् संशयात्किम् आक्षेपादिकं वा परिजिहारयिषति तादृग्पुरुषधौरेयस्य साहाय्ये वयं सदा सन्नद्धादरा एवेति विज्ञापयामः। सर्वमेतदनाकलयन् आग्रहादन्धः यः कश्चित् स्वैरं निन्दन् यत्किञ्चित् लिखेच्चेत् तं प्रतीदमेव वदामः _

यदीहत्यल्पं स्वहृदयविसंवादि लिखितम्।
भवेयं दुष्पारप्रचुरनिरयस्येन्धनमहम् ॥

इति आत्मानमेव साक्षीकुर्वन् निन्दतु कामं स इति ।

****

ग्रन्थर्णम्

नव्यमङ्गलाभिजनेन वरदार्येण विरचितम् श्रीकण्ठसमालोचनम्

प्रकाशनम् – श्रीमद्वेदान्तदेशिकविहारसभा, श्रीपरकालमठः,

महीसुरपुरी - 1956

विद्वद्भिः विमर्शनीयम्

Date 20.4.1992

मान्याः !

26.2.92 दिनाङ्कितस्य भवदीयपत्रस्य कृते धन्यवादाः। द्वित्रवारमेतादृशपत्रप्रेषणेपि समुचितप्रतिक्रियामप्रदर्शितवति मयि, औदार्येण, आदरेण, गौरवेण च लिखितस्यास्य पत्रस्य उत्तरदानमावश्यकमिति मत्वेदं लिख्यते ।

अस्मद्भारतवर्षस्येदानीन्तनदुःस्थितिः कीदृशीति प्रायः सर्वे जानन्त्येव । अथापि मर्मज्ञाः परदेशीया अपि अद्यापि भारतवर्षम् अतीवगौरवभावनयैव पश्यन्ति चेत्, तत्र कारणम् अस्मत्संस्कृतिरेव । एवं सत्यपि दुःस्थितेः कारणं संस्कृतज्ञानां विदुषामौदामीन्यं, विपरीतवर्तनमेव। सिद्धान्तदृष्ट्या, मतदृष्ट्या, शास्त्रदृष्ट्या, एवमन्यान्यया भेद्भावनया परस्परकलहायमाना एते संस्कृतविद्वांसः देशस्य समीचीनमादर्शभूतं मार्गं न प्रदर्शयामासुः इति अतिखेदेन वकव्यम्। अद्यापि एतेषां भावना तथैव वर्तते । प्रमाणशास्त्रमिति प्रसिद्धे आर्षे ग्रन्थे विकसत्यपि, एते सर्वे प्रत्येकं प्रत्येकं न्यायशास्त्रं विरच्य, "अस्माकं पञ्च प्रमाणानि, युष्माकं त्रीणि, तेषां तु षट्........" इति कलहायन्त एवाद्यापि ॥

किमासीदेतावता ? कदासीत् ? कुत आसीत् ? इति जिज्ञासैव कस्यापि नास्ति । किं बहुना ! प्रकृतप्रमाणचतुष्टयवादे शक्तिग्राहकस्य

उपमानप्रमाणस्य वस्तुग्राहकप्रमाणमध्ये गणनं कथं घटताम् ! इति को वा जिज्ञासते ? अद्भुतदिव्यज्ञानमूला अस्मत्संस्कृतिः इदानीं सर्वेष्वपि क्षेत्रेष्वज्ञानमेव अप्रतिहतप्रसरेव विराजते । अतः संस्कृतविद्वद्भिः अतीवातीवगहनं विमर्शनीयम्, आलोचनीयम् । भारतीयानां ज्ञानं कियद्विशुद्धमिति प्रदर्शनीयम् । तदनुगुणा सरणिः अनुसरणीया । द्वित्रशतकीयग्रन्थमात्राध्ययनेन किं तत्त्वं ज्ञातुं शक्येत । अधुना तु 'सम्प्रदाय' इति शब्दः 'अज्ञानापरपर्यायः सञ्जातः। अतः मूलमूलतो अन्वेषणं कर्तव्यम् ।

शमार्थं सर्वशास्त्राणि विहितानि मनीषिभिः ।
स एव सर्वशास्त्रज्ञः यस्य शान्तं मनस्सदा ॥

इति व्यासवचनं वा,

सर्वं न्याय्यं युक्तिमत्त्वात् विदुषां किमशोभनम् ।

इतिशुकवचनंवापरिशील्यताम्।नतावतासप्तभङ्गीप्रसङ्गभीतेरवसरः। अतः मदीया सविनया प्रार्थना - "विदुषां किमशोभनम्" इत्युक्तरीत्या अशोभनं परिहरन्तु सर्वे । तेन स्वस्य, स्वीयस्य च नूनमुद्धारो भवेत् । 'अधिकं लिख्यते' इति यदि भावना तर्हि क्षन्तव्योऽयं जनः ॥

भवदीयः

नव्यमङ्गलाभिजनः वरदार्यः

****

(श्रीमद्भिः वरदाचार्यैः .... लिखितं पत्रम् ।)

पण्डितरत्नं श्रीवरदाचार्याणां सन्दर्शनम्

सन्दर्शकः : विद्वान् टि. एन्. प्रभाकरः

सन्दर्शकः :- तत्रभवद्भ्यः आचार्येभ्यः प्रणामाः। त्रैमासिकवार्तापत्रिकायै तत्रभवतां सन्दर्शनं कर्तुम् आनन्दम् अनुभवामि। भवन्तः केषाञ्चन प्रश्नानाम् उत्तरदानेन अनुगृह्णन्तु इति प्रार्थयामि।

आचार्यः :- अस्तु तावत्। यथामति यते

सन्दर्शकः :- सम्प्रति संस्कृतं सामयिकं वा ?

आचार्यः :- संस्कृतं न केवलं सम्प्रति अपि तु भूते भविष्यति सर्वदा च प्रस्तुतम्। विभिन्नक्षेत्रेषु इदानीम् अध्ययनसंशोधनयोः वृद्ध्या नूतनज्ञानशाखाः समुद्भूताः। सर्वासाम् एषां ज्ञानशाखानां साक्षात् परम्परया वा संस्कृतभाषायाः साहित्यस्य शास्त्रवाङ्मयस्य च निकटः सम्बन्धः अस्ति। किन्तु ताः शाखाः अवगन्तुम् आवश्यकानि शास्त्राणि पातालं प्रापितानि इति शोचनीयः। उदाहरणं वदामि इदानीं जीवनस्य सर्वेषु क्षेत्रेषु तीव्रगत्या प्रवर्धमानं म्यानेज्मेंट्तन्त्रं कौटिल्यस्य अर्थशास्त्रे शुक्राचार्यस्य शुक्रनीतिसारे च उपलभ्यते। मानवसम्पन्मूलस्य उपयोगः रामायणे लभ्यते। न केवलं मानवसम्पन्मूलं किन्तु वानरसेनां भल्लूकसेनां च

विरचय्य सम्पन्मूलतया परिवर्त्य उपयुयोज श्रीरामः। देशकालानुसारं वातावरणानुगुणं च शाकफलपुष्पधान्यकृषितन्त्रं शास्त्रेषु विपुलं दृश्यते। एतत् सर्वं लोकोपकारकचिन्तनासरणिः।

सन्दर्शकः :-दर्शनशास्त्राणां हीयमानायाः शास्त्रीयपरम्परायाः विषये भवताम् अभिप्रायः कः ?

आचार्यः :- दर्शनशास्त्राणाम् उद्गमः विकासः चिन्तनं च अनुपमम्। सूत्रं भाष्यं वार्तिकं व्याख्यानं टीका कारिकेत्यादीनां प्रकाराणां दर्शनात् ज्ञायते यत् प्राचीनानां प्रवृत्तिः स्वतन्त्रा वस्तुनिष्ठा चिन्तनशीला च आसीदिति। एतादृशकृतिसहस्रम् अवलोक्यते चेत् संस्कृतज्ञानां मतिः कियती तीक्ष्णा इति स्पष्टं भवति। किन्तु शोचनीयो विषयः यत्सम्प्रति तादृशं शास्त्रीयम् आन्तम् अध्ययनं निर्दिष्टविषये वाक्यार्थसभा च न्यूना जाता। कदाचित् तत्र तत्र किञ्चित् शास्त्राध्ययनम् अध्यापनं च प्रवर्तते चेदपि न तत् पर्याप्तम्। शास्त्रग्रन्थानां साक्षात् भाष्यम् अस्ति। सम्प्रति तदध्ययनं नास्ति। किन्तु मध्यकालिकानां व्याख्यानग्रन्थानां कतिपयभागानां च पाठप्रवचनं कथञ्चित् प्रवर्तते। एनां परिस्थितिम् अवलोकयामः चेत् तानि दिनानि एतस्मिन् शतके न सम्भवेयुः इति भाति। गतानि तानि दिनानि।

सन्दर्शकः :-पूर्वकालापेक्षया सम्प्रति संस्कृतस्य प्रोत्साहः अधिकः अस्ति इति भावयन्ति वा ?

आचार्यः :- आम्। सर्वकाराः संस्कृतम् अधिकतया प्रोत्साहयन्ति। भारतसर्वकारेण संस्कृतस्य कृते शतशः कोटिरूप्यकाणि पञ्चवार्षिकयोजनाङ्गतया प्रदीयन्ते। किन्तु दर्शनशास्त्रस्य इतरज्ञानप्रकारस्य च आमूलाग्रं पाठयितारः न सन्ति। अध्येतारोऽपि न। इत्थं शास्त्राणां प्रौढस्तरीयम् अध्ययनं स्वाप्निकम्। सर्वत्र संस्कृतं भाषात्वेन प्राथमिकस्तरे अत्यल्पप्रमाणेन अधीयते। कर्णाटकसंस्कृत-विश्वविद्यालयोऽपि संस्कृतं भाषारूपेण बोधयितुं नवीनयोजनां निरूपयतु। एतेन संस्कृतस्य प्रथमं सोपानं सुरक्षितं स्यात्।

सन्दर्शकः द्वैतम् अद्वैतम् विशिष्टाद्वैतम् शक्तिविशिष्टाद्वैतञ्चेति वेदान्ताशाखाः अनुभवैकवेद्याः। किन्तु सम्प्रति अनुभवमन्तरा मिथः कलहः प्रवर्तते खलु ?

आचार्यः :- सामयिकोऽयं प्रश्नः। उपनिषत् ब्रह्मसूत्रं भगवद्गीतेति प्रस्थानत्रयम् अधिकृत्य यथानुभवम् आचार्यैः व्याख्यारूपेण भाष्यं विरचितम्। तदधीत्य तत्त्वम् अनुसन्धाय च साक्षात्कर्तव्यम्। अयमेव जीवनस्य चरमं ध्येयम्। सः साक्षात्कारः शततमं सोपानम्। वयन्तु द्वितीयं तृतीयं वा सोपानम् आरूढाः। अप्रत्यक्षं दृश्यं यथाकथञ्चित् ऊहयित्वा वादविवादे निमग्नाः। खण्डनाय मण्डनाय च असङ्ख्याताः लेखाः ग्रन्थाश्च प्रकाशिताः। रागद्वेषाः वर्धिताः। मनश्शान्तिः नैव लब्धा। एतस्मिन् अवसरे अयम् अंशः स्मर्तव्यः। शमार्थं सर्वशास्त्राणि विहितानि

मनीषिभिः। स एव सर्वशास्त्रज्ञः यस्य शान्तमिदं मनः॥

सन्दर्शकः :-वेदशास्त्राधिकारः सीमितो वा ?

आचार्यः :- सर्वथा न। आसक्तास्सर्वे अधिकारिणः। जनानां मनांसि समीकर्तुं संस्कर्तुं च वेदशास्त्राणि प्रवृत्तानि। अतः आसक्ताः सर्वे वेदशास्त्राध्ययनं कुर्युः। महिलाः अपि अधिकारिण्यः इति न पुनर्वक्तव्यं किल ?

सन्दर्शकः - तत्रभवताम् अध्ययनकालः कीदृशः आसीत् किं किञ्चित् उच्येत ?

आचार्यः - अहो ! अवश्यम्। मन्नामानौ उभौ दिवङ्गतौ। ई.एस्. वरदाचार्यः मीमांसकः एस्.एम्. एस्. वरदाचार्यः वैयाकरणः च मम सतीर्थ्यौ। वयं वरदत्रयम् इति प्रथिताः। अस्माकं गुरवः दीक्षाचार्याः। वयं गृहात् संस्कृतपाठशालां प्रति पद्भ्याम् एव अगच्छाम। गमनकाले सूत्रभाष्ययोः आवृत्तौ अस्माकं प्रवृत्तिः आसीत्। एतत् दृष्ट्वा गृहस्थाः हसन्तः वदन्ति स्म तेषां वृक्षाणामपि सूत्रभाष्यं कण्ठस्थं जातम् इति। तदा अस्माकम् एकांशः एव कार्यक्रमः। स च शास्त्रचिन्तनम्। न भूतभविष्यतोः चिन्ता। स्वाध्यायं तप इति अस्माकं भावना आसीत्।

सन्दर्शक :- गुरुकुलस्थापनस्य उद्देशः कः ?

आचार्यः :- इदं प्रायोगिकं गुरुकुलम्। नेपालीयः उद्यमपतिः प्रतिमासं विंशतिसहस्ररूप्यकानुदानं प्रयच्छति। तेषां सदाशयेन इदं

गुरुकुलं प्रचलति। अत्र नेपालीयाः छात्रा एव शास्त्राध्ययननिरताः। ज्ञानदृष्ट्या न परीक्षादृष्ट्या।

सन्दर्शकः :- धन्योऽस्मि।

****

लेखन-ऋणम् :

वार्तापत्रम् – जुलै – २०११
कर्नाटकसंस्कृतविश्वविद्यालयः, बेङ्गळूरु
सम्पुटः – ०१ सञ्चिका – ०३

श्रीरङ्गमङ्गलनिधेः प्रधानोद्देशाः

अस्मद्भारतीयसंस्कृतिः 'आर्यसंस्कृतिः' अथवा आर्षसंस्कृतिरित्युच्यते । ऋषयः खलु महाज्ञानिनः । परन्तु ज्ञानिष्वपि तारतम्यमेव नास्तीति न । "नैको मुनिर्यस्य मतं प्रमाणम्" इत्यादिना तद्गम्यते । ये तु परिपूर्णज्ञानिनः त एव सर्वं ज्ञातुं प्रभवन्ति। "सर्वं य्यं युक्तिमत्त्वात् विदुषां किमशोभनम्" इत्यत्र भागवते इदं स्पष्टम् । अतः एतादृशस्य परिपूर्णस्य ज्ञानस्य तन्मूलकस्य मूलधर्मस्य, तन्मूलिकायाः संस्कृतेश्च प्रचारणादिनैव जगतः स्थिरा शान्तिः भवेत् । एतदर्थं च एवं प्रबन्धः कर्तव्यः ॥ _

१. अस्मत्संस्कृतेः मूलभूतानां ग्रन्थानां श्रीरामायण-भारत-भागवतादीनां नाना मुखम् आबालवृद्धं तत्तदनुगुणं शोधनबोधनप्रकाशनम्।

२. वेदस्य सर्वमूलत्वात् विश्वसाहित्यस्य ज्ञानविज्ञानराशेः वेदस्य यथार्थज्ञानाय प्रयासकरणम् ।

३. जगति विद्यमानानां सर्वेषां मतानां तत्त्वान्वेषणाय प्रयासः सर्वसौहार्दोपयोगितया ।

४. सर्वेषां दर्शनानां मूलतत्त्वान्वेषणम् ।

५. इदं सर्वमपि आबालवृद्धोपयोगि यथा स्यात् तथा संविधानम्॥ एवमेवान्यदपि ।

****

-- वरदार्यः

ಶ್ರೀಲಕ್ಷ್ಮೀಹಯಗ್ರೀವ

ಭಗವಂತನ ಅವತಾರಗಳು ಅನಂತ. 'ಬಹೂನಿ ಮೇ ವ್ಯತೀತಾನಿ ಜನ್ಮಾನಿ' (ನನಗೆ ಅನೇಕ ಜನ್ಮಗಳು ಕಳೆದಿವೆ) (ಗೀ.4.5) ಎಂದು ಭಗವಂತನೇ ಹೇಳಿಕೊಂಡಿರುವನು. ಆದರೆ ಅವನ ಜನ್ಮಗಳು ಜೀವವರ್ಗದ ಜನ್ಮದಂತೆ ಕರ್ಮಫಲವನ್ನು ಅನುಭವಿಸುವುದಕ್ಕಾಗಿಯಲ್ಲ, ಲೋಕೋದ್ಧಾರಕ್ಕಾಗಿಯೇ ಆಗಿರುತ್ತವೆ. ಆದ್ದರಿಂದ ಅವುಗಳನ್ನು ಅವತಾರವೆನ್ನುತ್ತಾರೆ. ಇವುಗಳಲ್ಲಿ ಶ್ರೀಹಯಗ್ರೀವರೂಪಿಯಾದ ಅವತಾರ ವಿಶಿಷ್ಟರೂಪದ್ದು.

ಶ್ರೀಮನ್ಮಹಾಭಾರತದ ಶಾಂತಿಪರ್ವದ ಒಂದು ಭಾಗವಾದ ಮೋಕ್ಷಧರ್ಮದಲ್ಲಿ 'ನಾರಾಯಣಾಖ್ಯಾನದಲ್ಲಿ' 357ನೆಯ ಅಧ್ಯಾಯ 'ಹಯಶಿರ ಉಪಾಖ್ಯಾನ' ಎನಿಸುವುದು. ಇದು ಶ್ರೀಹಯಗ್ರೀವಾವತಾರದ ಸಮಗ್ರ ಸ್ವರೂಪವನ್ನು ತಿಳಿಸುವುದು. ಇದು 96 ಶ್ಲೋಕಗಳನ್ನು ಒಳಗೊಂಡಿರುವುದು. ಅದರ ಸಾರ –

ಪ್ರಳಯದ ಅನಂತರ ಜಗತ್ತನ್ನು ಸೃಷ್ಟಿಸಲು ಇಚ್ಛಿಸಿದ ಪರಮಾತ್ಮನು, ತನ್ನ ನಾಭಿಕಮಲದಲ್ಲಿ ಚತುರ್ಮುಖನನ್ನು ಸೃಷ್ಟಿಸಿ, ಅವರಿಗೆ ವೇದಗಳನ್ನುಪದೇಶಿಸಿ, ಮುಂದಿನ ಸೃಷ್ಟಿಯ ಜವಾಬ್ದಾರಿಯನ್ನು ವಹಿಸಿಕೊಟ್ಟನು.

ವೇದೋಪದೇಶದಿಂದ ಅದ್ಭುತವಾದ ಜ್ಞಾನ–ವಿಜ್ಞಾನಗಳನ್ನು ಪಡೆದ ಚತುರ್ಮುಖನಲ್ಲಿ ಸ್ವಲ್ಪ ಅಹಂಕಾರ ಹುಟ್ಟಿಕೊಂಡಿತು. ಇದನ್ನು ಗಮನಿಸಿದ ಪರಮಾತ್ಮನು ಚತುರ್ಮುಖನಿಗೆ ಬುದ್ಧಿ ಕಲಿಸಲು ರಜಸ್ತಮೋಗುಣಗಳಿಂದ ಮಧು–ಕೈಟಭ ಎಂಬ ಎರಡು ಅಸುರರನ್ನು ಸೃಷ್ಟಿಸಿದನು.

ಅವರಿಬ್ಬರೂ ಚತುರ್ಮುಖನ ವೇದಗಳನ್ನು ಅಪಹರಿಸಿಕೊಂಡು ಪಾತಾಳಲೋಕಕ್ಕೆ ಹೋಗಿ ಅವಿತುಕೊಂಡರು. ವೇದಗಳನ್ನು ಕಳೆದುಕೊಂಡ ಚತುರ್ಮುಖನು ಜ್ಞಾನ–ವಿಜ್ಞಾನ ಶೂನ್ಯನಾಗಿ ಕಣ್ಣುಗಳನ್ನು ಕಳೆದುಕೊಂಡವನಂತಾಗಿ ಪರಮಾತ್ಮನ ಬಳಿಗೆ ಬಂದು ಅನೇಕ ವಿಧವಾಗಿ ಸ್ತೋತ್ರಮಾಡಿದನು.

ಪರಮಾತ್ಮನು ಪ್ರಸನ್ನನಾಗಿ ಶ್ರೀಹಯಗ್ರೀವ ರೂಪವನ್ನು ಸ್ವೀಕರಿಸಿ, ಪಾತಾಳಲೋಕಕ್ಕೆ ಹೋಗಿ, ಅಲ್ಲಿ ಮಧುಕೈಟಭರಿಗೆ ತಿಳಿಯದಂತೆ, ವೇದಗಳನ್ನು ತೆಗೆದುಕೊಂಡು ಬಂದು ಚತುರ್ಮುಖನಿಗೆ ಕೊಟ್ಟನು. ಇದರಿಂದ ಚತುರ್ಮುಖನು ಮತ್ತೆ ಜ್ಞಾನ-ವಿಜ್ಞಾನ ಸಂಪನ್ನನಾದನು.

ಪಾತಾಳಲೋಕದಲ್ಲಿ ಮಧು-ಕೈಟಭರು ವೇದಗಳನ್ನು ಕಾಣದೇ, ವಿಷಯವನ್ನು ಊಹಿಸಿ ಶ್ರೀಹಯಗ್ರೀವದೇವರೊಂದಿಗೆ ಯುದ್ಧಕ್ಕೆ ಬಂದರು. ಶ್ರೀ ಹಯಗ್ರೀವನೂ ಸಹ ಅನಾಯಾಸವಾಗಿ ಅವರಿಬ್ಬರನ್ನು ಸಂಹರಿಸಿ, ಚತುರ್ಮುಖನನ್ನು ರಕ್ಷಿಸಿದನು. ಇದು ಶ್ರೀಹಯಗ್ರೀವಾವತಾರದ ಕಥಾಸಂಗ್ರಹ.

ಶ್ರೀ ಹಯಗ್ರೀವಾವತಾರತತ್ತ್ವ

'ಹಯ' ಎಂದರೆ ಕುದುರೆ. 'ಗ್ರೀವ' ಎಂದರೆ ಕತ್ತು, ಶಿರಸ್ಸು ಎಂದು ತಾತ್ಪರ್ಯ. ಹಯಗ್ರೀವ-ಹಯಶಿರ ಎರಡೂ ಪರ್ಯಾಯ.

ಪಾಂಚರಾತ್ರ ಪ್ರಕ್ರಿಯೆಯ ಪ್ರಕಾರ ಪರಮಾತ್ಮನು ಅನಿರುದ್ಧನಾಗಿ ಸೃಷ್ಟಿಯನ್ನೂ, ಪ್ರದ್ಯುಮ್ನನಾಗಿ ಸ್ಥಿತಿಯನ್ನೂ, ಸಂಕರ್ಷಣನಾಗಿ ಸಂಹಾರವನ್ನೂ ಮಾಡುತ್ತಿರುವನು. ಈ ಮೂವರೇ ಪೌರಾಣಿಕವಾಗಿ ಬ್ರಹ್ಮ, ವಿಷ್ಣು, ಮಹೇಶ್ವರ ಎಂದೆನಿಸಿಕೊಳ್ಳುವರು. ಇವರಲ್ಲಿ ಅನಿರುದ್ಧನೇ ಹಯಗ್ರೀವ ರೂಪವನ್ನು ತಾಳಿದವನು.

ಕಠೋಪನಿಷತ್ತಿನಲ್ಲಿ ಜೀವನವನ್ನು ಹೀಗೆ ಚಿತ್ರಿಸಲಾಗಿದೆ -

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥

(ಈ ಶರೀರ ಒಂದು ರಥ. ಜೀವಾತ್ಮನು ಅದರ ಸವಾರನು. ಬುದ್ಧಿಯು ಸಾರಥಿ. ಮನಸ್ಸು ಕಡಿವಾಣ. ಇಂದ್ರಿಯಗಳು ಕುದುರೆಗಳು. ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳು ಆ ರಥ ಓಡಾಡುವ ಪ್ರದೇಶ. ಹೀಗೆ ಇವುಗಳೊಂದಿಗೆ ಕೂಡಿ ಜೀವನು ಭೋಗವನ್ನು ಅನುಭವಿಸುವನು) ಎಂದು ಜೀವನದ ಸ್ವರೂಪವನ್ನು ಬಣ್ಣಿಸಿ, ಇವುಗಳಲ್ಲಿ ಸಾರಥಿ - ಬುದ್ಧಿ ಸರಿಯಾಗಿದ್ದರೆ ಉಳಿದವೆಲ್ಲವೂ ಹತೋಟಿಯಲ್ಲಿರುವುದು. ಬುದ್ಧಿ-ಸಾರಥಿ ಕೆಟ್ಟರೆ ತುಂಟಕುದುರೆಗಳಂತೆ

ಇಂದ್ರಿಯಾದಿಗಳು ಹತೋಟಿ ತಪ್ಪುತ್ತವೆ. ಜೀವನದ ಗುರಿಯೂ ತಪ್ಪುತ್ತದೆ ಎಂದು ಜೀವನದ ಸಂವಿಧಾನವನ್ನು ಹೇಳಿದೆ.

ಮುಂದುವರಿದು, ಸುಸಂವಿಹಿತವಾದ ಜೀವನ ನಡೆಸುವವನು ಜೀವನದ ಪರಮ ಗುರಿಯಾದ ಮೋಕ್ಷವನ್ನು ಪಡೆಯುವನು –

'ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್'– ಎಂದು ಹೇಳಿದೆ.

ಇಂದ್ರಿಯಗಳ ಅಧೀಶನು ಪರಮಾತ್ಮನು. 'ಹೃಷೀಕೇಶ' ಎಂಬ ಪದ ಇದನ್ನು ತಿಳಿಸುತ್ತದೆ. 'ಹೃಷೀಕ' ಎಂದರೆ ಇಂದ್ರಿಯಗಳು, ಅವುಗಳ ಈಶ– ಸ್ವಾಮಿ ಎಂದು 'ಹೃಷೀಕೇಶ'ಪದದ ಅರ್ಥ.

ಇಂದ್ರಿಯಗಳನ್ನು ಪ್ರೇರಿಸುವವನು ಹೃಷೀಕೇಶನು. ಇಂದ್ರಿಯಗಳು ಹತೋಟಿಯಲ್ಲಿದ್ದರೇನೇ ಅಧ್ಯಾತ್ಮದಲ್ಲಿ ಮುಂದುವರಿಯಲು ಸಾಧ್ಯ. ಇದು ಹೃಷೀಕೇಶನಾದ ಪರಮಾತ್ಮನ ಕೃಪೆಯಿಂದಲೇ ಸಾಧ್ಯ. ಶ್ರೀಹಯಗ್ರೀವನನ್ನು ತನಗೆ ಸಾರಥಿಯಾಗಿ–ಮಾರ್ಗದರ್ಶಕನಾಗಿ ಮಾಡಿಕೊಂಡವನು ತನ್ನ ಜೀವನದ ಗುರಿಯನ್ನು ಮುಟ್ಟುವನು. ಹಯಗ್ರೀವನನ್ನು ಸಾರಥಿಯಾಗಿ ಪಡೆಯದವನ ಇಂದ್ರಿಯಗಳು ಹತೋಟಿಯಲ್ಲಿ ಇರಲಾರವು. ಮೇಲ್ಕಂಡ ತತ್ತ್ವಗಳ ಮೂರ್ತಿಯೇ ಶ್ರೀಹಯಗ್ರೀವ. ಹೀಗಾಗದೇ–ವಿಜ್ಞಾನದ ಸಹಾಯದಿಂದ ಇಂದ್ರಿಯಗಳ ಹತೋಟಿಯನ್ನು ಪಡೆದವನೇ ಜೀವನದ ಗುರಿಯಾದ 'ವಿಷ್ಣುಪದ'ವನ್ನು ಪಡೆಯುವನು. ಈ ಪ್ರಕರಣದಲ್ಲಿ 'ವಿಜ್ಞಾನ' ಎಂಬ ಪದ ವಿಜ್ಞಾನಮೂರ್ತಿಯಾದ ಶ್ರೀಹಯಗ್ರೀವನನ್ನು ಸೂಚಿಸುತ್ತದೆ.

'ಜ್ಞಾನಾನಂದಮಯಂ ದೇವಂ' ಎಂಬ ಶ್ಲೋಕ ಶ್ರೀ ಹಯಗ್ರೀವನನ್ನು ಜ್ಞಾನಸ್ವರೂಪನೆಂದು ತಿಳಿಸುತ್ತದೆ. ಹೀಗೆಯೇ 'ವಿಶುದ್ಧವಿಜ್ಞಾನಘನಸ್ವರೂಪಂ ವಿಜ್ಞಾನವಿಶ್ರಾಣನಬದ್ಧದೀಕ್ಷಂ' ಎಂಬ ಶ್ಲೋಕ ಶ್ರೀ ಹಯಗ್ರೀವನನ್ನು ವಿಜ್ಞಾನಸ್ವರೂಪನು ಎಂದೂ ವಿಜ್ಞಾನವನ್ನು ಕೊಡುವವನೆಂದೂ ಹೇಳುತ್ತವೆ. ಇದರಿಂದ ಶ್ರೀಹಯಗ್ರೀವನು ಜ್ಞಾನ–ವಿಜ್ಞಾನಸ್ವರೂಪನು. ಆದ್ದರಿಂದ ಇವನ ಕೃಪೆಯಿಂದಲೇ ಇಂದ್ರಿಯಾದಿಗಳ ಹತೋಟಿ ಸಾಧ್ಯ.

ಮಾನವನ ಶರೀರದಲ್ಲಿ ಐದು ಇಂದ್ರಿಯಗಳೂ ಶಿರಸ್ಸಿನಲ್ಲಿ ಸೇರಿರುತ್ತವೆ. ಇಂದ್ರಿಯಗಳನ್ನು ಕುದುರೆಗಳಿಗೆ ಹೋಲಿಸಿರುತ್ತದೆ. ಯಜಮಾನವಿಶ್ವಾಸಿಯಾದ

ಕುದುರೆ, ಯಜಮಾನನಿಗಾಗಿ ತನ್ನ ಪ್ರಾಣವನ್ನೇ ಅರ್ಪಿಸುವುದು. ತುಂಟಕುದುರೆ ಹತೋಟಿ ಮೀರಿ ಯಜಮಾನನ ನಾಶಕ್ಕೆ ಕಾರಣವಾಗುವುದು.

ಯಸ್ತ್ವವಿಜ್ಞಾನವಾನ್ ಭವತಿ ಅಮನಸ್ಕಃ ಸದಾಶುಚಿಃ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥

ಯಾವನು ವಿಜ್ಞಾನಮೂರ್ತಿಯಾದ ಶ್ರೀ ಹಯಗ್ರೀವನನ್ನು ಸಾರಥಿಯಾಗಿ ಮಾಡಿಕೊಂಡಿಲ್ಲವೋ, ಅವನ ಇಂದ್ರಿಯಗಳು ತುಂಟಕುದುರೆಗಳಂತೆ ಹತೋಟಿ ತಪ್ಪುತ್ತವೆ.

ಯಸ್ತು ವಿಜ್ಞಾನವಾನ್ ಭವತಿ ಸಮನಸ್ಕಃ ಸದಾ ಶುಚಿಃ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥

ಯಾವನು ವಿಜ್ಞಾನಮೂರ್ತಿಯಾದ ಶ್ರೀ ಹಯಗ್ರೀವನನ್ನು ಸಾರಥಿಯಾಗಿ ಮಾಡಿಕೊಂಡಿರುವನೋ, ಅವನ ಇಂದ್ರಿಯಗಳು ವಿಶ್ವಾಸಿಯಾದ ಕುದುರೆಗಳಂತೆ ಹತೋಟಿಯಲ್ಲಿರುತ್ತವೆ.

ವಿಜ್ಞಾನಸಾರಥಿರ್ಯಸ್ತು ಮನಃಪ್ರಗ್ರಹವಾನ್ನರಃ ।
ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥

ಹೀಗೆ ಹಯಗ್ರೀವನನ್ನು ಸಾರಥಿಯಾಗಿ ಪಡೆದವನ, ಮನಸ್ಸೆಂಬ ಕಡಿವಾಣ ಬಿಗಿಯಾಗಿ, ಇಂದ್ರಿಯಗಳು ದಾರಿ ತಪ್ಪದೆ ಜೀವನದ ಮಾರ್ಗ ಸರಿಯಾಗಿ, ಪರಮಪ್ರಾಪ್ಯವಾದ ವಿಷ್ಣುಪದವನ್ನು ಶಾಶ್ವತ ನೆಲೆಯನ್ನು ಪಡೆಯುವ, ಶ್ರೀ ಕೃಷ್ಣನನ್ನು ಸಾರಥಿಯಾಗಿ ಮಾಡಿಕೊಂಡ ಅರ್ಜುನನೇ ಇದಕ್ಕೆ ಉದಾಹರಣೆ.

ಪುರಾಣಾಂತರಗಳು

ಬೇರೆ ಬೇರೆ ಪುರಾಣಾದಿಗಳಲ್ಲಿ 'ಹಯಗ್ರೀವ' ಎಂಬ ಹೆಸರಿನಲ್ಲಿ ಋಷಿಗಳ, ಅಸುರರ, ಮತ್ತು ರಾಜರ ಕಥೆಗಳು ಬಂದಿರುತ್ತವೆ. ದೇವೀಭಾಗವತದಲ್ಲಿ ಹಯಗ್ರೀವರೂಪಿಯಾದ ವಿಷ್ಣುವಿನ ಒಂದು ಕಥೆಯೂ ಬಂದಿರುತ್ತದೆ. ಪರಮಾತ್ಮನು ಅನಂತಲೀಲನು, ಅನಂತರೂಪನು. ನಮಗೆ ಬೇಕಾದ, ನಮ್ಮ ಶ್ರೇಯಸ್ಸಿಗೆ ಕಾರಣವಾದ ರೂಪವನ್ನು ಮಾತ್ರ ನಾವು ತಿಳಿದುಕೊಂಡರೆ ಸಾಕು. ಉಳಿದವು ಪ್ರಕೃತಕ್ಕೆ ಸಂಬಂಧಪಟ್ಟಿಲ್ಲ. ಸಂಗ್ರಹವಾಗಿ ಹೇಳುವುದಾದರೆ– ಪುರಾಣಾದಿಗಳನ್ನು ಸಾತ್ವಿಕ, ರಾಜಸ, ತಾಮಸ ಎಂದು ವಿಂಗಡಿಸಿರುತ್ತಾರೆ. ಸಾತ್ವಿಕರಿಗೆ ಸಾತ್ವಿಕಪುರಾಣವೇ ಗ್ರಾಹ್ಯ.

ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತ್ವಿಕಸ್ಸ ತು ವಿಜ್ಞೇಯಃ ಸ ವೈ ಮೋಕ್ಷಾರ್ಥಚಿಂತಕಃ ॥

ಯಾವ ಚೇತನನು ಹುಟ್ಟುವಾಗಲೇ ಮಧುಸೂದನನ ಕಟಾಕ್ಷಕ್ಕೆ ಪಾತ್ರನಾಗಿರುವನೊ, ಅವನೇ ಪರಮ ಸಾತ್ತ್ವಿಕನು, ಅವನೇ ಮುಮುಕ್ಷುವಾಗಿ, ಅದಕ್ಕೆ ತಕ್ಕ ಚಿಂತನೆಯುಳ್ಳವನಾಗುವನು ಎಂದು ಹೇಳಿರುವ - ಸಾತ್ತ್ವಿಕರು ಉಪಾಸಿಸತಕ್ಕ ಹಯಗ್ರೀವನನ್ನು ಕುರಿತು ತಿಳಿಯುವುದೇ ಆವಶ್ಯಕ. ಮೇಲ್ಕಂಡ ಶ್ಲೋಕ ಮಹಾಭಾರತದಲ್ಲಿ ಹಯಶಿರ ಉಪಾಖ್ಯಾನದ ಅನಂತರದ ಅಧ್ಯಾಯದಲ್ಲಿ ಬಂದಿದೆ. ಆ ಶ್ಲೋಕದಲ್ಲಿ 'ಮಧುಸೂದನಃ' ಎಂಬ ಪದ ಬಂದಿದೆ. ಮಧು-ಕೈಟಭರನ್ನು ಸಂಹಾರ ಮಾಡಿದ ಹಯಗ್ರೀವ ದೇವರನ್ನೇ ಆ ಶ್ಲೋಕ ಹೇಳುತ್ತದೆ ಎಂಬುದು ಸ್ಪಷ್ಟ.

ಮಧುಸೂದನನು

ಮಧು-ಕೈಟಭರು ರಜಸ್ಸು ಮತ್ತು ತಮೋಗುಣಗಳಿಂದ ಹುಟ್ಟಿದವರೆಂದು ಹಿಂದೆಯೇ ಹೇಳಿದೆ. ರಜಸ್ಸು ಮತ್ತು ತಮಸ್ಸು ಅಡಗಿದರೆ ನಮ್ಮ ಸತ್ತ್ವಗುಣವು ತಾನಾಗಿಯೇ ತಲೆ ಎತ್ತುವುದು. ಅವನೇ ಸಾತ್ತ್ವಿಕನು. ಅವನೇ ತತ್ತ್ವವನ್ನು ಚಿಂತಿಸಿ ಅರಿಯಬಲ್ಲನು. ಇದನ್ನೇ ಆಚಾರ್ಯರು 'ಜಾಯಮಾನ ಮಧುಸೂದನಕಟಾಕ್ಷ' ಎಂದು ನಿರ್ದೇಶಿಸಿರುವರು. ಅಸುರ ಸಂಹಾರದೊಂದಿಗೆ ಜ್ಞಾನೋಪದೇಶವನ್ನು ಮಾಡಿದ್ದು ಹಯಗ್ರೀವಾವತಾರದ ವೈಶಿಷ್ಟ್ಯ. "ಹಯಶೀರ್ಷಪಾಂಚರಾತ್ರ" ಎಂದು ಪಾಂಚರಾತ್ರಸಂಹಿತೆಯೇ ಇರುತ್ತದೆ. ಇದರಂತೆಯೇ ಶ್ರೀಕೃಷ್ಣಾವತಾರದಲ್ಲೂ ಅಸುರಸಂಹಾರದೊಂದಿಗೆ ಗೀತೋಪದೇಶವನ್ನು ಮಾಡಿದ್ದರಿಂದಲೇ 'ಬ್ರಹ್ಮಣ್ಯೋ ದೇವಕೀಪುತ್ರೋ ಬ್ರಹ್ಮಣ್ಯೋ ಮಧುಸೂದನೋಮ್' ಎಂದು ನಾರಾಯಣಾಥರ್ವಶಿರ ಉಪನಿಷತ್ತಲ್ಲಿ ಭಗವಂತನನ್ನು 'ಮಧುಸೂದನ' ಎಂದು ಕರೆದಿದೆ.

ಇದರಿಂದ ಶ್ರೀಕೃಷ್ಣಾವತಾರಕ್ಕೂ ಶ್ರೀಹಯಗ್ರೀವಾವತಾರಕ್ಕೂ ಒಂದು ರೀತಿಯ ಸಂಬಂಧ ಪ್ರಸಿದ್ಧ. ಕೃಷ್ಣಾವತಾರದಲ್ಲಿ ಶ್ರೀಕೃಷ್ಣನು 'ಮಧು' ಎಂಬ ಅಸುರನನ್ನು ಸಂಹರಿಸಿದ ಕಥೆ ಬರುವುದೇ ಇಲ್ಲ. ಆದರೂ 'ಮಧುಸೂದನ'ಪದ ಶ್ರೀಕೃಷ್ಣನನ್ನೇ ಹೇಳುತ್ತದೆ ಎಂಬುದು ಸರ್ವಪ್ರಸಿದ್ಧ. ಗೀತೆಯ ಆರಂಭದಲ್ಲೇ 'ಉವಾಚ ಮಧುಸೂದನಃ' ಎಂದಿದೆ.

ಹೀಗೆ ಹಯಗ್ರೀವನಿಗೂ, ಕೃಷ್ಣನಿಗೂ ಒಂದೇ ಹೆಸರಿರುವುದರಿಂದಲೇ

ಹಯಗ್ರೀವನಿಂದ ಉಪದಿಷ್ಟವಾದ ಪಾಂಚರಾತ್ರವೂ, ಕೃಷ್ಣನಿಂದ ಉಪದಿಷ್ಟವಾದ ಗೀತೆಯೂ ಒಂದೇ ಉದ್ದೇಶದಿಂದ ಹುಟ್ಟಿರುವುದು ಎಂದೂ, ಪಾಂಚರಾತ್ರ ವಿಸ್ತಾರವಾದ್ದು, ಗೀತೆ ಅದರ ಸಂಗ್ರಹರೂಪದ್ದು ಎಂದೂ ಆಚಾರ್ಯರುಗಳು ಹೇಳಿರುವರು.

ಪಾಂಚರಾತ್ರ ಭಾಗವತಧರ್ಮಪ್ರತಿಪಾದಕ. ಗೀತೆಯೂ ಭಾಗವತಧರ್ಮ ಪ್ರತಿಪಾದಕವೆಂಬುದು ಸರ್ವಸಮ್ಮತ. ಭಾಗವತಧರ್ಮ ಎಂದರೆ, ಭಕ್ತಿಮಾರ್ಗ. ಹೀಗೆ ಸೃಷ್ಟಿಯ ಆರಂಭದ ಹಯಗ್ರೀವಾವತಾರಕ್ಕೂ, ಕೊನೆಯದಾದ ಕೃಷ್ಣಾವತಾರಕ್ಕೂ ಸಾಮ್ಯಗಳಿರುವುದರಿಂದಲೇ ಮಧುಸೂದನ, ಕೈಟಭಾರಿ, ಹೃಷೀಕೇಶ ಇತ್ಯಾದಿ ಪದಗಳು ಇಬ್ಬರಿಗೂ ಸಮಾನವಾಗಿರುವುವು. ಇಬ್ಬರೂ ಜ್ಞಾನವಿಜ್ಞಾನ-ಮೂರ್ತಿಗಳು. ಗೀತೆಯಲ್ಲಿ ಜ್ಞಾನ-ವಿಜ್ಞಾನಪದಗಳು ಅನೇಕ ಕಡೆಯಲ್ಲಿ ಬಂದಿರುವುದನ್ನು ನೋಡಬಹುದು.

ಹಯಗ್ರೀವನು, ನರಹಯನಲ್ಲ

ಶ್ರೀ ನರಸಿಂಹಾವತಾರದಲ್ಲಿ ಭಗವಂತನು ಮಾನವ ಮತ್ತು ಸಿಂಹದ ಆಕಾರವನ್ನು ತಾಳಿದಂತೆ ಹಯಗ್ರೀವಾವತಾರದಲ್ಲಿ, ಕುದುರೆ ಮತ್ತು ಮಾನವ ರೂಪವನ್ನು ತಾಳಿದ್ದರೂ 'ನರಸಿಂಹ' ಎಂದು ಹೇಳುವಂತೆ 'ನರಹಯ' ಎಂದು ಹೇಳುವುದಿಲ್ಲ. ಏಕೆಂದರೆ-ನರಸಿಂಹರೂಪ ಹೊಸದಾದ ಒಂದು ಅವತಾರ. ಹಯಗ್ರೀವಾವತಾರ ಹೊಸ ಒಂದು ಅವತಾರವಲ್ಲ.

ಚತುರ್ಮುಖನನ್ನು ತನ್ನ ನಾಭಿಕಮಲದಿಂದ ಸೃಷ್ಟಿಸಿದ 'ಅನಿರುದ್ಧ'ರೂಪಿಯಾದ ಭಗವಂತನೇ ಶಿರಸ್ಸಿನಲ್ಲಿ ಮಾತ್ರ ರೂಪವನ್ನು ಬದಲಾಯಿಸಿಕೊಂಡು ಹಯಗ್ರೀವನಾದನು. ಇದನ್ನು 'ಅನಿರುದ್ಧತನೌ ಸ್ಥಿತಮ್' ಎಂದು ಹಯಶಿರ ಉಪಾಖ್ಯಾನದಲ್ಲಿ ಹೇಳಿದೆ. ಈ ಅವತಾರ ಸೃಷ್ಟಿಯ ಆರಂಭಕಾಲಕ್ಕೆ ಸೇರಿರುತ್ತದೆ. ದಶಾವತಾರಗಳು ಸೃಷ್ಟಿಯ ಬಹಳ ದೂರ ಮುಂದುವರಿದ ಮೇಲೆ ಬಂದವು. ಆದ್ದರಿಂದಲೇ ಈ ಅವತಾರ ದಶಾವತಾರದಲ್ಲಿ ಪರಿಗಣಿತವಾಗಲಿಲ್ಲ.

ಹೀಗೆ ಹಯಗ್ರೀವನಾಗಿ ಅನಿರುದ್ಧನೇ ಆದನೆಂದು ತಿಳಿಯುವುದರಿಂದ ಹಯಗ್ರೀವಮೂರ್ತಿ ಶುದ್ಧಸಾತ್ತ್ವಿಕಮೂರ್ತಿಯೆನಿಸುವುದು. ಇವನ ಕಟಾಕ್ಷದಿಂದಲೇ ಮೋಕ್ಷಚಿಂತೆ ಹುಟ್ಟುವುದು. ಇದು ಇಂದ್ರಿಯಗಳ

ಜಯದಿಂದಲೇ ಸಾಧ್ಯ. ಇಂದ್ರಿಯಗಳೆಲ್ಲವೂ ಶಿರಸ್ಸಿನಲ್ಲೇ ಕ್ರೋಡೀಕೃತವಾಗಿವೆ. ಇಂದ್ರಿಯಗಳೇ ಹಯ - ಕುದುರೆ, ದಮನ ಮಾಡಲು ಅಸಾಧ್ಯವಾದದ್ದು. ಇಂದ್ರಿಯಜಯಕ್ಕೆ ಹಯಗ್ರೀವನ ಅನುಗ್ರಹ ಆವಶ್ಯಕ.

ವಿಷ್ಣು ನೀಲಮೇಘಶ್ಯಾಮಲನೆಂದು ಪ್ರಸಿದನಾದರೂ ಹಯಗ್ರೀವನು ಶುದ್ಧಸ್ಫಟಿಕ ವರ್ಣದವನು. ಇದು ಹಯಗ್ರೀವನು ಕೃತಯುಗದೇವನೆಂಬುದನ್ನು ತಿಳಿಸುತ್ತದೆ. ಭಗವಂತನು ಕೃತಯುಗದಲ್ಲಿ ಬಿಳಿಯ ಬಣ್ಣದವನಾಗಿಯೂ, ತ್ರೇತಾಯುಗದಲ್ಲಿ ಕೆಂಪು ಬಣ್ಣದವನಾಗಿಯೂ, ದ್ವಾಪರಯುಗದಲ್ಲಿ ಹಳದಿ ಬಣ್ಣದವನಾಗಿಯೂ, ಕಲಿಯುಗದಲ್ಲಿ ನೀಲಿಯ ಬಣ್ಣದವನಾಗಿಯೂ ಇರುವನೆಂದು ಶ್ರೀ ಹಯಗ್ರೀವ ಮತ್ತು ಶ್ರೀಕೃಷ್ಣನ ತತ್ತ್ವದಿಂದ ಕೃತಯುಗ-ಕಲಿಯುಗಗಳಿಗೆ ಒಂದು ಸೇತುವೆಯ ನಿರ್ಮಾಣವಾದಂತಿದೆ.

ಚಾರಿತ್ರಿಕ ಶೋಧನೆ

ಹೀಗೆ ವೇದ-ಇತಿಹಾಸಗಳ ದೃಷ್ಟಿಯಿಂದ ಸಾಂಪ್ರದಾಯಿಕವಾಗಿ ಹಯಗ್ರೀವರನ್ನು ಕುರಿತು ಹೇಳಿದ ಮೇಲೆ ಈ ದೇವರನ್ನು ಚಾರಿತ್ರಿಕವಾಗಿ ನೋಡುವುದರಲ್ಲಿ ಒಂದು ವೈಶಿಷ್ಟ್ಯ ಸಿದ್ಧವಾಗುತ್ತದೆ.

ಮಧುಸೂದನಪದ ಹಳೆಯದಾದರೂ ಚಾರಿತ್ರಿಕವಾಗಿ ಶ್ರೀ ಹಯಗ್ರೀವನ ಉಪಾಸಕರು, ಅಥವಾ ಅವರಿಂದ ರಚಿತಸ್ತೋತ್ರ ಇದು ಯಾವುದೂ ಹಳೆಯದು ದೊರೆಯುವುದಿಲ್ಲ. ಇದಕ್ಕೆ ಕಾರಣಗಳನೇಕ. ನಮಗೆ ಸಿಕ್ಕುವ ಪುರಾವೆಗಳು-ಮೊದಲನೆಯದಾಗಿ 'ಶ್ರೀರಾಮಾನುಜರಿಗೆ ಸರಸ್ವತೀದೇವಿ ತನ್ನ ಪೂಜ್ಯಮೂರ್ತಿಯಾದ ಹಯಗ್ರೀವಮೂರ್ತಿಯನ್ನು ಕೊಟ್ಟಳು' ಎಂಬದು ಗುರುಪರಂಪರಾ ಕಥೆಯಲ್ಲಿ ಸಿಕ್ಕುತ್ತದೆ. ಇದರ ನಂತರ ಶ್ರೀಮಧ್ವಾಚಾರ್ಯರ ತಂತ್ರಸಾರಾಗಮದಲ್ಲಿ ಕೆಲವು ಹಯಗ್ರೀವಮಂತ್ರಗಳ ಉದ್ಧಾರ ಸಿಕ್ಕುತ್ತದೆ. ಆದರೂ ಮಧ್ವಾಚಾರ್ಯರು ಹಯಗ್ರಿವೋಪಾಸಕರಲ್ಲ. ಅವರ ಕುಲದೇವರು ಶ್ರೀ ನರಸಿಂಹರು, ಇಷ್ಟದೇವರು ಶ್ರೀಕೃಷ್ಣ.

ಇವನ್ನು ಬಿಟ್ಟರೆ ಚಾರಿತ್ರಿಕವಾಗಿ ಶ್ರೀವೇದಾಂತದೇಶಿಕರ ಚರಿತ್ರೆಯಲ್ಲಿ ಈ ವಿಷಯ ನಮಗೆ ಸ್ಪಷ್ಟವಾಗಿ ಸಿಕ್ಕುವುದು. ಇವರು ಚಾರಿತ್ರಿಕವಾಗಿ ಹಯಗ್ರೀವೋಪಾಸಕರಲ್ಲಿ ಮೊದಲನೆಯವರು. ಇದರಲ್ಲೂ ಒಂದು ವೈಶಿಷ್ಟ್ಯ.

ಇವರಿಗೆ ಇವರ ಗುರುಗಳು ಗರುಡಮಂತ್ರವನ್ನು ಉಪದೇಶಿಸಿದರು. ಆ

ಮಂತ್ರವನ್ನು ಇವರು ಪುರಶ್ಚರಣ ಮಾಡಿದಾಗ ಗರುಡನು ಇವರಿಗೆ ಪ್ರತ್ಯಕ್ಷವಾಗಿ ಶ್ರೀಹಯಗ್ರೀವಮಂತ್ರವನ್ನು ಉಪದೇಶಿಸಿದನು. ಹೀಗೆ ದೈವೀಶಕ್ತಿಯಲ್ಲಿ ಮಂತ್ರೋಪದೇಶ ಪಡೆಯುವುದು ಅಸಾಧಾರಣವಾದ್ದೆಂಬುದು ಮಾತ್ರವಲ್ಲದೆ, ಒಂದು ದೇವತೆ ಮತ್ತೊಂದು ದೇವತೆಯ ಮಂತ್ರವನ್ನು ಉಪದೇಶಿಸುವುದು ಮಂತ್ರಶಾಸ್ತ್ರ ಪ್ರಕ್ರಿಯೆಯಲ್ಲಿ ಆಶ್ಚರ್ಯಕರವಾದ ಘಟನೆ.

ಇದರಿಂದ ಇವರಿಗೆ ದೇವತೆಗಳ ಅನುಗ್ರಹ ಎಷ್ಟೊಂದು ಪ್ರಮಾಣದಲ್ಲಿತ್ತೆಂಬುದೂ ವಿಶೇಷವಾಗಿ ಶ್ರೀಹಯಗ್ರೀವದೇವನು ತಾನಾಗಿಯೇ ವರಿಸಿಕೊಂಡು ಬಂದು ಇವರಲ್ಲಿ ನೆಲಸಿದನೆಂಬುದೂ ಇವರ ಮಹತ್ತ್ವಕ್ಕೆ ಸಾಕ್ಷಿಯಾಗಿದೆ.

ಚಾರಿತ್ರಿಕದೃಷ್ಟಿಯಲ್ಲಿ ಶ್ರೀಹಯಗ್ರೀವನ ಪೂರ್ಣಕಟಾಕ್ಷಕ್ಕೆ ಪಾತ್ರರಾದವರಲ್ಲಿ ಇವರೇ ಮೊದಲನೆಯವರು. ಶ್ರೀವಾದಿರಾಜಾದಿಗಳು ಇವರ ಅನಂತರ ಕಾಲದವರೇ. ಲೌಕಿಕ ಸಾಹಿತ್ಯರೂಪದಲ್ಲಿ ಶ್ರೀವೇದಾಂತದೇಶಿಕರ ಶ್ರೀಹಯಗ್ರೀವಸ್ತೋತ್ರವೇ ಮೊದಲನೆಯದು.

ಇವೆಲ್ಲವನ್ನೂ ನೋಡಿದಲ್ಲಿ, ಮಹಾಭಾರತಾದಿಕಾಲದಲ್ಲಿ ಕೆಲವರಿಗೆ ಒಲಿದಿದ್ದ ಶ್ರೀಹಯಗ್ರೀವನು, ಕಾರಣಾಂತರದಿಂದ ಮರೆಯಾದನು. ಮತ್ತೆ ಶ್ರೀ ರಾಮಾನುಜರಲ್ಲಿ ಆವಿರ್ಭವಿಸಿ, ಶ್ರೀವೇದಾಂತದೇಶಿಕರಲ್ಲಿ ಪೂರ್ಣವಾಗಿ ಪ್ರಕಾಶಿಸಿರುವನು ಎಂಬುದು ಸ್ಪಷ್ಟ.

ಶ್ರೀವೇದಾಂತದೇಶಿಕರ ವ್ಯಕ್ತಿತ್ವ, ವೇದಮಾರ್ಗ ಪ್ರತಿಷ್ಠಾಪನೆ ಇವು ಇದರಿಂದ ವ್ಯಕ್ತವಾಗುವುದು. ನಮ್ಮ ಸಂಸ್ಕೃತಿಯ ಚರಿತ್ರೆಯನ್ನು ತುಂಬ ಆಳವಾಗಿ ವಿಮರ್ಶಿಸಿದಾಗಲೇ ಶ್ರೀವೇದಾಂತದೇಶಿಕರು ಎಂತಹ ವ್ಯಕ್ತಿತ್ವವನ್ನು ಪಡೆದಿದ್ದರೆಂಬುದು ವ್ಯಕ್ತವಾಗುವುದು.

ಶ್ರೀಹಯಗ್ರೀವರ ಅರ್ಚಾಮೂರ್ತಿ ಸರಸ್ವತೀದೇವಿಯಿಂದ ಶ್ರೀರಾಮಾನುಜರಿಗೆ ದೊರೆತ ಆ ದಿವ್ಯಮೂರ್ತಿಯನ್ನು, ಶ್ರೀರಾಮಾನುಜರು ತನ್ನ ಜ್ಞಾನಪುತ್ರರಾದ ಕುರುಕೇಶರಿಗೆ ಕೊಟ್ಟು ಅನುಗ್ರಹಿಸಿದರು. ಅವರ ವಂಶದಲ್ಲಿ ಅವರ ಮೊಮ್ಮಕ್ಕಳಾದ ಪುಂಡರೀಕಾಕ್ಷರು ಆ ಮೂರ್ತಿಯನ್ನು ಪೂಜಿಸುತ್ತಿದ್ದರು.

ಒಂದು ದಿನ ಅವರ ಕನಸಿನಲ್ಲಿ ಶ್ರೀಹಯಗ್ರೀವನು ಕಾಣಿಸಿಕೊಂಡು 'ನನ್ನನ್ನು ವೇದಾಂತದೇಶಿಕರಿಗೆ ಪೂಜಿಸಲು ಕೊಟ್ಟುಬಿಡು' ಎಂದು

ಸೂಚಿಸಿದನು. ಅದೇ ದಿನದಲ್ಲೇ ವೇದಾಂತದೇಶಿಕರಿಗೂ, ಅವರ ಬಳಿ ಹೋಗಿ ತನ್ನನ್ನು ಸ್ವೀಕರಿಸುವಂತೆ ಆಜ್ಞಾಪಿಸಿದನು. ಮಂತ್ರೋಪದೇಶದಲ್ಲಿ ಆದ ಆಶ್ಚರ್ಯದಂತೆಯೇ, ಅರ್ಚಾಮೂರ್ತಿಯ ವಿಷಯದಲ್ಲೂ ನಡೆದ ಆಶ್ಚರ್ಯಘಟನೆಯಿಂದ ಶ್ರೀಹಯಗ್ರೀವರಿಗೂ ವೇದಾಂತದೇಶಿಕರಿಗೂ ಇರುವ ನಿಕಟಸಂಬಂಧವನ್ನು ತಿಳಿಯಬಹುದು.

ಬೆಳಗ್ಗೆ ಶ್ರೀವೇದಾಂತದೇಶಿಕರು ಪುಂಡರೀಕಾಕ್ಷರ ಮನೆಗೆ ಹೋದಾಗ, ಅವರೂ ಇವರಿಗಾಗಿ ಕಾಯುತ್ತಿದ್ದದ್ದು ಗೊತ್ತಾಗಿ ಪರಸ್ಪರ ಆಶ್ಚರ್ಯಮಗ್ನರಾದರು. ಶ್ರೀವೇದಾಂತದೇಶಿಕರ ಕಾಲಾನಂತರ ಅವರ ಮುಖ್ಯ ಶಿಷ್ಯರಾದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಸ್ವಾಮಿಗಳಿಂದ ಆ ಮೂರ್ತಿ ಪೂಜಿತವಾಗಿ, ಅವರ ಶಿಷ್ಯಪರಂಪರೆಯಲ್ಲಿ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಮಠದಲ್ಲಿ ಆ ಹಯಗ್ರೀವನು ಇಂದಿಗೂ ಪೂಜಾದಿಗಳನ್ನು ಸ್ವೀಕರಿಸಿ ಜಗತ್ತನ್ನೂ ರಕ್ಷಿಸುತ್ತಿರುವನು.

****

ಗ್ರಂಥ–ಋಣ

ವಿಶ್ವಧರ್ಮವಿಮರ್ಶೆ
ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ
ಮೈಸೂರು – 1984

ವಿಶ್ವಧರ್ಮವಿಮರ್ಶೆ

ಮಾನವನಿಗೆ ಆರೋಗ್ಯವೇ ಸಹಜವಾದರೂ ಅವನಿಗೆ ರೋಗವೂ ಅದರ ಚಿಕಿತ್ಸೆಯೂ ಅನಿವಾರ್ಯವಾಗಿರುವಂತೆ, ಮಾನವನಿಗೆ ಶಾಂತಿಯೇ ಸಹಜವಾಗಿದ್ದರೂ ಅಶಾಂತಿಯೂ, ಅದರ ಪರಿಹಾರ ಚಿಂತನೆಯೂ ಅನಿವಾರ್ಯವೇ ಆಗಿರುತ್ತದೆ. ಎಲ್ಲರೂ ಅವರವರ ಪಾಲಿಗೆ ಅಶಾಂತಿಯ ಕಾರಣವನ್ನೂ, ಅದರ ಪರಿಹಾರೋಪಾಯವನ್ನೂ ಕಂಡುಹಿಡಿಯಲು ಪ್ರಯತ್ನಪಡುತ್ತಿರುವುದು ಹೊಸದೇನಲ್ಲ.

ಅಶಾಂತಿಗೆ ಕಾರಣ ಮತ್ತು ಅದರ ಪರಿಹಾರ ಚಿಂತನೆ

'ಪ್ರಬಲೇನ ದುರ್ಬಲಸ್ಯ ಬಾಧಃ'– ಪ್ರಬಲರಿಂದ ದುರ್ಬಲರ ಶೋಷಣೆಯೇ ಅಶಾಂತಿಗೆ ಮೂಲತಃ ಕಾರಣವಾಗುತ್ತದೆ ಎಂಬುದರಲ್ಲಿ ವಿವಾದವಿಲ್ಲ. ಇದನ್ನು ತಪ್ಪಿಸುವುದಕ್ಕಾಗಿಯೇ ರಾಜ್ಯಾಂಗಗಳು ಏರ್ಪಟ್ಟವು. ಪ್ರಬಲರಿಂದ ದುರ್ಬಲರ ರಕ್ಷಣೆಯೇ ರಾಜ್ಯಾಂಗದ ಪರಮೋದ್ದೇಶ. ಆದರೆ ಆ ರಾಜ್ಯಾಂಗವೇ ತನ್ನ ಪ್ರಜೆಗಳನ್ನು ಶೋಷಣೆ ಮಾಡಲು ಹೊರಟಾಗ, ಪ್ರಕೃತಿಶಕ್ತಿಯೇ ರೇಗಿ ಎದ್ದು ಅದನ್ನು ಪ್ರತಿಭಟಿಸುತ್ತದೆ. ಇದರ ಫಲವೇ 'ಪ್ರಜಾಪ್ರಭುತ್ವ'. ರಾಜ್ಯಾಂಗದಲ್ಲಿ ಒಬ್ಬನು ಮೇಲು, ಮತ್ತೊಬ್ಬನು ಕೀಳು ಎಂಬುದಿಲ್ಲ, ಎಲ್ಲರೂ ಸಮ ಎಂದಾಗ ಸ್ವಲ್ಪಮಟ್ಟಿಗೆ ಸಮಾಧಾನ.

ಆದರೆ, ಅರ್ಥಮಯವಾದ ಪ್ರಪಂಚದಲ್ಲಿ ಅರ್ಥದ ಬಲ ಅಪಾರವಾದುದು. ರಾಜ್ಯಾಂಗದಲ್ಲಿ ಸಮಾನತೆಯನ್ನು ಏರ್ಪಡಿಸಿದ ಮಾತ್ರಕ್ಕೆ ಆರ್ಥಿಕವಾಗಿ ಬಲಿಷ್ಠನಾದ ಐಶ್ವರ್ಯವಂತನು, ಆರ್ಥಿಕವಾಗಿ ದುರ್ಬಲನಾದ ಬಡವನನ್ನು ಶೋಷಿಸುವುದು ತಪ್ಪಿದ್ದಲ್ಲ ಎಂಬ ಚಿಂತೆ ತಲೆ ಎತ್ತಿದಾಗ ಆರ್ಥಿಕವಾಗಿ ಸಮಾನತೆಯನ್ನು ಪ್ರತಿಪಾದಿಸುವ ಸಮಾಜವಾದ–ಸಮತಾವಾದ ಹುಟ್ಟಿಕೊಂಡಿತು. ಐಶ್ವರ್ಯವಂತರು ಮತ್ತು ಬಡವರು ಎಂಬ ಎರಡು ವರ್ಗವಿರುವವರೆಗೆ ಸಮಾನತೆ ಸಾಧ್ಯವಿಲ್ಲ ಎಂಬ ಚಿಂತೆ ತೀವ್ರವಾದಾಗ ಸಮಾಜವಾದದಲ್ಲೇ 'ಕಮ್ಯೂನಿಸಂ' ಹುಟ್ಟಿಕೊಂಡಿತು.

ಮಾನವ ಬುದ್ಧಿಯಲ್ಲೇ ತಾರತಮ್ಯವಿರುವುದರಿಂದ ಈ 'ಕಮ್ಯೂನಿಸಂ' ತತ್ತ್ವದಿಂದಲೂ ಶಾಂತಿ ದೊರೆಯಲಾರದೆಂಬುದು ಈಗ ಎಲ್ಲರಿಗೂ ಪ್ರತ್ಯಕ್ಷಸಿದ್ಧ. ತಾರತಮ್ಯವೇ ಸೃಷ್ಟಿಸಹಜವಾದ ಕಾರಣ ಸಂಪೂರ್ಣ ಸಾಮ್ಯವನ್ನು ತರಲು ಸಾಧ್ಯವಾಗುತ್ತಿಲ್ಲ. ಯಾವ ನೆಲೆಯಲ್ಲಿ ತಾರತಮ್ಯವಿರುವುದಿಲ್ಲವೊ, ಆ ಸೃಷ್ಟಿಯ ಮೂಲದಲ್ಲಿ ನಿಂತು ಯೋಚಿಸಿದರೆ ಮಾತ್ರ ಈ ತಾರತಮ್ಯಗಳಿಗೆ ಕಾರಣವನ್ನೂ, ತಾರತಮ್ಯದಲ್ಲೇ ಶಾಂತಿಯ ಮೂಲಗಳನ್ನೂ ಕಂಡು ಹಿಡಿಯಲು ಸಾಧ್ಯ.

ತಾರತಮ್ಯ ಸೃಷ್ಟಿಯ ನಿಯತಿಸಿದ್ಧ

ಆದ್ದರಿಂದ ಮೊದಲು ನಾವು ಕಠಿಯಾದ ಒಂದು ಸತ್ಯವನ್ನು ಅಂಗೀಕರಿಸಿ ಅರಗಿಸಿಕೊಂಡ ಮೇಲೆಯೇ ಶಾಂತಿಯ ಸಾಧನೆಗಳನ್ನು ಕುರಿತು ಯೋಚಿಸಬೇಕು. ಸೃಷ್ಟಿಯಲ್ಲಿ ತಾರತಮ್ಯವೇ ಸಹಜ. ತಾರತಮ್ಯವಿಲ್ಲದ ಸ್ಥಿತಿಯೇ ಪ್ರಳಯ. ಮಾನವರಲ್ಲೂ ಬುದ್ಧಿಯಲ್ಲಿ, ಚಿಂತನೆಯಲ್ಲಿ, ದಕ್ಷತೆಯಲ್ಲಿ ತಾರತಮ್ಯ ಅನಿವಾರ್ಯ. ಇವುಗಳನ್ನೆಲ್ಲ ಒಂದೇ ಮಟ್ಟಕ್ಕೆ ತರಲು ಸಾಧ್ಯವೇ ಇಲ್ಲ. ಈ ಬುದ್ಧ್ಯಾದಿ-ತಾರತಮ್ಯಗಳಿಂದ ಮಾನವ ಕುಲಕ್ಕೆ ಅಶಾಂತಿ ಬರದೇ ಹೇಗೆ ಸಾಧಿಸಬೇಕು ಎಂಬುದನ್ನೇ ನಾವು ಯೋಚಿಸಬೇಕು.

ತಾರತಮ್ಯದಲ್ಲಿ ಸ್ವಾರಸ್ಯ

ಪೂರ್ಣವಾದ ಒಂದು ಮಾವಿನ ಮರವನ್ನು ಎಂದೂ ನೋಡದವನಿಗೆ, ಅದರ ಎಲೆ, ಹೂವು, ಕಾಯಿಗಳನ್ನು ಪ್ರತ್ಯಕ್ಷವಾಗಿ ತೋರಿಸಿದರೂ ಇವೆಲ್ಲವೂ ಒಂದೇ ಮರದ್ದು ಎಂದು ಹೇಗೆ ಹೇಳಬಲ್ಲ? ಇವುಗಳನ್ನೆಲ್ಲ ಒಟ್ಟಾಗಿ ಒಂದು ಮರದಲ್ಲಿ ನೋಡಿದಾಗ ಮಾತ್ರ ಇವುಗಳ ಸಾಮರಸ್ಯ ಅರ್ಥವಾಗುವುದು. ಮಾವಿನ ಎಲೆ, ಮಾವಿನ ಹೂವು, ಮಾವಿನ ಕಾಯಿ ಎಂದು ಪ್ರತಿಯೊಂದರಲ್ಲೂ 'ಮಾವು' ಎಂಬುದನ್ನು ಸೇರಿಸಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹೀಗೆಯೇ ನಾನಾವಿಧವಾದ ಈ ಪ್ರಪಂಚಕ್ಕೂ ಮೂಲವಾದ ತತ್ತ್ವವನ್ನರಿತಾಗ ಮಾತ್ರವೇ ಸೃಷ್ಟಿಯಲ್ಲಿ ಸಾಮರಸ್ಯವನ್ನು ಮನದಟ್ಟು ಮಾಡಿಕೊಳ್ಳುವುದು ಸಾಧ್ಯ.

ಧರ್ಮವೇ ಸೃಷ್ಟಿಯ ಮೂಲ

ಈ ವಿಚಿತ್ರಸೃಷ್ಟಿಯ ಮೂಲವೇ ಧರ್ಮ. 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂಬುದು ಮಹರ್ಷಿಯ ವಾಣಿ. ಈ ಸೃಷ್ಟಿಯ ಮೂಲವಾದ ಧರ್ಮವನ್ನು ಮುಟ್ಟಲು ಸಾಧನವಾಗಿರುವುದನ್ನೂ 'ಧರ್ಮ' ಎನ್ನುತ್ತಾರೆ.

ಹೀಗೆ ಸೃಷ್ಟಿಯ ಮೂಲ, ಮತ್ತು ಅದನ್ನು ಮುಟ್ಟುವ ಮಾರ್ಗ ಎರಡನ್ನೂ ಅರಿತವನಿಗೆ ಮಾತ್ರ ವಿಶ್ವದಲ್ಲಿ ವೈಚಿತ್ರ್ಯವನ್ನೂ, ಸಾಮರಸ್ಯವನ್ನೂ, ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಕೇವಲ ರಾಜಕೀಯ ದೃಷ್ಟಿಯಿಂದಾಗಲಿ, ಆರ್ಥಿಕದೃಷ್ಟಿಯಿಂದಾಗಲಿ ಶಾಶ್ವತಶಾಂತಿಯ ಮಾರ್ಗ ದೊರೆಯುವುದಿಲ್ಲ. ಧರ್ಮದ ಸೃಷ್ಟಿಯ ಮೂಲದ ಆಧಾರದಿಂದಲೇ ಇದು ಸಾಧ್ಯ. ವೈವಿಧ್ಯ ಹೇಗೆ ಸಹಜವೋ, ಸಾಮರಸ್ಯವೂ ಅಷ್ಟೇ ಸಹಜವಾಗಿರಬೇಕು.

ಧರ್ಮ ಒಡಕಿಗೆ ಕಾರಣವಲ್ಲ

'ಧರ್ಮ' ಎಂದ ಕೂಡಲೇ, ಇಸ್ಲಾಂ ಧರ್ಮ, ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಹಿಂದೂ ಧರ್ಮ – ಎಂದು ವಿಭಿನ್ನವಾಗಿಯೇ ಅರ್ಥವಾಗುತ್ತಿರುವಾಗ ಈ ಧರ್ಮದಿಂದ ಸಾಮರಸ್ಯ ಹೇಗೆ ಸಾಧ್ಯ? ಎಂದು ಪ್ರಶ್ನಿಸಬಹುದು. ಈ 'ಧರ್ಮ'ಗಳು ಒಡಕನ್ನು ಸೃಷ್ಟಿಸಿವೆಯೇ ಹೊರತು ಸಾಮರಸ್ಯವನ್ನು ಸೃಷ್ಟಿಸಿಲ್ಲ ಎಂದೂ ವಾದಿಸಬಹುದು. ನಾವು ಇಲ್ಲಿ ಒಂದು ಸತ್ಯವನ್ನು ಯೋಚಿಸಬೇಕು. ಈಗ ನಾವು ತಿಳಿದುಕೊಂಡಿರುವ ಧರ್ಮವನ್ನೆಲ್ಲ ಒಂದು ಉಪಪದದೊಂದಿಗೆ ಸೇರಿಸಿಯೇ ಹೇಳುತ್ತೇವೆಯೇ ಹೊರತು ನಿರುಪಪದವಾಗಿ ಅದನ್ನು ಯಾರೂ ಹೇಳುವುದಿಲ್ಲ. ಆ ನಿರುಪಪದವಾದ ಶುದ್ಧವಾದ 'ಧರ್ಮ'ಯಾವುದು ಎಂದು ತಿಳಿದುಕೊಂಡರೆ ಎಲ್ಲ ಸಮಸ್ಯೆಯೂ ಪರಿಹೃತವಾಗುವುದು, ಶಾಂತಿಯೂ ಖಂಡಿತ ದೊರೆಯುವುದು.

ಸೃಷ್ಟಿಯ ಮೂಲವನ್ನು ಕಂಡವರೇ ಮಹರ್ಷಿಗಳು

ನಮ್ಮ ಪೂರ್ವಿಕ ಮಹರ್ಷಿಗಳೆಲ್ಲರೂ ಮೇಲೆ ಹೇಳಿದ ಸೃಷ್ಟಿಯ ಮೂಲವನ್ನೇ ಕಂಡವರು. ಕಾಲಕಾಲಕ್ಕೆ ಅದನ್ನು ಪ್ರತಿಪಾದಿಸಿಯೂ ಇರುವರು. ಈಗಲೂ ನಾವು ಆ ಮೂಲವನ್ನರಿತು ಯೋಚಿಸಿದರೆ ಮಾತ್ರ ಈಗಿನ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಾಧ್ಯ. ಸಾವಿರಾರು ವರ್ಷಗಳ ಹಿಂದೆ ಬಾಳಿದ ಮಹರ್ಷಿಗಳ ಆಲೋಚನೆಯಿಂದ, ವಿಜ್ಞಾನಮಯವಾದ ಈಗಿನ ಪ್ರಪಂಚಕ್ಕೆ ಏನು ಲಾಭ? ಎಂದು ಕೇಳಬಹುದು. ಮಹರ್ಷಿಗಳ ಆಲೋಚನೆಗಳು ಯಾವುದೋ ಒಂದು ಕಾಲಕ್ಕಾಗಲಿ, ದೇಶಕ್ಕಾಗಲಿ ಜನಾಂಗಕ್ಕಾಗಲಿ ಮಾತ್ರ ಸೀಮಿತವಲ್ಲ. ಸೃಷ್ಟಿಯ ಮೂಲವಾದ ಸತ್ಯ ಅಥವ ಧರ್ಮ ಯಾವ ಕಾಲಕ್ಕೂ ಒಂದೇ. ಅದನ್ನು ಮುಟ್ಟುವ ಮಾರ್ಗಗಳು ಬೇಕಾದರೆ ಕಾಲಕಾಲಕ್ಕೆ ಬೇರೆಯಾಗಿರಬಹುದು. ಈಗ ನಾವು ತಿಳಿದುಕೊಂಡಿರುವ 'ಧರ್ಮ'ವೆಲ್ಲವೂ ಒಂದು ಮಾರ್ಗವೇ ಹೊರತು

ಗುರಿಯಲ್ಲ. ಸೃಷ್ಟಿಯ ಮೂಲವಾದ ಧರ್ಮವನ್ನರಿತ ಮಹಾಜ್ಞಾನಿಗಳೇ ಈ ಧರ್ಮಮಾರ್ಗಗಳನ್ನು ಪ್ರತಿಪಾದಿಸಿರುತ್ತಾರೆ. ಆದರೆ ಕಾಲಕಳೆದಂತೆ ಮೂಲಪರಿಜ್ಞಾನ ಮಲಿನವಾದಾಗ ಮಾರ್ಗವೇ ದೊಡ್ಡದಾಗಿಬಿಟ್ಟು ಭಿನ್ನತೆ ಒಂದೇ ಕಾಣಲಾರಂಭಿಸಿದೆ.

ಮಹರ್ಷಿಗಳ ಆಲೋಚನೆಯೇ ಶಾಶ್ವತ ಶಾಂತಿಯ ಮಾರ್ಗ

ಆದ್ದರಿಂದ ಈಗ ನಾವು ಆ ಮಹರ್ಷಿಗಳು ಕಂಡು ಸಾರಿದ ಮೂಲತತ್ತ್ವಗಳ ಪರಿಚಯಕ್ಕಾಗಿ ಪ್ರಯತ್ನಪಡುವುದು ಆವಶ್ಯಕ. ಆ ಋಷಿಗಳ ವಂಶಜರಾದ ನಮಗೆ ಇದು ಅಸಾಧ್ಯವಲ್ಲ. ಈ ಸೃಷ್ಟಿಯ ಮೂಲವಾದ ಧರ್ಮವನ್ನರಿಯುವುದರಿಂದಲೇ 'ಋಷಿಋಣ' ತೀರುತ್ತದೆ. ಎಂದು ಆ ಋಷಿಗಳೇ ಹೇಳಿರುವರು. ನಾವು ಈ ಮೇಲುನೋಟಕ್ಕೆ ಬೇರೆ ಬೇರೆಯಾಗಿ ಕಾಣುವ ಈ ಎಲ್ಲ ಧರ್ಮಗಳ ಮೂಲವಾದ ವಿಶುದ್ಧವಾದ 'ಧರ್ಮ'ವನ್ನು ಅರಿಯಲು ಪ್ರಯತ್ನಪಟ್ಟರೆ, ಅದರಿಂದ ನಮ್ಮ ವೈಯಕ್ತಿಕ ಉದ್ಧಾರ ಮಾತ್ರವಲ್ಲದೆ ವಿಶ್ವದ ಉದ್ಧಾರವೇ ಖಂಡಿತ ಆಗುವುದು. ಇದನ್ನು ಬಿಟ್ಟು ಬೇರೆ ಯಾವ ಚಿಂತನೆಯಿಂದಲೂ, ವೈಯಕ್ತಿಕವಾಗಿಯಾಗಲಿ ಸಾಮುದಾಯಿಕವಾಗಿಯಾಗಲಿ ಶಾಶ್ವತವಾದ ಶಾಂತಿ, ಸಮಾಧಾನ ದೊರೆಯಲಾರದು.

ಮಹರ್ಷಿಗಳು ಯಾರು?

'ಋಷಿಗಳು' ಎಂದಕೂಡಲೇ ಅವರು ಯಾರೊ ಒಂದು ಪಂಗಡದವರು, ಅವರು ಹೇಳಿದ ಧರ್ಮವೂ ಯಾವುದೋ ಒಂದು ಪಂಗಡಕ್ಕೆ ಸೇರಿದ್ದು ಎಂಬ ಭಾವನೆಯೇ ಅನೇಕರಿಗೆ ಇದೆ. ಆದರೆ ಆ ಮಹರ್ಷಿಗಳು 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂದು ಜಗತ್ತಿಗೇ ಆಧಾರ ಧರ್ಮ ಎಂದೇ ಹೇಳಿರುವರು. ಹಾಗಿದ್ದರೂ ಧರ್ಮದ ವಿಷಯದಲ್ಲಿ ಜನರಿಗೆ ಇಂತಹ ಭಾವನೆ ಬಂದಿರುವುದಕ್ಕೆ ಧಾರ್ಮಿಕರೆನಿಸಿಕೊಂಡಿರುವವರು ಕಾರಣವೇ ಹೊರತು ಬೇರೆಯಲ್ಲ. ಮಹರ್ಷಿಗಳು ಒಂದು ಪಂಗಡದವರಲ್ಲ, ವಿಶ್ವಪಿತೃಷಿಗಳು ಎಂಬುದನ್ನು ಇತರರಿಗೆ ಅರ್ಥ ಮಾಡಿಕೊಡುವುದಕ್ಕೆ ಮೊದಲು ಧಾರ್ಮಿಕರು ಅದನ್ನು ಅರ್ಥಮಾಡಿಕೊಳ್ಳಬೇಕು.

ಹಿಂದೂಧರ್ಮ

ಹೀಗಲ್ಲದೆ ಮಹರ್ಷಿಗಳ ಧರ್ಮಕ್ಕೆ–ವಿಶ್ವಕ್ಕೆ ಆಧಾರವಾದ ಧರ್ಮಕ್ಕೆ 'ಹಿಂದೂಧರ್ಮ' ಎಂದು ಉಪಪದದೊಂದಿಗೆ ಕೂಡಿದ ಹೆಸರನ್ನು ಕಟ್ಟಿಬಿಟ್ಟು

ನಮ್ಮ ಧರ್ಮವನ್ನೂ ಒಂದು ಏಕದೇಶ ಧರ್ಮವನ್ನಾಗಿ ಮಾಡಿಬಿಟ್ಟರೆ ಸಮಸ್ಯೆ ಪರಿಹಾರವಾಗುವುದಿಲ್ಲ ಎಂಬುದು ಮಾತ್ರವಲ್ಲ, ಇದು ವಿಪರೀತ ಫಲವನ್ನೇ ಕೊಡುವುದು ಖಂಡಿತ. ಆದ್ದರಿಂದ ನಾವು ಧೀರರಾಗಿ, ದೀರ್ಘದರ್ಶಿಗಳಾಗಿ ನಿಂತು, ಈಗ 'ಧರ್ಮ' ಎಂದೆನಿಸಿಕೊಂಡಿರುವ ಮಾರ್ಗಗಳ ಗುರಿಯಾದ ಶುದ್ಧವಾದ ಧರ್ಮದ ಕಡೆಗೇ ಚಿಂತಿಸಬೇಕು. ಸರ್ವವಿಧಸ್ವಾರ್ಥವನ್ನೂ ತೊರೆದು, ಧರ್ಮವನ್ನೇ ಸಾಕ್ಷಿಯಾಗಿಟ್ಟು ಚಿಂತಿಸಬೇಕು. ಇದರಿಂದ ಮಾತ್ರ ಶಾಶ್ವತವಾದ ಶಾಂತಿ, ಸಮಾಧಾನ ದೊರೆಯಲು ಸಾಧ್ಯ.

ಏಳಿರಿ! ಎಚ್ಚರವಾಗಿರಿ !

ಈ ಚಿಂತನೆ ಅನೇಕರ ಮೆದುಳಿನಲ್ಲಿ ಈಗಲೇ ಹುಟ್ಟಿಕೊಂಡಿರಬಹುದು. ಆದರೂ ವಿಷಯ ಅತಿಗಹನವಾದ್ದರಿಂದಲೂ, ಜನರು 'ಧಾರ್ಮಿಕರು' ಎಂದು ಯಾರನ್ನು ಭಾವಿಸಿರುವರೋ, ಅವರ ಮೂಲಕವಾದಾಗ ಮಾತ್ರ ಅದಕ್ಕೆ ಜಗತ್ತಿನಲ್ಲಿ ಮನ್ನಣೆ ದೊರೆಯಲು ಸಾಧ್ಯ ಎಂಬ ಸತ್ಯವನ್ನರಿತೂ ನಾವು ಕಾರ್ಯಕ್ಷೇತ್ರಕ್ಕೆ ಇಳಿಯಬೇಕು. ಇಲ್ಲದಿದ್ದಲ್ಲಿ ಮತ್ತೊಂದು ಪ್ರತ್ಯೇಕವಾದ ಪಂಗಡವು ಹುಟ್ಟಿಕೊಳ್ಳಬಹುದಷ್ಟೆ. ಆದ್ದರಿಂದ ಧಾರ್ಮಿಕರೆಲ್ಲರೂ ಗಹನವಾಗಿ ಚಿಂತಿಸಲಿ! ಅಥವಾ ಅವರು ಹಾಗೆ ಚಿಂತಿಸುವಂತೆ ವಿವೇಚನಾಶೀಲರಾದ ಜನರು ಮಾಡಲಿ!! ಇದಕ್ಕೆ ಆ ವಿಶ್ವಮೂಲಧರ್ಮವೇ ಸಹಾಯವೀಯಲಿ!!!

ಇಷ್ಟು ವಿಶಾಲವಾದ ತಳಹದಿಯ ಮೇಲೆ ಚಿಂತಿಸುವುದರಲ್ಲೂ ಕೆಲವು ಕ್ಲೇಶಗಳು ತೊಡಕುಗಳು ಬರಬಹುದು. ಆದರೂ ಹೆದರಬೇಕಾಗಿಲ್ಲ. ಆ ಮೂಲಧರ್ಮದ ಬೆಂಬಲ ನಮಗಿರುವಾಗ ಧೀರರಾಗಿ ವರ್ತಿಸಿ ಗುರಿಯನ್ನು ಸಾಧಿಸೋಣ.

ಉತ್ತಿಷ್ಠತ ! ಜಾಗ್ರತ ! ಮಾ ಸ್ವಪ್ತ

ಏಳಿ ! ಎಚ್ಚರವಾಗಿ ! ನಿದ್ರಿಸಬೇಡಿ

****

ಗ್ರಂಥ–ಋಣ

ವಿಶ್ವಧರ್ಮವಿಮರ್ಶೆ
ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ
ಮೈಸೂರು – 1982

ಭಾರತ ಮತ್ತು ಭಾರತೀಯಸಂಸ್ಕೃತಿ – ಈಗಿನ ಸ್ಥಿತಿ

ಭಾರತ ಪುಣ್ಯಭೂಮಿ

ಈ ಭಾರತ ದೇಶವನ್ನು ಪುಣ್ಯಭೂಮಿ ಕರ್ಮ (ಸಾಧನೆಯ)ಭೂಮಿ ಧರ್ಮ ಭೂಮಿ ಜ್ಞಾನಭೂಮಿ ಇತ್ಯಾದಿಯಾಗಿ ಎಲ್ಲಾ ಅಭಿಮಾನಗಳನ್ನು ತೊರೆದ ಮಹರ್ಷಿಗಳು ಕೊಂಡಾಡಿರುವ ವಿಷಯ ಪ್ರಸಿದ್ಧ. ಮಾನವನ ಬೆಳವಣಿಗೆಯನ್ನು ಸಂಸ್ಕೃತಿ ಎಂದು ಕರೆಯುತ್ತಾರೆ ಪ್ರತಿಯೊಂದು ಜನಾಂಗಕ್ಕೂ ಒಂದು ಸಂಸ್ಕೃತಿ ಇರುತ್ತದೆ. ಭಾರತೀಯ ಸಂಸ್ಕೃತಿಯನ್ನು ಕೇವಲ ಮಾನವೀಯ ಸಂಸ್ಕೃತಿಯಲ್ಲ ದೈವಿಕವಾದ ಸಂಸ್ಕೃತಿ.

ಇಂತಹ ದೇಶದ ಈಗಿನ ಸ್ಥಿತಿಯನ್ನು ನೋಡಿದರೆ ಏನು ಹೇಳುವುದು ಎಂದೇ ತೋರುವುದಿಲ್ಲ ಎಲ್ಲೆಲ್ಲೋ ಹರಾಜಕತೆ ಅನೈತಿಕತೆ ಸ್ವೆಚ್ಛಾಚಾರ ಇತ್ಯಾದಿಯಾಗಿ ಮಾನಿಷ್ಠರು ಧರ್ಮಿಷ್ಠರು ಭಯದಿಂದ ಕಾಲ ಕಳೆಯುವ ಬೇಕಾಗದ ಸ್ಥಿತಿ. 'ಪ್ರಬಲೇನ ದುರ್ಬಲಸ್ಯ ಬಾಧಃ' ಎಂಬ ಮೃಗಧರ್ಮ ಎಲ್ಲೆಲ್ಲೂ ತಾಂಡವವಾಡುತ್ತಿದೆ.

ದೇಹ ಬಲ ಮನೋಬಲ ಬುದ್ದಿಬಲ ಜನಬಲ ಧನ ಬಲ ಅಧಿಕಾರ ಬಲ ಆಯುಧ ಬಲ ಇತ್ಯಾದಿ ಬಲಗಳ ಪ್ರಭಾವವನ್ನು ದುರ್ಬಲರು ಅನುಭವಿಸುತ್ತಿರುವರು. ಎಲ್ಲಕ್ಕಿಂತಲೂ ದೈವ ಬಲ ದೊಡ್ಡದೆಂಬುದನ್ನು ಯಾರೂ ಅರಿತಂತೆಯೇ ಕಂಡು ಬರುತ್ತಿಲ್ಲ. ಅಂದಿನ ಕಾಲದಲ್ಲಿ ಒಬ್ಬ ಅರಸರನ್ನು ಅವನ ಸ್ಥಳದಿಂದ ಇಳಿಸಬೇಕಾದರೆ ಎಷ್ಟೊಂದು ಯುದ್ಧ ಮತ್ತು ಪ್ರಾಣಹಾನಿಯಾದಿಗಳು ಅನಿವಾರ್ಯವಾಗಿತ್ತು ಎಂಬುದನ್ನು ಚರಿತ್ರೆಯನ್ನು ನೋಡಿದರೆ ಅರ್ಥವಾಗುವುದು.

ಆದರೆ 600ಕ್ಕೂ ಹೆಚ್ಚು ರಾಜರು ಕೇವಲ ಒಂದು ಪೆನ್ (ಲೇಖನಿ) ನಿಂದಲೇ ಒಂದು ಕ್ಷಣದಲ್ಲಿ ತಮ್ಮ ರಾಜ್ಯಗಳನ್ನು ಕಳೆದುಕೊಂಡಿದ್ದನ್ನು ಯೋಚಿಸಿದರೆ ದೈವ ಬಲವನ್ನು ಸ್ವಲ್ಪ ಅರ್ಥಮಾಡಿಕೊಳ್ಳಬಹುದು 500 ವರ್ಷಗಳಲ್ಲೂ ಆಗದ ಪರಿಣಾಮಗಳು 50 ವರ್ಷಗಳಲ್ಲಿ ಆಗಿ ಹೋಗಿವೆ.

ಇಂದಿನ ಸ್ಥಿತಿಗೆ ಕಾರಣವೇನು ಬುದ್ಧಿ ಮತ್ತು ಜ್ಞಾನ

ಧಾರ್ಮಿಕ ಸಾಮಾಜಿಕ ನೈತಿಕ ಆರ್ಥಿಕ ರಾಜಕೀಯ ಈ ಎಲ್ಲಾ ಕ್ಷೇತ್ರಗಳಲ್ಲೂ ಕಂಡು ಬರುವ ಅಧ್ಯಪತನಕ್ಕೆ ಕಾರಣವೇನು ಕಲಿಯ ಪ್ರಭಾವ ಎಂದು ಕೆಲವರು ಹೇಳಬಹುದು ಆದರೆ ಕಲಿಯುಗದ ಪ್ರಮಾಣದಲ್ಲಿ ನೂರರಲ್ಲಿ ವಸ್ತುತಃ ಒಂದು ಭಾಗ ಮಾತ್ರವೇ ಈಗ ಆಗಿದೆ ಎಂಬುದನ್ನು ನಾವು ಅರಿಯಬೇಕು. ಈ ಎಲ್ಲಾ ಕಷ್ಟಗಳಿಗೂ ಅಜ್ಞಾನವೇ ಕಾರಣ, ಅದರ ನಿವೃತ್ತಿಗೆ ಜ್ಞಾನವೇ ಕಾರಣ ಎಂಬುದು ಸಾಮಾನ್ಯ ನಿಯಮ. ಓದುಗರ ಸಂಖ್ಯೆ ಹೆಚ್ಚಾಗಿರಬಹುದು, ಇದರಿಂದ ಸ್ವಲ್ಪ ಮಟ್ಟಿಗೆ ಬುದ್ಧಿಯೂ ಬೆಳೆಯಬಹುದು. ಆದರೆ ಬುದ್ಧಿಯ ಬೆಳವಣಿಗೆಯಿಂದ ಸಮಸ್ಯೆಗಳೂ ಬೆಳೆಯಬಹುದು, ಓದಿನಿಂದ ಆದ ಬುದ್ಧಿಯ ಬೆಳವಣಿಗೆಯಿಂದ ಸಮಸ್ಯೆಗಳು ಪರಿಹಾರ ವಾಗಿಬಿಡುತ್ತವೆ ಎನ್ನಲು ಸಾಧ್ಯವಿಲ್ಲ.

ಯಶ್ಚ ಮೂಢತಮೋ .... ಕ್ಲಿಶ್ಯತ್ಯಂತರಿತೋ ಜನಃ ॥

(ಭಾಗ – 3.7.17)

ಬುದ್ಧಿ ಬೆಳೆಯದೇ ಇರುವವರಿಗೂ ಬುದ್ಧಿಯನ್ನು ದಾಟಿದವರಿಗೂ ಯಾವ ಸಮಸ್ಯೆಯೂ ಇರುವುದಿಲ್ಲ. ಮಧ್ಯವರ್ತಿ ಜನರಿಗೆ ಕ್ಲೇಶ ಅನಿವಾರ್ಯ. ಬುದ್ಧಿ ಇಲ್ಲದವನು ಅಜ್ಞಾನಿ, ಬುದ್ದಿಯ ದಾಟಿದವನು ಜ್ಞಾನಿ, ಮಧ್ಯವರ್ತಿಯು ಎಡವಟ್ಟು. ಜ್ಞಾನದ ಸೋಂಕಿಲ್ಲದ ಬುದ್ಧಿಯೇ ಮಾನವ ಮಾಯೆ. ಪ್ರಕೃತಿಯ ಪರಿಣಾಮವಾದ ಮೊದಲನೆಯ ತತ್ವವೇ ಬುದ್ಧಿ ತತ್ತ್ವ, ಪ್ರಕೃತಿಯೇ ಮಾಯಾ ಎಂಬುದು ಪ್ರಸಿದ್ಧ.

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।

(ಗೀತೆ – 7.14)

ಅತಿ ಬುದ್ಧಿವಂತನಾದ ಮನುಷ್ಯನನ್ನು ಜ್ಞಾನಿ ಎಂದು ಯಾರೂ ಹೇಳುವುದಿಲ್ಲ. ಬುದ್ಧಿಗೆ ಆಧಾರ ಮೆದುಳು ಜ್ಞಾನಕ್ಕೆ ಆಧಾರ ಆತ್ಮನು.

ಆತ್ಮತತ್ತ್ವ

ಇಷ್ಟು ಮಾತ್ರ ಸಾಲದೆ ಆತ್ಮತತ್ತ್ವವೂ ಬಹಳ ಜಟಿಲ ಸಮಸ್ಯಾತ್ಮಕವೆಂದು 'ಆಶ್ಚರ್ಯವತ್ ...ಕಶ್ಚಿತ್' ಎಂದು ಹೇಳಿದೆ. 'ಶ್ರವಣಾಯಾಪಿ' (1–2–7) ಇವೆಲ್ಲಕ್ಕೂ ಶಿಖರದಂತೆ 'ಅವಿಜ್ಞಾನಾತ್ (2–11). 'ತಪಸಾ ಬ್ರಹ್ಮ ವಿಜಿಜ್ಞಾಸಸ್ವ' ।

ಜ್ಞಾನವೇ ಕೊನೆಯ ಹಂತವಾದರೂ ಜ್ಞಾನಿಗಳೆಲ್ಲರೂ ಒಂದೇ ರೀತಿ ಅವರಲ್ಲ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ । (ಗೀತಾ–7.3)

ಸಾವಿರಕ್ಕೊಬ್ಬನು ಸಾಧಕನಾಗುತ್ತಾನೆ. ಅವರಲ್ಲಿಯೂ ಯವನೋ ಒಬ್ಬ 'ಸಿದ್ಧ' (ಜ್ಞಾನಿ) ಆಗುತ್ತಾನೆ ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಆದರೆ 'ಕಶ್ಚಿನ್ಮಾಂ ವೇತ್ತಿ ತತ್ತ್ವತಃ (ಗೀತಾ ? 7.3) 'ಎಂದಿರುವುದರಿಂದ ತತ್ತ್ವತಃ = ಯಥಾವತ್ತಾಗಿ 'ಸಿದ್ಧರಲ್ಲಿಯೂ ಅನೇಕರು ಯಥಾವತ್ತಾಗಿ ಅರಿಯುವುದಿಲ್ಲ' ಎಂದು ವ್ಯಾಖ್ಯಾನಿಸಿರುವರು. ಇದರಿಂದಲೇ_

ನೈಕೋ ಮುನಿರ್ಯಸ್ಯ ಮತಂ ಪ್ರಮಾಣಂ(ಮ.ಭಾ.ಅ. 3.314/119)

ಎಂಬ ವಚನವು ಹುಟ್ಟಿಕೊಂಡಿದೆ. ಪೂರ್ಣ ಜ್ಞಾನಿಗಳು ಅತಿ ದುರ್ಲಭ. ಸಕಲ ಸಮಸ್ಯೆಗಳಿಗೂ ಇದೇ ಮೂಲ ಕಾರಣ. ಹೀಗೆ ಅನುಭವದಲ್ಲಿ ತಾರತಮ್ಯ ಬಂದಾಗ ಅದರೊಂದಿಗೆ ಬುದ್ಧಿಯು ಮಿಶ್ರಿತವಾಗುವುದರಿಂದ ಮತಿಭೇದ ಮತ್ತು ಮತಭೇದವು ಅನಿವಾರ್ಯವೇ ಆಗುತ್ತದೆ. ಇಷ್ಟು ಮಾತ್ರವಲ್ಲದೆ ಪೂರ್ಣ ಜ್ಞಾನಿಗಳು ಯಾವಾಗಲೂ ಎಲ್ಲರಿಗೂ ಒಂದೇ ರೀತಿಯಲ್ಲಿ ತತ್ತ್ವವನ್ನು ಉಪದೇಶಿಸಲು ಸಾಧ್ಯವಿಲ್ಲ (ಮಾತುಗಳು ಎದುರಿನಲ್ಲಿರುವ ಮನುಷ್ಯರ ಕಕ್ಷೆಗೆ ತಕ್ಕಂತೆ ಹೇಳಬೇಕಾಗಿ ಬರುವುದರಿಂದ)

ಯಥಾಯಥಂ ಭವೇತ್ ಪುಂಸಾಂ (ಬೃಹ 1.4.402)

ಎಂಬುದು ನ್ಯಾಯ .

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಙ್ಗಿನಾಮ್ ।
(ಗೀತಾ – 3.26)

ಎಂದು ಗೀತೆಯು ಹೇಳುತ್ತದೆ. ಇದರಿಂದಲೂ ಉಪದೇಶಗಳಲ್ಲಿ ತಾರತಮ್ಯ ಅನಿವಾರ್ಯ. ಆ ಪರತತ್ತ್ವವೂ ಎಲ್ಲರಿಗೂ ಒಂದೇ ರೀತಿಯಲ್ಲಿ ತನ್ನನ್ನು ಪ್ರಕಟಿಸಿಕೊಳ್ಳುವುದಿಲ್ಲ .

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।
(ಗೀತಾ – 4.11)

ಅವರವರ ಭಾವನಾದಿಗಳಿಗೆ ತಕ್ಕಂತೆಯೇ ಭಕ್ತರನ್ನು ಪರಮಾತ್ಮನು ಅನುಗ್ರಹಿಸುತ್ತಾನೆ ಎಂದು ಹೇಳಿದೆ.

ವ್ಯಾಖ್ಯಾನಕಾರರ ಮತ್ತು ಉಪನ್ಯಾಸಕಾರರ ಹೊಣೆ

ತತ್ತ್ವ ಉಪದೇಶಕರಾದ ಜ್ಞಾನಿಗಳಲ್ಲೂ ಅವರ ಅನುಭವಗಳಲ್ಲೂ

ಅವರ ಉಪದೇಶಗಳಲ್ಲೂ ವೈವಿಧ್ಯ ಪ್ರಮಾಣ ಸಿದ್ಧವಾಗಿರುವುದರಿಂದಲೂ ತತ್ರ ತತ್ತ್ವವೇ ಅತಿ ಜಟಿಲವಾಗಿರುವುದರಿಂದಲೂ ಆಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನ ಮಾಡುವವರ ಹೊಣೆ ಎಂತಹದ್ದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇದು ಸಾಲದೆ ವ್ಯಾಖ್ಯಾನಕ್ಕೆ ವ್ಯಾಖ್ಯಾನ ಅದಕ್ಕೆ ವ್ಯಾಖ್ಯಾನ ಎಂದು ಗ್ರಂಥಗಳು ಬೆಳೆದುಕೊಂಡು ಹೋಗಿಬಿಟ್ಟಿದೆ ಇವುಗಳನ್ನು ಓದಿದವನೇ ವಿದ್ವಾಂಸನಾಗಿ ಬಿಡುತ್ತಾನೆ

'ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾಃ' (ಮ. ಸ್ಮೃ. 12)

ಎಂದು ಏನೂ ತಿಳಿಯದವನಿಗಿಂತಲೂ ಸ್ವಲ್ಪ ಓದಿದವನು ಉತ್ತಮ ಎಂದು ಹೇಳಿದ್ದನ್ನು 'ಮೂಗನಿಗಿಂತಲೂ ತೊದಲು ನುಡಿಯುವವನು ಮೇಲು' ಎಂಬಂತೆಯೇ ತೆಗೆದುಕೊಳ್ಳಬೇಕು. ಮುಂದೆ 'ಗ್ರಂಥಿಭ್ಯೋ ವ್ಯವಸಾಯಿನಃ' ಎಂದಿರುವುದರಿಂದ ಸಾಗಬೇಕಾದು ದೂರ ಬಹಳವಿದೆ ಎಂದು ತಿಳಿಯಬೇಕು.

ಆಚಾರ ಅನುಷ್ಠಾನಾದಿಗಳಲ್ಲಿ ವೈವಿಧ್ಯ ಉಂಟಾಗಿ 'ಮನೆಗೆ ಒಂದು ಆಚಾರ, ವ್ಯಕ್ತಿಗೆ ಒಂದು ಸಂಪ್ರದಾಯ' ಆಗಿರುವಂತೆಯೇ ತತ್ತ್ವ ಕ್ಷೇತ್ರದಲ್ಲೂ ವೈವಿಧ್ಯ ಅನಿವಾರ್ಯವಾಗಿ ಜ್ಞಾನವು ಪರಿಶುದ್ಧವಾಗಿಲ್ಲವೆಂದೇ ಹೇಳಬೇಕಾಗಿದೆ.

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ (ಗೀತಾ– 4.38)

ಎಂದು ಹೇಳಿರುವಂತೆ ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತುವಿಲ್ಲ. ಆದರೆ ಆ ಜ್ಞಾನ ಎಷ್ಟು ದುರ್ಲಭವೆಂಬುದನ್ನು ಅಲ್ಲೇ

ಕಾಲೇನ ಆತ್ಮನಿ ವಿಂದತಿ (ಗೀತಾ – 4.38) ಎಂದು ಹೇಳಿದೆ.

ಶ್ರದ್ಧಾವಾನ್ ಲಭತೇ ಚ ಯಃ' (ಗೀತಾ – 4.39) ಎಂದು ಅದರ ಉಪಾಯವನ್ನು ಹೇಳಿದೆ.

ಇತಿ ಸಂಕ್ಷೇಪಃ ॥

ಭಾರತೀಯ ಸಂಸ್ಕೃತಿಯ ಆತ್ಮ "ಪರಮಾತ್ಮ"

ಕಾಲ ಪ್ರಭಾವದಿಂದ ಲಕ್ಷಾಂತರ ಭಾರತೀಯರು ತಮ್ಮ ತಾಯಿನಾಡನ್ನು ಭಾರತವನ್ನು ಬಿಟ್ಟು ಹೊರಗಡೆಯಲ್ಲಿ ಜೀವಿಸಬೇಕಾದ ನಿರ್ಬಂಧ ಒದಗಿದೆ. ಭಾರತೀಯನು ಎಲ್ಲಿದ್ದರೂ ಏನು ಮಾಡಿದರು ಅವನ ಮನಸ್ಸು ಮಾತ್ರ ನಮ್ಮ ಸಂಸ್ಕೃತಿಯನ್ನು ಮರೆಯಲಾರದು ಏಕೆಂದರೆ ಈ ಸಂಸ್ಕೃತಿ ಸತ್ಯ ಸಂಸ್ಕೃತಿ ಜ್ಞಾನ ಮಯವಾದ ಸಂಸ್ಕೃತಿ. ಶಾಂತಿ ಮತ್ತು ನೆಮ್ಮದಿಯನ್ನು ಬಯಸುವನು ಯಾರಾದರೂ ಇದರ ನೆರಳನ್ನು ಆಶ್ರಯಿಸಲೇಬೇಕು. ಬೇರೆ ಯಾವ ನಾಡುಗಳಲ್ಲಿ ಯಾವುದೋ ಆಕರ್ಷಣೆಯಲ್ಲಿ ಸಿಕ್ಕಿ ಅಲೆದಾಡಿದರು ಕೊನೆಯಲ್ಲಿ ನೆಮ್ಮದಿ ಅಥವಾ ಶಾಂತಿಯನ್ನೇ ಪ್ರತಿಯೊಬ್ಬರೂ ಹುಡುಕಬೇಕಾಗುತ್ತದೆ.

ಪ್ರಪಂಚದಲ್ಲೇ ಅತಿ ಪ್ರಾಚೀನವಾದ ಸಂಸ್ಕೃತಿಯನ್ನು ಪಡೆದಿರುವ ದೇಶ ಭಾರತ.

ಮಾನವ ಜೀವನದಲ್ಲಿ ಅನೇಕ ಸಮಸ್ಯೆಗಳು ಅನಿವಾರ್ಯ.ವೈಯಕ್ತಿಕ ಜೀವನ ಸಾಮಾಜಿಕ ಜೀವನ ರಾಷ್ಟ್ರೀಯ ಜೀವನ ಇತ್ಯಾದಿ ನಾನಾ ಮುಖವಾಗಿರುವುದು ಮಾನವ ಜೀವನ. ಇದರಲ್ಲಿ ಯಾವುದನ್ನು ಕಡೆಗಣಿಸಲು ಸಾಧ್ಯವಿಲ್ಲ. ಇಷ್ಟು ಮಾತ್ರವಲ್ಲದೆ ಪುನರ್ಜನ್ಮವಾದಿಯಾದ ಭಾರತೀಯನಿಗೆ ಐಹಿಕ ಮತ್ತು ಪಾರಲೋಕಿಕ ಜೀವನ ಎಂಬ ಎರಡು ಮುಖವಿದೆ.

ಪುನರ್ಜನ್ಮ ವಿಚಾರದಲ್ಲಿ ಯಾರು ಏನು ಹೇಳಿದರೂ ಮಾನವನು ಆತ್ಮ – ತತ್ತ್ವವನ್ನು ಎಂದೂ ನಿರಾಕರಿಸಲಾರನೆಂಬ ಸತ್ಯ ದಿನ ದಿನಕ್ಕೆ ಪ್ರಕಾಶವಾಗುತ್ತಿದೆ. ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಗಮನಿಸಿ ಒಂದರಿಂದ ಮತ್ತೊಂದಕ್ಕೆ ಧಕ್ಕೆಯಾಗದಂತೆ ತನ್ನ ಜೀವನವನ್ನು ವ್ಯವಸ್ಥೆಗೊಳಿಸಿಕೊಟ್ಟಿರುವುದೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆನ್ನಬಹುದು.

ಮೇಲೆ ಹೇಳಿದ ಎಲ್ಲಾ ಕ್ಷೇತ್ರಗಳನ್ನು ಸಾವಿರಾರು ವರ್ಷಗಳಿಂದ ರೂಪುಗೊಂಡ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯಾಗಿದೆ.

ನಮ್ಮನ್ನು ಮೀರಿದ ಒಂದು ಅದ್ಭುತ ಶಕ್ತಿಯೇ ನಮ್ಮ ಎಲ್ಲಾ ಚಟುವಟಿಕೆಗಳಿಗೂ ಆಧಾರವೆಂಬುದೇ ಈ ಸಂಸ್ಕೃತಿಯ ವೈಶಿಷ್ಟ್ಯ. ಆ ಶಕ್ತಿಯನ್ನೇ ಭಾರತೀಯರು 'ದೇವರು' ಎಂದರು. ಅದಕ್ಕೆ ಬೇರೆ ಬೇರೆ ಅನೇಕ ಹೆಸರುಗಳನ್ನು ಅವರವರು ಹೇಳಿಕೊಂಡರೂ ತತ್ತ್ವಶಃ ಎಲ್ಲವೂ ಒಂದೇ.

ಆ ಮೂಲಭೂತ ಶಕ್ತಿ ನಮಗೆ ತಾಯಿಯಾಗಿ, ತಂದೆಯಾಗಿ, ಮಿತ್ರನಾಗಿ ನಾನಾ ರೀತಿಯಲ್ಲಿ ಸಹಕರಿಸುತ್ತಲೇ ಇದೆ. ಇದನ್ನು ಅರಿತು ಜೀವನವನ್ನು ನಡೆಸಲು ಕಲಿತರೆ ಮಾನವನು ಭರವಸೆಯನ್ನು ಪಡೆದು ನಿಶ್ಚಿಂತನಾಗಲು ಸಾಧ್ಯ.

'ಸುಹೃದಂ ಸರ್ವಭೂತಾನಾಂ ...(ಗೀತಾ ? 5.29)' ಎಂದು ಗೀತೆ ಹೇಳಿದಂತೆ ಸರ್ವಭೂತಗಳಿಗೂ ಪ್ರಾಣಿಗಳಿಗೂ ಸುಹೃತ್ ಎಂದು ತಿಳಿದು, ನಮ್ಮೊಂದಿಗೆ ಅವನು ಸದಾ ಇದ್ದು ಸಹಕರಿಸುತ್ತಿರುವನೆಂದು ತಿಳಿದು ಕರ್ತವ್ಯವನ್ನು ನಿರ್ವಹಿಸಿಕೊಂಡು ಹೋದರೆ ಜೀವನದಲ್ಲಿ ಜಯಶೀಲನಾಗುವುದು ದಿಟ.

ನಮ್ಮ ಜೀವನದ ವಿಜ್ಞಾನವನ್ನು ಅರಿತು ಇಷ್ಟ ಬಂದಂತೆ ಕುಣಿಯದೆ, ಒಂದಕ್ಕೊಂದು ವಿರೋಧವಿಲ್ಲದಂತೆ ಜೀವಿಸು ಎಂಬುದೇ ನಮ್ಮ ಸಂಸ್ಕೃತಿಯ ಜೀವನದ ಸುಖ ಸಂದೇಶವಾಗಿದೆ.

ಶರೀರ ಪುಷ್ಟ್ಯಾದಿಗಳಿಗೆ ಟಾನಿಕ್ ಇತ್ಯಾದಿಗಳಿರುವಂತೆ ಸುಖ ಶಾಂತಿಗಳಿಗೂ ಒಂದು ಟಾನಿಕ್ ಇದೆ ಎಂದು ಒಬ್ಬ ಹಿರಿಯರು ಹೇಳಿರುವರು 'ಉಪಯುಕ್ತೇಷು... ಇತಿ ಸೌಖ್ಯರಸಾಯನಮ್'

1. ನಮ್ಮ ಜೀವನಕ್ಕೆ ಬೇಕಾದ್ದನ್ನು ಸರಿಯಾಗಿ ಅರ್ಥ ಮಾಡಿಕೊ

2. ಆಶಾಪಾಶಗಳನ್ನು ಹೆಚ್ಚು ಹೆಚ್ಚಾಗಿ ಕೊಳ್ಳಬೇಡ

3. ಪ್ರಾಮಾಣಿಕವಾಗಿ ಅಂದರೆ ಮನೋ ವಾಕ್ ಕಾಯಗಳಿಗೆ ಒಮ್ಮತವಾಗಿ ಜೀವಿಸುವುದಕ್ಕೆ ಕಲಿತುಕೊ. ಈ ಮೂರು ಸೇರಿದರೆ ಅದೇ ಸುಖ ಶಾಂತಿಯ ರಸಾಯನ – ಟಾನಿಕ್ ಎಂದು ತಿಳಿ. ಭಾರತೀಯರು ಎಲ್ಲಿದ್ದರೂ ಹೇಗಿದ್ದರೂ ಇದನ್ನು ಮರೆಯದಿರಲಿ. ದೇವರ ಮೇಲೆ ಭಾರವನ್ನು ಹಾಕಿ ಜೀವಿಸುವುದಕ್ಕೆ ಕಲಿಯಲಿ ಎಂಬುದೇ ನಮ್ಮ ಹಾರೈಕೆಯಾಗಿದೆ.

ಧರ್ಮ ಮತ್ತು ಭಾರತ ದೇಶ

ಪ್ರಪಂಚವು ಮಹತ್ತರವಾದ ಪರಿವರ್ತನೆಗೆ ತಯಾರಾಗುತ್ತಿರುವುದೆಂಬುದು ಬುದ್ಧಿ ಜೀವಿಗಳು ತಿಳಿದಿರುವ ವಿಷಯವೇ ಆಗಿದೆ. 100 ವರ್ಷಗಳಲ್ಲೂ ಆಗದ ಪರಿವರ್ತನೆಗಳು 50 ವರ್ಷಗಳಲ್ಲಿ ಆಗಿವೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಮತೀಯ, ಧಾರ್ಮಿಕ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲೂ ಆಗುತ್ತಿರುವ ಬದಲಾವಣೆಗಳನ್ನು ನೋಡಿದರೆ ದಿಗ್ಭ್ರಮೆ ಉಂಟಾಗದಿರದು. ದಿನ ದಿನಕ್ಕೆ ಕಸದಗುಂಡಿಗಳು ಗೋಪುರವಾಗಿಯೂ, ಗೋಪುರಗಳು ಕಸದ ಗುಂಡಿಗಳಾಗಿಯೂ ಬದಲಾಗುತ್ತಿವೆ. ಪ್ರಬಲೇನ ದುರ್ಬಲಸ್ಯ ಬಾಧಃ (ಬಲಿಷ್ಠರು ದುರ್ಬಲರನ್ನು ನುಂಗಿಬಿಡುವರು) ಎಂಬ ಮೃಗಧರ್ಮ – ಅನಾಗರಿಕತೆಯ ಲಕ್ಷಣ ಮಾನವರಲ್ಲಿ ಸಹಜವಾಗುತ್ತಿದೆ. ದೇಹಬಲ, ಮನೋಬಲ, ಬುದ್ಧಿಬಲ, ಧನಬಲ, ಅಧಿಕಾರಬಲ, ಜನಬಲ, ಆಯುಧಬಲ ಇತ್ಯಾದಿ ಬಲಗಳ ದುಷ್ಪ್ರಭಾವವನ್ನು ದುರ್ಬಲರು ಅನುಭವಿಸುತ್ತಿರುವರು. ಧರ್ಮದ ಬಲ ಅಥವಾ ದೈವಬಲ ಎಲ್ಲಕ್ಕಿಂತಲೂ ದೊಡ್ಡದು ಎಂಬುದನ್ನು ಯಾರೂ ಅರಿತಂತೆ ಕಂಡುಬರುತ್ತಿಲ್ಲ. ಹಿಂದಿನ ಕಾಲದಲ್ಲಿ ಒಬ್ಬ ಅರಸನನ್ನು ಅವನ ಸಿಂಹಾಸನದಿಂದ ಇಳಿಸಬೇಕಾದರೆ ಎಷ್ಟೊಂದು ಯುದ್ಧ ಮತ್ತು ಪ್ರಾಣಹಾನಿ ಅನಿವಾರ್ಯವಾಗಿತ್ತು. ಆದರೆ 600ಕ್ಕಿಂತಲೂ ಹೆಚ್ಚಿನ ರಾಜರು ಕೇವಲ 'ಒಂದು ಪೆನ್ನಿ'ನಿಂದಲೇ ಒಂದು ಕ್ಷಣದಲ್ಲಿ ತಮ್ಮ ರಾಜ್ಯಗಳನ್ನು ಕಳೆದುಕೊಂಡರೆಂಬುದನ್ನು ಯೋಚಿಸಿದರೆ ದೈವಬಲವನ್ನು ಸ್ವಲ್ಪಮಟ್ಟಿಗಾದರೂ ತಿಳಿಯಬಹುದು. ಆ ದೈವವೂ ಈಗ ಎಲ್ಲವನ್ನೂ ನೋಡುತ್ತಾ ಮೌನವಾಗಿದೆ. ಅದಕ್ಕೂ ಒಂದು ಕಾಲಬೇಕೆಂದು ತೋರುತ್ತದೆ. 'ಅರಸನು ಅಂದೇ ಕೊಲ್ಲುವನು. ದೈವವು ನಿಂತು ಕೊಲ್ಲುವುದು' ಎಂದು ಒಂದು ಗಾದೆಯಿದೆ.

ಮುಂದೆ ಬರಲಿರುವ ಮಹತ್ ಪರಿವರ್ತನೆಯು ಹೇಗೆ ಇರಬಹುದು ಎಂಬುದನ್ನು ಅವರವರು ತಮಗೆ ತೋರಿದಂತೆ ಯೋಚಿಸುತ್ತಿರುವರು. ಆದರೆ ವೇದವು 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' (ಇಡೀ ವಿಶ್ವಕ್ಕೆ ಧರ್ಮವೇ

ಆಧಾರ) ಎಂದು ಹೇಳುತ್ತವೆ. ಪರಿವರ್ತನೆಯೇ ಇಂತಹ 'ಧರ್ಮ ಸಂಸ್ಥಾಪನೆಯಾಗಿರುವುದರಿಂದ ಅಂತಹ ವ್ಯಾಪಕವಾದ ದೃಷ್ಟಿಯಿಂದಲೇ ಧರ್ಮವನ್ನು ಕುರಿತು ಯೋಚಿಸಬೇಕೇ ಹೊರತು, ಅವರವರಿಗೆ ತೋಚಿದಂತೆ ಇದನ್ನು ಯೋಚಿಸುವಂತಿಲ್ಲ. ಜಗತ್ತಿನಲ್ಲಿ ಈಗ ಆಚರಣೆಯಲ್ಲಿರುವ ಧರ್ಮಗಳೆಲ್ಲವೂ ಮತಧರ್ಮಗಳೇ ಹೊರತು, ವಿಶುದ್ಧವಾದ 'ಧರ್ಮ' ಎಲ್ಲೂ ಆಚರಣೆಯಲ್ಲಿಲ್ಲ. 'ಧರ್ಮ' ಎಂದರೆ ಶೈವಧರ್ಮ, ವೈಷ್ಣವಧರ್ಮ, ಕ್ರೈಸ್ತಧರ್ಮ, ಇಸ್ಲಾಂಧರ್ಮ ಇತ್ಯಾದಿ, ಒಂದು ಪದವನ್ನು ಅದಕ್ಕೆ ಸೇರಿಸಿಕೊಂಡೇ ಹೇಳಬೇಕಾಗಿದೆ. ಈ ಎಲ್ಲಾ ಧರ್ಮಗಳು ಆ ವಿಶುದ್ಧವಾದ ಧರ್ಮದ ಛಾಯೆಗಳು, ಧರ್ಮದ ನೆಲೆಯಾದ ಭಾರತದಲ್ಲೂ ಈಗಿರುವ ಶೈವ, ವೈಷ್ಣವ, ಬೌದ್ಧ, ಜೈನ ಇತ್ಯಾದಿ ಧರ್ಮಗಳು ವಿಶುದ್ಧ ಧರ್ಮದ ಛಾಯಾಧರ್ಮಗಳೇ. ಈ ಕಾರಣದಿಂದಲೇ ಜಗತ್ತಿಗೆ ಆಧಾರವಾಗಿ "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ವೇದದಲ್ಲಿ ಹೇಳಿರುವ ವಿಶುದ್ಧವಾದ ಧರ್ಮವನ್ನು ಅರಿಯಲು ಈಗ ಯಾರಿಗೂ ಸಾಧ್ಯವಿಲ್ಲವೆಂದು ತೋರುತ್ತದೆ.

ಇಡೀ ವಿಶ್ವಕ್ಕೆ ಆಧಾರವಾಗಿರುವ ಧರ್ಮದ ದೃಷ್ಟಿಯಲ್ಲಿ ಈಗ ಆಚರಣೆಯಲ್ಲಿರುವ ಧರ್ಮಗಳೆಲ್ಲವೂ 'ಮತ ಧರ್ಮಗಳು', ಬಹಳ ಕೆಳಗಿನವು. ಮತ ಎಂದರೆ, ಮತಿಗೆ(ಬುದ್ಧಿಗೆ) ಸಂಬಂಧಪಟ್ಟದ್ದಾಗಿದೆ. ಇಡೀ ವಿಶ್ವಕ್ಕೆ ಆಧಾರವಾದ ಧರ್ಮವು ಅವರವರ ಮತಿಗೆ ಒಳಪಟ್ಟಿದ್ದಲ್ಲ, ಅದು ಸಹಜವಾದದ್ದು. ಮತಗಳ ಕೇಂದ್ರ 'ದೇವತೆ'ಯಾದರೆ, ವಿಶುದ್ಧವಾದ ಧರ್ಮದ ಕೇಂದ್ರ 'ಆತ್ಮ'ನಾಗುತ್ತಾನೆ. ಇಂತಹ ಧರ್ಮವನ್ನು ಅರಿಯಲು ಸಾಧ್ಯವಾಗದಿದ್ದಾಗಲೇ ಮತಗಳು ಹುಟ್ಟಿಕೊಳ್ಳುತ್ತವೆ. ಮತಧರ್ಮಗಳನ್ನು ಸರಿಯಾಗಿ ಆಚರಿಸಿದರೆ, ದೇವರ ಕೃಪೆಯಿಂದ ಕ್ರಮವಾಗಿ ಆ ಸಹಜ ಧರ್ಮದ ಪರಿಚಯವಾಗಬಹುದು. ಸ್ವಲ್ಪಮಟ್ಟಿಗಾದರೂ ಈ ಸಹಜ ಧರ್ಮದ ಪರಿಚಯವನ್ನು ಪಡೆದವನು ಯಾವ ಮತಧರ್ಮವನ್ನೂ ವಿರೋಧಿಸಲಾರ, ನಿಂದಿಸಲಾರ. ಮತ್ತೊಬ್ಬರ ಮತವನ್ನು ನಿಂದಿಸುವವನು ತನ್ನ ಮತವನ್ನು ಸರಿಯಾಗಿ ಆಚರಿಸುತ್ತಿಲ್ಲವೆಂದೇ ಹೇಳಬೇಕು. ಸರಿಯಾಗಿ ಆಚರಿಸದ ಈ ಮತಗಳಿಂದ ಆದ ಅನರ್ಥಗಳು ಜಗತ್ಪ್ರಸಿದ್ಧ. ಇದರಿಂದಲೇ ಈ ಮತಧರ್ಮಗಳು ಕೊನೆಯ ಹಂತವನ್ನು ಮುಟ್ಟುತ್ತಿರುವುದು ಪ್ರತ್ಯಕ್ಷಸಿದ್ಧ. ಅತಿ ಶೀಘ್ರದಲ್ಲೇ ಈ ಮತಧರ್ಮಗಳು ಮರೆಯಾಗಿ ವಿಶುದ್ಧವಾದ ಧರ್ಮ ತಲೆ ಎತ್ತುವುದು.

ಇಂತಹ ಉತ್ತಮ ಧರ್ಮದ ಪರಿವರ್ತನೆಯನ್ನು 'ನಾಸ್ಟರ್ ಡಾಮಸ್' ಮತ್ತು 'ಎಡ್ಗರ್ ಕೇಸಿ' ಮುಂತಾದ ದೀರ್ಘದರ್ಶಿಗಳು ಸೂಚಿಸಿರುವರು. ನಮ್ಮ ದೇಶದಲ್ಲೂ 'ಕಾಲಜ್ಞಾನ' ಎನ್ನುವ ಗ್ರಂಥದಲ್ಲಿ ಕಲಿಯುಗದ 5000 ವರ್ಷಗಳ ಅನಂತರ ಆಗಬಹುದಾದ ದೊಡ್ಡ ಪರಿವರ್ತನೆಗಳನ್ನು ಕುರಿತ ವಿವರಗಳು ವರ್ಣಿತವಾಗಿವೆ. ಅದರಂತೆ ಮತಭೇದಕ್ಕೆ ಕಾರಣವಾದ ತಾತ್ಕಾಲಿಕ ಧರ್ಮಗಳೆಲ್ಲವೂ ಹೋಗಿ ಶುದ್ಧವಾದ ಧರ್ಮಯುಗ ಪ್ರಾರಂಭವಾಗುವುದು. ಈಗಿರುವ ಮತಧರ್ಮಗಳೆಲ್ಲವೂ ಆ ಶುದ್ಧಧರ್ಮವನ್ನು ತಲುಪುವ ಮಾರ್ಗಗಳೇ ಹೊರತು ಇವುಗಳೇ ಪರಮ ಧರ್ಮಗಳಲ್ಲ. 'ಧರ್ಮವು ಕಾಲಕ್ಕೆ ತಕ್ಕಂತೆ ಬದಲಾಗುತ್ತದೆ' ಎಂಬುದು ಸಹ ಧರ್ಮದ ಮಾರ್ಗವನ್ನು ಕುರಿತ ಮಾತಾಗಿದೆ.

ವರ್ಣಾಶ್ರಮ ಧರ್ಮಗಳು ಸಹ ಮಾರ್ಗಗಳೇ ಹೊರತು ಅವುಗಳು ಸ್ವಯಂ ಪುರುಷಾರ್ಥಗಳಲ್ಲ. ಕೃತಯುಗದಲ್ಲಿ ಒಂದೇ ವರ್ಣ ಮತ್ತು ಒಂದೇ ಆಶ್ರಮವಿತ್ತೆಂದು ಶ್ರೀಭಾಗವತ ಹೇಳುತ್ತದೆ. ಈಗ ಆಚರಣೆಯಲ್ಲಿರುವುದಾಗಿ ಭಾವಿಸುವ ವರ್ಣಾಶ್ರಮ ಧರ್ಮವು ಕೇವಲ ಸಾಂಕೇತಿಕವೇ ಹೊರತು ಜೀವಂತವಾದದ್ದಲ್ಲ. 'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ' (ಹುಟ್ಟಿನಿಂದ ಎಲ್ಲರೂ ಶೂದ್ರರೇ, ಆಚರಣೆಯಿಂದಲೇ ಬ್ರಾಹ್ಮಣರಾಗುತ್ತಾರೆ) ಎಂಬುದು ಆ ಹಂತದಲ್ಲಿ ಹುಟ್ಟಿಕೊಳ್ಳುತ್ತದೆ. ಆದರೆ, ಈಗ ಶೈವ ಅಥವಾ ವೈಷ್ಣವ ಮಿಶ್ರಿತವಾದ ಬ್ರಾಹ್ಮಣಧರ್ಮವೇ ಆಚರಣೆಯಲ್ಲಿರುತ್ತದೆಯೇ ಹೊರತು, ವಿಶುದ್ಧವಾದ ಬ್ರಾಹ್ಮಣಧರ್ಮ ಎಲ್ಲೂ ಆಚರಣೆಯಲ್ಲಿಲ್ಲವೆಂದೇ ಹೇಳಬೇಕು. ಈ ಮಿಶ್ರಧರ್ಮವೂ ತನ್ನ ಜೀವವನ್ನು ಕಳೆದುಕೊಂಡಿದೆ ಎಂದೇ ಹೇಳಬೇಕು. ಇವೆಲ್ಲವೂ ಧರ್ಮದ ಪರಿವರ್ತನೆಗೆ ಸೂಚಕವಾಗಿವೆ.

ಧರ್ಮದ ಪರಿವರ್ತನೆಗೆ ಆಧಾರವಾದ ಕಾಲವನ್ನು 'ಯುಗ' ಎನ್ನುತ್ತಾರೆ. ಇದು ಕೃತ, ತ್ರೇತಾ, ದ್ವಾಪರ, ಕಲಿ ಎಂದು ವಿಂಗಡಿಸಲ್ಪಟ್ಟಿದೆ. ಕೃತಯುಗದಲ್ಲಿ ಧರ್ಮ ಪೂರ್ಣಪ್ರಮಾಣದಲ್ಲಿರುವುದೆಂದೂ, ತ್ರೇತಾಯುಗದಲ್ಲಿ ಧರ್ಮ 3/4 ಪ್ರಮಾಣದಲ್ಲೂ, ದ್ವಾಪರಯುಗದಲ್ಲಿ 1/2 ಪ್ರಮಾಣದಲ್ಲೂ, ಕಲಿಯುಗದಲ್ಲಿ 1/4 ಪ್ರಮಾಣದಲ್ಲೂ ಇರುವುದೆಂದು ಹೇಳುವರು. ಈ ಕೃತಾದಿ ಒಂದೊಂದು ಯುಗಗಳಲ್ಲೂ ಕೃತ, ತ್ರೇತಾ, ದ್ವಾಪರ, ಕಲಿ ಎಂಬ ವಿಭಾಗವುಂಟು. ಇದರಲ್ಲೂ ಮತ್ತೆ ಅವಾಂತರ ವಿಭಾಗಗಳುಂಟು. ಹೀಗೆ ವಿಂಗಡಿಸುತ್ತಾ ಹೋದರೆ

ಸುಮಾರು 5000 ವರ್ಷಗಳಿಗೆ ಒಂದೊಂದು ಅವಾಂತರಯುಗಗಳಾಗುತ್ತವೆ. ಇದರಲ್ಲೂ 1250 ವರ್ಷಗಳು 'ಕೃತ' ಮುಂತಾದ ಯುಗವಾಗುತ್ತದೆ. ಈಗ ಕಲಿಯುಗ ಪ್ರಾರಂಭಿಸಿ 5000 ವರ್ಷಗಳು ಕಳೆದು ಹೋಗಿವೆ. ಈಗ ಕಳೆದ 5000 ವರ್ಷಗಳಲ್ಲಿ, ಇಲ್ಲಿಂದ 1250 ವರ್ಷಗಳಿಗೆ ಹಿಂದೆಯೇ ಶ್ರೀಶಂಕರಾಚಾರ್ಯಾದಿಗಳು ಇದ್ದರು. ಅದಕ್ಕೆ 1250 ವರ್ಷ ಹಿಂದಿನದು ಬುದ್ಧನ ಕಾಲ, ಅಂದರೆ ತಂತ್ರಮಾರ್ಗದ ಆರಂಭ ಕಾಲ. ಅದಕ್ಕೆ 1250 ವರ್ಷಗಳ ಹಿಂದೆ ಮಹರ್ಷಿಗಳ ಕೊನೆಯ ಕಾಲ, ಅದಕ್ಕೆ ಹಿಂದೆ ಈ ಅವಾಂತರ ಯುಗದ ಕೃತಯುಗ, ಇದರಂತೆ ಈಗ ಕಲಿಯುಗದಲ್ಲಿ ಅವಾಂತರ ಯುಗದ ಕೊನೆಯ ಕಾಲವಾಗಿದೆ. ಮುಂದೆ ಈ ಕಾಲಚಕ್ರ ಪರಿವರ್ತನೆಯಾಗಲಿದೆ. ಹೊಸ ಅವಾಂತರ ಕೃತಯುಗ ಪ್ರಾರಂಭವಾಗಲಿದೆ. ಧರ್ಮ ಕೃತಯುಗದಂತೆ ಪುನರುದ್ಧಾರವಾಗುತ್ತದೆ.

ಇಂತಹ ಧರ್ಮದ ಪುನರುತ್ಥಾನದಲ್ಲಿ ಧರ್ಮದೇಶವಾದ ಭಾರತಕ್ಕೆ ಮಹತ್ತರವಾದ ಹೊಣೆಗಾರಿಕೆಯಿದೆ. ಧರ್ಮದ ನಿಜಸ್ವರೂಪವನ್ನು ತಾನೂ ತಿಳಿದು, ಜಗತ್ತಿಗೂ ಅದನ್ನು ತಿಳಿಸುವ ಭಾರ ಭಾರತೀಯನಿಗಿದೆ. ಈಗಿನ ಧರ್ಮಗಳೆಲ್ಲವೂ ಮರೆಯಾಗಿ ಶುದ್ಧವಾದ ಧರ್ಮ ತಲೆ ಎತ್ತುವುದು. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಗಳೆಲ್ಲವೂ ನಿರ್ಮೂಲವಾಗುವುವು. ಪೂರ್ಣವಾದ ಬ್ರಹ್ಮಜ್ಞಾನವನ್ನು ಪಡೆದ ಜ್ಞಾನಿಗಳು ಬರುವರು. ಜನ್ಮಸಿದ್ಧವಾದ ಬ್ರಾಹ್ಮಣಾದಿ ವಿಭಾಗಗಳಿರುವುದಿಲ್ಲ. ಅವರವರ ಸಾಧನೆಗೆ ತಕ್ಕಂತೆಯೇ ಅವರವರ ಯೋಗ್ಯತೆಯನ್ನು ನಿರ್ಣಯಿಸುವರು. ಲೋಕದಲ್ಲಿ ಧರ್ಮವು ಬೆಳಗಿ ಎಲ್ಲೆಲ್ಲೂ ಶಾಂತಿ ಮತ್ತು ಸಮಾಧಾನ ನೆಲೆಸುವುದು. ಆದರೆ, ಇವೆಲ್ಲವೂ ಒಂದೇ ದಿನದಲ್ಲಿ ಆಗಿಬಿಡುವುದಿಲ್ಲ. 100– 200 ವರ್ಷಗಳು ಬೇಕಾಗುವುದು.

ಬ್ರಹ್ಮಣ್ಯನುಪಮಾ ದೃಷ್ಟಿಃ ಕ್ಷಾತ್ರಮಪ್ರತಿಮಂ ಬಲಮ್ ।
ತೇ ಯದಾ ಮಿಲತಸ್ಸಾರ್ಧಂ ತದಾ ಲೋಕಃ ಪ್ರಸೀದತಿ ॥

(ಬ್ರಹ್ಮಜ್ಞಾನವನ್ನು ಪಡೆದವರ ದೀರ್ಘದರ್ಶನ ಅಸದೃಶವಾದುದು. ಹಾಗೆಯೇ ರಾಜ್ಯಾಧಿಕಾರದ ಬಲವೂ ಅಪಾರವಾದುದು. ಈ ಎರಡು ಒಟ್ಟುಗೂಡಿದಾಗಲೇ ಜಗತ್ತಿನಲ್ಲಿ ಶಾಂತಿ ನೆಲೆಸುವುದು) ಎಂದು ಮಹಾಭಾರತ ಹೇಳುತ್ತದೆ. ಜ್ಞಾನವಿಲ್ಲದೇ ಅಧಿಕಾರಬಲ ಬೆಳೆದಾಗ ಅಶಾಂತಿಯು ಅನಿವಾರ್ಯ. ಜ್ಞಾನ ಮತ್ತು ಅಧಿಕಾರ ಎರಡೂ ಕೂಡಿದರೆ ಕೃತಯುಗ.

ಎಲ್ಲಿ ನೋಡಿದರೂ ಅನೀತಿ, ಸ್ವಾರ್ಥಪರತೆ, ದ್ರೋಹ, ಘೋರವಿಷಯಾಸಕ್ತಿ, ಅಶಿಸ್ತು, ಮತ-ಧರ್ಮಗಳಲ್ಲಿ ನಿರ್ವೀರ್ಯತೆ ಇವೆಲ್ಲವೂ ಮುಂಬರುವ ಪರಿವರ್ತನೆಗೆ ಸೂಚಕವಾಗಿವೆ. ಶೀಘ್ರದಲ್ಲಿ ಧರ್ಮವು ವಿಜೃಂಭಿಸುವುದು. ಇಡೀ ಬ್ರಹ್ಮಾಂಡಕ್ಕೆ ಆಧಾರವಾಗಿರುವ ಆ ಮೂಲಧರ್ಮವನ್ನು ತಲುಪುವುದು ಅಥವಾ ತಿಳಿಯುವ ಮಾರ್ಗಗಳಾದ ಮತಗಳು ಬೇರೆ ಬೇರೆಯಾಗಿರಬಹುದು. ಎಲ್ಲಾ ಮತಗಳಿಗೂ ಗುರಿ ಮಾತ್ರ ಒಂದೇ. ಈ ಅಂಶವನ್ನು ಜನರಿಗೆ ಸರಿಯಾಗಿ ತಿಳಿಸಬೇಕು. ಇದಕ್ಕಾಗಿ ಅನೇಕ ವಿಧದ ವಿಚಾರ ವಿಮರ್ಶೆಗಳು ದೇಶಾದ್ಯಂತ ನಡೆಯಬೇಕು. ಆಗಲೇ ಧರ್ಮದ ಹೆಸರಿನಲ್ಲಿ ಆಗುವ ಶೋಷಣೆಗಳು, ಕಾಮಕ್ರೋಧಾದಿಗಳು, ತನ್ಮೂಲಕ ರಾಗದ್ವೇಷಾದಿಗಳು ತೊಲಗುವುವು. ಜಗತ್ತಿನಲ್ಲಿ ಶಾಂತಿ ನೆಲೆಸುವುದು.

ನಮ್ಮ ಪುರಾಣಾದಿಗಳಲ್ಲಿ ಹೇಳಿರುವಂತೆ ಮುಂದೆ ಅನೇಕ ಮಹಾತ್ಮರು ಅವತರಿಸುವರು. ಇಡೀ ವಿಶ್ವಕ್ಕೆ ಮಾರ್ಗದರ್ಶನ ಮಾಡುವರು. ಆಗ ಅವರು ಹೇಳುವುದು ಈಗಿನ ಭಾವನೆಗಳಿಗೆ ವಿರುದ್ಧವಾಗಿರಬಹುದು. ಏಕೆಂದರೆ, ಹಿಂದೆ ಹೇಳಿದಂತೆ ಈಗ ಮತಧರ್ಮಗಳನ್ನು ಬಿಟ್ಟು ಶುದ್ಧವಾದ ಧರ್ಮ ಎಲ್ಲೂ ಆಚರಣೆಯಲ್ಲಿಲ್ಲ. ಆದ್ದರಿಂದ ಆ ಧರ್ಮದ ಪುನರುತ್ಥಾನ ಹೊಸರೀತಿಯಲ್ಲೇ ಇರುವುದು. ಇವನ್ನೆಲ್ಲ ನಾವೂ ಅರಿತು. ಇತರರಿಗೂ ಬೋಧಿಸಬೇಕು. ಇಲ್ಲದಿದ್ದರೆ ಆ ಶುದ್ಧ ಧರ್ಮವನ್ನು ಅರ್ಥಮಾಡಿಕೊಳ್ಳಲಾರದೆ, ನಾವು ದೂರ ಉಳಿದುಬಿಡುವ ಅವಕಾಶವಿದೆ-ಅಪಾಯವಿದೆ. ಇದರಿಂದ ಆ ಜೀವಗಳಿಗೆ ಪುನಃ ಧರ್ಮದ ಜಾಗೃತಿಗೆ ಸಾವಿರಾರು ವರ್ಷಗಳು ಕಾಯಬೇಕಾಗುತ್ತದೆ. ನಾವು ಇದನ್ನೆಲ್ಲ ತಿಳಿದು, ಜಗತ್ತಿಗೂ ಮಾರ್ಗದರ್ಶನವಾಗುವಂತೆ ಈಗಿನಿಂದಲೇ ಪ್ರಯತ್ನ ಪಡುವುದು ಪ್ರತಿಯೊಬ್ಬ ಧಾರ್ಮಿಕನ ಆದ್ಯ ಕರ್ತವ್ಯವಾಗಿದೆ.

'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ಇಡೀ ವಿಶ್ವಕ್ಕೆ ಆಧಾರವಾದ ವಿಶುದ್ಧವಾದ ಧರ್ಮ ಯಾವುದು? ಭಿಕ್ಷುಕರಿಗೆ ಕೊಡುವ ಹತ್ತು ಪೈಸೆಯಿಂದ ಮಹಾ ಯಜ್ಞ- ಯಾಗಾದಿ ಪರ್ಯಂತವಾಗಿ ಅನೇಕ ಕ್ರಿಯೆಗಳಲ್ಲಿ ಆ ಪದವನ್ನು ಬಳಸುತ್ತಿರುವುದರಿಂದ ಆ ಪ್ರಶ್ನೆಗೆ ಉತ್ತರವನ್ನು ಪಡೆಯಲು ಸ್ವಲ್ಪ ಕಷ್ಟವೇ ಆಗುತ್ತದೆ. 'ಧರ್ಮ' ಎಂಬ ಪದ ಧಾರಣಾರ್ಥಕವಾದ ಧಾತುವಿನಿಂದ ಹುಟ್ಟಿರುತ್ತದೆ. ಪ್ರತಿಯೊಂದು ವಸ್ತುವನ್ನು ಮತ್ತು ಇಡೀ ವಿಶ್ವವನ್ನು ಧರಿಸುತ್ತಿರುವುದೇ ಧರ್ಮ. ಉಪನಿಷತ್ತಿನಲ್ಲಿ 'ಇಮಾ ಪ್ರಜಾಸ್ಸದಾಯತನಾಸ್ಸತ್ಪತಿಷ್ಠಾ' ಎಂದು ಪರಮಾತ್ಮ

ತತ್ತ್ವವೇ ಜಗತ್ತೆಲ್ಲವನ್ನೂ ಸುವ್ಯವಸ್ಥಿತವಾಗಿ ಧರಿಸುತ್ತಿರುವುದಾಗಿ ಸ್ಪಷ್ಟವಾಗಿ ಹೇಳಿದೆ. ವಿಷ್ಣುಸಹಸ್ರನಾಮದಲ್ಲಿ ಪರಮಾತ್ಮನ ನಾಮಗಳಲ್ಲಿ 'ಧರ್ಮ' ಎಂಬ ಪದವನ್ನು ಹೇಳಿದೆ. ಶಿವಸಹಸ್ರನಾಮದಲ್ಲೂ 'ಧರ್ಮಃ ಸಾಧಾರಣೋ ವರಃ' ಎಂದು ಧರ್ಮಪದ ಕಂಡುಬರುತ್ತದೆ. ಆಧ್ಯಾತ್ಮಿಕ ದೃಷ್ಟಿಯಿಂದ ವಿಷ್ಣು, ಶಿವ ಎಲ್ಲರೂ ಒಂದೇ. "ಯೇ ಚ ವೇದವಿದೋ ವಿಪ್ರಾಯೇ ಚಾಧ್ಯಾತ್ಮವಿದೋ ಜನಾಃ ತೇ ವದಂತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಮ್" ಎಂದು ವಿಶ್ವರೂಪಿಯಾದ ಶ್ರೀ ಕೃಷ್ಣನನ್ನು 'ಧರ್ಮ' ಎಂದು ಹೇಳಿದೆ. ಇದನ್ನೆಲ್ಲ ನೋಡಿದಲ್ಲಿ ಪರಮಾತ್ಮ ತತ್ತ್ವವೇ ನಿಜವಾದ ಧರ್ಮಪದದ ಅರ್ಥ ಎಂಬುದು ಸ್ಪಷ್ಟ. ಆದರೆ, ಬಾಹ್ಯವಾದ ಕೆಲವು ಕ್ರಿಯೆಗಳನ್ನು ಧರ್ಮವೆಂದು ಭಾವಿಸುತ್ತಿರುವವರಿಗೆ ಇದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇ ಸರಿ. ಇದಕ್ಕೆ ಮತ್ತಷ್ಟು ಗಂಭೀರವಾಗಿ ನಾವು ಚಿಂತಿಸಬೇಕು.

ಶಾಸ್ತ್ರಗಳಲ್ಲಿ ಧರ್ಮವನ್ನು 'ಸಿದ್ಧ', 'ಸಾಧ್ಯ' ಎಂದು ಎರಡು ವಿಧವಾಗಿ ವಿಂಗಡಿಸಲಾಗಿದೆ. 'ಸಿದ್ಧ' ಎಂದರೆ ವಸ್ತುರೂಪವಾದದ್ದೆಂದು ಅರ್ಥ. 'ಸಾಧ್ಯ' ಎಂದರೆ ನಮ್ಮ ಪ್ರಯತ್ನದಿಂದ ಸಾಧಿಸತಕ್ಕದ್ದು ಎಂದು ಅರ್ಥ. ಜಗತ್ತಿಗೆ ಈ ಎರಡು ವಿಧ ಧರ್ಮವು ಆಧಾರವಾಗಿದೆ. ಉದಾಹರಣೆಗೆ, ನಮ್ಮ ಶರೀರಕ್ಕೆ ಆಧಾರವಾಗಿ ಎರಡು ಅತ್ಯಂತ ಆವಶ್ಯಕ. ಮೊದಲನೆಯದು ಜೀವ, ಎರಡನೆಯದು ಅನ್ನ ಪಾನಾದಿಗಳು. ಇವೆರಡು ಇಲ್ಲದೇ ಶರೀರ ಉಳಿಯುವುದಿಲ್ಲ. ಮೊದಲನೆಯದಾದ ಜೀವ ವಸ್ತುರೂಪವಾದರೆ ಎರಡನೆಯದು ಪ್ರತಿ ದಿನ ಮಾಡಬೇಕಾದ ಊಟೋಪಚಾರಗಳು - ಕ್ರಿಯೆಗಳಾಗುತ್ತವೆ. ಜೀವ ಸಿದ್ಧಧರ್ಮ, ಊಟೋಪಚಾರಗಳು ಸಾಧ್ಯಧರ್ಮ ಹೀಗೆಯೇ ವಿಶ್ವಕ್ಕೂ ಇವೆರಡೂ ಬೇಕು. ಮೊದಲನೆಯದು ವಿಶುದ್ಧವಾದ ಆತ್ಮತತ್ತ್ವ ಅಥವಾ ಪರಮಾತ್ಮ. ಎರಡನೆಯದು ನಮಗೂ ಪರಮಾತ್ಮನಿಗೂ ಸಂಪರ್ಕರೂಪವಾಗಿರುವ ಜಪತಪ ಆದಿ ಕ್ರಿಯೆಗಳು.

ಅಯಂ ತು ಪರಮೋ ಧರ್ಮಃ ಯದ್ಯೋಗೇನಾತ್ಮದರ್ಶನಮ್ ।

ಯಾ.ಸ್ಮೃ - 1. 8

ಎಂಬ ಯಾಜ್ಞವಲ್ಕ್ಯರ ವಚನ, ಆತ್ಮದರ್ಶನಕ್ಕೆ ಸಾಧನವಾಗಿರುವುದೇ ಸರ್ವೋತ್ತಮವಾದ ಧರ್ಮ ಎಂದು ಘೋಷಿಸುತ್ತದೆ. ಜಪತಪ ಆದಿ ಕ್ರಿಯೆಗಳಿಂದ ನಮ್ಮ ಪಾಪ ಕಳೆದಾಗ ತತ್ತ್ವಜ್ಞಾನ ಉಂಟಾಗುವುದೆಂಬುದನ್ನು

ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ ।

ಎಂದು ಹೇಳಲಾಗಿದೆ. ಆದ್ದರಿಂದ "ಕೃಷ್ಣಂ ಧರ್ಮಂ ಸನಾತನಂ" ಎಂದು ಹೇಳಲ್ಪಟ್ಟ ಪರಮಾತ್ಮನೇ ಸನಾತನವಾದ ಧರ್ಮ. ಇದರ ಅನಂತರ ಈ ಪರಮಾತ್ಮನನ್ನು ಪಡೆಯಲು ಕಾರಣವಾದ ಜಪಾದಿಗಳು ಮತ್ತು ಮತೀಯವಾದ ಕ್ರಿಯಾದಿಗಳನ್ನು ಧರ್ಮವೆಂದು ನಾವು ತಿಳಿಯಬೇಕು. "ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ" (ಪರಮಾತ್ಮನನ್ನು ಅರಿಯುವುದೇ ಕರ್ಮಾಚರಣೆಯ ಗುರಿ), ಎಂದು ಗೀತೆಯು ಇದನ್ನು ಸಾರವಾಗಿ ಹೇಳಿದೆ. 'ಜ್ಞಾನ' ಎಂದರೆ ಆತ್ಮಜ್ಞಾನವೇ ಅಥವಾ ಪರಮಾತ್ಮ ಜ್ಞಾನವೇ?

ಪರಮಾತ್ಮನೇ ಸಕಲ ಜಗತ್ತಿಗೂ ಆಧಾರವೆಂದ ಮೇಲೆ ಪ್ರತಿಯೊಂದು ಜೀವರಾಶಿಗೂ ಅವನೇ ಆಧಾರವೆಂದಾಗುತ್ತದೆ. ಹೀಗಿರುವಾಗ ಎಲ್ಲಾ ಪ್ರಾಣಿಗಳೂ ನಿಶ್ಚಿಂತೆಯಾಗಿ ಬಾಳಿ – ಬದುಕುತ್ತಿರುವಾಗ ಮಾನವರಿಗೆ ಮಾತ್ರ ಈ ಧರ್ಮದ ಅವಶ್ಯಕತೆ ಏನು? ಎಂಬ ಪ್ರಶ್ನೆ ಏಳಬಹುದು. ಪ್ರಾಣಿಗಳ ಜೀವನ ಕೇವಲ ಆಹಾರನಿದ್ರಾದಿಗಳಿಗೆ ಸೀಮಿತವಾಗಿರುತ್ತದೆ. ಮಾನವನ ಜೀವನ ಅಷ್ಟರಲ್ಲೇ ಮುಗಿಯುವುದಿಲ್ಲ. ಆಹಾರವಿಹಾರಾದಿಗಳಲ್ಲಿ ಮಾನವನು ಯದೃಚ್ಛಾಲಾಭಸಂತುಷ್ಟನಲ್ಲ. ಅಂದರೆ ಮಾನವನು ವಿಧವಿಧವಾದ ಸುಖ-ಸಾಧನಗಳನ್ನು ಸೃಷ್ಟಿಸಿಕೊಂಡು ತನ್ನ ಸುಖಭೋಗಗಳನ್ನು ನಾನಾವಿಧವಾಗಿ ಬೆಳೆಸಿಕೊಳ್ಳಬಲ್ಲ ಬುದ್ಧಿಜೀವಿ. ಅಷ್ಟು ಮಾತ್ರವಲ್ಲದೇ ತನ್ನ ಜ್ಞಾನವನ್ನು ಉತ್ತಮವಾದ ರೀತಿಯಲ್ಲಿ ಬೆಳಸಿಕೊಳ್ಳತಕ್ಕ ಮೇಧಾಶಕ್ತಿಯುಳ್ಳವನು. ಹೀಗೆ ತನ್ನನ್ನು ಬೆಳೆಸಿಕೊಳ್ಳುವುದನ್ನೇ 'ಸಂಸ್ಕೃತಿ' ಎನ್ನುತ್ತಾರೆ.

'ಸಂಸ್ಕೃತಿ' ಎನ್ನುವುದು ಮಾನವರಿಗೆ ಮಾತ್ರ ಇರುವುದು. ಈ ಜ್ಞಾನಮೂಲವಾದ ಸಂಸ್ಕೃತಿಯ ಬೆಳವಣಿಗೆಯಿಂದ ಮಾನವನು ತನ್ನ ಪರಿಸರ, ಸೃಷ್ಟಿಯ ಮೂಲ ಎಲ್ಲವನ್ನೂ ಅರಿಯಬಲ್ಲವನಾಗಿದ್ದಾನೆ. ಆದ್ದರಿಂದ ಮಾನವ ಜೀವನಕ್ಕೂ ಉಳಿದ ಜೀವಿಗಳಿಗೂ ಪರ್ವತ ಪರಮಾಣುಗಳಷ್ಟು ಅಂತರವಿದೆ. ಆದ್ದರಿಂದ ಮಾನವನ ಜವಾಬ್ದಾರಿಯು ಬಹಳ ಹೆಚ್ಚಾಗುತ್ತದೆ. ಈ ಜವಾಬ್ದಾರಿಯನ್ನು ತಿಳಿಸಿ ಬೆಳೆಸಿಕೊಳ್ಳುವ ವಿಧಾನವೇ ಧರ್ಮವಾಗುತ್ತದೆ. ಇದರಿಂದಲೇ "ಧರ್ಮೇಣ ಹೀನಃ ಪಶುಭಿಸ್ಸಮಾನಃ, ಜ್ಞಾನೇನ ಹೀನಃ ಪಶುಭಿಸ್ಸಮಾನಃ" ಇತ್ಯಾದಿ ವಚನಗಳು ಹುಟ್ಟಿಕೊಂಡಿವೆ.

ಈ ಸಂಸ್ಕೃತಿ ಮತ್ತು ಧರ್ಮ ಎಂಬುದಿಲ್ಲದಿದ್ದರೆ ಇವನು ಕೇವಲ

ಸ್ವಾರ್ಥಿಯಾಗಿ ಎಲ್ಲ ಪ್ರಾಣಿಗಿಂತಲೂ ಕ್ರೂರಿಯಾಗಿಬಿಡುವನು. ಕೇವಲ ಸ್ವಾರ್ಥಿಯಾದ ಮಾನವನು ಎಷ್ಟು ಅಪಾಯಕಾರಿ ಎಂಬುದನ್ನು ಪ್ರಪಂಚದಲ್ಲಿ ಪ್ರತ್ಯಕ್ಷವಾಗಿ ನೋಡಬಹುದು. ಹೀಗೆ ಮಾನವನು ಕೇವಲ ಸ್ವಾರ್ಥಿಯಾಗದಂತೆ ತಡೆದು ಸಮತೂಕದ(Balance) ಜೀವನಕ್ಕೆ ಆರಂಭದಲ್ಲಿ ಆಧಾರವಾಗಿರುವುದೇ ಧರ್ಮ. ಇದು ಸಾಧ್ಯಧರ್ಮದ ಮೊದಲನೆಯ ಹಂತ. ಇದರ ಕೊನೆಯ ಹಂತವೇ ಆತ್ಮದರ್ಶನ ಅಥವಾ ಆತ್ಮಪ್ರಾಪ್ತಿ, "ಆತ್ಮಲಾಭಾನ್ನ ಪರಂ ಶ್ರೇಯಃ" ಎಂದು ಆಪಸ್ತಂಬರು ಹೇಳುತ್ತಾರೆ. ಇದರಿಂದ ಅಲ್ಪ ಸ್ವಲ್ಪ ಉದ್ದೇಶದಿಂದ ಮಾಡುವ ಧರ್ಮಕಾರ್ಯಗಳನ್ನು ಶುದ್ಧ ಧರ್ಮ ಎಂದು ಹೇಳಲಾಗುವುದಿಲ್ಲ. ಇಂತಹ ಧರ್ಮಗಳನ್ನು "ಸೋಪಾಧಿಕಧರ್ಮ" ಎನ್ನುತ್ತಾರೆ. ನಿರುಪಾಧಿಕಧರ್ಮಕ್ಕೆ ಅಧ್ಯಾತ್ಮವೇ ತಳಹದಿಯಾಗಿದೆ. ಈ ಅಧ್ಯಾತ್ಮದ ಹಿನ್ನೆಲೆಯಿಲ್ಲದ ಧರ್ಮದಿಂದ ಎಂತಹ ಅನರ್ಥಗಳಾಗಬಹುದೆಂಬುದಕ್ಕೆ ನಿದರ್ಶನವೇ ರಾವಣಾದಿಗಳ ಕಥೆಯಾಗಿದೆ. ರಾವಣಾದಿಗಳ ಜ್ಞಾನ, ತಪಸ್ಸು, ಸಾಧನೆ, ದೇವತಾನಿಷ್ಠೆ ಎಲ್ಲವೂ ಸಾಮಾನ್ಯವಾದದ್ದಲ್ಲ. ಆದರೆ, ಅವೆಲ್ಲವುಗಳಲ್ಲಿ ಪೂರ್ಣಸ್ವಾರ್ಥವೇ ತುಂಬಿತ್ತು. ಇದೇ ಸೋಪಾಧಿಕಧರ್ಮ. ನಿರುಪಾಧಿಕ ಧಾರ್ಮಿಕನಿಗೆ ಉದಾಹರಣವೇ ಪ್ರಹ್ಲಾದ ಅಥವಾ ಆಂಜನೇಯ, ಮತೀಯವಾದ ಧರ್ಮವನ್ನು ಟೀಕಿಸುವವರು ಸಹ ಈ ಅಧ್ಯಾತ್ಮವನ್ನು ಖಂಡಿತ ಟೀಕಿಸಲಾರರು. ಏಕೆಂದರೆ, ಟೀಕಿಸುವುದಕ್ಕೂ 'ಆತ್ಮ'ಬೇಕಲ್ಲವೆ?

ಇದರ ಮೇಲೆ ಮತ್ತೊಂದು ಪ್ರಶ್ನೆ ಬರಬಹುದು. ಪ್ರಪಂಚದಲ್ಲಿ ಬೇರೆ ಯಾವ ದೇಶಕ್ಕೂ ಇಲ್ಲದ ಧರ್ಮದ ಕಾಳಜಿ ಭಾರತಕ್ಕೆ ಮಾತ್ರ ಏತಕ್ಕೆ? ಪ್ರಶ್ನೆ ನ್ಯಾಯವಾದದ್ದೇ. ಒಂದು ಕುಟುಂಬದಲ್ಲಿ ಒಬ್ಬರ ದುಡಿಮೆಯಲ್ಲಿ ಆ ಕುಂಟುಂಬದ ಉಳಿದವರೆಲ್ಲರೂ ಸುಖಿಯಾಗಿ ಇರುವರಲ್ಲವೆ! ದೇಶದ ಒಬ್ಬ ಪ್ರಾಮಾಣಿಕನ ನಾಯಕತ್ವದಲ್ಲಿ ಆ ದೇಶವೇ ಸುಖಿಯಾಗಿ ಇರುವುದಿಲ್ಲವೆ! ಇದರಂತೆಯೇ ಧರ್ಮಕ್ಷೇತ್ರದಲ್ಲಿ ಭಾರತವೇ ಜಗತ್ತಿಗೆ 'ಜ್ಯೇಷ್ಠ ದೇಶ'. ಇಲ್ಲಿ ಧರ್ಮವಿದ್ದರೆ, ಪ್ರಪಂಚವೇ ಸುಖಿಯಾಗಿರಬಹುದು. ಇಲ್ಲಿ ಧರ್ಮ ಕೆಟ್ಟರೆ, ಅದು ಪ್ರಪಂಚಕ್ಕೆ ಕೇಡು. ಸೂಕ್ಷ್ಮವಾಗಿ ಪ್ರಪಂಚದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಇದು ಅರ್ಥವಾಗುವುದು. ಏಕೆಂದರೆ ಧರ್ಮಕ್ಕೆ ಭಾರತವೇ ತವರುಭೂಮಿ. ಧರ್ಮ ಎಂಬುದು ಮತವಲ್ಲ, ಅಧ್ಯಾತ್ಮವೇ ಎಂಬುದನ್ನು ಮರೆಯಬಾರದು.

ಮರಕ್ಕೆ ನೀರು ಅತ್ಯಾವಶ್ಯಕ, ಆದರೆ ನೀರನ್ನು ಕೊಂಬೆಗಳಲ್ಲಿ ಚೆಲ್ಲಿದರೆ ಮರ ಬದುಕಲಾರದು, ಅದರ ಬೇರಿಗೆ ನೀರನ್ನು ಕೊಡಬೇಕು. ಆ ನೀರು ತಾನಾಗಿಯೇ ಕೊನೆಯ ಚಿಗುರಿನವರೆಗೂ ತಲುಪುವುದು. ಹೀಗೆಯೇ ಧರ್ಮವೆಂಬ ಮಹಾವೃಕ್ಷಕ್ಕೆ ಭಾರತವೇ ತಾಯಿಬೇರು. ಇಲ್ಲಿ ಇದನ್ನು ಪೋಷಿಸಿದರೆ ಪ್ರಪಂಚವೇ ಸುಖಿಯಾಗುವುದು ಖಂಡಿತ. ಈ ಸತ್ಯವನ್ನು ನಮ್ಮವರಿಗಿಂತಲೂ ಹೊರದೇಶಗಳ ವಿದ್ವಾಂಸರು ಚೆನ್ನಾಗಿ ಬಲ್ಲರು.

ಕೊನೆಯದಾಗಿ ಒಂದು ಪ್ರಶ್ನೆ, ಈ ಅಧ್ಯಾತ್ಮ ಎಲ್ಲರಿಗೂ ಕಾರ್ಯಸಾಧ್ಯವೆ?

ನಮ್ಮ ದೈನಂದಿನ ಜೀವನವೇ ಅಧ್ಯಾತ್ಮಮಯ. ಅದರಲ್ಲೂ ಭಾರತದ ಮಹಾತ್ಮರು ದೀರ್ಘದರ್ಶಿಗಳು, ನಮಗೆ ಅಂತಹ ಸಹಜವಾದ–ಸುಲಭವಾದ ಅಧ್ಯಾತ್ಮವನ್ನು ನಮ್ಮ ಜೀವನ ವಿಧಾನದಲ್ಲಿ ಅಳವಡಿಸಿಕೊಟ್ಟಿರುತ್ತಾರೆ. ಇದೇ ಕರ್ಮಯೋಗ, 'ಕಾಯಕವೇ ಕೈಲಾಸ', 'ನಿನಗೆ ಹಾಕಿಕೊಟ್ಟಿರುವ ದಾರಿಯಲ್ಲಿ ಹೋಗುತ್ತಿರು. ಒಂದು ದಿನ ಕೊನೆಯನ್ನು ಮುಟ್ಟಿಯೇ ಮುಟ್ಟುವೆ' ಎಂದು ಘೋಷಿಸಿದ್ದಾರೆ. ಇದನ್ನು ನಗರದ ಜನರಿಗಿಂತಲೂ ಹಳ್ಳಿಯ ಜನರು ಈವತ್ತಿಗೂ ತಮ್ಮ ರಕ್ತದಲ್ಲಿಟ್ಟುಕೊಂಡಿದ್ದಾರೆ. ಇದರಿಂದಲೇ 'ಹಿಂದೂ ಧರ್ಮ' ಎಂಬುದು ಉಳಿದ ಧರ್ಮಗಳಂತೆ ಒಂದು ಮತೀಯ ಧರ್ಮವಲ್ಲ. ಅದು ಒಂದು ಜೀವನವಿಧಾನ ಎಂದು ಎಲ್ಲರೂ ಹೇಳುತ್ತಾರೆ. ಅಧ್ಯಾತ್ಮಜೀವನ ಎನ್ನುವುದು ಪ್ರತ್ಯೇಕವೇ ಇಲ್ಲ. ನಿಃಸ್ವಾರ್ಥ ಕರ್ತವ್ಯನಿಷ್ಠೆಯೇ ಅಧ್ಯಾತ್ಮಜೀವನ. ಈ ನಿಃಸ್ವಾರ್ಥ ಜೀವನಕ್ಕೆ ಜಾತಿ, ಮತ ಕೋಮು. ಭಾಷೆ. ದೇಶ ಇತ್ಯಾದಿ ಯಾವುದೂ ವಿರೋಧಿಯೇ ಅಲ್ಲ. ಅಷ್ಟು ಮಾತ್ರವಲ್ಲ, ನಿಸ್ವಾರ್ಥಜೀವನ ಇವೆಲ್ಲರಲ್ಲೂ ಸಾಮರಸ್ಯವನ್ನು ಉಂಟುಮಾಡುತ್ತದೆ. ಮಾನವೀಯತೆಯೇ ಇದಕ್ಕೆ ಆಧಾರ. ಇದೇ ವಿಶ್ವಧರ್ಮ. ಇದನ್ನು ಧಾರ್ಮಿಕರೆಲ್ಲರೂ ತಿಳಿದು ತಾವೂ ಆಚರಿಸಿ, ಇತರರಿಗೂ ತೋರಿಸಿದಾಗಲೇ ಜಗತ್ತಿಗೆ ಶಾಂತಿ ಮತ್ತು ಕ್ಷೇಮ. ಇದೇ ಭಾರತೀಯರ ಆದ್ಯ ಕರ್ತವ್ಯ.

ಭಾರತೀಯ ಜ್ಞಾನಚಿಂತನೆ

ಇಷ್ಟು ಮಾತ್ರವಲ್ಲ ಈ ಭಾರತ ದೇಶವನ್ನು ಪುಣ್ಯಭೂಮಿ, ಕರ್ಮಭೂಮಿ, ಸಾಧನಾ ಭೂಮಿ, ಧರ್ಮದೇಶ ಎಂದು, ಎಲ್ಲಾ ಅಭಿಮಾನಗಳನ್ನು ತೊರೆದ ಮಹರ್ಷಿಗಳು ಹೇಳಿರುವುದು ಪ್ರಸಿದ್ಧ. ಇವೆಲ್ಲಕ್ಕೂ ಆಧಾರವಾದ ಜ್ಞಾನದ ತವರು ಭೂಮಿಯು ಈ ದೇಶವಾಗಿದೆ.

ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥

–ಭ.ಗೀ – 4.33

ಎಂದು ಎಲ್ಲಾ ಸಾಧನೆಗಳ ಗುರಿ ಜ್ಞಾನವೇ ಎಂದು ಸಾರುತ್ತದೆ ಭಗವದ್ಗೀತೆ. ಜ್ಞಾನಕ್ಷಯವಾದರೆ ಧರ್ಮ, ಕರ್ಮ ಎಲ್ಲವೂ ಕ್ಷೀಣವಾಗುವುದು ಅನಿವಾರ್ಯ (ಸಹಜ). ಓದುವವರ ಸಂಖ್ಯೆ ಹೆಚ್ಚಾಗಿರಬಹುದು, ಮನುಷ್ಯರು ಹಿಂದಿನವರಿಗಿಂತಲೂ ಬುದ್ಧಿವಂತರಾಗಿರಬಹುದು, ಆದರೆ ಬುದ್ಧಿಯೇ ಬೇರೆ, ಜ್ಞಾನವೇ ಬೇರೆ ಎಂಬ ರಹಸ್ಯವನ್ನು ಈ ದೇಶದ ಮಹರ್ಷಿಗಳೆ ಕಂಡುಹಿಡಿದು ಸಾರಿದರು. ಸಮಸ್ಯೆಗಳನ್ನು ಬೆಳೆಸುವುದು ಬುದ್ಧಿ. ಸಮಸ್ಯೆಗಳನ್ನು ಪರಿಹರಿಸುವುದು ಜ್ಞಾನ .

ಬುದ್ಧಿವಂತನಾದ ಮನುಷ್ಯನನ್ನು ಯಾರೂ ಜ್ಞಾನಿ ಎಂದು ಹೇಳುವುದಿಲ್ಲ. ಬುದ್ಧಿ ಬಹಿರ್ಮುಖಿ. ಜ್ಞಾನ ಅಂತರ್ಮುಖಿ. ಬುದ್ಧಿಗೆ ಆಧಾರ ಮೆದುಳು ಜ್ಞಾನಕ್ಕೆ ಆಧಾರ ಆತ್ಮ. 'ಯಶ್ಚ ಮೂಢ .....ಜನಃ' ಎಂದು ಭಾಗವತ ಹೇಳುತ್ತದೆ. ಬುದ್ಧಿಯೇ ಬೆಳೆಯದ ಜೀವಿಗಳಿಗೆ ಸಮಸ್ಯೆಗಳು ಕಡಿಮೆ ಎಂಬುದನ್ನು, ಬುದ್ಧಿಯನ್ನು ದಾಟಿದವನಿಗೆ ಸಮಸ್ಯೆಯೇ ಇರುವುದಿಲ್ಲ ಎಂಬುದನ್ನು ಲೋಕದಲ್ಲಿ ಪ್ರತ್ಯಕ್ಷವಾಗಿ ಹೇಳಬಹುದು. ಈ ಜ್ಞಾನಿಗಳು ಎಲ್ಲರೂ ಒಂದೇ ಮಟ್ಟದಲ್ಲಿ ಇರುವುದಿಲ್ಲ. ಈ ಕಾರಣದಿಂದಲೇ ಜ್ಞಾನಿಗಳು ಎಂದು ನಾವು ಭಾವಿಸಿರುವವರ ಮಾತುಗಳಲ್ಲಿಯೂ ವ್ಯತ್ಯಾಸಗಳು ಕಂಡು ಬರುತ್ತವೆ. ಇದನ್ನು ಸಹ –

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।

ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ ಭ.ಗೀ – 7.3

ಎಂದು ಹೇಳಿದ್ದಾರೆ. ಸಾವಿರಕ್ಕೆ ಒಬ್ಬನೆ ಸಾಧಕನಾಗುತ್ತಾನೆ. ಅದರಲ್ಲಿಯೂ ಯಾವನೋ ಒಬ್ಬನು ಸಿದ್ಧನಾಗುತ್ತಾನೆ ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಆದರೆ 'ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ' ಎಂಬಲ್ಲಿ ತತ್ತ್ವತಃ = ಯಥಾವತ್ತಾಗಿ ಎಂದು ಹೇಳಿರುವುದರಿಂದ ಸಿದ್ಧರಲ್ಲೂ ಎಲ್ಲರೂ ಯಥಾವತ್ತಾಗಿ ತಿಳಿಯುವುದಿಲ್ಲ, ಅರೆ ಕೊರೆಯಾಗಿಯೇ ತಿಳಿಯುತ್ತಾರೆ ಎಂದು ಹೇಳಿರುವುದರಿಂದ ಸಿದ್ದರಲ್ಲೂ = ಜ್ಞಾನಿಗಳಲ್ಲೂ ತಾರತಮ್ಯ ಉಂಟೆಂದು ಆಚಾರ್ಯರು ವ್ಯಾಖ್ಯಾನ ಮಾಡಿದ್ದಾರೆ. 'ನೈಕೋ ಮುನಿರ್ಯಸ್ಯ ಮತಂ ಪ್ರಮಾಣಂ' ಎಂಬ ವಚನವು ಕಂಡು ಬರುತ್ತದೆ. ಒಟ್ಟಿನಲ್ಲಿ ಜ್ಞಾನಿಗಳು ದುರ್ಲಭ. ಜ್ಞಾನವು ದುರ್ಲಭ.

ವ್ಯಾಧಿಯನ್ನು ಪತ್ತೆ ಹಚ್ಚಿದ ಮೇಲೆ ಉಪಾಯವನ್ನು ಪತ್ತೆ ಹಚ್ಚುವುದು ಸ್ವಲ್ಪ ಸುಲಭ. ವ್ಯಾಧಿ ಮತ್ತು ಅದರ ಕಾರಣಗಳನ್ನು ಪತ್ತೆ ಹಚ್ಚಬೇಕು. ಪ್ರತಿಯೊಬ್ಬನು ತನ್ನನ್ನು ಸರಿಯಾದವನೆಂದು ಭಾವಿಸುವುದು ಸಹಜ. ವಿದ್ವಾಂಸನಿಗೆ 'ದೋಷಜ್ಞ' ಎಂಬ ಹೆಸರಿದೆ. ಒಂದು ವಿಷಯವನ್ನು ತೆಗೆದುಕೊಂಡ ತಕ್ಷಣವೇ ಅದರಲ್ಲಿರುವ ದೋಷವನ್ನು ಗುರುತಿಸಬಲ್ಲವನೆಂದು ಸಾಮಾನ್ಯವಾಗಿ ಹೇಳುತ್ತಾರೆ. ಆದರೆ, ವಿಷಯದಲ್ಲಿರುವ ದೋಷಕ್ಕಿಂತಲೂ 'ವಿಷಯಿ'ಯಾದ ತನ್ನಲ್ಲಿರುವ ದೋಷವನ್ನು ಅರಿಯುವುದೇ ಕಷ್ಟ. ದೋಷಜ್ಞ ಎಂದರೆ ತನ್ನಲ್ಲಿರುವ ದೋಷವನ್ನು ಅರಿಯುವವನೇ ಎಂದು ಅರ್ಥೈಸುವುದೇ ಸೂಕ್ತ. ಶ್ರೀ ರಾಮನನ್ನು ಬಣ್ಣಿಸುವಾಗ 'ಸ್ವದೋಷವಿತ್' ಎಂದು ಹೇಳಿದ್ದಾರೆ. ಇತರರ ದೋಷವನ್ನು ಅರಿಯುವುದಕ್ಕಿಂತಲೂ ತನ್ನ ದೋಷವನ್ನರಿಯುವುದು ಬಹಳ ಕಷ್ಟ. ಶ್ರೀ ರಾಮನನ್ನು ಮೊದಲು ಸ್ವದೋಷವಿತ್ – ತನ್ನ ದೋಷವನ್ನು ಅರಿತವನು. ಸ್ವದೋಷಜ್ಞಾನ – ಅದನ್ನು ಪರಿಹರಿಸಿಕೊಳ್ಳುವುದಕ್ಕಾಗಿ. ಪರದೋಷಜ್ಞಾನ ತನ್ನಲ್ಲಿ ಅದು ಬರದೇ ಇರುವುದಕ್ಕಾಗಿ. ಆದಕಾರಣ ಮೊದಲು ನಾವು ಈ ಕೆಲಸ ಮಾಡಬೇಕು.

ಬ್ರಹ್ಮರ್ಷಿಗಳ ಪರಂಪರೆಗೆ ಸೇರಿದವರಾದ ಭಾರತೀಯರ ನಿಜ ಸ್ಥಿತಿ ಏನು? ಈಗಿನ ಸ್ಥಿತಿಯೇನು? ಮಂತ್ರಕೃತ್ ಮಂತ್ರದ್ರಷ್ಟಾ ಎಂದಿದ್ದವರೇ ಬ್ರಹ್ಮವೇದಿಗಳು. ಇವರು ಕಂಡು ಜಗತ್ತಿಗೆ ಕೊಟ್ಟ ಮಂತ್ರಗಳೇ ವೇದದ ಸಂಹಿತೆಗಳು. ಇದು ಸಾಧ್ಯವಿಲ್ಲದಿದ್ದಾಗ ಬ್ರಾಹ್ಮಣಗಳು. ಯಜ್ಞ ಪ್ರಕ್ರಿಯೆ

ಪ್ರಾರಂಭ. ಇದರಲ್ಲಿಯೂ ಅಶಕ್ತಿ ಕಂಡು ಬಂದಾಗ ಗೃಹ್ಯಸೂತ್ರಗಳು. ಇದರ ಅನಂತರ ಇತಿಹಾಸ ಪುರಾಣಗಳು. ಇವು ವಿಫಲವಾದಾಗ ತಂತ್ರ ಮಂತ್ರಗಳ ಕಾಲ. ಈಗ ನಾವು ಮಾಡುತ್ತಿರುವ ಸಂಧ್ಯಾವಂದನಾದಿಗಳು ಈ ಪ್ರಕ್ರಿಯ ಕೊನೆಯ ಹಂತಕ್ಕೆ ಸೇರಿದವು .

ಈ ಸಂಧ್ಯಾವಂದನವೂ ಎಷ್ಟು ವೀರ್ಯವತ್ತಾಗಿದೆ ಎಂಬುದು ಅವರವರ ಮನಸ್ಸಾಕ್ಷಿಗೆ ಸೇರಿದ ವಿಷಯ. ಇಂತಹ ಪರಿಸ್ಥಿತಿಯಲ್ಲಿ ಇದ್ದುಕೊಂಡು ನಮಗೆ ನಾವೇ ಬ್ರಹ್ಮರ್ಷಿಗಳೆಂದು ಭಾವಿಸಿಕೊಂಡುಬಿಟ್ಟರೆ ಪರಿಹಾರ ಹೇಗೆ ಸಾಧ್ಯ?

ಉಪಸಂಹಾರ

ಪ್ರಶ್ನೆ- ಈವಾಗ ಇದನ್ನೆಲ್ಲಾ ಯೋಚಿಸಿ ಏನಾಗಬೇಕು ಅಥವಾ ಯೋಚನೆ ತಿಳಿದುಕೊಂಡರು ಪರಿಹಾರ ಹೇಗೆ ?

ಉತ್ತರ- ಇದರ ಅವಶ್ಯಕತೆಯೇ ತಿಳಿಯದಿದ್ದರೆ ಪರಿಹಾರ ಹೇಗೆ? ಕೆಲವರಾದರು ಇದನ್ನು ತೀವ್ರವಾಗಿ ಆಲೋಚಿಸಬೇಕು, ಅನಂತರ ಪರಿಹಾರ ಕಂಡುಹಿಡಿಯುವುದರಲ್ಲಿ 'ಆರ್ತಿ' ಬೇಕು. 'ಆರ್ತಿ ಇದ್ದರೆ ಕೀರ್ತಿ ಸಾಧ್ಯ'.

ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾನ್ತಿಮೃಚ್ಛತಿ ॥

ಭ.ಗೀ – 5.29

ಎಂಬ ಮಾತು ಎಂದೂ ಸುಳ್ಳಾಗುವುದಿಲ್ಲ.

॥ ಇತಿ ಶಮ್ ॥

ಭಾರತೀಯ ದರ್ಶನಗಳು

(ಈ ಲೇಖನ ಶ್ರೀ ಶ್ರೀರಂಗಮಹಾಗುರುಗಳು ಹೇಳಿದ ಪಾಠರೂಪವಾದ್ದಲ್ಲ. ಮಾತು ಮಾತಿನ ಪ್ರಸಂಗಗಳಲ್ಲಿ ಬಂದ ಪ್ರಶ್ನೆಗಳಿಗೆ ಅವರು ಕೊಟ್ಟ ನಿರ್ಣಾಯಕವಾದ ಅದ್ಭುತ ಉತ್ತರಗಳನ್ನೂ, ಮಾರ್ಗದರ್ಶನಗಳನ್ನೂ ಅವಲಂಬಿಸಿ ಬರೆದ ಲೇಖನವಿದು. ಬುದ್ಧಿಕ್ಷೇತ್ರದಲ್ಲಿ ಕಗ್ಗಂಟಾಗಿದ್ದ ಸಮಸ್ಯೆಗಳೂ ಸಹ ಅವರ ಎದುರಲ್ಲಿ ಸುಲಭವಾಗಿ ಬಿಡಿಸಿಕೊಳ್ಳುತ್ತಿದ್ದವು. ಅಪಾರವಾದ ಅವರ ಮೇಧೆಯಲ್ಲಿ ಗೋಚರವಾಗದ ವಿಷಯಗಳೇ ಇರಲಿಲ್ಲ. ಸೃಷ್ಟಿಯ ವಿಜ್ಞಾನವೇ ಅವರಿಗೆ ಸಂಪೂರ್ಣವಶವಾಗಿದ್ದುದೇ ಇದಕ್ಕೆ ಕಾರಣ. ಮುಖ್ಯವಾಗಿ ಅವರು ಕೊಟ್ಟ ಮಾರ್ಗದರ್ಶನಗಳಲ್ಲಿ ಎರಡು ಅಂಶಗಳೇ ದರ್ಶನಗಳೆಂಬ ಮಹಾರಣ್ಯದಲ್ಲಿ ನಿರ್ಭಯವಾಗಿ ಸಂಚರಿಸಲು ನನಗೆ ಸಹಾಯವಾದವು.

1. ನಮ್ಮ ಚಿಂತನಗಳಿಗೆ ಕೇವಲ ಕೆಲವು ವಚನಗಳೋ, ವ್ಯಕ್ತಿಗಳೋ ಆಧಾರವಾಗಬಾರದು, ಆಯಾ ವಿಷಯಗಳೇ ಆಧಾರವಾಗಿರಬೇಕು.

2. ಈಗಿನ ದರ್ಶನಗ್ರಂಥಗಳೆಲ್ಲವೂ ಕೇವಲ ದೃಷ್ಟಾಂತಗಳನ್ನ ಅವಲಂಬಿಸಿವೆ; ದಾರ್ಷ್ಟಾಂತಿಕದ ಗತಿ ಏನು? ದೃಷ್ಟಾಂತಗಳು ನಮ್ಮ ಚಿಂತನೆಗಳಿಗೆ, ಒಂದು ದ್ವಾರ ಮಾತ್ರ ಆಗಬೇಕೇ ಹೊರತು ವಿಷಯವಾಗಬಾರದು. ನಮ್ಮ ಚಿಂತನೆ ಒರಿಜಿನಲ್ಲಾಗಿ (ಮೂಲಭೂತ ರೂಪದಲ್ಲಿ)ರಬೇಕು = ವಿಷಯವನ್ನೇ ಅವಲಂಬಿಸಿರಬೇಕು.

ಈ ಮಾರ್ಗದರ್ಶನದಿಂದ ಎಷ್ಟೊಂದು ಸಹಾಯವಾಯಿತೆಂಬುದನ್ನು ಹೇಳಲು ಶಕ್ಯವೇ ಇಲ್ಲ. ಎಲ್ಲಕ್ಕಿಂತಲೂ, ಅವರ ಅನುಗ್ರಹವೇ ಸರ್ವಪೂರಕ ಎಂಬುದೇ ಪರಮ ಸತ್ಯವಾಗಿದೆ.)

ದರ್ಶನಗಳ ಉಗಮ

"ಬುದ್ಧಿಮತ್ಸು ನರಾಃ ಶ್ರೇಷ್ಠಾಃ" (ಮನು–I. 96) ಎಂಬುದು ಮನುವಿನ ವಚನ. ಭಗವಂತನ ಅದ್ಭುತ ವಿಚಿತ್ರ ಸೃಷ್ಟಿಯಲ್ಲಿ ಬುದ್ಧಿಯ ವಿಕಾಸವೇ ಬೆಳವಣಿಗೆಯನ್ನು ಅಳೆಯುವ ಸಾಧನವಾಗಿದೆ. ಬುದ್ಧಿಯ ವಿಕಾಸಕ್ಕೆ ಆಧಾರವಾಗಿರುವುದು 'ಮಸ್ತಿಷ್ಕ'ವೆಂಬ ಮೆದುಳು. ಮೆದುಳಿನ ರಚನೆಯ ದೃಷ್ಟಿಯಿಂದ ಮಾನವನೇ ಸರ್ವಶ್ರೇಷ್ಠ ಎಂಬುದು ಸರ್ವಸಂಮತ. ಮಾನವನಿಗಿಂತಲೂ ಮೇಲಾದ ವರ್ಗವನ್ನು 'ದೇವಯೋನಿ'ಗಳು ಎಂದು ಕರೆಯುತ್ತಾರೆ. ಇವು ಬುದ್ಧಿಯ ರಚನೆಗೆ ಸೇರಿಲ್ಲ.

ವಿದ್ಯಾಧರೋಽಪ್ಸರೋ ಯಕ್ಷ ರಕ್ಷೋ ಗಂಧರ್ವಕಿನ್ನರಾಃ ।
ಪಿಶಾಚೋ ಗುಹ್ಯಕಸ್ಸಿದ್ಧೋ ಭೂತೋಽಮೀ ದೇವಯೋನಯಃ ॥

ಎಂಬ ಶ್ಲೋಕ ಪ್ರಸಿದ್ಧ. ಈಗಿನ ವಿದ್ವಾಂಸರ ದೃಷ್ಟಿಯಿಂದ 'ದರ್ಶನ' ಎಂಬ ಪದ 'Philosophy' ಎಂಬ ಪದದ ಸಮಾನಾರ್ಥಕ. ಇದರಿಂದ ದರ್ಶನಗಳು ಬುದ್ಧಿಯ ಕ್ಷೇತ್ರಕ್ಕೆ ಒಳಪಡುತ್ತವೆ. ಭಾರತೀಯರ ದೃಷ್ಟಿಯಿಂದ ದರ್ಶನಗಳು ಕೇವಲ ಬುದ್ಧಿಯ ಕ್ಷೇತ್ರಕ್ಕೆ ಸೇರಿದ್ದಲ್ಲ. ಬುದ್ಧಿಪ್ರಧಾನಶಾಸ್ತ್ರವೆಂದು ತಿಳಿದಿರುವ ನ್ಯಾಯ ಮತ್ತು ವೈಶೇಷಿಕ ದರ್ಶನಗಳೂ ಸಹ ವಾಸ್ತವವಾಗಿ ಕೇವಲ ಬುದ್ಧಿಗೆ ಸೇರಿದವಲ್ಲ.

ಯೋಗಾಚಾರವಿಭೂತ್ಯಾ ಯಃ ತೋಷಯಿತ್ವಾ ಮಹೇಶ್ವರಮ್ ।
ಚಕ್ರೇ ವೈಶೇಷಿಕಂ ತಂತ್ರಂ ತಸ್ಮೈ ಕರಾಂಭುಜೇ ನಮಃ ॥

ನ್ಯಾಯೋದ್ಧಾರಗಭೀರನಿರ್ಮಲಗಿರಾ ಗೌರೀಪತಿಸ್ತೋಷಿತಃ
ಅಕ್ಷಪಾದೋ ಮುನಿಃ .... ।

ಎಂದು ಈ ಎರಡು ಶಾಸ್ತ್ರ ಪ್ರವರ್ತಕರನ್ನು ಕುರಿತು ಹೇಳಲಾಗಿದೆ. ಇಬ್ಬರೂ ಪರಮೇಶ್ವರನ ಅನುಗ್ರಹದಿಂದ ಆ ಶಾಸ್ತ್ರಗಳನ್ನು ಬರೆದರು. ಇದರ ವಿವರಣೆಯನ್ನು ಮುಂದೆ ಆಯಾ ದರ್ಶನಗಳ ಪ್ರಸಂಗದಲ್ಲಿ ನೋಡಬಹುದು.

ಒಟ್ಟಿನಲ್ಲಿ ಬುದ್ಧಿಯ ಕ್ಷೇತ್ರಕ್ಕೆ ಸಂಬಂಧಪಟ್ಟ ಶಾಸ್ತ್ರಗಳೂ ಸಹ ಕೇವಲ ಬೌದ್ಧಿಕವಲ್ಲ. ಆದರೂ ಈಗಿನ ವಿದ್ವಾಂಸರ ದೃಷ್ಟಿಯಲ್ಲಿ ದರ್ಶನಗಳು ಅಥವಾ Philosophy ಗಳು ಬುದ್ಧಿಕ್ಷೇತ್ರಕ್ಕೆ ಸೇರಿದವೆಂದೇ ಭಾವಿಸುತ್ತಾರೆ. ಇವರ ದೃಷ್ಟಿಯಿಂದ ಬುದ್ಧಿಯೇ ಇವುಗಳ ಉಗಮಕ್ಷೇತ್ರ. ಮಾನವನ ಮೆದುಳು ಒಂದು

ಕ್ಷಣವು ಸುಮ್ಮನೆ ಇರುವುದಿಲ್ಲವೆಂಬುದು ಸರ್ವಾನುಭವಸಿದ್ಧ. ಅದು ಸದಾ ಯಾವುದನ್ನಾದರೂ ಚಿಂತಿಸುತ್ತಲೇ ಇರುವುದು. ಸಾಮಾನ್ಯಜೀವಿಗಳ ಚಿಂತನೆ ಅರ್ಥಕಾಮಗಳಲ್ಲಿ ಮುಗಿದರೆ, ಉದಾತ್ತಜೀವಿಗಳ ಚಿಂತನೆ ತತ್ತ್ವಕ್ಷೇತ್ರಗಳಲ್ಲಿ ಹರಿಯುವುದು ಸಹಜ. ಈ ಚಿಂತನೆಗಳೇ ದರ್ಶನಕ್ಷೇತ್ರಕ್ಕೆ ಉಗಮ ಎಂಬುದು ಈಗಿನ ಬುದ್ಧಿಜೀವಿಗಳ ಭಾವನೆಯಾಗಿದೆ.

ಬುದ್ಧಿ ಮತ್ತು ಜ್ಞಾನ

ಆದರೆ, ಭಾರತೀಯರ ನಿಲುವು ಬೇರೆಯಾಗಿದೆ. ತತ್ತ್ವಗಳು ಬುದ್ಧಿಗೆ ಗೋಚರವಾಗುವಂತಿಲ್ಲ, ಅದು ಜ್ಞಾನಕ್ಕೆ ಮಾತ್ರ ಗೋಚರ. ಜ್ಞಾನಕ್ಕೆ ವಿಷಯವಾದ ಮೇಲೆ ಅದರ ಪ್ರಭಾವ ಬುದ್ಧಿಯ ಮೇಲೆ ಬೀಳುವುದು ಅನಿವಾರ್ಯವಾದ್ದರಿಂದ, ಅದರ ಮೂಲಕ ತತ್ತ್ವಗಳ ವ್ಯವಹಾರ ನಡೆಯಬಹುದು ಅಷ್ಟೆ! ಏಕೆಂದರೆ, ತತ್ತ್ವಗಳು ಬುದ್ಧ್ಯತೀತ. ಬುದ್ಧಿಯು ಮತ್ತು ಜ್ಞಾನವು ಎರಡೂ ಒಂದಲ್ಲ. ಬುದ್ಧಿಯು ಪ್ರಕೃತಿಯ ಪರಿಣಾಮ ವಿಶೇಷ. ಜ್ಞಾನವು ಆತ್ಮನಿಗೆ ಸಂಬಂಧಪಟ್ಟದ್ದು. ಅಪ್ರಾಕೃತ. ಜ್ಞಾನವು ಮೆದುಳಿನ ಮೂಲಕ ಪ್ರತಿಫಲಿಸಿದಾಗ, ಅದು ಬುದ್ಧಿಯಾಗುತ್ತದೆ. ಇದು ಸಾಂಖ್ಯರವಾದ. ಸರ್ವಸಂಮತವಲ್ಲ ಎಂದು ಕೆಲವರು ವಾದಿಸಬಹುದು. ಬುದ್ಧಿ ಜ್ಞಾನ ಎರಡೂ ಒಂದೇ ಎಂದು ಗೌತಮಸೂತ್ರ ಹೇಳಿದೆ. ಆದರೆ, ಲೋಕದಲ್ಲಿ 'ಬುದ್ಧಿಮಾನ್' 'ಜ್ಞಾನೀ' ಎಂಬ ಪದಗಳನ್ನು ಯಾರೂ ಪರ್ಯಾಯವಾಗಿ ಬಳಸುವುದೇ ಇಲ್ಲ. 'ಬುದ್ಧಿಮಾನ್' ಎಂಬ ಪದ ವಸ್ತುವಿಷಯಕ ತಿಳುವಳಿಕೆಯನ್ನು ತಿಳಿಸುವುದು; 'ಜ್ಞಾನೀ' ಎಂಬುದು ತತ್ತ್ವಜ್ಞಾನವನ್ನೇ ತಿಳಿಸುವುದು ಎಂಬುದು ಸರ್ವಸಂಮತ. ಇದರಿಂದ ಸ್ಥೂಲದೃಷ್ಟಿಯಿಂದ ಎರಡು ಪದಗಳನ್ನು 'ಪರ್ಯಾಯ' ಎಂದು ಹೇಳಿದರೂ, ವಾಸ್ತವವಾಗಿ ಇವುಗಳು ಸಂಪೂರ್ಣ ಪರ್ಯಾಯವಲ್ಲ. ಆದ್ದರಿಂದ 'ದರ್ಶನ' ಎಂದು ಹೇಳುವ ವಿಷಯಗಳು ತತ್ತ್ವಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ಜ್ಞಾನವೇ ಇವುಗಳ ಉಗಮಕ್ಷೇತ್ರವಾಗಿದೆ.

ಕ್ರಿ.ಶ.7ನೆಯ ಕಾಲದವನೆಂದು ಭಾವಿಸಿರುವ ಹರಿಭದ್ರನೆಂಬ ಜೈನವಿದ್ವಾಂಸನು ಭಾರತೀಯ ಸಿದ್ಧಾಂತಗಳಿಗೆ ಪರಸ್ಪರ ಘರ್ಷಣೆಯನ್ನು ತಪ್ಪಿಸುವ ಉದ್ದೇಶದಿಂದ "ಷಡ್ದರ್ಶನಸಮುಚ್ಚಯ" ಎಂಬ ಗ್ರಂಥವನ್ನು ರಚಿಸಿರುವನು. 'ದೃಷ್ಟಿಕೋನ' ಎಂಬ ಅರ್ಥದಲ್ಲಿ 'ದರ್ಶನ' ಪದವನ್ನು ಅವನು ಬಳಸಿರುವನು. ಸಿದ್ಧಾಂತಗಳು ಭಿನ್ನಭಿನ್ನವಾಗಿ ಹುಟ್ಟಿಕೊಳ್ಳಲು ಅವರವರ

'ದೃಷ್ಟಿಕೋನ' ಕಾರಣವೇ ಹೊರತು, ತತ್ತ್ವಭೇದ ಕಾರಣವಲ್ಲ ಎಂಬುದು ಅವನ ಅಭಿಪ್ರಾಯವಾಗಿದೆ. ಈಗಿನ ವಿದ್ವಾಂಸರೂ ಸಹ 'ಅಭಿಪ್ರಾಯ ಭೇದವೇ' ಸಿದ್ಧಾಂತಭೇದಕ್ಕೆ ಕಾರಣವಾದ್ದರಿಂದ ಘರ್ಷಣೆ ಸರಿಯಲ್ಲ ಎಂದು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದಲೇ 'ದರ್ಶನ' ಪದದ ಬಳಕೆ ಬಂದಿರುವುದೆಂದು ತೋರುತ್ತದೆ.

ವಿದ್ಯಾಸ್ಥಾನಗಳು

ಪ್ರಾಚೀನ ಭಾರತೀಯರು ನಮ್ಮ ಜ್ಞಾನಕ್ಷೇತ್ರವನ್ನು 'ವಿದ್ಯಾಸ್ಥಾನಗಳು' ಎಂದೇ ಕರೆದಿರುವರು.

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ।
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ॥

ಅಥವಾ

ಪುರಾಣತರ್ಕಮೀಮಾಂಸಾಧರ್ಮಶಾಸ್ತ್ರಾಂಗಮಿಶ್ರಿತಾಃ ।
ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥

ಎಂದೂ, ಇವುಗಳೊಂದಿಗೆ –

ಆಯುರ್ವೇದೋ ಧನುರ್ವೇದೋ ಗಾಂಧರ್ವಶ್ಚೇತಿ ತೇ ತ್ರಯಃ ।
ಅರ್ಥಶಾಸ್ತ್ರಂ ಚತುರ್ಥಂ ಚ ವಿದ್ಯಾ ಹ್ಯಷ್ಟಾದಶ ಸ್ಮೃತಾಃ ॥

ಎಂದೂ ಅವರು ಹೇಳಿರುವರು. ಇವುಗಳಲ್ಲಿ "ವೇದಾಃ" ಎಂದು ಹೇಳಿರುವ 4 ವೇದಗಳೇ ಅತ್ಯಂತ ಪ್ರಧಾನವಾದವು = ಅಂಗಿಗಳು. ಇವುಗಳೊಂದಿಗೆ ಶಿಕ್ಷಾವ್ಯಾಕರಣಂ ಛಂದೋ ನಿರುಕ್ತಂ ಜ್ಯೋತಿಷಂ ತಥಾ । ಕಲ್ಪಶ್ಚೇತಿ ಷಡಂಗಾನಿ" ಎಂದು ವ್ಯಾಕರಣಾದಿಗಳು ಆರು ಅಂಗಗಳು. ಮೀಮಾಂಸಾ, ನ್ಯಾಯವಿಸ್ತರಃ ಅಥವಾ ತರ್ಕ, ಪುರಾಣಗಳು, ಧರ್ಮಶಾಸ್ತ್ರಗಳು ಇವು ನಾಲ್ಕು ಉಪಾಂಗಗಳು, ಇವು 14 ವಿದ್ಯಾಸ್ಥಾನಗಳು. ಋಗ್ವೇದದ ಉಪವೇದ ಆಯುರ್ವೇದ, ಯಜುರ್ವೇದದ ಉಪವೇದ ಧನುರ್ವೇದ, ಸಾಮವೇದದ ಉಪವೇದ ಗಾಂಧರ್ವವೇದ, ಅಥರ್ವವೇದದ ಉಪವೇದ ಅರ್ಥಶಾಸ್ತ್ರ. ಈ ನಾಲ್ಕೂ ಸೇರಿದರೆ 18 ವಿದ್ಯಾಸ್ಥಾನಗಳು.

ಇವುಗಳು ವಿದ್ಯಾಸ್ಥಾನಗಳು ಮಾತ್ರವಲ್ಲ, 'ಧರ್ಮಸ್ಯ ಚ' ಎಂದರೆ 'ಧರ್ಮಸ್ಥಾನ'ಗಳೂ ಹೌದು. ಇದೇ ಭಾರತೀಯರ ವೈಶಿಷ್ಟ್ಯ. 18 ವಿದ್ಯಾಸ್ಥಾನಗಳು 'ಧರ್ಮ' ರಹಿತವಾದರೆ ಅವು ವಿದ್ಯಾಸ್ಥಾನಗಳಲ್ಲ, ಕೇವಲ 'ಬುದ್ಧಿಸ್ಥಾನ'ಗಳು. ಕೇವಲ ಬುದ್ಧಿ ಮಾನವನಿಗೆ ಅಪಾಯಕಾರಿ, 'ಮಹಾಮಾಯೆ' ಆಗುತ್ತದೆ.

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
(ಗೀ. 7.14)

ಎಂದು ಪ್ರಕೃತಿಯನ್ನೇ 'ಮಾಯೆ' ಎಂದು ಹೇಳಿ, ಅದು 'ದುರತ್ಯಯಾ'= ದಾಟಲು ಅಸಾಧ್ಯವಾದ್ದು ಎಂದು ಹೇಳಲಾಗಿದೆ. ಹಾಗಾದರೇ ಉಪಾಯವೇನು? ಎಂದರೆ,

ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ।
(ಗೀತಾ 7.14)

ನನ್ನನ್ನು ಶರಣಾದವರು ಮಾತ್ರವೇ ಈ ಮಾಯೆಯನ್ನು ದಾಟುವರು ಎಂದು ಹೇಳಿದೆ. ಭಗವಂತನಲ್ಲಿ ಸರ್ವಾರ್ಪಣವೆಂಬ ಭಾವವಿದ್ದಾಗ ಮಾತ್ರ ಇವು ವಿದ್ಯಾಸ್ಥಾನಗಳಾಗುತ್ತವೆ, ಇಲ್ಲದಿದ್ದಲ್ಲಿ ಅವು ಅವಿದ್ಯೆಯ = ಮಾಯೆಯ ಸ್ಥಾನಗಳಾಗುತ್ತವೆ. ತ್ರಿಗುಣವೆಂಬ ಮಾಯೆಯ ಅಥವಾ ಅವಿದ್ಯೆಯ ಮೊದಲನೆಯ ಪರಿಣಾಮವೇ "ಬುದ್ಧಿ". ಇದಕ್ಕೆ "ಮಹತ್" ಎಂಬ ಹೆಸರೂ ಉಂಟು. ಆದ್ದರಿಂದ ಬುದ್ಧಿಯೇ ಮಹಾಮಾಯೆ. ಭಗವದ್ಭಕ್ತಿ ಕೂಡಿದರೆ ಆವಾಗ ಬುದ್ಧಿಯೇ ಕ್ರಮವಾಗಿ ಜ್ಞಾನರೂಪವನ್ನು ತಾಳಿ ಮಾಯೆಯಿಂದ ಪಾರಾಗಲು ಕಾರಣವಾಗುತ್ತದೆ. ದರ್ಶನಗಳು ಮತ್ತು ವಿದ್ಯಾಸ್ಥಾನಗಳು ಎರಡೂ ಒಂದಲ್ಲವಾದರೂ, ಈಗಿನ ರೂಢಿಯಲ್ಲಿ ದರ್ಶನಗಳನ್ನು ಜ್ಞಾನಕ್ಷೇತ್ರಕ್ಕೇ ಸೇರಿಸಿ ಕೆಲವರು ವ್ಯವಹರಿಸುವುದರಿಂದ, ಈ ದೃಷ್ಟಿಯಲ್ಲಿ ಮುಂದಿನ ವಿಷಯಗಳನ್ನು ನಿರೂಪಿಸಲಾಗುವುದು.

ಆಸ್ತಿಕ-ನಾಸ್ತಿಕ ವಿಭಾಗ - ದರ್ಶನಗಳ ವಿಭಾಗ

ಈಗಿನ ವಿದ್ವಾಂಸರು ಭಾರತೀಯ ದರ್ಶನಗಳನ್ನು ಮೊದಲು ಆಸ್ತಿಕ, ನಾಸ್ತಿಕ ಎಂದು ಎರಡಾಗಿ ವಿಂಗಡಿಸುತ್ತಾರೆ. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ, ವೇದಾಂತ ಎಂದು ಆಸ್ತಿಕದರ್ಶನಗಳು - 6. ಚಾರ್ವಾಕ, ಬೌದ್ಧ, ಜೈನ ಎಂದು ನಾಸ್ತಿಕ ದರ್ಶನಗಳು - 3. ಅಥವಾ ಬೌದ್ಧರು-ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ ಎಂದು

4 ವಿಧವಿರುವುದರಿಂದ ಇದರೊಂದಿಗೆ, ಚಾರ್ವಾಕ ಮತ್ತು ಜೈನರನ್ನು ಸೇರಿಸಿಕೊಂಡು ನಾಸ್ತಿಕದರ್ಶನವೂ 6 ಎಂದೂ ಹೇಳಬಹುದು. ಹೀಗೆ ಆಸ್ತಿಕದರ್ಶನಗಳು 6, ನಾಸ್ತಿಕದರ್ಶನಗಳು 6, ಒಟ್ಟು ದರ್ಶನಗಳು 12.

'ಆಸ್ತಿಕರು' ಎಂದರೆ ಈಶ್ವರನನ್ನು ಒಪ್ಪುವರೆಂದೂ, 'ನಾಸ್ತಿಕರು' ಎಂದರೆ ಈಶ್ವರನನ್ನು ಒಪ್ಪದವರು ಎಂದೂ ಸಾಮಾನ್ಯ ಜನರು ಹೇಳುತ್ತಾರೆ. ಆದರೆ ಆಸ್ತಿಕದರ್ಶನಗಳಲ್ಲಿ ಸೇರಿರುವ ಮೀಮಾಂಸಕರು ಮತ್ತು ಸಾಂಖ್ಯರು ನಿರೀಶ್ವರವಾದಿಗಳಾಗಿರುವುದರಿಂದ ಈ ಅರ್ಥ ಸರಿಹೊಂದುವುದಿಲ್ಲ. 'ಅವರು ನಿರೀಶ್ವರವಾದಿಗಳಲ್ಲ, ಈಶ್ವರವಾದಿಗಳೇ' ಎಂದು ಕೆಲವರು ಹೇಳುವರು. ಈ ವಿಷಯವನ್ನು ಆಯಾ ದರ್ಶನಗಳ ಶೀರ್ಷಿಕೆಯಲ್ಲಿ ವಿಮರ್ಶಿಸಲಾಗುತ್ತದೆ. ಅವರಿಬ್ಬರೂ ನಿರೀಶ್ವರವಾದಿಗಳು ಎಂಬುದೇ ಹೆಚ್ಚಿನ ವಿದ್ವಾಂಸರಿಗೆ ಸಂಮತವಾಗಿದೆ. ಇವರ ದೃಷ್ಟಿಯಲ್ಲಿ ಅವರಿಬ್ಬರೂ ನಾಸ್ತಿಕರಾಗಬೇಕಾಗುತ್ತದೆ.

ಆಸ್ತಿಕ-ನಾಸ್ತಿಕಪದಗಳು "ಅಸ್ತಿ ನಾಸ್ತಿ ದಿಷ್ಟಂ ಮತಿಃ" ಎಂಬ ವ್ಯಾಕರಣಸೂತ್ರದಿಂದ ಆದವು. ಇದರ ಪ್ರಕಾರ, ಪರಲೋಕವನ್ನು ಒಪ್ಪುವವರು ಆಸ್ತಿಕರೆಂದೂ, ಪರಲೋಕವನ್ನು ಒಪ್ಪದವರು ನಾಸ್ತಿಕರೆಂದೂ ಆಗುತ್ತದೆ. ಸಾಂಖ್ಯ ಮತ್ತು ಮೀಮಾಂಸಕರೂ ಪರಲೋಕವನ್ನು ಒಪ್ಪುವುದರಿಂದ ಅವರೂ ಆಸ್ತಿಕರೇ ಎಂದು ಹೇಳಿದರೆ, ಜೈನರು ಮತ್ತು ಬೌದ್ಧರೂ ಪರಲೋಕವಾದಿಗಳಾದ್ದರಿಂದ, ಅವರನ್ನು ನಾಸ್ತಿಕದರ್ಶನಗಳಲ್ಲಿ ಸೇರಿಸಿದ್ದು ತಪ್ಪಾಗುತ್ತದೆ. ವಾಸ್ತವಿಕವಾಗಿ ಹೇಳುವುದಾದರೆ, ವೇದಪ್ರಾಮಾಣ್ಯವನ್ನು ಒಪ್ಪುವರನ್ನು ಆಸ್ತಿಕರೆಂದೂ, ಅದನ್ನು ಒಪ್ಪದವರು ನಾಸ್ತಿಕರೆಂದೂ ವಿಂಗಡಿಸಲಾಗಿದೆ. ಆದರೆ, ಇದು ವ್ಯಾಕರಣಸೂತ್ರ ವಿರುದ್ಧ. ಆದ್ದರಿಂದ ಆಸ್ತಿಕ-ನಾಸ್ತಿಕ ಎಂಬ ಸ್ಥಾನದಲ್ಲಿ ವೈದಿಕ-ಅವೈದಿಕ ಎಂದು ಬೇಕಾದರೆ ಹೇಳಬಹುದು ಎಂದು ಕೆಲವರು ವಾದಿಸುವರು.

ಆದರೆ, ಜೈನರು ಮತ್ತು ಬೌದ್ಧರು ಪರಲೋಕವನ್ನು ಒಪ್ಪಲು ಪ್ರಮಾಣವೇನು? ಎಂಬ ಪ್ರಶ್ನೆಗೆ ಸರಿಯಾದ ಉತ್ತರವೇನು. ಆ ಮತದ ಗ್ರಂಥಗಳೇ ಅದಕ್ಕೆ ಪ್ರಮಾಣ. ಅಂದರೆ ಜೈನ ಮತ್ತು ಬೌದ್ಧಾಗಮಗಳೇ ಅದಕ್ಕೆ ಪ್ರಮಾಣ ಎಂದು ಹೇಳಿದರೆ, ಈ ಆಗಮಗಳೆಲ್ಲವೂ ಸುಮಾರು 2500 ವರ್ಷಗಳಷ್ಟೇ ಪ್ರಾಚೀನವಾದವು. ಏಕೆಂದರೆ, ಆ ಎರಡು ಧರ್ಮಗಳು ಆ ಕಾಲಕ್ಕೇ ಹುಟ್ಟಿಕೊಂಡವು. ಇದಲ್ಲದೆ, ಅವುಗಳನ್ನು ಆಯಾ ಮತದವರೇ 'ಪೌರುಷೇಯ' ಎಂದೇ ಒಪ್ಪಿರುತ್ತಾರೆ. ವೈದಿಕಪಂಥದಲ್ಲಿ ತಾರ್ಕಿಕರು ಮತ್ತು

ಸಾಂಖ್ಯರು ವೇದವನ್ನು ಪೌರುಷೇಯವೆಂದು ಹೇಳಿದರೂ, ತಾರ್ಕಿಕರು 'ವೇದ ಈಶ್ವರಕೃತ' ಎಂಬ ಅರ್ಥದಲ್ಲಿ ಹೇಳುವರೇ ಹೊರತು ಸಾಮಾನ್ಯಮಾನವನಿಂದ ರಚಿತವಲ್ಲ ಎಂದೇ ಹೇಳುವರು. ಸಾಂಖ್ಯರು ನಿರೀಶ್ವರವಾದಿಗಳಾದರೂ, "ವೇದ ಚರಿತ್ರೆಯ ಕಾಲಕ್ಕೆ ಸೇರಿದ್ದಲ್ಲ ಅತ್ಯಂತ ಪುರಾತನವಾದ್ದು" ಎಂದೇ ಹೇಳುತ್ತಾರೆ. ಈ ದೃಷ್ಟಿಯಿಂದ ಜೈನಬೌದ್ಧಾಗಮಗಳು ಕೆಲವು ವಿಷಯಗಳಲ್ಲಿ ವೇದದ ಅನುಕರಣೆ ಮಾತ್ರ ಎಂದೇ ಆಗುತ್ತದೆ. ಆದ್ದರಿಂದ "ವೇದಪ್ರಾಮಾಣ್ಯದಿಂದ ಪರಲೋಕವನ್ನು ಒಪ್ಪದವರು 'ನಾಸ್ತಿಕರು' ಎಂದು ಹೇಳಿದ ಪಾಣಿನಿಯ ವ್ಯಾಕರಣಸೂತ್ರಕ್ಕೆ ಅರ್ಥವನ್ನು ಹೇಳಿದರೆ ಎಲ್ಲವೂ ಸರಿ ಹೋಗುತ್ತದೆ. ಪಾಣಿನಿಯೂ ಸಹ ವೈದಿಕಪಂಥದವರಾಗಿ, ಇದಕ್ಕೆ ತಕ್ಕಂತೆಯೇ ವೇದದ ಅಂಗವಾಗಿಯೇ ವ್ಯಾಕರಣವನ್ನು ರಚಿಸಿರುವುದರಿಂದ ಮೇಲೆ ಹೇಳಿದ ಅರ್ಥವೇ ಪ್ರಾಮಾಣಿಕವಾಗುತ್ತದೆ.

'ವೇದ' ಎಂಬುದು ಒಂದು 'ಮತಗ್ರಂಥ'ವಲ್ಲ. ಯಾರೋ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಿದ್ದೂ ಅಲ್ಲ. ಅದು ಮೂರು ಕಾಲಕ್ಕೂ ಮೂರು ಲೋಕಕ್ಕೂ ಸೇರಿದ ಒಂದು 'ವಿಶ್ವಸಾಹಿತ್ಯ'. ಅದರ ಮಹತ್ತ್ವವನ್ನು ಹೇಳಬೇಕಾದರೆ, ಅದಕ್ಕೆ ಪ್ರತ್ಯೇಕವಾದ ಪ್ರಬಂಧವೇ ಆಗಬೇಕು. ಪ್ರಪಂಚದಲ್ಲೇ ಅತಿಪ್ರಾಚೀನವಾದ ಸಾಹಿತ್ಯ 'ವೇದ' ಎಂಬುದು ಸರ್ವವಿದಿತ. ಆ ಸಾಹಿತ್ಯ ನಿಸ್ಸತ್ತ್ವವಾಗಿದ್ದಲ್ಲಿ ಇಷ್ಟು ವರ್ಷ ಅದು ಉಳಿಯಲು ಸಾಧ್ಯವೆ! ಒಟ್ಟಿನಲ್ಲಿ ವೇದದ ಸ್ಥಾನ ಅತಿ ಮಹತ್ತ್ವವುಳ್ಳದ್ದಾಗಿದೆ. 'ಆಸ್ತಿಕ-ನಾಸ್ತಿಕ'ಪದಗಳು 'ವೈದಿಕ-ಅವೈದಿಕ' ಎಂಬ ಅರ್ಥದಲ್ಲೇ ಕೊನೆಗಾಣುತ್ತವೆ.

ಮತ-ಸಿದ್ಧಾಂತ-ದರ್ಶನ

ಸಾಯಣಮಧವಾಚಾರ್ಯರ 'ಸರ್ವದರ್ಶನಸಂಗ್ರಹ'ದಲ್ಲಿ ಶೈವ, ಪಾಶುಪತ ಮುಂತಾಗಿ ದರ್ಶನಗಳ ವಿಭಾಗವನ್ನು ಬೇರೆ ವಿಧದಲ್ಲಿ ಹೇಳಲಾಗಿದೆ. ಹೀಗೆಯೇ ಈ ದರ್ಶನಗಳ ಗಣನೆಯಲ್ಲಿ ಬೇರೆ ರೀತಿಗಳೂ ಕಂಡುಬರುತ್ತದೆ. ಆದ್ದರಿಂದ ದರ್ಶನಗಳನ್ನು 'ಇಷ್ಟೇ' ಎಂದು ನಿಗದಿಮಾಡಿ ಹೇಳಲು ಸ್ವಲ್ಪ ಕಷ್ಟವೇ ಸರಿ! ಆದರೆ, 'ಮತ', 'ಸಿದ್ಧಾಂತ', 'ದರ್ಶನ' ಮುಂತಾದ ಪದಗಳಿಗೆ ನಿರ್ದಿಷ್ಟವಾದ ಅರ್ಥಗಳನ್ನು ಇಲ್ಲಿಯವರೆಗೆ ಯಾರೂ ಹೇಳದ ಕಾರಣ, ಅವರವರಿಗೆ ತೋರಿದಂತೆ ವಿಭಾಗ ಮಾಡಿರುತ್ತಾರೆ. ಈ ಮೂರು ಪದಗಳ ಅರ್ಥದಲ್ಲಿ ಅನೇಕರಿಗೆ 'ಸಾಂಕರ್ಯ'ವೇ ಆಗಿದೆ. 'ಶಾಂಕರಮತ'

'ಶಾಂಕರದರ್ಶನ' 'ಶಾಂಕರಸಿದ್ಧಾಂತ' ಎಂದೂ, 'ರಾಮಾನುಜಮತ' 'ರಾಮಾನುಜದರ್ಶನ' 'ರಾಮಾನುಜಸಿದ್ಧಾಂತ' ಎಂದೂ ವ್ಯವಹರಿಸುವ ರೂಢಿ ಪಂಡಿತರಲ್ಲಿ ಕಂಡುಬರುತ್ತದೆ. ಹೀಗೆಯೇ 'ಶೈವದರ್ಶನ' 'ಶೈವಮತ' 'ಶೈವಸಿದ್ಧಾಂತ', 'ವೈಷ್ಣವದರ್ಶನ' 'ವೈಷ್ಣವಮತ' 'ವೈಷ್ಣವಸಿದ್ಧಾಂತ' ಇತ್ಯಾದಿ ವ್ಯವಹಾರಗಳೂ ಕಂಡುಬರುತ್ತದೆ. ಈ ಸಾಂಕರ್ಯವು 'ಬೌದ್ಧ' 'ಜೈನ' ಇತ್ಯಾದಿ ಕಡೆಗಳಲ್ಲೂ ಕಂಡುಬರುತ್ತದೆ. 'ವಲ್ಲಭ' 'ನಿಂಬಾರ್ಕ' ಮುಂತಾದ ಬೇರೆ ಪ್ರಭೇದಗಳೂ ಕಂಡುಬರುತ್ತವೆ.

ವಾಸ್ತವವಾಗಿ ಹೇಳುವುದಾದರೆ, ಇವು ಮೂರೂ ಬೇರೆ ಬೇರೆಯೇ ಆಗುತ್ತವೆ. 'ಮತ' ಎಂಬುದು 'ಮನ' ಎಂಬ ಧಾತುವಿನಿಂದ ಹುಟ್ಟಿದ ಪದ. 'ಸಿದ್ಧಾಂತ ಎಂಬುದು ಸಿದ್ಧ + ಅಂತ ಎಂದು ಎರಡು ಪದಗಳು ಕೂಡಿದ ಸಮಸ್ತಪದ. 'ದರ್ಶನ' ಎಂಬುದು 'ದೃಶಿರ್' ಎಂಬ ಧಾತುವಿನಿಂದ ಆದ ಪದ. ಸಂಸ್ಕೃತಭಾಷೆಯ ವೈಶಿಷ್ಟ್ಯಗಳಲ್ಲಿ ಇದೂ ಒಂದಾಗಿದೆ – ಒಂದೇ ವಸ್ತುವಿಗೆ ಪರ್ಯಾಯವಾಗಿ ಅನೇಕ ಪದಗಳು ಇರುತ್ತವೆ. "ಅಮರಾ ನಿರ್ಜರಾದೇವಾಃ...." ಇತ್ಯಾದಿಗಳನ್ನು ನೋಡಬಹುದು. ಇದಕ್ಕೆ ಕಾರಣವನ್ನು ಅನೇಕರು ಅನೇಕ ವಿಧ ಹೇಳಬಹುದು. ವಾಸ್ತವಿಕವಾಗಿ ಹೇಳುವುದಾದರೆ, ಒಂದೇ ವಸ್ತುವಿನಲ್ಲಿ ಅನೇಕ ಧರ್ಮಗಳು ಇರುವುದರಿಂದ ಒಂದೊಂದು ಧರ್ಮವನ್ನು ಇಟ್ಟುಕೊಂಡು ಒಂದೊಂದು ಪದ ಹುಟ್ಟುಕೊಂಡಿರುತ್ತದೆ. ಹಿಂದೆ ಹೇಳಿದ ಉದಾಹರಣೆಯಲ್ಲೇ – 'ಅಮರಾಃ' ಎಂಬ ಪದ. ದೇವತೆಗಳು 'ಮರಣರಹಿತರು' ಎಂಬ ಅರ್ಥವನ್ನೂ, 'ನಿರ್ಜರಾಃ' ಎಂಬ ಪದ 'ಮುಪ್ಪಿಲ್ಲದವರು' ಎಂಬ ಅರ್ಥವನ್ನೂ ಕೊಡುತ್ತದೆ. ಇಂತಹ ಅರ್ಥವಿಶೇಷವನ್ನೇ "ಪ್ರವೃತ್ತಿನಿಮಿತ್ತ" ಎನ್ನುತ್ತಾರೆ. ಒಂದೇ ವಸ್ತುವನ್ನು ಹೇಳುವ ಪದಗಳನ್ನು 'ಪರ್ಯಾಯಪದ' ಎಂದು ಹೇಳಿದರೂ ಪ್ರತಿಯೊಂದು ಪದಕ್ಕೂ 'ಪ್ರವೃತ್ತಿನಿಮಿತ್ತ' ಬೇರೆಬೇರೆಯೇ ಆಗುತ್ತದೆ. ಈ ದೃಷ್ಟಿಯಿಂದ 'ಮತ' ಎನ್ನುವುದು ಮತಿಗೆ = ಬುದ್ಧಿಗೆ ಸಂಬಂಧಪಟ್ಟದ್ದು. ಅವರವರ ಭಾವನೆಗೆ ತಕ್ಕಂತೆ ಯಾವುದಾದರೊಂದನ್ನು ಆರಿಸಿಕೊಂಡು ಮುಂದುವರಿಯಲು ಅವಕಾಶ ಮಾಡಿಕೊಡುವುದು 'ಮತ'. ಇದರಲ್ಲಿ ಅವರವರ ವಿಶ್ವಾಸಕ್ಕೇ ಪ್ರಧಾನಸ್ಥಾನ. ಒಬ್ಬೊಬ್ಬನಿಗೆ ಒಂದೊಂದು ರುಚಿ ಹಿಡಿಯುವಂತೆ ಇದು ಇರುವುದು. ಇಲ್ಲಿ ಕಾರಣವನ್ನು ಕೇಳಬಾರದು. "ನಿನಗೆ ಏಕೆ ಸಿಹಿಯೇ ಹಿಡಿಯುತ್ತದೆ?" ಎಂದು ಕೇಳಿದರೆ, ಕಾರಣ ತಿಳಿಸಲು ಸಾಧ್ಯವಿಲ್ಲ. ಇದು 'ಮತ'. 'ಅಂಗೀಕರಿಸಿರುವ ವಿಷಯಗಳ ನಿಷ್ಕೃಷ್ಟವಾದ ನಿರ್ಣಯ 'ಸಿದ್ಧಾಂತ'. ಈ ನಿರ್ಣಯಕ್ಕೆ ಆಧಾರವಾಗಿ

ಒಪ್ಪುವ ರೀತಿಯಲ್ಲಿ ಪ್ರಮಾಣ ಮತ್ತು ಯುಕ್ತಿಗಳನ್ನು ಕೊಡಬೇಕು. 'ದರ್ಶನ' ಎಂಬ ಪದ 'ದೃಷ್ಟಿಕೋನ' ಎಂಬ ಅರ್ಥದಲ್ಲಿ ಬಂದಿದೆ. ಸಿದ್ಧಾಂತಗಳಲ್ಲಿ ಪರಸ್ಪರ ವಿರೋಧವನ್ನು ಪರಿಹರಿಸಲು ದೃಷ್ಟಿಕೋನವೇ ಕಾರಣ'– ಎಂಬ ರೀತಿಯಲ್ಲಿ ಕಾಲಕ್ರಮದಲ್ಲಿ ಬಳಕೆಯಲ್ಲಿ 'ದರ್ಶನ' ಎಂಬ ಪದ ಬಂದಿದೆ. ದರ್ಶನ, Philosophy ಎರಡನ್ನು ಸಮಾನಾರ್ಥದಲ್ಲಿ ಈಗ ಪ್ರಯೋಗಿಸುತ್ತಾರೆ.

'ಶೈವ' 'ವೈಷ್ಣವ' ಮುಂತಾದ ಪದಗಳು ಮತಕ್ಕೆ ಸೇರಿದವು. 'ಶೈವ ಸಿದ್ಧಾಂತ' ಇತ್ಯಾದಿಪದಗಳು ಕಂಡುಬಂದರೂ; ಮತ, ಸಿದ್ಧಾಂತ, ದರ್ಶನ ಎಂಬ ಪದಗಳು ಸಮಾನಾರ್ಥಕವೆಂಬ ಭಾವನೆಯಿಂದ ಹಾಗೆ ರೂಢಿಯಲ್ಲಿ ಬಂದಿದೆ. ದ್ವೈತ–ಅದ್ವೈತ–ವಿಶಿಷ್ಟಾದ್ವೈತಮತ ಎಂದೂ ವ್ಯವಹರಿಸುವುದನ್ನು ನೋಡುತ್ತೇವೆ. ವಾಸ್ತವಿಕವಾಗಿ ಹೇಳುವುದಾದರೆ, 'ಮತ' ಎಂಬುದು ಬುದ್ಧಿಕ್ಷೇತ್ರಕ್ಕೆ ಸೇರಿದ ಪದ. 'ಸಿದ್ಧಾಂತ' ಎಂಬುದು ತತ್ತ್ವಕ್ಷೇತ್ರಕ್ಕೆ ಸೇರಿದ ಪದ. 'ದರ್ಶನ' ಎಂಬುದು ಯುಕ್ತಿಯ ಕ್ಷೇತ್ರಕ್ಕೆ ಸೇರಿದ ಪದ. 'ಮತ'ದಲ್ಲಿ ಶ್ರದ್ಧೆಯೇ ಪ್ರಧಾನ. 'ಸಿದ್ಧಾಂತ'ದಲ್ಲಿ ಅಧ್ಯವಸಾಯವೇ ಪ್ರಧಾನ. 'ದರ್ಶನ'ದಲ್ಲಿ ಯುಕ್ತಿಯೇ ಪ್ರಧಾನ. ತಮಿಳುದೇಶದ ಶೈವಗ್ರಂಥಗಳಲ್ಲಿ 'ಸಮಯ' ಎಂಬ ಪದವನ್ನೂ 'ಮತ' ಪದದ ಪರ್ಯಾಯವಾಗಿ ಉಪಯೋಗಿಸುತ್ತಾರೆ.

'ಮತಿ' ಭೇದದಿಂದ ಮತಗಳನೇಕ ಆಗಬಹುದು, ದೃಷ್ಟಿಕೋನಭೇದದಿಂದ 'ದರ್ಶನ'ಗಳೂ ಅನೇಕವಾಗಬಹುದು. 'ಸಿದ್ಧಾಂತ' ಎಂಬ ಪದ 'ತತ್ತ್ವ'ಕ್ಕೆ ಸಂಬಂಧಪಟ್ಟಿದ್ದಾದರೆ, ಅವು ಅನೇಕವಾಗಲು ಹೇಗೆ ಸಾಧ್ಯ? 'ತತ್ತ್ವ'ವು ಅನೇಕವಾಗಲು ಸಾಧ್ಯವೆ? ಎಂಬ ಪ್ರಶ್ನೆಗಳು ಬರಬಹುದು. ಈ ವಿಷಯವನ್ನು ಈ ಲೇಖನದ ಕೊನೆಯ ಭಾಗದಲ್ಲಿ ವಿವರಿಸಲಾಗುವುದು. ಒಟ್ಟಿನಲ್ಲಿ 'ಸಿದ್ಧಾಂತ' 'ದರ್ಶನ' ಎಂಬ ಪದಗಳನ್ನು ಬೇಕಾದರೆ ಪರ್ಯಾಯವಾಗಿ ಪ್ರಯೋಗಿಸಿದರೂ, 'ಮತ' ಎಂಬ ಪದವನ್ನು ಮಾತ್ರ ಇವುಗಳ ಪರ್ಯಾಯವಾಗಿ ಪ್ರಯೋಗಿಸುವುದು ಸಮಂಜಸವಾಗಲಾರದು.

ವಿದ್ಯಾಸ್ಥಾನಗಳು ಮತ್ತು ದರ್ಶನಗಳು – ಅಥವಾ ಜ್ಞಾನ ಮತ್ತು ಬುದ್ಧಿ –

'ವಿದ್ಯಾಸ್ಥಾನ'ಗಳು 14 ಅಥವಾ 18 ಎಂಬ ವಿಭಾಗಕ್ಕೂ 'ದರ್ಶನ'ಗಳು 12 ಎಂಬ ವಿಭಾಗಕ್ಕೂ ಯಾವ ಸಂಬಂಧವೂ ಇಲ್ಲ. ವಿದ್ಯಾಸ್ಥಾನಗಳು 14 ಎಂದರೂ, ಅಂಗ ಮತ್ತು ಅಂಗಿ ಎರಡನ್ನು ಬೇರೆಯಾಗಿ ಗಣಿಸಿ ಹೇಳಿದೆಯೇ ಹೊರತು, ಅವುಗಳು ಸಂಪೂರ್ಣವಾಗಿ ಭಿನ್ನವಾದವಲ್ಲ. ವೇದವೇ ಪ್ರಧಾನ,

ಉಳಿದೆಲ್ಲವೂ ಅದರ ಅಂಗಗಳು, ಕಾಲಕ್ರಮದಲ್ಲಿ ಬೆಳೆದುಬಂದವು. ವೇದವಂತು ಜ್ಞಾನಮಯಿ, 'ಸರ್ವಜ್ಞಾನಮಯೋ ಹಿ ಸಃ' 'ವೇದೋ ಹಿ ಜ್ಞಾನರಾಶಿಃ' ಎಂದು ಹೇಳಿರುವರು. 'ದರ್ಶನ' ಎಂಬ ಪದವನ್ನು Philosophy ಎಂಬ ಅರ್ಥದಲ್ಲೇ ಈಗಿನ ವಿದ್ವಾಂಸರು ಪ್ರಯೋಗಿಸುವರು. ಇದನ್ನು ಕೆಲವರು 'ತತ್ತ್ವಶಾಸ್ತ್ರ' ಎಂದು ಅರ್ಥೈಸಿದರೂ, ಅದು ವಿದ್ಯಾರೂಪವಾಗಲಾರದು. ವಿದ್ಯೆಯಲ್ಲಿ 'ಜ್ಞಾನ' ಭಾಗವೇ ಹೆಚ್ಚು. Philosophyಯಲ್ಲಿ 'ಬುದ್ಧಿ'ಯ ಭಾಗವೇ ಹೆಚ್ಚು. ಬುದ್ಧಿ ಮತ್ತು ಜ್ಞಾನ ಎರಡೂ ಒಂದೇ ಎಂದು ಕೆಲವರು ಹೇಳಿದರೂ, 'ಬುದ್ಧಿಮಾನ್' 'ಜ್ಞಾನೀ' ಎಂಬ ಎರಡು ಪದಗಳನ್ನು ಯಾರೂ ಸಮಾನವಾಗಿ ಭಾವಿಸುವುದೇ ಇಲ್ಲ. 'ಬುದ್ಧಿವಂತ' ಎಂದು ಹೇಳಿದರೆ, ಬಾಹ್ಯ ವಿಷಯಗಳ ಅರಿವನ್ನೂ, 'ಜ್ಞಾನೀ' ಎಂದಾಗ ಆತ್ಮಜ್ಞಾನವನ್ನು ಹೇಳುತ್ತಾರೆ. ಇದರಿಂದ 'ಜ್ಞಾನ' ಆತ್ಮನಿಗೆ ಸೇರಿದ್ದೆಂದೂ 'ಬುದ್ಧಿ' ಬಾಹ್ಯವಸ್ತುಗಳಿಗೆ ಸೇರಿದ್ದೆಂದೂ ನಿಶ್ಚಯಿಸಬಹುದು. ಮೆದುಳಿನ ಮೂಲಕ ಆಗುವ ಒಂದು ಪರಿಣಾಮವನ್ನೇ 'ಬುದ್ಧಿ' ಎನ್ನುತ್ತಾರೆ. ಈ ಕಾರಣದಿಂದಲೇ ಸಾಂಖ್ಯರು 'ಬುದ್ಧಿಯು' ಪ್ರಕೃತಿಯ ಪರಿಣಾಮ ಎನ್ನುತ್ತಾರೆ. 'ಜ್ಞಾನ' ಆತ್ಮನ ಸ್ವರೂಪಕ್ಕೆ ಸಂಬಂಧಿಸಿದ್ದು. ಬುದ್ಧಿಯ ಸ್ಥಾನ 'ಮೆದುಳು', ಜ್ಞಾನದ ಸ್ಥಾನ 'ಹೃದಯ'. ಭ್ರಮೆ, ಸಂಶಯ, ಚರ್ಚೆ, ಪ್ರಮಾದ, ಅಹಂಕಾರ ಇವುಗಳೆಲ್ಲ ಬುದ್ಧಿಯ ಕ್ಷೇತ್ರಕ್ಕೆ ಮಾತ್ರ ಸೇರುತ್ತವೆ, ಜ್ಞಾನಕ್ಷೇತ್ರಕ್ಕೆ ಅಲ್ಲ. ಬುದ್ಧಿ ಅಹಂಕಾರವನ್ನು ಬೆಳಸುತ್ತದೆ, ಜ್ಞಾನ ಅಹಂಕಾರವನ್ನು ನಿರ್ಮೂಲಗೊಳಿಸುತ್ತದೆ. 'ಬುದ್ಧಿ' ಬೆಳದಷ್ಟು ಅಹಂಕಾರವೂ ಬೆಳೆಯುತ್ತದೆ, 'ಜ್ಞಾನ' ಬೆಳೆದಷ್ಟು ಅಹಂಕಾರ ಕ್ಷಯಿಸುತ್ತದೆ.

ಆದ್ದರಿಂದ ವಿದ್ಯಾಸ್ಥಾನಗಳಿಗೂ, ಈಗಿನ ವಿದ್ವಾಂಸರ 'ದರ್ಶನ'ಗಳಿಗೂ ಯಾವ ಸಂಬಂಧವೂ ಇಲ್ಲ. ವಿದ್ಯಾಸ್ಥಾನಕ್ಕೆ ಸೇರಿದ 'ಮೀಮಾಂಸಾ' 'ನ್ಯಾಯವಿಸ್ತರ' ಎಂಬ ಎರಡರಲ್ಲಿ ಮಾತ್ರವೇ ಬುದ್ಧಿಗೆ ಸ್ಥಾನವಿದೆ. ಮಾನವನು ಬುದ್ಧಿಜೀವಿಯಾದ ಕಾರಣ, ವಿಚಾರ ಅವನಿಗೆ ಅನಿವಾರ್ಯ. ಈ ಕಾರಣದಿಂದಲೇ ಉಪಾಂಗಗಳಲ್ಲಿ 'ಮೀಮಾಂಸೆ'ಮತ್ತು ನ್ಯಾಯವಿಸ್ತರ ಎರಡನ್ನು ಸೃಷ್ಟಿಯ ಮರ್ಮವರಿತ ಮಹರ್ಷಿಗಳು ವಿದ್ಯಾಸ್ಥಾನದಲ್ಲಿ ಪರಿಗಣಿಸಿದರು. 'ಮೀಮಾಂಸಾ'ಶಾಸ್ತ್ರವನ್ನು 'ವಿಚಾರ'ಶಾಸ್ತ್ರ ಎಂದು ಹೇಳಿರುವುದನ್ನು ಗಮನಿಸತಕ್ಕದ್ದು. ಆದರೆ ಈ ವಿಚಾರಶಾಸ್ತ್ರ ಕೇವಲ ವಿಚಾರರೂಪವೆಂದು ವೈದಿಕರು ಒಪ್ಪುವುದಿಲ್ಲ. ಕೇವಲ ವಿಚಾರದಲ್ಲಿ ತರ್ಕವೇ ಪ್ರಧಾನ. ಈ ಮೀಮಾಂಸೆಯಲ್ಲಿ ತರ್ಕ ಕೇವಲ ಸಹಕಾರಿ; ಪ್ರಮಾಣವೇ ಪ್ರಧಾನ. 'ಪ್ರಮಾಣಾನುಗ್ರಾಹಕಃ ತರ್ಕಃ' ಎಂದು

ಹೇಳಿರುವರು. ಅಂದರೆ, ಪ್ರಮಾಣಗಳಿಂದ ವಿಷಯಗಳನ್ನು ನಿರ್ಣಯಿಸಲು 'ತರ್ಕ'ಸಹಕಾರಿಯಾಗಬಲ್ಲದು ಎಂದರ್ಥ. ವೇದವಾಕ್ಯಗಳಿಗೆ ಸಂಬಂಧಪಟ್ಟ ತರ್ಕವನ್ನು ಪ್ರತಿಪಾದಿಸುವುದು 'ಮೀಮಾಂಸೆ', ಪದಾರ್ಥಗಳ ಸ್ವರೂಪವನ್ನು ನಿರ್ಣಯಿಸುವುದಕ್ಕೆ ಸಂಬಂಧಪಟ್ಟ ತರ್ಕವನ್ನು ಪ್ರತಿಪಾದಿಸುವುದು ನ್ಯಾಯವಿಸ್ತರ ಅಥವಾ ತರ್ಕಶಾಸ್ತ್ರ. ಈ ಎರಡರಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಬುದ್ಧಿಗೆ ಸ್ಥಾನವಿದೆ. ಆದ್ದರಿಂದ ವಿದ್ಯಾಸ್ಥಾನಗಳಿಗೂ ದರ್ಶನಗಳಿಗೂ ಯಾವ ಸಂಬಂಧವೂ ಇಲ್ಲ. ಈ ಕಾರಣದಿಂದಲೇ ಇವುಗಳನ್ನು 'ಧರ್ಮದ ಸ್ಥಾನಗಳು' ಎಂದೂ ಹೇಳಿರುವರು.

ಈ 12 ವಿಧ ದರ್ಶನಗಳ ಸ್ವರೂಪವನ್ನು ಸಂಕ್ಷೇಪವಾಗಿ ತಿಳಿದಾಗಲೇ ಅದರ ವಿಮರ್ಶೆಯನ್ನು ಮಾಡಲು ಸಾಧ್ಯವಾದ್ದರಿಂದ, ಮೊದಲು ಇವುಗಳ ಸಂಗ್ರಹ ಪರಿಚಯ, ಅನಂತರ ಇವುಗಳ ವಿಮರ್ಶೆ, ಕೊನೆಯಲ್ಲಿ ಇವುಗಳ ಸ್ವರೂಪ ನಿರ್ಣಯ ಇವುಗಳನ್ನು ತಿಳಿಯಲು ಸಾಧ್ಯ.

1. ಚಾರ್ವಾಕದರ್ಶನ

ಈ ದರ್ಶನಕ್ಕೆ ಸೇರಿದ ಯಾವ ಗ್ರಂಥವೂ ದೊರೆಯುವುದಿಲ್ಲ. ವೈದಿಕ ವಿದ್ವಾಂಸರು ಈ ಸಿದ್ಧಾಂತವನ್ನು ಖಂಡಿಸುವುದಕ್ಕಾಗಿ, ಪೂರ್ವಪಕ್ಷ ರೂಪದಲ್ಲಿ ಈ ಸಿದ್ಧಾಂತವನ್ನು ವರ್ಣಿಸುವುದನ್ನು ನೋಡಿ, ಈ ಸಿದ್ಧಾಂತಕ್ಕೆ ಒಂದು ರೂಪವನ್ನು ಕೊಡುತ್ತಾರೆ. "ತತ್ತ್ವೋಪಪ್ಲವಸಿಂಹಃ" ಎಂಬ ಒಂದು ಗ್ರಂಥವು ಈ ದರ್ಶನಕ್ಕೆ ಸೇರಿದ್ದೆಂದು ಕೆಲವು ವಿದ್ವಾಂಸರು ಭಾವಿಸಿದರೂ, ವಾಸ್ತವವಾಗಿ ಅದು ಚಾರ್ವಾಕಮತದ ಗ್ರಂಥವೇ ಅಲ್ಲ. ಅದರಲ್ಲಿ 'ತನ್ನ ಸಿದ್ಧಾಂತ' ಎಂದು ಯಾವುದನ್ನೂ ಮಂಡಿಸದೆಯೇ, ಕೇವಲ ಪರಮತ ಖಂಡನೆಯನ್ನು ಮಾಡುವುದರಿಂದ, ಇದು ಚಾರ್ವಾಕಮತದ್ದಲ್ಲ. ಚಾರ್ವಾಕರು ಪ್ರತ್ಯಕ್ಷ ಪ್ರಮಾಣವನ್ನು ಒಪ್ಪುತ್ತಾರೆ. ಆದರೆ ಈ ಗ್ರಂಥದಲ್ಲಿ ಅದನ್ನು ಖಂಡಿಸಲಾಗಿದೆ. ಆದ್ದರಿಂದ ಆ ಗ್ರಂಥವು ಖಂಡನಗ್ರಂಥದ ಗುಂಪಿಗೆ ಸೇರಿದೆ.

ಚಾರ್ವಾಕನೆಂಬ ರಾಕ್ಷಸನು ಈ ದರ್ಶನವನ್ನು ಪ್ರತಿಪಾದಿಸಿದ್ದಾಗಿ ಹೇಳುತ್ತಾರೆ. ಆ ಚಾರ್ವಾಕನು ಯಾರೆಂಬುದಕ್ಕೂ ಯಾವ ಆಧಾರವೂ ದೊರೆಯುವುದಿಲ್ಲ. ಮಹಾಭಾರತದಲ್ಲಿ, ಚಾರ್ವಾಕನೆಂಬ ರಾಕ್ಷಸನು ದುರ್ಯೋಧನನಿಗೆ ಮಿತ್ರನಾಗಿದ್ದನು ಎಂದು ಬಂದಿದ್ದರೂ ಅವನು ನಾಸ್ತಿಕದರ್ಶನಪ್ರವರ್ತಕನೆಂಬ ವಿಷಯ ಸ್ಪಷ್ಟವಾಗಿಲ್ಲ.

ದೇವಾಸುರ ಯುದ್ಧದಲ್ಲಿ, ದೇವತೆಗಳು ಸದಾ ಜಯ ಗಳಿಸುತ್ತಿದ್ದರು. ಅಸುರರು ಇದಕ್ಕೆ ಕಾರಣವನ್ನು ತಮ್ಮ ಗುರುವಾದ ಶುಕ್ರಾಚಾರ್ಯರ ಹತ್ತಿರ ಕೇಳಿದರು. ಧರ್ಮವೇ ಅದಕ್ಕೆ ಕಾರಣವೆಂದು ಅವರು ಹೇಳಿದ್ದನ್ನು ಕೇಳಿ, ಅಸುರರೂ ಧರ್ಮವನ್ನಾಚರಿಸಲು ಪ್ರಾರಂಭಿಸಿದರು. ಇದನ್ನರಿತ ದೇವಗುರುವಾದ ಬೃಹಸ್ಪತಿಯು, ಅಸುರರೂಪವನ್ನು ಧರಿಸಿ, ಚಾರ್ವಾಕನೆಂಬ ಹೆಸರಿನಿಂದ ಅಸುರರೊಂದಿಗೆ ಬೆರತು, ಅವರ ಧರ್ಮನಿಷ್ಠೆ ಕೆಡಿಸಲು ನಾಸ್ತಿಕಮತವನ್ನು ಉಪದೇಶಿಸಿದನು.

"ಶರೀರಕ್ಕಿಂತಲೂ ಬೇರೆಯಾದ ಆತ್ಮನೇ ಇಲ್ಲ. ಸ್ವರ್ಗನರಕಾದಿಗಳೂ ಕೇವಲ ಕಲ್ಪಿತ. ಪ್ರತ್ಯಕ್ಷಸಿದ್ಧವಾದ ಈ ಜಗತ್ತಿನಲ್ಲಿ ಸುಖವಾಗಿ ಬಾಳುವುದನ್ನು ತೊರೆದು ಇಲ್ಲದ ಪರಲೋಕದ ಸುಖಕ್ಕಾಗಿ ಧರ್ಮಾಚರಣೆಯನ್ನು ಮಾಡುವುದು ಅತ್ಯಂತ ಅವಿವೇಕ" – ಇತ್ಯಾದಿಯಾಗಿ ಚಾರ್ವಾಕನ ರೂಪದಲ್ಲಿದ್ದ ಬೃಹಸ್ಪತಿಯ ಮಾತುಗಳನ್ನು ಕೇಳಿ, ಅಸುರರು ಧರ್ಮಾಚರಣೆಯನ್ನು ಕೈಬಿಟ್ಟು, ಕೊನೆಯಲ್ಲಿ ದೇವತೆಗಳಿಂದ ಸೋಲಿಸಲ್ಪಟ್ಟರು ಇತ್ಯಾದಿ ಕಥೆಗಳು ಕೇವಲ ಕಲ್ಪಿತವಾದ್ದರಿಂದ, ಇದರಿಂದ ಯಾವ ನಿರ್ಣಯವನ್ನೂ ಮಾಡುವಂತಿಲ್ಲ.

ಈ ಸಿದ್ಧಾಂತದ ಸ್ವರೂಪವನ್ನು ಈ ರೀತಿ ಹೇಳುತ್ತಾರೆ – ಪ್ರತ್ಯಕ್ಷ ಒಂದೇ ಪ್ರಮಾಣ. ಇದರಿಂದ ಸಿದ್ಧವಾದ ಪೃಥಿವೀ, ಜಲ, ತೇಜಸ್, ವಾಯು ಎಂದು ಭೂತಗಳು ನಾಲ್ಕೇ ಇರುವವು. ಇವುಗಳ ಒಂದು ವಿಚಿತ್ರ ಪರಿಣಾಮ ಮತ್ತು ಮಿಶ್ರಣದಿಂದ ಈ ಶರೀರ ರೂಪಗೊಂಡಾಗ, ಅದರಲ್ಲಿ ಚೈತನ್ಯವು ಅಭಿವ್ಯಕ್ತವಾಗುತ್ತದೆ. ಅರಿಷಿಣ ಮತ್ತು ಸುಣ್ಣದ ಮಿಶ್ರಣದಿಂದ ಹಿಂದೆ ಇಲ್ಲದ ಕೆಂಪುಬಣ್ಣ ಹುಟ್ಟುವಂತೆಯೇ, ಪ್ರತ್ಯೇಕ ಈ ನಾಲ್ಕು ಭೂತಗಳಲ್ಲಿ ಚೈತನ್ಯವಿಲ್ಲದಿದ್ದರೂ ವಿಲಕ್ಷಣಮಿಶ್ರಣದಿಂದ ಈ ಶರೀರಕ್ಕೆ ಚೈತನ್ಯ ಬರುತ್ತದೆ. ಆದ್ದರಿಂದ ಇದಕ್ಕಿಂತ ಬೇರೆಯಾದ ಆತ್ಮನು ಇಲ್ಲವೇ ಇಲ್ಲ. ಪರಲೋಕವೂ ಇಲ್ಲ. ಸ್ವರ್ಗ–ನರಕಾದಿಪದಗಳೆಲ್ಲವೂ, ಈ ಲೋಕದಲ್ಲೇ ಅನುಭವಿಸುವ ಸುಖದುಃಖಗಳನ್ನೇ ಹೇಳುತ್ತವೆ. ಈ ಶರೀರವನ್ನು ಸರಿಯಾಗಿ ಪೋಷಿಸಿಕೊಂಡು, ಅದರಿಂದ ಅನುಭವಿಸುವ ಸುಖವೇ 'ಪುರುಷಾರ್ಥ'. ಉಳಿದವೆಲ್ಲವೂ ಕೇವಲ ಕಲ್ಪನೆ. ಇದೇ ಈ ಸಿದ್ಧಾಂತದ ಸ್ವರೂಪ. ಇದನ್ನೇ 'ಶರೀರಾತ್ಮಕವಾದ' ಎನ್ನುತ್ತಾರೆ.

ಇದಲ್ಲದೆ, 'ಪ್ರಾಣಗಳೇ ಆತ್ಮ' ಎಂದು ಹೇಳುವ 'ಪ್ರಾಣಾತ್ಮವಾದ',

'ಇಂದ್ರಿಯಗಳೇ ಆತ್ಮ' ಎಂದು ಹೇಳುವ 'ಇಂದ್ರಿಯಾತ್ಮವಾದ', 'ಮನಸ್ಸೇ ಆತ್ಮ' ಎಂದು ಹೇಳುವ 'ಮನ ಆತ್ಮವಾದ'ಇವುಗಳೂ ಸಹ ಚಾರ್ವಾಕಮತ ಪ್ರಭೇದಗಳೇ ಎಂದು 'ವೆಂಕಟನಾಥ' ಎಂಬ ವೇದಾಂತದೇಶಿಕರು ತನ್ನ 'ತತ್ತ್ವಮುಕ್ತಾಕಲಾಪ' ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

2. ಬೌದ್ಧದರ್ಶನ–ವೈಭಾಷಿಕದರ್ಶನ

ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ ಎಂದು ಬೌದ್ಧದರ್ಶನದಲ್ಲಿ 4 ಪ್ರಭೇದಗಳಿರುವುದನ್ನು ಹಿಂದೆಯೇ ಹೇಳಲಾಗಿದೆ. 'ಅಭಿಧರ್ಮಪಿಟಕ', 'ಸೂತ್ರಪಿಟಕ', 'ವಿನಯಪಿಟಕ' ಎಂಬ ಮೂರು ಗ್ರಂಥಗಳು ಬೌದ್ಧದರ್ಶನದ ಮೂಲಗ್ರಂಥಗಳು. ಇವುಗಳನ್ನು 'ತ್ರಿಪಿಟಕ' ಎಂದೂ 'ಆಗಮ' ಎಂದೂ ಹೇಳುವರು. ಅಭಿಧಮ್ಮಪಿಟಕಕ್ಕೆ 'ವಿಭಾಷಾ' ಎಂಬ ವ್ಯಾಖ್ಯಾನವಿದೆ. ಇದರ ಆಧಾರದಲ್ಲಿ ಬೆಳೆದ ದರ್ಶನ 'ವೈಭಾಷಿಕ' ದರ್ಶನ. ಸೂತ್ರಪಿಟಕದ ಆಧಾರದಲ್ಲಿ ಬೆಳೆದ ದರ್ಶನ. 'ಸೌತ್ರಾಂತಿಕ'ದರ್ಶನ. ಯೋಗಾಚರಣೆಯನ್ನು ಒತ್ತಿ ಹೇಳುವ 'ವಸುಬಂಧು'ವಿನಿಂದ ಪ್ರತಿಪಾದಿತವಾದ ದರ್ಶನ 'ಯೋಗಾಚಾರದರ್ಶನ'. ಆಚಾರ ಮತ್ತು ಜ್ಞಾನಗಳ ಸಮನ್ವಯವನ್ನು ಪ್ರತಿಪಾದಿಸುವ ನಾಗಾರ್ಜುನನಿಂದ ಪ್ರವರ್ತಿತವಾದದ್ದು 'ಮಾಧ್ಯಮಿಕದರ್ಶನ'. ಮಾಧ್ಯಮಿಕ ಮತ್ತು ಯೋಗಾಚಾರರನ್ನು 'ಮಾಹಾಯಾನಿಕರು' ಎಂದೂ, ಉಳಿದ ಇಬ್ಬರನ್ನು 'ಹೀನಯಾನಿಕ'ರೆಂದೂ ಹೇಳುತ್ತಾರೆ.

ವೈಭಾಷಿಕದರ್ಶನದಲ್ಲಿ – ಪ್ರಪಂಚ ಸತ್ಯ. ವಸ್ತುಗಳೆಲ್ಲವೂ ಕ್ಷಣಿಕ. ಪ್ರತ್ಯಕ್ಷ ಮತ್ತು ಅನುಮಾನ ಎಂದು ಎರಡೇ ಪ್ರಮಾಣಗಳು. ಆತ್ಮವಸ್ತು ಅಖಂಡರೂಪವಾದ್ದಲ್ಲ, ಸಂಘಾತರೂಪವಾದ್ದು. ರೂಪ, ವಿಜ್ಞಾನ, ವೇದನಾ, ಸಂಜ್ಞಾ, ಸಂಸ್ಕಾರ ಈ ಐದರಿಂದ ರೂಪಗೊಂಡ ವಸ್ತುವೇ 'ಆತ್ಮ'. ಮನುಷ್ಯತ್ವಾದಿ ಆಕಾರಕ್ಕೆ ಕಾರಣವಾಗಿರುವ ಅಂಶಕ್ಕೆ 'ರೂಪ' ಎಂದು ಹೆಸರು. ಚೈತನ್ಯಾಂಶಕ್ಕೆ ಆಧಾರವಾಗಿರುವ ಧಾತು 'ವಿಜ್ಞಾನ' ಎನಿಸಿದೆ. 'ನಾನು' ಎಂಬ ಸಂವೇದನೆಗೆ ಮತ್ತು ಸುಖದುಃಖಾದಿವೇದನೆಗಳಿಗೆ ಆಧಾರವಾಗಿರುವ ಅಂಶಕ್ಕೆ 'ವೇದನಾ' ಎಂದು ಹೆಸರು. ಮನುಷ್ಯ, ಪಶು, ಪಕ್ಷಿ ಇತ್ಯಾದಿ ಸಂಜ್ಞೆಗಳಿಗೆ ಆಧಾರವಾಗಿರುವ ಅಂಶವೇ 'ಸಂಜ್ಞಾ'. ಪೂರ್ವಪೂರ್ವವಾಸನೆಗಳೇ 'ಸಂಸ್ಕಾರ'. ಈ ಐದೂ ಸೇರಿದರೆ 'ಆತ್ಮ' ಆಗುತ್ತದೆ. ಇವುಗಳನ್ನು 'ಪಂಚಸ್ಕಂಧಗಳು' ಎನ್ನುತ್ತಾರೆ. ಇವು ಒಟ್ಟು ಸೇರಿದಾಗ 'ನಾನು ನೀನು' ಇತ್ಯಾದಿ ವ್ಯವಹಾರಗಳು ನಡೆಯುತ್ತವೆ. ಇವು

ಬೇರೆ ಬೇರೆಯಾಗಿಬಿಟ್ಟರೆ, ಅದೇ ಮೋಕ್ಷ, ಯಾವ ವ್ಯವಹಾರವು ಇರುವುದಿಲ್ಲ. ಇದನ್ನೇ 'ನೈರಾತ್ಮ್ಯವಾದ' ಎನ್ನುತ್ತಾರೆ.

'ನಾನು ಎಂಬ ಅನಿಸಿಕೆಗೆ ಆಧಾರವಾಗಿರುವುದೇ 'ಆತ್ಮ'. ಇದು ಒಂದು ಅಖಂಡವಾದ ವಸ್ತು ಎಂದು ಉಳಿದವರು ಹೇಳುವರು. ಆದರೆ ಬೌದ್ಧರು ಇದು ಅಖಂಡವಸ್ತುವಲ್ಲ; ಒಂದು ಮಹಾವೃಕ್ಷವಂತೆ ಭಾವಿಸಿಕೊಂಡರೆ, ಅದರ ಶಾಖೆಗಳಂತೆ ಮೇಲೆ ಹೇಳಿದ ರೂಪ, ವಿಜ್ಞಾನ ಮೊದಲಾದ ಐದು ಅಂಶಗಳು ಇರುತ್ತವೆ. ಈ ಕಾರಣಗಳಿಂದಲೇ ಈ ಐದು ಅಂಶಗಳನ್ನು 'ಸ್ಕಂಧ'ಗಳು ಎನ್ನುತ್ತಾರೆ. ಪಂಚಸ್ಕಂಧಾತ್ಮಕನೇ 'ಜೀವ', 'ನಾನು' ಎಂದೆನಿಸಿಕೊಳ್ಳುತ್ತಾನೆ. ಎಲ್ಲಾ ವ್ಯಾಮೋಹಗಳಿಗೂ 'ನಾನು' ಎಂಬ ಭಾವನೆಯೇ ಮೂಲ. ಈ 'ನಾನು' ಎಂಬುದು ಒಂದು ಸಂಘಾತ = ಗುಂಪುರೂಪವಾದ್ದರಿಂದ, ಇದನ್ನು ಬೇರೆ ಬೇರೆಯಾಗಿ ಬಿಡಿಸಿಬಿಟ್ಟರೆ, ಮುಂದೆ ಏನೂ ಉಳಿಯುವುದಿಲ್ಲವಾದ್ದರಿಂದ, ಯಾವ ವ್ಯಾಮೋಹಕ್ಕೂ ಆಧಾರವೇ ಇಲ್ಲ, ಇದನ್ನು 'ಮುಕ್ತಿ' ಎನ್ನುತ್ತಾರೆ. ಈರುಳ್ಳಿಯನ್ನು ಬಿಡಿಸಿಕೊಂಡು ಹೋದರೆ, ಕೊನೆಯಲ್ಲಿ ಏನೂ ಉಳಿಯದಂತೆಯೇ. 'ನಾನು' ಎಂಬ ಅನುಭವಕ್ಕೆ ಆಧಾರವಾಗಿ ಯಾವ ಒಂದು ಅಖಂಡವಸ್ತುವೂ ಇಲ್ಲದಿರುವುದರಿಂದಲೇ, 'ನಾನು'ಹೋದರೆ ಅದೇ 'ಮುಕ್ತಿ' ಎಂಬ ವ್ಯವಹಾರವು ಆಸ್ತಿಕರಲ್ಲೂ ಅಂಗೀಕೃತವಾಗಿದೆ. 'ನಾನು' ಎಂಬ ವ್ಯವಹಾರಕ್ಕೆ ಆಧಾರವಾದ ವಸ್ತು ಅಖಂಡವಾದ್ದು ಎಂದು ವೈದಿಕರ ಅಭಿಪ್ರಾಯ. 'ನಾನು' ಎಂಬ ವ್ಯವಹಾರ ಹೋದರೂ ಆ ಆಧಾರವಸ್ತು ಎಂದೂ ಹೋಗುವುದಿಲ್ಲವೆಂದೂ ವೈದಿಕರ ಅಭಿಪ್ರಾಯವಾಗಿದೆ. ಅದು ಅಖಂಡವಸ್ತುವಲ್ಲವೆಂಬುದು ವೈಭಾಷಿಕರ ಮತ. ವೈದಿಕರಲ್ಲೂ ನಿರ್ವಿಶೇಷಾದ್ವೈತಿಗಳೂ 'ನಾನು' ಎಂಬುದು ಅಖಂಡವಸ್ತುವಲ್ಲ ಎಂದು ಹೇಳುವರು. ಈ ವಿಷಯವನ್ನು ಮುಂದೆ ವೇದಾಂತದರ್ಶನದಲ್ಲಿ ವಿವರಿಸಲಾಗುವುದು.

ಪೂರ್ವವಾಸನೆಗಳೆಲ್ಲವೂ ತೊಲಗಿದಾಗ ರೂಪಾದಿಸ್ಕಂಧಗಳೂ ನಿರ್ಮೂಲವಾಗುತ್ತದೆ. ಶುದ್ಧವಾದ 'ವಿಜ್ಞಾನಧಾತು' ಮಾತ್ರ ಉಳಿಯುತ್ತದೆ. ಅದೂ ಕ್ಷಣಿಕ ಸಂತತಿರೂಪವಾದ್ದು. ಈ ನೆಲೆಯೇ ಮೋಕ್ಷ.

3. ಸೌತ್ರಾಂತಿಕದರ್ಶನ

ಸುತ್ತಪಿಟಕ (ಸೂತ್ರಪಿಟಕ)ವೆಂಬ ಬೌದ್ಧಾಗಮದಿಂದ ರೂಪಗೊಂಡದ್ದೇ ಸೌತ್ರಾಂತಿಕದರ್ಶನವೆಂದು ಹಿಂದೆ ಹೇಳಿದೆ. ವೈಭಾಷಿಕರಿಗೂ ಇವರಿಗೂ

ಹೆಚ್ಚಿನ ವ್ಯತ್ಯಾಸವಿಲ್ಲ. ಪ್ರಪಂಚದ ಅನುಭವ ಪ್ರತ್ಯಕ್ಷರೂಪವಾದ್ದೆಂದು ವೈಭಾಷಿಕರು ಹೇಳಿದರೆ, ಅದು ಅನುಮಾನರೂಪವೆಂದು ಇವರು ಹೇಳುತ್ತಾರೆ. ನಮ್ಮ ಎದುರಲ್ಲಿ ಒಂದು ವಸ್ತುವಿರುವುದನ್ನು ನಾವು ನಮ್ಮ ಅರಿವಿನಿಂದಲೇ ಹೇಳುತ್ತೇವೆ. ಅಂದರೆ, ಅದರ ಅರಿವು ನಮ್ಮ ಒಳಗೆ ಆಗುವುದರಿಂದ ಹೊರಗೆ ವಸ್ತುವಿರುವುದನ್ನು ತಿಳಿಯುತ್ತೇವೆ. ನಮ್ಮ ಅರಿವಿನಲ್ಲಿ ಆ ವಸ್ತುವಿನ ಬಣ್ಣ ಆಕಾರ ಎಲ್ಲವೂ ಮುದ್ರಿತವಾಗಿರುವುದರಿಂದಲೇ, ವಸ್ತುವಿನ ಬಣ್ಣ, ಆಕಾರಾದಿಗಳನ್ನು ತಿಳಿಯುತ್ತೇವೆ. ಆದ್ದರಿಂದ ಜ್ಞಾನದಲ್ಲಿ ತೋರುವ ಆಕಾರದಿಂದ ವಸ್ತುವನ್ನು ಊಹಿಸುತ್ತೇವೆ, ಅಥವಾ ಅನುಮಾನ ಮಾಡುತ್ತೇವೆ. ಆದ್ದರಿಂದ ವಸ್ತುಗಳ ಅನುಭವವೆಲ್ಲವೂ ಅನುಮಾನರೂಪವೇ ಆಗುತ್ತವೆ.

ಇದಲ್ಲದೇ, ವಸ್ತುಗಳೆಲ್ಲವೂ ಕ್ಷಣಿಕವಾದ ಕಾರಣ ಚಕ್ಷುರಿಂದ್ರಿಯಸನ್ನಿಕರ್ಷ ಯಾವ ಒಂದು ವಸ್ತುವಿನೊಂದಿಗೆ ಇರುವುದೊ, ಆ ವಸ್ತು ಮರುಕ್ಷಣದಲ್ಲಿ ನಶಿಸಿ ಹೋಗುವುದರಿಂದ, ಅದು ಪ್ರತ್ಯಕ್ಷದಲ್ಲಿ ವಿಷಯವಾಗಲು ಸಾಧ್ಯವಿಲ್ಲ. ಆದ್ದರಿಂದ ಜ್ಞಾನದ ಆಕಾರದಿಂದ ವಸ್ತುವಿನ ಆಕಾರಾದಿಗಳನ್ನು ಅನುಮಾನದಿಂದಲೇ ನಾವು ತಿಳಿಯುತ್ತೇವೆ ಎಂದು ಅವರು ಹೇಳುವರು. ಉಳಿದ ವಿಷಯವೆಲ್ಲವೂ ಸಮಾನ.

4. ಯೋಗಾಚಾರದರ್ಶನ

ಈ ದರ್ಶನವನ್ನು 'ವಿಜ್ಞಾನವಾದ' 'ವಿಜ್ಞಾನವಿವರ್ತವಾದ' ಇತ್ಯಾದಿ ಶಬ್ದಗಳಿಂದಲೂ ಹೇಳುತ್ತಾರೆ. ಹಿಂದಿನ ಎರಡು ದರ್ಶನಗಳಲ್ಲಿ ಒಪ್ಪಿರುವಂತೆ, ಇವರು ಜಗತ್ತನ್ನು ಸತ್ಯವೆಂದು ಒಪ್ಪುವುದಿಲ್ಲ. ಕನಸಿನಲ್ಲಿ, ವಸ್ತುಗಳಿಲ್ಲದೆಯೇ ಜ್ಞಾನಾದಿಗಳು ಬರಬಹುದಾದ್ದರಿಂದ, ಬಾಹ್ಯಪ್ರಪಂಚವೆಲ್ಲವೂ ಮಿಥ್ಯೆಯೇ. ವಿಜ್ಞಾನವೊಂದೇ ಸತ್ಯ. ಅದೂ ಸಹ ಕ್ಷಣಿಕ. ಪ್ರತಿಕ್ಷಣವೂ ನಶಿಸಿ ಬೇರೆ ಬೇರೆ ವಿಜ್ಞಾನ ಆಗುತ್ತಿರುತ್ತದೆ. ಇದನ್ನೇ 'ಆತ್ಮ' ಎಂದು ಕೆಲವರು ಹೇಳುತ್ತಿದ್ದರೂ, ಬೌದ್ಧರೆಲ್ಲರೂ ನೈರಾತ್ಮ್ಯವಾದಿಗಳಾದ್ದರಿಂದ, ಅದು ಸರಿಯಲ್ಲ. 'ನಾನು' ಎಂಬ ವ್ಯವಹಾರ ಇತ್ಯಾದಿಗಳೆಲ್ಲವೂ ವೈಭಾಷಿಕರ ಮತದಲ್ಲಿರುವಂತೆಯೇ ಎಲ್ಲವನ್ನೂ ತಿಳಿಯಬೇಕು. ಆದರೆ ವಿಜ್ಞಾನಧಾತು ಒಂದೇ ಸತ್ಯ ಉಳಿದ್ದೆಲ್ಲವೂ ಮಿಥ್ಯೆ' ಎಂಬ ವಾದವನ್ನೇ 'ವಿಜ್ಞಾನವಿವರ್ತವಾದ' ಎನ್ನುತ್ತಾರೆ. ಹೀಗೆಯೇ 'ಬ್ರಹ್ಮವೊಂದೇ ಸತ್ಯ. ಉಳಿದ್ದೆಲ್ಲವೂ ಮಿಥ್ಯೆ' ಎಂಬುದನ್ನು ಬ್ರಹ್ಮವಿವರ್ತವಾದ ಎಂದು ಹೇಳುತ್ತಾರೆ.

5. ಮಾಧ್ಯಮಿಕದರ್ಶನ

ಇವರು ಯೋಗಾಚಾರರು ಒಪ್ಪಿದ ವಿಜ್ಞಾನಧಾತುವನ್ನು ಒಪ್ಪದ ಕಾರಣ, ಇವರನ್ನು 'ಶೂನ್ಯವಾದಿ'ಗಳು ಎನ್ನುತ್ತಾರೆ. 'ಶೂನ್ಯ' ಎಂಬುದೂ ಒಂದು 'ತತ್ತ್ವ'. ಅದನ್ನು ಬಿಡಿಸಿ ಹೇಳಲು ಸಾಧ್ಯವಿಲ್ಲ. ಜಗತ್ತೆಲ್ಲವೂ ಈ 'ಶೂನ್ಯ' ತತ್ತ್ವದಲ್ಲೇ ಕಲ್ಪಿತವಾಗಿದೆ ಎಂದು ಇವರು ಹೇಳುವುದರಿಂದ, ಇವರನ್ನು 'ಶೂನ್ಯವಿವರ್ತವಾದಿಗಳು' ಎಂದೂ ಹೇಳುವರು. ಏನೂ ಇಲ್ಲದ ಕಡೆಯಲ್ಲೂ, ಹೆದರಿದವನಿಗೆ ಪಿಶಾಚಿಯು ಕಾಣುವಂತೆ, ಅವನವನ ಪೂರ್ವವಾಸನೆಗಳಿಗೆ ತಕ್ಕಂತೆಯೇ ಎಲ್ಲವೂ ತೋರುತ್ತಿದೆ. ತೋರಿಕೆಗೆ ಆಧಾರವಾಗಿ ಏನೇನೂ ಇರಬೇಕಾದ ಅಗತ್ಯವೇ ಇಲ್ಲ. ಆದ್ದರಿಂದ ಜಗತ್ತಿನಲ್ಲಿ ಸರ್ವವೂ ಶೂನ್ಯವೇ ಎಂದು ಇವರು ಹೇಳುವುದರಿಂದ ಇವರನ್ನು ಶೂನ್ಯವಾದಿಗಳೆಂದೂ, ಸರ್ವಾಪಲಾಪವಾದಿಗಳೆಂದೂ, ಶೂನ್ಯವಿವರ್ತವಾದಿಗಳೆಂದೂ ಹೇಳುವರು.

6. ಜೈನದರ್ಶನ

ಜೈನದರ್ಶನ ರೂಪಗೊಳ್ಳುವ ಕಾಲದಲ್ಲಿ ಕ್ಷಣಿಕವಾದಿಗಳಾದ ಬೌದ್ಧರಿಗೂ ಸ್ಥಿರತತ್ತ್ವವಾದಿಗಳಾದ ವೈದಿಕರಿಗೂ ತೀವ್ರವಾದ ಘರ್ಷಣೆ ಇದ್ದುದರಿಂದ, ಈ ಘರ್ಷಣೆಯನ್ನು ಶಮನಗೊಳಿಸುವ ಉದ್ದೇಶದಿಂದ ಈ ದರ್ಶನ ರೂಪಗೊಂಡ ಕಾರಣ "ಜಗತ್ತಿನಲ್ಲಿ ಎಲ್ಲಾ ಪದಾರ್ಥಗಳೂ ಒಂದೇ ರೀತಿಯದ್ದಲ್ಲ, ಪರಸ್ಪರ ವಿರುದ್ಧವೆನಿಸಿದ ಧರ್ಮಗಳೂ ಒಂದರಲ್ಲೇ ಇರಬಹುದು" ಎಂದು ತತ್ತ್ವವನ್ನು ಪ್ರತಿಪಾದಿಸಲು ಇವರು ಪ್ರಾರಂಭಿಸಿದರು. ಇದರಿಂದಾಗಿ ಇವರನ್ನು 'ಅನೇಕಾಂತವಾದಿಗಳು' ಎಂದು ಕರೆಯುವರು. "ಪದಾರ್ಥಗಳ ಸ್ವರೂಪ ಒಂದೇ ರೀತಿಯಲ್ಲಿರುವುದಿಲ್ಲ" ಎಂಬ ವಾದವೇ ಅನೇಕಾಂತವಾದ. ಇದನ್ನು ಸಮರ್ಥಿಸಲು "ಸಪ್ತಭಂಗೀನಯ" ಎಂಬ ಒಂದು ತರ್ಕವನ್ನು ಇವರು ನಿರೂಪಿಸಿದರು. 1. ಸ್ಯಾದಸ್ತಿ 2. ಸ್ಯಾನ್ನಾಸ್ತಿ 3. ಸ್ಯಾದಸ್ತಿ ಚ ನಾಸ್ತಿ ಚ 4. ಸ್ಯಾದವಕ್ತವ್ಯಃ 5. ಸ್ಯಾದಸ್ತೀತ್ಯವಕ್ತವ್ಯಃ 6. ಸ್ಯಾನ್ನಾಸ್ತೀತ್ಯವಕ್ತವ್ಯಃ 7. ಸ್ಯಾದಸ್ತಿ ಚ ನಾಸ್ತಿಚೇತ್ಯವಕ್ತವ್ಯಃ ಎಂದು ಪ್ರತಿಪಾದಿಸುವ ನ್ಯಾಯವೇ "ಸಪ್ತಭಂಗೀ". 'ಭಂಗ' ಎಂದರೆ ಅಲೆ. ಏಳು ವಿಧವಾದ ಅಲೆಗಳಿಂದ ಕೂಡಿರುವುದು ಎಂಬ ಅರ್ಥದಲ್ಲಿ 'ಸಪ್ತಭಂಗೀ' ಎಂಬ ಪದ ಹುಟ್ಟಿಕೊಂಡಿದೆ. ಒಂದು ಪದಾರ್ಥವನ್ನು 'ಅದು ಇದೆ' ಎಂದು ಹೇಳಿದಾಗ 'ಸತ್ತ್ವ' ಎಂಬುದು ಅದರ ಧರ್ಮವಾಗುತ್ತದೆ. 'ಅದು ಇಲ್ಲ' ಎಂದಾಗ 'ಅಸತ್ತ್ವ' ಎಂಬುದು ಅದರ ಧರ್ಮವಾಗುತ್ತದೆ. ಪ್ರತಿಯೊಂದು

ವಸ್ತುಗಳಲ್ಲೂ, 'ಇಲ್ಲಿ ಇದೆ, ಅಲ್ಲಿ ಇಲ್ಲ' ಎಂದು ದೇಶಪ್ರಯುಕ್ತವಾಗಿಯೂ, 'ಈಗ ಇದೆ, ಆಗ ಇಲ್ಲ' ಎಂದು ಕಾಲಪ್ರಯುಕ್ತವಾಗಿಯೂ, 'ಈ ರೂಪದಿಂದ ಇದೆ, ಆ ರೂಪದಿಂದ ಇಲ್ಲ' ಎಂದು ಧರ್ಮಪ್ರಯುಕ್ತವಾಗಿಯೂ 'ಅಸ್ತಿ, ನಾಸ್ತಿ'ವ್ಯವಹಾರ ಬರುವುದರಿಂದ, ಯಾವ ವಸ್ತುವೂ ಒಂದೇ ಸ್ವರೂಪದ್ದಲ್ಲ. ಹೀಗೆ ಸ್ವರೂಪ ಒಂದೇ ರೀತಿಯಲ್ಲಿ ಇಲ್ಲದಿರುವುದರಿಂದಲೇ, ಅದರ ವ್ಯವಹಾರವೂ ಒಂದೇ ರೀತಿಯಲ್ಲಿ ಇರುವುದಿಲ್ಲ ಎನ್ನುವುದೇ ಈ ಸಪ್ತಭಂಗಿಯ ಅಭಿಪ್ರಾಯ.

'ಸ್ಯಾದಸ್ತಿ' ಇತ್ಯಾದಿಗಳಲ್ಲಿ 'ಸ್ಯಾತ್' ಎಂಬುದು ಅವ್ಯಯ,ಅದು ಅವಿರೋಧ ಸೂಚಕ. 1. ಸ್ಯಾದಸ್ತಿ = ಅಸ್ತಿತ್ವವೂ ಇರಬಹುದು 2. ಸ್ಯಾನ್ನಾಸ್ತಿ = ನಾಸ್ತಿತ್ವವೂ ಇರಬಹುದು 3. ಸ್ಯಾದಸ್ತಿ ಚ ನಾಸ್ತಿ ಚ = ಅಸ್ತಿತ್ವ–ನಾಸ್ತಿತ್ವವೂ ಇರಬಹುದು 4. ಸ್ಯಾದವಕ್ತವ್ಯಃ = 'ಇದು ಇಂತಹುದ್ದೇ' ಎಂದು ಹೇಳಲೂ ಆಗುವುದಿಲ್ಲ 5. ಸ್ಯಾದಸ್ತೀತ್ಯವಕ್ತವ್ಯಃ = ಅಸ್ತಿತ್ವಮಾತ್ರದಿಂದಲೂ ಹೇಳಲಾಗುವುದಿಲ್ಲ 6. ಸ್ಯಾನ್ನಾಸ್ತೀತ್ಯವಕ್ತವ್ಯಃ = ನಾಸ್ತಿತ್ವಮಾತ್ರದಿಂದಲೂ ಹೇಳಲಾಗುವುದಿಲ್ಲ 7. ಸ್ಯಾದಸ್ತಿನಾಸ್ತಿಚಾವಕ್ತವ್ಯಃ = ಅಸ್ತಿತ್ವ–ನಾಸ್ತಿತ್ವದಿಂದಲೂ ಹೇಳಲಾಗುವುದಿಲ್ಲ. ಇದೇ ಸಪ್ತಭಂಗಿಯ ಅರ್ಥ. ಜಗತ್ತಿನಲ್ಲಿ ಎಲ್ಲೂ ವಿರೋಧ ಎಂಬುದು ಇಲ್ಲವೇ ಇಲ್ಲ ಎಂಬುದೇ ಈ ದರ್ಶನದ ಸಾರ.

7. ನ್ಯಾಯದರ್ಶನ

ಆಸ್ತಿಕದರ್ಶನಗಳು ಅಥವಾ ವೈದಿಕ ದರ್ಶನಗಳು 6 ವಿಧವೆಂದು ಹಿಂದೆ ಹೇಳಿದೆ. ಇವುಗಳಲ್ಲಿ ನ್ಯಾಯ ಮತ್ತು ವೈಶೇಷಿಕ, ಸಾಂಖ್ಯ ಮತ್ತು ಯೋಗ, ಮೀಮಾಂಸಾ ಮತ್ತು ವೇದಾಂತ ಎಂದು ಎರಡೆರಡನ್ನು ಜೊತೆಯಾಗಿ ಸೇರಿಸಿ, ಅವನ್ನು ಪರಸ್ಪರ 'ಸಮಾನತಂತ್ರ' ಎಂದೂ ಹೇಳುತ್ತಾರೆ. ನ್ಯಾಯ ಮತ್ತು ವೈಶೇಷಿಕ ಸಮಾನತಂತ್ರ, ಸಾಂಖ್ಯ–ಯೋಗ ಸಮಾನತಂತ್ರ, ಮೀಮಾಂಸಾ–ವೇದಾಂತ ಸಮಾನತಂತ್ರ, ಇವು ಪರಸ್ಪರ ಪೂರಕ. ನ್ಯಾಯ ಮತ್ತು ವೈಶೇಷಿಕ ತರ್ಕ ಪ್ರಧಾನವಾದ್ದರಿಂದ, ಎರಡನ್ನೂ ತರ್ಕಶಾಸ್ತ್ರವೆಂದೂ ಸಾಂಖ್ಯ ಮತ್ತು ಯೋಗ ಎರಡನ್ನೂ ಸಾಂಖ್ಯಶಾಸ್ತ್ರವೆಂದೂ, ಮೀಮಾಂಸಾ ಮತ್ತು ವೇದಾಂತಗಳನ್ನು ಮೀಮಾಂಸಾಶಾಸ್ತ್ರವೆಂದೂ ವಿಂಗಡಿಸಿ ವೈದಿಕದರ್ಶನ ಮೂರು, ಅವೈದಿಕದರ್ಶನ ಚಾರ್ವಾಕ, ಬೌದ್ಧ, ಜೈನ ಎಂದು ಮೂರು ಎಂದು ವಿಂಗಡಿಸಿ, ಒಟ್ಟು ದರ್ಶನಗಳು ಆರು ಎಂದೂ ಹೇಳುವುದುಂಟು.

ನ್ಯಾಯ ಮತ್ತು ವೈಶೇಷಿಕದರ್ಶನಗಳಲ್ಲಿ, ನ್ಯಾಯಶಾಸ್ತ್ರ ಪ್ರಮಾಣ ಪ್ರಧಾನವಾದ್ದರಿಂದ 'ಪ್ರಮಾಣ'ಶಾಸ್ತ್ರ ಎಂದು ಇದನ್ನು ಹೇಳುವರು. ವೈಶೇಷಿಕ ಶಾಸ್ತ್ರ ಪದಾರ್ಥಪ್ರಧಾನವಾದ್ದು. ಇದರ ಮೂಲ ಗ್ರಂಥವಾದ ವೈಶೇಷಿಕಸೂತ್ರಗಳ ಕರ್ತೃಗಳು ಕಣಾದಮಹರ್ಷಿಗಳು. ಇದರ ಭಾಷ್ಯಕಾರರಾದ ಪ್ರಶಸ್ತಪಾದಾಚಾರ್ಯರು "ಪದಾರ್ಥಧರ್ಮಸಂಗ್ರಹ" ಎಂದೇ ಇದನ್ನು ವಿವರಿಸಿರುವರು. ವೇದಾಂತಸೂತ್ರಗಳ ಕರ್ತೃಗಳಾದ ವ್ಯಾಸರು ವೈಶೇಷಿಕಶಾಸ್ತ್ರವನ್ನೇ ಖಂಡಿಸಿರುವರು, ನ್ಯಾಯಶಾಸ್ತ್ರವನ್ನು ಖಂಡಿಸಿಲ್ಲ. ಈ ಕಾರಣದಿಂದ, ನ್ಯಾಯಶಾಸ್ತ್ರವನ್ನು ವೇದಗಳ ಉಪಾಂಗವೆಂದು ವೈದಿಕರು ಅಭಿಮಾನಿಸಿರುವರು. ಈ ದೃಷ್ಟಿಯಿಂದ ನ್ಯಾಯವೈಶೇಷಿಕದರ್ಶನಗಳ ಪೈಕಿ, ವೈಶೇಷಿಕದರ್ಶನವನ್ನೇ ಮೊದಲು ಪರಿಗಣಿಸಬೇಕಾಗುತ್ತದೆ. ಆದರೆ, ವ್ಯಾಕರಣಶಾಸ್ತ್ರದ ಪ್ರಕಾರ, ಕಡಿಮೆ ಅಕ್ಷರಗಳಿರುವ ಪದವನ್ನು ಮೊದಲು ಹೇಳಬೇಕೆಂಬ ಒಂದು ನಿಯಮದಿಂದಾಗಿ 'ನ್ಯಾಯವೈಶೇಷಿಕ' ಎಂದು ಹೇಳಲಾಗಿದೆ.

ನ್ಯಾಯಶಾಸ್ತ್ರದ ಮೂಲಪುರುಷರು ಗೌತಮರು ಅಥವಾ ಗೋತಮರು. ಇವರು ರಾಮಾಯಣದಲ್ಲಿ ಬರುವ ಅಹಲ್ಯೆಯ ಪತಿಯಾದ ಗೌತಮರಲ್ಲ ಎಂಬುದೇ ಹೆಚ್ಚಿನ ವಿದ್ವಾಂಸರ ನಿಲುವಾಗಿದೆ. ಮಾನವನು ಬುದ್ಧಿಜೀವಿ, ವಿಚಾರವಾದಿ. ವಿಚಾರ ಮಾಡದೇ ಇರಲು ಮಾನವನಿಗೆ ಸಾಧ್ಯವೇ ಇಲ್ಲ. ವಿಚಾರಕ್ಕೆ ಅಂಗವಾಗಿ ಕೆಲವು ವಾಕ್ಯಗಳನ್ನು 'ನ್ಯಾಯ' ಎನ್ನುತ್ತಾರೆ. ಇದರಿಂದಾಗಿ ಈ ಶಾಸ್ತ್ರವನ್ನೇ 'ನ್ಯಾಯಶಾಸ್ತ್ರ' ಎಂದು ಹೆಸರಿಸಿದರು. ಆದರೆ ವಿಚಾರದಿಂದಲೇ ಎಲ್ಲವನ್ನೂ ನಿರ್ಣಯಿಸಲೂ ಸಾಧ್ಯವಿಲ್ಲ. ಆದ್ದರಿಂದ ವಿಚಾರದ ಸ್ಥಾನವನ್ನೂ, ಅದರ ಕ್ರಮವನ್ನೂ ನಿರೂಪಿಸುವುದೇ ಈ ಶಾಸ್ತ್ರದ ಪ್ರಧಾನ ವಿಷಯ.

ಯಾವ ನಿರ್ಣಯಕ್ಕೂ ಆಧಾರವಾಗಿರುವುದು ಪ್ರತ್ಯಕ್ಷಾದಿಪ್ರಮಾಣಗಳೇ. ಇವುಗಳಿಗೆ ಸಹಕಾರಿಯಾಗಿರುವುದು 'ತರ್ಕ'. "ಪ್ರಮಾಣಾನುಗ್ರಾಹಕಃ ತರ್ಕಃ" = ಎಂದರೆ ಪ್ರಮಾಣಗಳಿಗೆ ಪೋಷಕ ಅಥವಾ ಸಹಕಾರಿ 'ತರ್ಕ' ಎಂದರ್ಥ. ಇಷ್ಟೇ ಹೊರತು ಕೇವಲತರ್ಕ ಸ್ವತಃ ಪ್ರಮಾಣದ ಕೆಲಸವನ್ನು ಮಾಡುವುದಿಲ್ಲ.

ಪ್ರಮಾಣಗಳು 'ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ' ಎಂದು ನಾಲ್ಕು ವಿಧ. ಚಕ್ಷುರಾದಿ ಇಂದ್ರಿಯಗಳಿಂದ ಬರುವ ಜ್ಞಾನವೇ 'ಪ್ರತ್ಯಕ್ಷ'. ಹೊಗೆಯನ್ನು ನೋಡಿದಾಗ 'ಅಲ್ಲಿ ಬೆಂಕಿ ಇದೆ' ಎಂದು ತಿಳಿಯಲು ಕಾರಣವಾಗಿರುವುದೇ 'ಅನುಮಾನ'. ಸಾದೃಶ್ಯಮೂಲಕವಾಗಿ ವಸ್ತುಗಳ ಪರಿಚಯ ಮಾಡಿಕೊಳ್ಳಲು

ಕಾರಣವಾಗಿರುವುದೇ 'ಉಪಮಾನ'. ಪ್ರಾಮಾಣಿಕರ ವಚನವೇ 'ಶಬ್ದ'.

ಪದಾರ್ಥಗಳ ಸ್ವರೂಪ–ಸ್ವಭಾವಾದಿಗಳನ್ನು ನಿರ್ಣಯಿಸಲು ಈ ನಾಲ್ಕು ಪ್ರಮಾಣಗಳೇ ಮೂಲಾಧಾರ. ಆದರೆ, ಈ ಪ್ರತ್ಯಕ್ಷಾದ್ಯನುಭವಗಳು ಎಂದೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅಂದರೆ, ಇವುಗಳು ಕೆಲವು ಸಮಯ ಇಂದ್ರಿಯದೋಷಾದಿಗಳಿಂದಾಗಿ ಹಗ್ಗವನ್ನು ನೋಡಿ 'ಹಾವು' ಎಂದು ಬರುವಂತೆ ತಪ್ಪಾಗಿಯೂ ಬರುವುದುಂಟು. ಇವುಗಳನ್ನು 'ಭ್ರಮೆ' ಅಥವಾ 'ಪ್ರಮಾಣಾಭಾಸ' ಎಂದು ಹೇಳುವರು. ಪದಾರ್ಥಗಳಲ್ಲಿ 'ನಕಲಿ'ಇರುವಂತೆಯೇ 'ಪ್ರಮಾಣ'ಗಳಲ್ಲಿಯೂ 'ನಕಲಿ' ಪ್ರಮಾಣಗಳು ಇರುವುದರಿಂದ ಇವುಗಳನ್ನು ಪತ್ತೆ ಹಚ್ಚುವುದು ಬುದ್ಧಿಜೀವಿಯಾದ ಮಾನವನಿಗೆ ಅನಿವಾರ್ಯವಾಗುತ್ತದೆ. ಇಂತಹ ಬುದ್ಧಿಜೀವಿಯ ಸಹಾಯಕ್ಕಾಗಿಯೇ ಈ ತರ್ಕಶಾಸ್ತ್ರ ಏರ್ಪಟ್ಟಿದೆ. ವಿಷಯವಿಲ್ಲದೇ ಯಾವ ಜ್ಞಾನವೂ ಬರುವಂತಿಲ್ಲ. ಈ ಪ್ರಮಾಣಗಳಲ್ಲಿ ವಿಷಯವಾಗುವುದನ್ನು 'ಪ್ರಮೇಯ' ಅಥವಾ 'ಪದಾರ್ಥ' ಎನ್ನುತ್ತಾರೆ. ವೈಶೇಷಿಕಶಾಸ್ತ್ರ 'ಪ್ರಮೇಯ'ಶಾಸ್ತ್ರ, ಅಥವಾ 'ಪದಾರ್ಥ'ಶಾಸ್ತ್ರ. ನ್ಯಾಯ ಪ್ರಮಾಣಶಾಸ್ತ್ರ. ಹೀಗೆ ಇವು ಪರಸ್ಪರ ಪೂರಕವಾಗುವುದರಿಂದಲೇ ಇವನ್ನು 'ಸಮಾನತಂತ್ರ' ಎಂದು ಹೇಳುವರು.

ಪ್ರಮಾಣ ಮತ್ತು ಪ್ರಮಾಣಾಭಾಸಗಳನ್ನು ಸರಿಯಾಗಿ ತಿಳಿದು ವಿಚಾರ ಮಾಡುವ ಕ್ರಮವನ್ನು ತಾನು ತಿಳಿದುಕೊಳ್ಳುವುದು ವಿಚಾರವಾದಿಯಾದ ಮಾನವನಿಗೆ ಅತ್ಯಂತ ಆವಶ್ಯಕವಾಗುವಂತೆಯೇ, ಅದನ್ನು ತಿಳಿಯಲು ಅಪೇಕ್ಷಿಸುವನಿಗೆ ಅದನ್ನು ತಿಳಿಸುವುದು ಮತ್ತು ಪ್ರಮಾಣಾಭಾಸಗಳಿಂದ ಮುಗ್ಧರನ್ನು ಮೋಸಮಾಡುವವರನ್ನು ಪತ್ತೆಹಚ್ಚಿ ಸಮುದಾಯವನ್ನು ರಕ್ಷಿಸುವುದೂ ಈ ಮಾನವನ ಕರ್ತವ್ಯವಾಗಿದೆ. ಇದರಲ್ಲಿ ಮೊದಲನೆಯದ್ದನ್ನು – ಅಂದರೆ, ವಿಷಯಗಳನ್ನು ನಿರ್ಣಯಿಸಿಕೊಳ್ಳಲು ಮತ್ತೊಬ್ಬರಿಗೆ ಸಹಾಯ ಮಾಡುವ ಪದ್ಧತಿಯನ್ನು 'ವಾದ' ಎಂದೂ, ಮೋಸಗಾರರನ್ನು ಪತ್ತೆ ಹಚ್ಚಿ ಸತ್ಯವನ್ನು ಸಂರಕ್ಷಿಸುವ ವಿಧಾನಕ್ಕೆ 'ಜಲ್ಪ' ಎಂದೂ ಹೇಳುವರು. ಈ ಕಾರಣದಿಂದಲೇ ನ್ಯಾಯಶಾಸ್ತ್ರವನ್ನು ಸತ್ಯವನ್ನು ಸಂರಕ್ಷಿಸುವ 'ಬೇಲಿ', ಅಂದರೆ, ಗಿಡವನ್ನು ಸಂರಕ್ಷಿಸುವುದಕ್ಕಾಗಿ ಏರ್ಪಡಿಸುವ 'ಮುಳ್ಳುಬೇಲಿ' ಎಂದು ಹೇಳಲಾಗಿದೆ. ಈ ಕಾರಣದಿಂದಲೇ ಇದರ ಪ್ರಭಾವ ಎಲ್ಲಾ ಶಾಸ್ತ್ರಗಳ ಮೇಲೂ ವ್ಯಾಪಿಸಿದೆ.

ಈ ಶಾಸ್ತ್ರದ ಮೂಲಗ್ರಂಥವಾದ ನ್ಯಾಯಸೂತ್ರಗಳಿಗೆ, ವಾತ್ಸ್ಯಾಯನರು ಎಂಬ ಮಹರ್ಷಿಗಳು ಉತ್ತಮವಾದ ಭಾಷ್ಯವನ್ನು ಬರೆದಿರುವರು. ಇದರ ಮುಂದೆ, ಉದ್ಯೋತಕರರು, ವಾಚಸ್ಪತಿಮಿಶ್ರರು, ಉದಯನಾಚಾರ್ಯರು, ಜಯಂತಭಟ್ಟ ಮುಂತಾದ ಮಹಾವಿದ್ವಾಂಸರು ಇದನ್ನು ಬ್ರಹ್ಮಾಂಡವಾಗಿ ಬೆಳೆಸಿ, ನಮ್ಮ ಜ್ಞಾನಕ್ಷೇತ್ರಕ್ಕೆ ಅಸಾಧಾರಣವಾದ ಮಹತ್ತ್ವ ಮತ್ತು ಕೀರ್ತಿಯನ್ನು ತಂದಿರುವರು.

8. ವೈಶೇಷಿಕದರ್ಶನ

ಇದರ ಮೂಲಪುರುಷರು ಕಣಾದ ಮಹರ್ಷಿಗಳು. ಇದರ ಭಾಷ್ಯಕಾರರು ಪ್ರಶಸ್ತಪಾದಾಚಾರ್ಯರು. ಶ್ರೀಧರಾಚಾರ್ಯರು, ಉದಯನಾಚಾರ್ಯರು ಮೊದಲಾದ ಮಹಾತಾರ್ಕಿಕರು ಈ ಭಾಷ್ಯಕ್ಕೆ ಅದ್ಭುತವಾದ ವ್ಯಾಖ್ಯಾನಗಳನ್ನು ಬರೆದಿರುವರು. ವಿಮರ್ಶಕರ ಅಭಿಪ್ರಾಯದಲ್ಲಿ ಈ ದರ್ಶನವೇ ಎಲ್ಲಕ್ಕಿಂತಲೂ ಅತಿಪ್ರಾಚೀನ. ಕಣ್ಣಿನಿಂದ ನೋಡಲು ಅಶಕ್ಯವಾದ ಅತಿಸೂಕ್ಷ್ಮವಾದ ಪರಮಾಣುಗಳೇ ಈ ಜಗತ್ತಿಗೆ ಮೂಲಕಾರಣವೆಂದು ಕಣಾದರು ಹೇಳುತ್ತಾರೆ. ಇವರೇ ಪರಮಾಣುಗಳನ್ನು ಕಂಡುಹಿಡಿದವರಲ್ಲಿ ಮೊದಲಿಗರು. ಜಗತ್ತಿನಲ್ಲಿರುವ ಪದಾರ್ಥಗಳನ್ನು – ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಎಂದು ಆರು ವಿಧವಾಗಿ ಇವರು ವಿಂಗಡಿಸಿರುವರು. ಕಣಾದರ ಬಹಳ ಕಾಲಾನಂತರ ಸುಮಾರು 9ನೆಯ ಶತಮಾನದ ವ್ಯೋಮಶಿವಾಚಾರ್ಯರು ಈ 6 ಪದಾರ್ಥಗಳೊಂದಿಗೆ 7ನೆಯದಾಗಿ 'ಅಭಾವ' ಎಂಬ ಪದಾರ್ಥವನ್ನೂ ಸೇರಿಸಿ ಪದಾರ್ಥಗಳು ಒಟ್ಟು 7 ಎಂದು ಸಮರ್ಥಿಸಿದರು. ಅನಂತರ ಕಾಲದ ಎಲ್ಲ ವಿದ್ವಾಂಸರೂ ಸಪ್ತಪದಾರ್ಥವಾದಿಗಳೇ ಆಗಿದ್ದಾರೆ. ನ್ಯಾಯ ಮತ್ತು ವೈಶೇಷಿಕದರ್ಶನದ ವಿದ್ವಾಂಸರೇ ಮಧ್ಯಕಾಲಿಕ ಬೌದ್ಧರು ವೇದಕ್ಕೆ ವಿರುದ್ಧವಾಗಿ ಘರ್ಷಣೆಗೆ ಕೈ ಹಾಕಿದಾಗ, ವೇದಮಾರ್ಗ ಸಂರಕ್ಷಣೆಗಾಗಿ ಬಲವಾಗಿ ಹೋರಾಡಿದರು. ಇದರ ಅನಂತರವೇ ವೇದಾಂತದರ್ಶನಗಳು ಪ್ರಬಲವಾಗಿ ಬೆಳೆದವು.

ನ್ಯಾಯಶಾಸ್ತ್ರವು ವಿಚಾರ ಮಾಡುವ ಕ್ರಮ ಮತ್ತು ನಿಯಮಗಳನ್ನು ಪ್ರತಿಪಾದಿಸುವುದಾದರೆ, ವಿಚಾರಕ್ಕೆ ವಿಷಯವಾಗಿ ಅಥವಾ ಆಧಾರವಾಗಿರುವ ವಿಷಯಗಳನ್ನು ವೈಶೇಷಿಕ ಪ್ರತಿಪಾದಿಸುತ್ತದೆ. ವಿಚಾರ 'ಕೇವಲವಿಚಾರ'ವಾಗದೇ ಪ್ರಾಮಾಣಿಕವಾಗಿರಬೇಕು. ಏಕೆಂದರೆ, 'ವಿಚಾರ' ಎಂಬುದು, ಒಂದು

ವಿಷಯವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಹಕರಿಸುವುದು ಮಾತ್ರವೇ ಹೊರತು, ಎಲ್ಲೆಯಿಲ್ಲದೇ ಇರಬಾರದು. ಅಂದರೆ, ವಿಷಯವನ್ನು ಖಚಿತಪಡಿಸುವುದು ಪ್ರತ್ಯಕ್ಷಾದಿ ಪ್ರಮಾಣಗಳೇ; 'ವಿಚಾರ' ಸಾಧ್ಯತೆಯನ್ನು ಮಾತ್ರ ತಿಳಿಸುತ್ತದೆ – ಅಥವಾ ಅಸಾಧ್ಯತೆಯನ್ನು ತಳ್ಳಿಹಾಕುತ್ತದೆ.

ಒಟ್ಟಿನಲ್ಲಿ, ನ್ಯಾಯ ಮತ್ತು ವೈಶೇಷಿಕವೆಂಬ ಈ ಎರಡು ದರ್ಶನಗಳು ವಿಚಾರ ಮಾಡುವ ಕ್ರಮವನ್ನು ಶಿಕ್ಷಿಸುವುದಕ್ಕಾಗಿ ಏರ್ಪಟ್ಟಿರುತ್ತವೆ. ಆದರೂ ಭಾರತೀಯರು ಕೇವಲ ವಿಚಾರವಾದಿಗಳನ್ನು 'ಹೈತುಕರು' ಎಂದು ಕರೆದಿರುವರು. ಇವರಿಗೆ ಯಾವ ವಿಧವಾದ ಪುರಸ್ಕಾರವನ್ನೂ ಕೊಡಬಾರದು ಎಂದು 'ಹೈತುಕಾನ್ ಬಕವೃತ್ತೀಂಶ್ಚ ವಾಙ್ಮಾತ್ರೇಣಾಪಿ ನಾರ್ಚಯೇತ್' ಎಂದು ಧರ್ಮಶಾಸ್ತ್ರ ಹೇಳುತ್ತದೆ. 'ಬಕವೃತ್ತಿ' ಎಂದರೆ ಕಪಟಾಚಾರಿಗಳು. 'ವಿಚಾರ'ಬುದ್ಧಿಕ್ಷೇತ್ರಕ್ಕೆ ಸೇರಿದೆ. ಬುದ್ಧಿಗಿಂತಲೂ 'ಜ್ಞಾನ'ಬೇರೆಯಾಗಿದೆ ಎಂಬುದನ್ನು ಈ ಲೇಖನದ ಆರಂಭದಲ್ಲೇ (ಪುಟ 2) ಹೇಳಿದೆ. ಈ ವಿಷಯವನ್ನು ಕೊನೆಯಲ್ಲಿ ಮತ್ತಷ್ಟು ವಿವರಿಸಲಾಗುವುದು.

9. ಸಾಂಖ್ಯದರ್ಶನ

ಈ ದರ್ಶನದ ಮೂಲಪುರುಷರು 'ಕಪಿಲ'ಮಹರ್ಷಿಗಳು. ಆದರೂ ಅವರು ಯಾವ ಗ್ರಂಥವನ್ನೂ ರಚಿಸಲಿಲ್ಲ. 'ಕಪಿಲವಿರಚಿತಸಾಂಖ್ಯಸೂತ್ರಗಳು' ಎಂಬ ಹೆಸರಿನಲ್ಲಿ ಒಂದು ಗ್ರಂಥವು ಇರುತ್ತದೆ. ಇದಕ್ಕೆ 'ವಿಜ್ಞಾನಭಿಕ್ಷುಗಳು' ಎನ್ನುವರು ಒಂದು ಭಾಷ್ಯವನ್ನು ಬರೆದಿರುವರು. ಆದರೆ, ಈ ಎರಡು ಗ್ರಂಥಗಳು ತುಂಬಾ ಇತ್ತೀಚಿನದವೆಂದು ಎಲ್ಲಾ ವಿದ್ವಾಂಸರೂ ಅಭಿಪ್ರಾಯಪಟ್ಟಿರುವರು. ವಿಜ್ಞಾನಭಿಕ್ಷು ಎಂಬ ಭಾಷ್ಯಕಾರರೇ ಸೂತ್ರಗಳನ್ನು ರಚಿಸಿದವರೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಇದನ್ನು ಬಿಟ್ಟರೆ, 'ಈಶ್ವರಕೃಷ್ಣ' ಎಂಬುವರು ರಚಿಸಿದ 'ಸಾಂಖ್ಯಕಾರಿಕಾ' ಎಂಬ ಗ್ರಂಥವೇ ಈ ದರ್ಶನದ ಮೂಲಗ್ರಂಥ ಎಂದೇ ಎಲ್ಲಾ ವಿದ್ವಾಂಸರೂ ಒಪ್ಪಿರುವರು. ಇದು ಸುಮಾರು 5ನೆಯ ಶತಮಾನದ್ದು. ಈ ಕಾರಿಕೆಗಳು (ಶ್ಲೋಕಗಳು) 'ಆರ್ಯಾವೃತ್ತ' ಎಂಬ ವೃತ್ತದಲ್ಲಿ ರಚಿತವಾಗಿ, ದರ್ಶನಕ್ಷೇತ್ರದಲ್ಲಿ ಒಂದು ಆದರ್ಶ ಗ್ರಂಥವೆನಿಸಿಕೊಂಡಿದೆ.

ಸೃಷ್ಟಿಯ ವಿಜ್ಞಾನವನ್ನು ವಿಶ್ಲೇಷಿಸಲು ಹೊರಟ ಈ ದರ್ಶನ ಪ್ರಕೃತಿ–ಪುರುಷ ಎಂಬ ಎರಡು ತತ್ತ್ವಗಳೇ ಸೃಷ್ಟಿಗೆ ಮೂಲಭೂತವೆಂದು ಪ್ರತಿಪಾದಿಸುತ್ತದೆ.

'ಪುರುಷ' ಎಂಬುದೇ ಆತ್ಮತತ್ತ್ವ. ಪ್ರಕೃತಿ ಜಡತತ್ತ್ವ. ಇದನ್ನೇ ತ್ರಿಗುಣತತ್ತ್ವ ಎಂದೂ ಹೇಳುತ್ತಾರೆ. ಇದು ಸದಾ ಪರಿಣಾಮಸ್ವಭಾವದ್ದು. ಸತ್ತ್ವ, ರಜಸ್ಸು, ತಮಸ್ಸು ಎಂಬುದೇ ತ್ರಿಗುಣಗಳು. ಸತ್ತ್ವಗುಣ ಪ್ರಕಾಶಸ್ವರೂಪವಾದ್ದು, ಒಳ್ಳೆಯ ಪ್ರವೃತ್ತಿಗಳಿಗೆ ಕಾರಣವಾಗಿರುವುದು. ತಮೋಗುಣ ಆವರಣಸ್ವರೂಪವಾದ್ದು, ಅಜ್ಞಾನಾದಿಗಳಿಗೆ ಕಾರಣವಾಗಿರುವುದು. ರಜೋಗುಣ ಚಲನಾತ್ಮಕವಾಗಿದ್ದು, ಸಕಲ ಚಟುವಟಿಕೆಗಳಿಗೆ ಕಾರಣವಾಗಿರುವುದು. ಇದು ಸ್ವತಃ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಸತ್ತ್ವಗುಣದೊಂದಿಗೆ ಸೇರಿದರೆ ಒಳ್ಳೆಯದಕ್ಕೂ, ತಮೋಗುಣದೊಂದಿಗೆ ಸೇರಿದಾಗ ಕೆಟ್ಟದ್ದಕ್ಕೂ ಕಾರಣವಾಗುತ್ತದೆ.

ಈ ಮೂರು ಗುಣಗಳೂ ಸಮವಾಗಿದ್ದಾಗ 'ಪ್ರಳಯ' ಎನಿಸಿಕೊಳ್ಳುತ್ತದೆ. ಇವುಗಳಲ್ಲಿ ಏರಿಳಿತಗಳಾದಾಗ ಸೃಷ್ಟಿಯು ಪ್ರಾರಂಭಿಸುತ್ತದೆ. ಆರಂಭದಲ್ಲಿ ಈ ಪ್ರಕೃತಿತತ್ತ್ವದಿಂದ ಮಹತ್ತತ್ತ್ವವು ಆವಿರ್ಭವಿಸುತ್ತದೆ. ಇದರಿಂದ ಅಹಂಕಾರತತ್ತ್ವ ಆವಿರ್ಭವಿಸುತ್ತದೆ. ಇದರಿಂದ ಮನಸ್ಸು ಮತ್ತು ಪಂಚಜ್ಞಾನೇಂದ್ರಿಯ-ಪಂಚಕರ್ಮೇಂದ್ರಿಯಗಳು ಹುಟ್ಟುತ್ತವೆ. ಇವಲ್ಲದೆ, ಪಂಚಭೂತಗಳಿಗೆ ಕಾರಣವಾದ ಪಂಚತನ್ಮಾತ್ರಗಳೂ ಇದರಿಂದಲೇ ಹುಟ್ಟುತ್ತವೆ. ಈ ಪಂಚತನ್ಮಾತ್ರಗಳಿಂದ 5 ಗುಣಗಳ ತತ್ತ್ವವೇ 'ತನ್ಮಾತ್ರಗಳು' ಎಂದೆನಿಸಿಕೊಳ್ಳುತ್ತದೆ. ಹೀಗೆ, ಪ್ರಕೃತಿ, ಮಹತ್, ಅಹಂಕಾರ, 11 ಇಂದ್ರಿಯಗಳು (ಘ್ರಾಣೇಂದ್ರಿಯ, ರಸನೇಂದ್ರಿಯ, ಚಕ್ಷುರಿಂದ್ರಿಯ, ತ್ವಗಿಂದ್ರಿಯ, ಶ್ರೋತ್ರೇಂದ್ರಿಯ ಎಂದು 5 ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂದು 5 ಕರ್ಮೇಂದ್ರಿಯಗಳು, ಮನಸ್ಸು) 5 ತನ್ಮಾತ್ರಗಳು, 5 ಭೂತಗಳು (ಆಕಾಶ, ವಾಯು, ತೇಜಸ್, ಅಪ್, ಪೃಥಿವಿ) ಹೀಗೆ ಒಟ್ಟು 24 ತತ್ತ್ವಗಳಾಗುತ್ತವೆ. ಇವುಗಳೊಂದಿಗೆ ಪುರುಷತತ್ತ್ವ ಸೇರಿ 25 ತತ್ತ್ವಗಳೇ ಜಗತ್ತಿನ ಸಕಲ ಆಗುಹೋಗುಗಳಿಗೂ ಪಂಚಭೂತಗಳು ಉತ್ಪನ್ನವಾಗುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಕಾರಣವಾಗುತ್ತವೆ. ಈ ತತ್ತ್ವಗಳ ಜ್ಞಾನವೇ ಮೋಕ್ಷಕ್ಕೆ ಸಾಧನವಾಗುತ್ತದೆ. ಪ್ರತ್ಯೇಕವಾದ ಈಶ್ವರತತ್ತ್ವವನ್ನು ಇವರು ಒಪ್ಪುವುದಿಲ್ಲ. ಇದರಿಂದಲೇ ಇದನ್ನು 'ನಿರೀಶ್ವರಸಾಂಖ್ಯ' ಎಂದು ಕರೆಯುವುದು. ಜ್ಞಾನವನ್ನೇ ಮೋಕ್ಷಸಾಧನ ಎಂದು ಹೇಳುವುದರಿಂದ ಈ ದರ್ಶನವನ್ನು 'ಸಾಂಖ್ಯದರ್ಶನ' ಎಂದು ಹೇಳುತ್ತಾರೆ ಎಂಬುದು ಕೆಲವರ ಅಭಿಪ್ರಾಯ. ಸಂಖ್ಯಾ ಎಂದರೆ 'ಜ್ಞಾನ' ಎಂದರ್ಥ. ತತ್ತ್ವಗಳನ್ನು ಎಣಿಸಿ 25 ಎಂದು ಘೋಷಿಸಿದ್ದರಿಂದ ಇವರಿಗೆ 'ಸಾಂಖ್ಯರು'

ಎಂದು ಹೆಸರು ಬಂದಿರುವುದಾಗಿ ಮತ್ತೆ ಕೆಲವರು ಹೇಳುತ್ತಾರೆ. ಸೃಷ್ಟಿವಿಜ್ಞಾನ ನಿರೂಪಣೆಯಲ್ಲಿ ಈ ದರ್ಶನದ ಪ್ರಭಾವ ಅಪಾರವಾಗಿದೆ.

10. ಯೋಗದರ್ಶನ

ಪತಂಜಲಮಹರ್ಷಿಗಳು ಈ ದರ್ಶನದ ಮೂಲಪುರುಷರು. ಇವರಿಂದ ರಚಿತವಾದ ಯೋಗಸೂತ್ರಗಳಿಗೆ 'ವ್ಯಾಸಭಾಷ್ಯ' ಎಂಬ ಹೆಸರಿನಲ್ಲಿ ಒಂದು ಅಮೂಲ್ಯ ಗ್ರಂಥ ಪ್ರಸಿದ್ಧವಾಗಿದೆ. ಈ ವ್ಯಾಸರು, ಬ್ರಹ್ಮಸೂತ್ರ-ಮಹಾಭಾರತಾದಿಕರ್ತೃಗಳಾದ ವ್ಯಾಸರಿಗಿಂತಲೂ ಬೇರೆಯವರೆಂಬುದೇ ವಿಮರ್ಶಕರ ಅಭಿಪ್ರಾಯವಾಗಿದೆ. ಈ ಶಾಸ್ತ್ರ ಧ್ಯಾನಮಾರ್ಗವನ್ನು ಪ್ರತಿಪಾದಿಸುತ್ತದೆ. ಈ ಮಾರ್ಗವನ್ನೇ 'ಅಷ್ಟಾಂಗಯೋಗ' ಎನ್ನುತ್ತಾರೆ.

'ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನ-ಸಮಾಧಯಃ' ಎಂದು ಇವನ್ನು ಹೇಳಿರುವರು. ಇವುಗಳಲ್ಲಿ ಮೊದಲ ನಾಲ್ಕನ್ನು ಹಠಯೋಗವೆಂದೂ, ಮುಂದಿನ ನಾಲ್ಕನ್ನು ರಾಜಯೋಗವೆಂದೂ ಹೇಳುತ್ತಾರೆ. ಹಠಯೋಗ ನಾಡೀಶುದ್ಧಿಯನ್ನು ಪ್ರಧಾನ ಗುರಿಯಾಗಿ ಇಟ್ಟುಕೊಂಡಿದೆ. ಮುಂದಿನದು ಆತ್ಮದರ್ಶನವನ್ನು ಪ್ರಧಾನಗುರಿಯನ್ನುಳ್ಳದ್ದು. ರಾಜಯೋಗವನ್ನೇ ಧ್ಯಾನಯೋಗ ಎನ್ನುತ್ತಾರೆ. ಈ ಧ್ಯಾನವನ್ನು ಸಾಧಿಸಲು "ಈಶ್ವರಪ್ರಣಿಧಾನಾದ್ವಾ" "ಸಮಾಧಿಸಿದ್ಧಿರೀಶ್ವರಪ್ರಣಿಧಾನಾತ್" ಎಂದು ಪರಮಾತ್ಮನ ಅನುಗ್ರಹವನ್ನು ಈ ದರ್ಶನ ಒಪ್ಪುವುದರಿಂದ ಇವರನ್ನು 'ಸೇಶ್ವರಸಾಂಖ್ಯರು' ಎನ್ನುತ್ತಾರೆ. ತತ್ತ್ವನಿರೂಪಣೆಯಲ್ಲಿ ಇವರು ಸಾಂಖ್ಯರ ಪ್ರಕ್ರಿಯೆಯನ್ನೇ ಅನುಸರಿಸಿದರೂ, 25ನೇ ತತ್ತ್ವಕ್ಕಿಂತಲೂ 26ನೆಯ ಈಶ್ವರತತ್ತ್ವವನ್ನು ಇವರು ಒಪ್ಪುತ್ತಾರೆ.

ದಾರ್ಶನಿಕರಲ್ಲಿ ತುಂಬವೂ ವಿವಾದಕ್ಕೆ ಒಳಗಾದ ವಿಷಯಗಳಲ್ಲಿ, ಅವಿನಾಭಾವಸ್ಥಳಗಳಲ್ಲಿ ಬರುವ ವಿವಾದ ಪ್ರಧಾನವಾಗಿದೆ. 'ಅವಿನಾಭಾವ' ಎಂದರೆ, ಒಂದನ್ನು ಬಿಟ್ಟು ಮತ್ತೊಂದು ಇರಲಾರದು ಎಂದರ್ಥ. ವ್ಯವಹಾರಕ್ಷೇತ್ರಕ್ಕೆ ಸೇರಿದಂತ ಸ್ಥಳಗಳಲ್ಲಿ ಈ ಅವಿನಾಭಾವವಿರುತ್ತದೆ. 1. ಅವಯವ-ಅವಯವಿ, 2. ಗುಣಿ-ಗುಣ 3. ಕ್ರಿಯಾ-ಕ್ರಿಯಾವತ್ 4. ಜಾತಿ-ವ್ಯಕ್ತಿ 5. ವಿಶೇಷ-ನಿತ್ಯದ್ರವ್ಯ. ಇವುಗಳು ಅವಿನಾಭೂತಪದಾರ್ಥಗಳು. ಇವುಗಳಲ್ಲಿ ಕೊನೆಯದು ಕೇವಲ ಶಾಸ್ತ್ರಕ್ಕೆ ಸೇರಿದೆ. ಉಳಿದ 4 ವ್ಯವಹಾರಕ್ಕೆ ಸೇರಿದೆ. ಇವುಗಳು ಒಂದನ್ನು ಬಿಟ್ಟು ಮತ್ತೊಂದು ಇರಲಾರದು, ತೋರಲಾರದು.

ಅಂದರೆ ಅವಯವ ಮತ್ತು ಅವಯವಿ = ಬಟ್ಟೆ ಮತ್ತು ದಾರಗಳು ಎರಡರಲ್ಲಿ ಎರಡೂ ಬೇರೆಯೇ, ಒಂದಲ್ಲ ಎಂಬುದು ಲೋಕದ ಅನುಭವ. ಆದರೆ, ಎಷ್ಟು ಸೂಕ್ಷ್ಮವಾಗಿ ನೋಡಿದರೂ, ದಾರಗಳಿಗಿಂತಲೂ ಬಟ್ಟೆ ಬೇರೆಯಾಗಿ ಎಲ್ಲಿದೆ? ಆದ್ದರಿಂದ 'ಅವಯವಿ' ಎಂಬುದು ಬೇರೆ ಇಲ್ಲವೇ ಇಲ್ಲ ಎಂದು ಕೆಲವು ದಾರ್ಶನಿಕರು ಹೇಳುತ್ತಾರೆ. ಹೀಗೆಯೇ ಗುಣ-ಗುಣಿ = ಬಟ್ಟೆ ಮತ್ತು ಅದರ ಬಣ್ಣ ಮೊದಲಾದವುಗಳಲ್ಲಿ, ಬಟ್ಟೆಯನ್ನು ಮಾತ್ರ ಒಪ್ಪಿ ಅದರ ಗುಣಗಳು ಬೇರೆ ಇಲ್ಲವೇ ಇಲ್ಲ ಎಂದೂ, ಗುಣಗಳು ಮಾತ್ರವೇ ಇರುವುವು, ಅದಕ್ಕೆ ಆಧಾರವಾದ ದ್ರವ್ಯ ಇಲ್ಲ ಎಂದೂ ಕೆಲಕೆಲವರು ಅಭಿಪ್ರಾಯಪಡುತ್ತಾರೆ. ಹೀಗೆಯೇ ಕ್ರಿಯೆ-ಕ್ರಿಯಾವತ್, ಜಾತಿ-ವ್ಯಕ್ತಿ ಇತ್ಯಾದಿಗಳಲ್ಲಿಯೂ ಅಭಿಪ್ರಾಯಭೇದಗಳು ಇರುತ್ತವೆ. ಈ ಯೋಗದರ್ಶನದಲ್ಲಿ, ಇಂತಹ ಜಾಗದಲ್ಲಿ ಒಂದು ವಿಚಿತ್ರವಾದ ನಿಲುವನ್ನು ಹೇಳುತ್ತಾರೆ. ಇಂತಹ ಕಡೆಗಳಲ್ಲಿ ಬರುವ ಅನುಭವವನ್ನು 'ವಿಕಲ್ಪ' ಎಂದು ಪ್ರತ್ಯೇಕವಾಗಿ ವಿಂಗಡಿಸಿ, ಇವುಗಳ ಸ್ಥಿತಿ ವಿಚಿತ್ರವಾದದ್ದು, 'ಹೀಗೆಯೇ' ಎಂದು ಹೇಳಲು ಸಾಧ್ಯವಿಲ್ಲ ಎಂದು ಹೇಳಿ, 'ಅಡ್ಡಗೋಡೆಯ ಮೇಲಿನ ದೀಪದಂತೆ'ಮಧ್ಯಸ್ಥಸ್ಥಿತಿಯನ್ನು ಹೇಳುತ್ತಾರೆ. ಅಂದರೆ, ಜ್ಞಾನವನ್ನು 'ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಯಃ' ಎಂದು 5 ವಿಧವಾಗಿ ವಿಂಗಡಿಸುತ್ತಾರೆ. ಇವುಗಳಲ್ಲಿ 'ಪ್ರಮಾಣ'ಮತ್ತು ವಿಪರ್ಯಯ = 'ಅಪ್ರಮಾಣ'ಜ್ಞಾನಗಳು ಪ್ರಸಿದ್ಧ. 'ವಿಕಲ್ಪ' ಎಂಬುದೇ ಮೇಲೆ ಹೇಳಿದ 5 ಕಡೆಗಳಲ್ಲಿ ಬರುವ ಜ್ಞಾನವಾಗಿದೆ. ಇವುಗಳು ಕೇವಲ ಪ್ರಮಾಣಗಳೂ ಅಲ್ಲ, ಅಪ್ರಮಾಣಗಳೂ ಅಲ್ಲ ಎಂದು ಹೇಳಿ ಈ ವಾದಕ್ಕೆ ಒಂದು ಕೊನೆಯನ್ನು ಮಾಡಲು ಇವರು ಪ್ರಯತ್ನಪಟ್ಟಿದ್ದಾರೆ. ಈ ಅಂಶವೇ ಈ ದರ್ಶನದಲ್ಲಿ ಗಮನಾರ್ಹ. ಇದನ್ನು ಕೊನೆಯಲ್ಲಿ ಮತ್ತೆ ವಿಮರ್ಶಿಸಲಾಗುವುದು.

ಇದಲ್ಲದೆ, ಮನಸ್ಸು, ಅಹಂಕಾರ, ಬುದ್ಧಿ ಎಂದು ಅಂತಃಕರಣಗಳು ಮೂರು ಎಂದರೆ; ಇವರು, ಇವುಗಳೊಂದಿಗೆ 'ಚಿತ್ತ' ಎಂಬುದನ್ನು ಸೇರಿಸಿ ಅಂತಃಕರಣಗಳು 4 ಎಂದು ಹೇಳುತ್ತಾರೆ. ಇದೇ ಈ ದರ್ಶನದ ಸಂಗ್ರಹ ಪರಿಚಯ.

11. ಮೀಮಾಂಸಾ ಅಥವಾ ಪೂರ್ವಮೀಮಾಂಸಾದರ್ಶನ

ಇದರ ಮೂಲಪುರುಷರು ಜೈಮಿನಿ ಮಹರ್ಷಿಗಳು. ಇವರಿಂದ ರಚಿತವಾದ ಸೂತ್ರಗಳೇ ಈ ದರ್ಶನದ ಮೂಲ ಗ್ರಂಥ. ದಾರ್ಶನಿಕರು ವೇದವನ್ನು

ಪೂರ್ವಭಾಗ–ಉತ್ತರಭಾಗ ಎಂದು ಎರಡಾಗಿ ವಿಂಗಡಿಸಿ, ಪೂರ್ವಭಾಗವನ್ನು ಕರ್ಮಕಾಂಡವೆಂದೂ, ಉತ್ತರಭಾಗವನ್ನು ಜ್ಞಾನಕಾಂಡವೆಂದೂ ವ್ಯವಹರಿಸುತ್ತಾರೆ. ಈ ಕಾರಣದಿಂದಲೇ ಪೂರ್ವಭಾಗಕ್ಕೆ ಪೂರ್ವಮೀಮಾಂಸಾ ಎಂದೂ, ಉತ್ತರಭಾಗಕ್ಕೆ ಉತ್ತರಮೀಮಾಂಸಾ ಎಂದೂ ವ್ಯವಹರಿಸುತ್ತಾರೆ. ಇವರು ವೇದದ ಪೂರ್ವಭಾಗವಾದ ಸಂಹಿತೆ ಮತ್ತು ಬ್ರಾಹ್ಮಣ ಭಾಗಗಳನ್ನು ಮಾತ್ರ ಒಪ್ಪಿ, 'ಉಪನಿಷತ್' ಭಾಗವನ್ನು ಒಪ್ಪುವುದಿಲ್ಲ. ಇದರಿಂದ ಇವರು ಉಪನಿಷತ್ ಪ್ರತಿಪಾದ್ಯ 'ಬ್ರಹ್ಮ'ವನ್ನು ಒಪ್ಪುವುದಿಲ್ಲ. ಈ ಕಾರಣದಿಂದಲೇ ಇವರನ್ನು ನಿರೀಶ್ವರವಾದಿಗಳೆಂದೂ, ಈ ದರ್ಶನವನ್ನು 'ನಿರೀಶ್ವರಮೀಮಾಂಸೆ' ಎಂದೂ, ಉತ್ತರಭಾಗವಾದ ವೇದಾಂತವನ್ನು 'ಸೇಶ್ವರಮೀಮಾಂಸೆ' ಎಂದೂ ದಾರ್ಶನಿಕರು ವ್ಯವಹರಿಸುತ್ತಾರೆ.

ಜೈಮಿನಿ ಮಹರ್ಷಿಗಳ ಪೂರ್ವಮೀಮಾಂಸಾಸೂತ್ರಗಳು 12 ಅಧ್ಯಾಯಾತ್ಮಕ. ಇದಕ್ಕೆ 'ಶಬರಸ್ವಾಮಿ' ಎಂಬ ಮಹರ್ಷಿಗಳು ಭಾಷ್ಯವನ್ನು ಬರೆದಿರುವರು. ಈ ಭಾಷ್ಯಕ್ಕೆ ಕುಮಾರಿಲಭಟ್ಟರು ಮತ್ತು ಪ್ರಾಭಾಕರಗುರುಗಳು ಎಂಬ ಎರಡು ಮಹಾವಿದ್ವಾಂಸರು ವ್ಯಾಖ್ಯಾನವನ್ನು ಬರೆದಿರುವರು. ಇವರಿಬ್ಬರೂ ಅನೇಕ ವಿಷಯಗಳಲ್ಲಿ ಅತ್ಯಂತ ವಿರುದ್ಧವಾಗಿ ವ್ಯಾಖ್ಯಾನಿಸಿದ್ದರಿಂದ, ಪೂರ್ವಮೀಮಾಂಸಾದರ್ಶನದಲ್ಲಿ ಗುರುಮತ ಮತ್ತು ಭಾಟ್ಟಮತ ಎಂದು ಎರಡು ವಿಭಾಗ ಅಥವಾ ಪ್ರಸ್ಥಾನ ಎಂದು ಎರಡು ಮತಗಳಿವೆ. ಆದರೆ, ಕುಮಾರಿಲರ ಮತವೇ ಹೆಚ್ಚು ಪ್ರಚಾರದಲ್ಲಿದೆ. ಗುರುಮತ ಕೇವಲ ಹೆಸರಿಗೆ ಮಾತ್ರ ಉಳಿದಿದೆ.

ಗುರುಮತ

ಇದರ ಮೂಲ ಪುರುಷರು ಪ್ರಾಭಾಕರ ಗುರುಗಳು. ಇವರ ಕಾಲ, ಚರಿತ್ರೆ ಮುಂತಾದವುಗಳು ಸರಿಯಾಗಿ ದೊರೆಯುವುದಿಲ್ಲ. ಇವರು ಕುಮಾರಿಲಭಟ್ಟರ ಶಿಷ್ಯರೆಂದು ಕೆಲವರು ಹೇಳಿದರೂ, ಇದಕ್ಕೆ ಆಧಾರವಾಗಿ ಯಾವುದೂ ದೊರೆಯುತ್ತಿಲ್ಲ. ದಾರ್ಶನಿಕರ ದೃಷ್ಟಿಯಿಂದ ಭಾಟ್ಟಮತಕ್ಕಿಂತಲೂ ಪ್ರಾಭಾಕರಮತವೇ ಪ್ರಾಚೀನ. ಇವರು ಆತ್ಮನನ್ನು 'ಸ್ವಪ್ರಕಾಶ' ಎಂದು ಹೇಳುತ್ತಾರೆ. ಭಾಟ್ಟರು ವೈಶೇಷಿಕರಂತೆ ಜಡಾತ್ಮವಾದಿ ಎಂದು ಪ್ರಸಿದ್ಧಿ ಇದೆ. ವೈಶೇಷಿಕರು ಒಪ್ಪಿರುವ ಪದಾರ್ಥಗಳಿಗಿಂತಲೂ ಶಕ್ತಿ ಮತ್ತು ಸಾದೃಶ್ಯ ಎಂದು ಹೆಚ್ಚಾಗಿ ಎರಡು ಪದಾರ್ಥಗಳನ್ನು ಇವರು ಒಪ್ಪಿರುವರು. ಅಭಾವ ಎಂಬ

ಅತಿರಿಕ್ತಪದಾರ್ಥವನ್ನು ಇವರು ಒಪ್ಪುವುದಿಲ್ಲ, ಅದು ಮತ್ತೊಂದು ಭಾವರೂಪವೇ ಎನ್ನುತ್ತಾರೆ. ದ್ರವ್ಯಗಳಲ್ಲಿ ವೈಶೇಷಿಕರು ಹೇಳುವ 9 ದ್ರವ್ಯಗಳೊಂದಿಗೆ, ತಮಸ್ಸು = ಕತ್ತಲು ಎಂಬ ಅತಿರಿಕ್ತದ್ರವ್ಯವನ್ನು ಇವರು ಒಪ್ಪುತ್ತಾರೆ. ಪ್ರಮಾಣಗಳ ವಿಷಯದಲ್ಲಿ, ಇವರು ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಎಂದು ಪಂಚಪ್ರಮಾಣವಾದಿಗಳೆಂದು ಪ್ರಸಿದ್ಧಿ ಇದೆ. ಅರ್ಥಾಪತ್ತಿ ಎಂದರೆ, 'ಅರ್ಥಾತ್ಸಿದ್ಧವಾಗುವುದು' ಎಂದು ಹೇಳುವ ಕಡೆಯಲ್ಲಿ ಇರುವ ಪ್ರಮಾಣ. ಉದಾಹರಣೆ – 'ದೇವದತ್ತನು ಹಗಲಲ್ಲಿ ಊಟ ಮಾಡಿದ್ದನ್ನು ಯಾರೂ ನೋಡಿಲ್ಲ ಆದರೆ, ದಪ್ಪವಾಗಿ ಮಾತ್ರ ಇದಾನೆ' ಎಂದು ಯಾರಾದರೂ ಹೇಳಿದಾಗ, 'ಹಾಗಾದರೆ ಅವನು ರಾತ್ರಿಯಲ್ಲಿ ಊಟ ಮಾಡುತ್ತಿರುವನು' ಎಂಬುದು ಅರ್ಥಾತ್ಸಿದ್ಧವಾಗುತ್ತದೆ. ಇದನ್ನೇ ಅರ್ಥಾಪತ್ತಿಪ್ರಮಾಣ ಎಂದು ಹೇಳುವರು. ಇದೇ ಈ ಮತದ ಪ್ರಧಾನವಾದ ವಿಷಯ. ಉಳಿದವು ಅಷ್ಟು ಪ್ರಧಾನವಾದವಲ್ಲ.

ಭಾಟ್ಟಮತ

ಇದರ ಸ್ಥಾಪಕರಾದ 'ಕುಮಾರಿಲಭಟ್ಟರು ಸುಬ್ರಹ್ಮಣ್ಯಾಂಶಸಂಭೂತರೆಂಬ ಪ್ರಸಿದ್ಧಿಯಿದೆ. ಇವರಿಂದ ರಚಿತವಾದ 'ಶ್ಲೋಕವಾರ್ತಿಕ'ವೆಂಬ ಗ್ರಂಥ ದರ್ಶನಕ್ಷೇತ್ರದಲ್ಲಿ ಅಮೂಲ್ಯಗ್ರಂಥವೆನಿಸಿದೆ. ವೇದಗಳ ಮಹತ್ತ್ವವನ್ನು ಕಾಪಾಡುವುದೇ ಇದರ ಪ್ರಧಾನ ಉದ್ದೇಶ. ವೇದಗಳು ನಿತ್ಯ ಮತ್ತು ಅಪೌರುಷೇಯ ಎಂಬ ವಾದವನ್ನು ಎಳ್ಳಷ್ಟೂ ಅಲ್ಲಾಡಿಸಲಾರದ ರೀತಿಯಲ್ಲಿ ಇದರಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಇವರು ಹೂಡುವ ಕ್ರಮ ಮತ್ತು ಯುಕ್ತಿಗಳು ಅಸದೃಶವೆನಿಸಿ ಇವರ ಅಗಾಧವಾದ ಪಾಂಡಿತ್ಯವನ್ನು ನಿರೂಪಿಸುತ್ತವೆ. ಕೊನೆಯ ಕಾಲದ ಬೌದ್ಧರಾದ ದಿಙ್ನಾಗ, ಧರ್ಮಕೀರ್ತಿ ಮುಂತಾದ ಪ್ರೌಢ ಪಂಡಿತರು ವೇದಕ್ಕೆ ವಿರುದ್ಧವಾಗಿ ದಂಗೆ ಎದ್ದಾಗ, ಇವರ ವಿರುದ್ಧವಾಗಿ ರೇಗಿ ಎದ್ದಂತೆ ಕುಮಾರಿಲರ ಶ್ಲೋಕವಾರ್ತಿಕ ರಚಿತವಾಗಿದೆ. ಬೌದ್ಧರ ಪ್ರತಿಯೊಂದು ವಾದವನ್ನೂ ನುಚ್ಚುನೂರು ಮಾಡಿ, ವೈದಿಕಮತಕ್ಕೆ ಒಂದು ತಿರುಪನ್ನು (Turning point) ಇವರೇ ಕೊಟ್ಟರು.

ದರ್ಶನದ ದೃಷ್ಟಿಯಲ್ಲಿ, ಇವರು ಅನೇಕ ವಿಷಯಗಳಲ್ಲಿ ನೈಯಾಯಿಕರ ವಾದವನ್ನೇ ಪುಷ್ಟೀಕರಿಸಿರುವರು. ಆತ್ಮನು ಜ್ಞಾನಸ್ವರೂಪನಲ್ಲ, ಜ್ಞಾನಕ್ಕೆ ಆಶ್ರಯನು ಮಾತ್ರ ಎಂಬುದು ಒಂದು ಅತ್ಯಂತ ಪ್ರಧಾನ ವಿಷಯ. ಇದು ವೈಶೇಷಿಕರ ಅಥವಾ

ನೈಯಾಯಿಕರ ನಿಲುವಾಗಿದೆ. ಇದಲ್ಲದೆ, ಹಗ್ಗವನ್ನು ನೋಡಿ 'ಹಾವು' ಎಂದು ಭ್ರಮಿಸುವ ಸ್ಥಲದಲ್ಲಿ ಇವರು ನೈಯಾಯಿಕರಂತೆ 'ಅನ್ಯಥಾಖ್ಯಾತಿವಾದಿ'ಗಳು. ಹಾಗೆಯೇ 'ಅಭಾವ'ವೂ ಅತಿರಿಕ್ತಪದಾರ್ಥ ಎಂದು ಇವರು ಒಪ್ಪುತ್ತಾರೆ. ಇದಕ್ಕಾಗಿ 'ಅನುಪಲಬ್ಧಿ' ಎಂದು ಒಂದು ಹೆಚ್ಚಿನ ಪ್ರಮಾಣವನ್ನೂ ಇವರು ಒಪ್ಪುತ್ತಾರೆ. ಪ್ರಾಭಾಕರರು ಹೇಳುವ 5 ಪ್ರಮಾಣಗಳೊಂದಿಗೆ ಅನುಪಲಬ್ಧಿಯನ್ನೂ ಸೇರಿಸಿಕೊಂಡರೆ 6 ಪ್ರಮಾಣವಾದಿಗಳು ಭಾಟ್ಟರು ಎಂಬುದು ಪ್ರಸಿದ್ಧ. ಕರ್ಮವಿಚಾರಕ್ಕೆ ಸಂಬಂಧಪಟ್ಟಂತೆ ಇವರಿಬ್ಬರಿಗೂ ಅನೇಕ ಅಂಶಗಳಲ್ಲಿ ಅಭಿಪ್ರಾಯಭೇದವಿದ್ದರೂ, ಅವು ದರ್ಶನಕ್ಷೇತ್ರಕ್ಕೆ ಸಂಬಂಧಪಟ್ಟವಲ್ಲ. ಒಟ್ಟಿನಲ್ಲಿ ನೋಡಿದರೆ, ಪ್ರಾಭಾಕರರು ಶುದ್ಧಮೀಮಾಂಸಕರೆಂದು, ಭಾಟ್ಟರು ಸ್ವಲ್ಪ ನೈಯಾಯಿಕಮೀಮಾಂಸಕರೆಂದೂ ದರ್ಶನಕ್ಷೇತ್ರದಲ್ಲಿ ಪರಿಗಣಿತರಾಗಿರುತ್ತಾರೆ. ಈ ಕಾರಣದಿಂದಲೇ ಶ್ರೀಮದ್ರಾಮಾನುಜರು ಪ್ರಾಭಾಕರರನ್ನು 'ವೇದವಿತ್' ಎಂದು ಹೇಳಿದ್ದಾರೆ.

12. ವೇದಾಂತ ಅಥವಾ ಉತ್ತರಮೀಮಾಂಸಾ

'ಮೀಮಾಂಸಾ' ಎಂಬ ಪದಕ್ಕೆ 'ವಿಚಾರ' ಎಂದರ್ಥ. 14 ವಿದ್ಯಾಸ್ಥಾನಗಳಲ್ಲಿ 'ಮೀಮಾಂಸಾನ್ಯಾಯವಿಸ್ತರಃ' ಎಂದು ಉಪಾಂಗಗಳಲ್ಲಿ ಮೀಮಾಂಸೆ ಪರಿಗಣಿತವಾಗಿದೆ. ಬುದ್ಧಿಜೀವಿಯಾದ ಮಾನವನು ವಿಚಾರ ಮಾಡದೇ ಇರಲಾರ. ಅದು ಅವನ ಸಹಜಪ್ರವೃತ್ತಿ. ಈ ಕಾರಣದಿಂದಲೇ ಶ್ರೀಮದ್ರಾಮಾನುಜರು "ವಿಚಾರಶಾಸ್ತ್ರ ಸಹಜಪ್ರವೃತ್ತಿಗೆ ಒಳಪಟ್ಟಿದೆ. ಅದಕ್ಕೆ ವಿಧಿಬೇಕಾಗಿಲ್ಲ" ಎಂದು ಹೇಳಿರುವರು. ಕರ್ಮಕಾಂಡಕ್ಕೆ ಸಂಬಂಧಪಟ್ಟ ಶಾಸ್ತ್ರ 'ಪೂರ್ವಮೀಮಾಂಸಾ'; ಬ್ರಹ್ಮಕಾಂಡಕ್ಕೆ ಸಂಬಂಧಪಟ್ಟ ಶಾಸ್ತ್ರ 'ಉತ್ತರಮೀಮಾಂಸಾ' ಆಗಿದೆ. ಉತ್ತರಮೀಮಾಂಸಾಪ್ರವರ್ತಕರು 'ವ್ಯಾಸರು' ಎಂಬುದು ಸರ್ವಪ್ರಸಿದ್ಧ. ಇವರು ರಚಿಸಿದ ಮೂಲಸೂತ್ರಗಳನ್ನು ವ್ಯಾಸಸೂತ್ರ, ಉತ್ತರಮೀಮಾಂಸಾಸೂತ್ರ, ಶಾರೀರಕಸೂತ್ರ, ವೇದಾಂತಶಾಸ್ತ್ರ, ಬ್ರಹ್ಮಸೂತ್ರ, ಬಾದರಾಯಣಸೂತ್ರ ಇತ್ಯಾದಿ ಹೆಸರುಗಳಿಂದ ಹೇಳುತ್ತಾರೆ. ವ್ಯಾಸರೇ ಬೇರೆ, ಬಾದರಾಯಣರೇ ಬೇರೆಯಾದ್ದರಿಂದ 'ಬಾದರಾಯಣಸೂತ್ರ' ಎಂಬ ಹೆಸರೇ ಸರಿಯೆಂದು ಕೆಲ ವಿಮರ್ಶಕರ ಅಭಿಪ್ರಾಯ. ಇದಕ್ಕೆ ಸುಮಾರು 22 ವ್ಯಾಖ್ಯಾನಗಳು ಸಿಗುತ್ತವೆಂದು ಹೇಳುತ್ತಾರೆ. ಆದರೂ ಈವಾಗ ಶ್ರೀಶಂಕರರು, ಶ್ರೀರಾಮಾನುಜರು ಮತ್ತು ಶ್ರೀ ಆನಂದತೀರ್ಥರು ಈ ಮೂರು ಜನರ

ಭಾಷ್ಯವೇ ಹೆಚ್ಚು ಪ್ರಸಿದ್ಧಿಯಲ್ಲಿದೆ. ಇವನ್ನೇ 'ಮತತ್ರಯ' ಎಂದು ಹೇಳುತ್ತಾರೆ. ಅನಂತರಕಾಲದಲ್ಲಿ ಅನೇಕ ಭಾಷ್ಯಗಳು ಸ್ವತಂತ್ರವಾಗಿಯೇ ಹುಟ್ಟಿಕೊಂಡರೂ, ಯಾವುದೋ ಒಂದು ರೀತಿಯಲ್ಲಿ ಈ ಮೂರು ಭಾಷ್ಯಗಳ ಪ್ರಭಾವಕ್ಕೆ ಒಳಪಟ್ಟಿವೆ ಎಂಬುದು ಹೆಚ್ಚಿನ ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಮತತ್ರಯಗಳ ಪ್ರಭಾವ ಕೇವಲ ವೇದಾಂತಶಾಸ್ತ್ರ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ, ಉಳಿದ ಎಲ್ಲ ಶಾಸ್ತ್ರಗಳು, ಇತಿಹಾಸಪುರಾಣಾದಿಗಳು, ಹೆಚ್ಚೇನು? ಧರ್ಮಶಾಸ್ತ್ರಗಳ ಮೇಲೂ ಬಿದ್ದು ನಮ್ಮ ಪುಣ್ಯಭಾರತದ ಸಕಲಕ್ಷೇತ್ರಗಳಲ್ಲೂ ಎಲ್ಲೆಯ ಮೀರಿ ವ್ಯಾಪಿಸಿದೆ. ಈ ಮತತ್ರಯಗಳಲ್ಲಿ ಶಂಕರಮತವೇ ಪ್ರಾಚೀನ.

ಶ್ರೀಶಂಕರಮತ

ಸಾಂಪ್ರದಾಯಿಕವಾಗಿ ಶ್ರೀಶಂಕರಾಚಾರ್ಯರನ್ನು 3000 ವರ್ಷಗಳ ಹಿಂದಿದ್ದವರೆಂದು ಹೇಳಿದರೂ ನಿರ್ಮತ್ಸರ ವಿದ್ವಾಂಸರು ಇವರ ಕಾಲ 8ನೆಯ ಶತಕದ ಅಂತಿಮಭಾಗ ಅಥವಾ 9ನೆಯ ಶತಕದ ಆದಿಭಾಗ ಎಂದೇ ಅಭಿಪ್ರಾಯಪಡುತ್ತಾರೆ. ಇವರ ಪಾಂಡಿತ್ಯ ಪ್ರಭಾವಾದಿಗಳು ವಿವಾದಾತೀತವಾದವುಗಳು. ಭಾರತದೇಶಕ್ಕೆ ಜ್ಞಾನಕ್ಷೇತ್ರ ಮಾತ್ರವಲ್ಲದೆ; ಧರ್ಮ, ಸಂಸ್ಕೃತಿ ಮುಂತಾದ ಸಕಲ ಕ್ಷೇತ್ರದಲ್ಲೂ ಒಂದು Turning point = ತಿರುವು ಮೊನೆಯಾಗಿ ಇವರಾಗಿದ್ದಾರೆ ಎಂಬುದೂ ವಿವಾದಾತೀತ. ಶಂಕರವಿಜಯಾದಿ ಗ್ರಂಥಗಳಲ್ಲಿ ಇವರ ಮಹತ್ತ್ವವನ್ನು ತಿಳಿಸಲು ಹೊರಟು, ಅನೇಕ ಹುಸಿ ಐತಿಹ್ಯಗಳಿಂದ ಇವರ ಮಹತ್ತ್ವ ಅರ್ಥವಾಗುವುದಕ್ಕಿಂತಲೂ, ಚಾರಿತ್ರಿಕವಾಗಿ ಅಥವಾ ಗ್ರಾಂಥಿಕವಾಗಿ ಇವರ ವಿಷಯವನ್ನು ಅರ್ಥಮಾಡಿಕೊಳ್ಳುವುದರಿಂದಲೇ ಇವರ ಮಹತ್ತ್ವ ಪ್ರಾಮಾಣಿಕವಾಗಿ ಅರ್ಥವಾಗುತ್ತದೆ. ಭಾರತದೇಶಕ್ಕೆ ಒಂದು ತಿರುಪನ್ನು ಕೊಟ್ಟವರಲ್ಲಿ ಪ್ರಧಾನರಾದ ಉದ್ಯೋತಕರ, ಕುಮಾರಿಲ ಭಟ್ಟ, ಮಂಡನಮಿಶ್ರ ಇತ್ಯಾದಿ ಮಹಾಪಂಡಿತರುಗಳಿಂದಲೂ ಸಾಧಿಸಲಾಗದ್ದನ್ನು ಇವರು ಸಾಧಿಸಿರುವರು. ಅಷ್ಟುಮಾತ್ರವಲ್ಲ; ಇವರ ಗುರುಗಳಾದ ಶ್ರೀಗೋವಿಂದಪಾದರು, ಪರಮಗುರುಗಳಾದ ಗೌಡಪಾದರು ಇವರುಗಳಿಂದಲೂ ಸಾಧಿಸಲಾಗದ್ದನ್ನು ಇವರು ಸಾಧಿಸಿದರು ಎಂದರೇ, ಅದು ಕೇವಲ ಅತಿಶಯೋಕ್ತಿಯಲ್ಲ.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" (ಬ್ರಹ್ಮವೊಂದೇ ಸತ್ಯವಾದುದು: ಜಗತ್ತೆಲ್ಲವೂ ಮಿಥ್ಯೆಯೇ. ಜೀವವೂ ಬ್ರಹ್ಮವೂ ಒಂದೇ) ಎಂಬುದೇ ಇವರ ಸಿದ್ಧಾಂತ ಎಂಬುದು ಸರ್ವವಿದಿತ. "ಬ್ರಹ್ಮೈವ ಸ್ವಾವಿದ್ಯಯಾ

ಸಂಸರತಿ ಸ್ವವಿದ್ಯಯಾ ಮುಚ್ಯತೇ" (ಬ್ರಹ್ಮವೇ ತನ್ನ ಅಜ್ಞಾನದಿಂದ ಸಂಸಾರವನ್ನು ಕಲ್ಪಿಸಿಕೊಳ್ಳುತ್ತದೆ, ತನ್ನ ನಿಜ ಸ್ವರೂಪಜ್ಞಾನದಿಂದ ಸಂಸಾರದಿಂದ ಮುಕ್ತವಾಗುತ್ತದೆ) ಎಂಬುದೂ ಇದೇ ಅರ್ಥದಲ್ಲೇ. ಇದರ ಸಂಗ್ರಹ ವಿವರಣೆ ಪಾರಮಾರ್ಥಿಕಸತ್ಯ, ವ್ಯಾವಹಾರಿಕಸತ್ಯ, ಪ್ರಾತಿಭಾಸಿಕಸತ್ಯ ಎಂದು ಸತ್ಯ 3 ವಿಧ. ಪರಬ್ರಹ್ಮ ಒಂದೇ ಪಾರಮಾರ್ಥಿಕಸತ್ಯವಾಗಿದೆ. ಜಗತ್ತೆಲ್ಲವೂ ವ್ಯಾವಹಾರಿಕ ಸತ್ಯಕ್ಕೆ ಸೇರಿದೆ. ಹಗ್ಗವನ್ನು ಕಂಡು 'ಹಾವು' ಎಂದು ಭ್ರಮಿಸುವುದು ಪ್ರಾತಿಭಾಸಿಕ ಸತ್ಯ. 'ಪರಬ್ರಹ್ಮ ಒಂದೇ ಪಾರಮಾರ್ಥಿಕಸತ್ಯ' ಎಂದು ತಿಳಿಯುವವರೆಗೆ, ವ್ಯಾವಹಾರಿಕಸತ್ಯತ್ವ ಇರುವುದರಿಂದ ಜಗತ್ತಿನ ಎಲ್ಲಾ ವ್ಯವಹಾರಗಳೂ ನಡೆದುಕೊಂಡು ಬರುತ್ತದೆ. ಇದಕ್ಕೆ ವಿವರಣೆ ಹೇಳಲು ಹೊರಟಾಗ ಅನೇಕ ವಿಧ ತೊಡರುಗಳು ಬರುವುದಾದ್ದರಿಂದ, ಅದನ್ನು ಹಾಗೆಯೇ ಜೀರ್ಣಿಸಿಕೊಳ್ಳುವುದೇ ಸೂಕ್ತವೆನಿಸುತ್ತದೆ. ಬ್ರಹ್ಮ ನಿರ್ಗುಣ ಎಂಬುದೂ ಈ ಮತದ ಅಭಿಪ್ರಾಯವಾಗಿದೆ.

ಶ್ರೀರಾಮಾನುಜಮತ

ಇವರ ಕಾಲ 1017–1137 ಎಂದು ಎಲ್ಲರೂ ಒಪ್ಪಿದ್ದಾರೆ. ಇವರ ಮತ ಬ್ರಹ್ಮದಂತೆ ಜಗತ್ತು ಸತ್ಯವೇ. ಬ್ರಹ್ಮ ಸಗುಣ ಮತ್ತು ಸಾಕಾರ. ಭಕ್ತಿಯೇ ಮೋಕ್ಷಸಾಧನ. ಭಕ್ತಿಯೂ ಒಂದು ವಿಧ ಜ್ಞಾನವೇ ಆಗುತ್ತದೆ. ಪರಮಾತ್ಮನಿಗೂ ಈ ಜಗತ್ತಿಗೂ ಕೇವಲ ಸ್ವ–ಸ್ವಾಮಿಭಾವ ಮಾತ್ರವೇ ಸಂಬಂಧವಿಲ್ಲ; ಇದರೊಂದಿಗೆ, ನಮಗೂ ನಮ್ಮ ಶರೀರಕ್ಕೂ ಇರುವಂತೆ ಅವಿನಾಭಾವ ಅಥವಾ ಅಪೃಥಕ್ಸಿದ್ಧಿರೂಪ ಸಂಬಂಧವಿರುತ್ತದೆ. ಇದನ್ನೇ 'ಶರೀರಶರೀರಿಭಾವ' ಎಂದು ಹೇಳುತ್ತಾರೆ. ಸ್ಥೂಲವಾದ ಜಡತತ್ತ್ವ, ಅದಕ್ಕಿಂತಲೂ ಸೂಕ್ಷ್ಮವಾದ ಜೀವತತ್ತ್ವ, ಅದಕ್ಕಿಂತಲೂ ಸೂಕ್ಷ್ಮವಾದ ಪರಮಾತ್ಮತತ್ತ್ವ ಮೂರೂ ಸೇರಿ ಅವಿಭಾಜ್ಯವಾಗಿರುವುದೇ ಪರಬ್ರಹ್ಮವಾಗುತ್ತದೆ. ಇದರ ಜ್ಞಾನವೇ ಪೂರ್ಣವಾಗುತ್ತದೆಯೇ ಹೊರತು, ಪ್ರತ್ಯೇಕಿಸಿ ಇವುಗಳನ್ನು ತಿಳಿಯುವುದು ಪೂರ್ಣವಾಗುವುದಿಲ್ಲ. ಸಾಧನೆಯ ದೃಷ್ಟಿಯಿಂದ ಶ್ರೀರಾಮಾನುಜಮತ ವೈಷ್ಣವವೆನಿಸಿದರೂ, ದರ್ಶನದ ದೃಷ್ಟಿಯಿಂದ ವಿಶಿಷ್ಟಾದ್ವೈತ ಅಥವಾ ಸವಿಶೇಷಾದ್ವೈತವೆನಿಸುತ್ತದೆ. ಅಂದರೆ, ಬ್ರಹ್ಮವು ಶ್ರೀಶಂಕರರು ಹೇಳಿರುವಂತೆ ನಿರ್ಗುಣವಲ್ಲ, ನಿರಾಕಾರವಲ್ಲ; ಅದು ಸಗುಣ, ಸಾಕಾರವೇ ಆಗುತ್ತದೆ. ಇದನ್ನೇ ಸವಿಶೇಷವೇ ಬ್ರಹ್ಮ ಎಂದೂ ಹೇಳಬಹುದು. ಬ್ರಹ್ಮ ಎಂದೂ ವಿಶೇಷವಿಶಿಷ್ಟವೇ ಆಗಿರುತ್ತದೆ. ವಿಶೇಷವೆಂದರೆ, ಗುಣಗಳು, ದಿವ್ಯಮೂರ್ತಿಗಳು ಮತ್ತು

ವಿಭೂತಿಗಳು ಈ ಮೂರೂ ಆಗುತ್ತದೆ. ನಿತ್ಯವಿಭೂತಿ, ಲೀಲಾವಿಭೂತಿ ಎಂದು ವಿಭೂತಿಗಳು 2 ವಿಧ. ನಿತ್ಯವಿಭೂತಿ ಎಂದರೆ, ವೈಕುಂಠಾದಿ ಲೋಕಗಳು. ಲೀಲಾವಿಭೂತಿ ಎಂದರೆ, ಚೇತನಾಚೇತನಾತ್ಮಕವಾದ ಈ ಜಗತ್ತು. ಭಕ್ತಿಯೇ ಮೋಕ್ಷಸಾಧನ. ಭಕ್ತಿಯಿಂದ ಪ್ರಸನ್ನನಾದ ಪರಮಾತ್ಮನ ಅನುಗ್ರಹದಿಂದಲೇ ಮೋಕ್ಷವು ದೊರೆಯುವುದು. ತತ್ತ್ವಗಳು ಚಿತ್, ಅಚಿತ್, ಈಶ್ವರ ಎಂದು ಮೂರು ವಿಧ. ಚಿತ್ ಎಂದರೆ ಜೀವ, ಅಚಿತ್ ಎಂದರೆ ಪ್ರಕೃತಿ, ಈಶ್ವರ ಎಂದರೆ ಪರಮಾತ್ಮನು. ಪ್ರಕೃತಿಯ ಪರಿಣಾಮವಾದ ಮಹದಹಂಕಾರಾದಿಗಳು ಇವರಿಗೂ ಸಮ್ಮತ. ಇದು ಈ ಮತದ ಸಾರ.

ಶ್ರೀ ಆನಂದತೀರ್ಥರ ಮತ

ಇವರು ಶ್ರೀರಾಮಾನುಜರಂತೆಯೇ; ಬ್ರಹ್ಮವು ಸತ್ಯ, ಜಗತ್ತೂ ಸತ್ಯ ಎಂದೂ ಬ್ರಹ್ಮ ಸಗುಣವೆಂದೂ, ವಿಷ್ಣುವೇ ಪರಬ್ರಹ್ಮವೆಂದೂ ಒಪ್ಪುತ್ತಾರೆ. ಆದರೆ, ಜಗತ್ತಿಗೂ ಬ್ರಹ್ಮಕ್ಕೂ ಶರೀರ-ಶರೀರಿಭಾವವನ್ನು ಇವರು ಒಪ್ಪುವುದಿಲ್ಲ. ಜೀವ, ಜಗತ್ತು, ಈಶ್ವರ ಇವುಗಳ ಪರಸ್ಪರಭೇದಜ್ಞಾನ ಪೂರ್ವಕವಾದ ಭಕ್ತಿಯೇ ಮೋಕ್ಷಸಾಧನ. ಇವರು ಶ್ರೀಶಾಂಕರ ಅದ್ವೈತಕ್ಕೆ ಸಾಕ್ಷಾತ್ ಎದುರಾಗಿ ಎಲ್ಲೆಡೆಯಲ್ಲೂ ಭೇದವನ್ನೇ ಹೇಳುವುದರಿಂದ, ಇವರನ್ನು 'ದ್ವೈತಿಗಳು' ಎಂದೇ ಎಲ್ಲರೂ ಕರೆಯುತ್ತಾರೆ. ಆದರೂ ಇವರು ಭೇದದಲ್ಲೂ ತಾರತಮ್ಯವನ್ನು ಒಪ್ಪುತ್ತಾರೆ. ಕತ್ತೆ-ಕುದುರೆ ಮುಂತಾದ ಕಡೆಗಳಲ್ಲಿ ಕೇವಲ ಭೇದಮಾತ್ರವಿರುತ್ತದೆ. ದ್ರವ್ಯದೊಂದಿಗೆ ಕೊನೆಯವರೆಗೂ ಇಲ್ಲದಿರುವ ಗುಣಗಳಿಗೂ, ದ್ರವ್ಯಕ್ಕೂ ಭೇದಾಭೇದವಿರುವುದು. ಕೊನೆಯವರೆಗೂ ಇರುವ ಗುಣಗಳಿಗೆ ಅತ್ಯಂತಾಭೇದವೇ ಇರುವುದೆಂದು ಇವರು ಹೇಳುವರು. ಹಾಗೆಯೇ ಮೋಕ್ಷದಲ್ಲೂ ಪರಸ್ಪರ ತಾರತಮ್ಯವನ್ನೂ, ಪರನಿಂದೆಯೂ ಮೋಕ್ಷಸಾಧನವೆಂದೂ ಇವರು ಹೇಳುವರು.

ಈ ಮತತ್ರಯ ವಿಷಯವನ್ನು ಹೇಳುವ ಅನೇಕ ಗ್ರಂಥಗಳಿರುವುದರಿಂದ, ಇವುಗಳ ಸಂಗ್ರಹರೂಪರೇಖೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಸುಮಾರು 15ನೆಯ ಶತಮಾನದಿಂದ ಈ ಮತತ್ರಯ ನಾನಾಮುಖವಾಗಿ ಬೆಳೆದು, ಬೇರೆ ಯಾವ ಮತವೂ ಭಾರತದಲ್ಲಿ ಇಲ್ಲವೆ? ಎಂದು ಸಂಶಯಪಡುವಷ್ಟು ಬೆಳೆದು, ಪರಸ್ಪರ ಭಯಂಕರವಾಗಿ ಮಾಡಿಕೊಂಡ ಖಂಡನಮಂಡನಗಳ ಪರಂಪರೆ, ಇನ್ನೂ ಸಂಪೂರ್ಣವಾಗಿ ನಿಂತಿಲ್ಲ ಎಂದೇ ಹೇಳಬೇಕು.

ಉಪಸಂಹಾರ

ಭಾರತೀಯ ದರ್ಶನಗಳ ಇತಿಹಾಸವನ್ನು ನೋಡುವುದಕ್ಕಿಂತಲೂ, ಇವುಗಳ ಪರಸ್ಪರ ಘರ್ಷಣೆಯ ಇತಿಹಾಸ ಬಹಳ ಸ್ವಾರಸ್ಯಕರವಾಗಿರುತ್ತದೆ. ವೈದಿಕ-ಅವೈದಿಕದರ್ಶನಗಳ ಇತಿಹಾಸದಲ್ಲಿ ಕಂಡುಬರುವ ಪರಸ್ಪರ ಘರ್ಷಣೆಯ ವೈಪರೀತ್ಯ ಒಂದು ಪಕ್ಕದಲ್ಲಿರಲಿ ! ವೇದಾಂತ ! ಎಂಬ ಹೆಸರಿನಲ್ಲಿ ನಡೆದಿರುವ ಘರ್ಷಣೆಯನ್ನು ಏನೆಂದು ಹೇಳುವುದು !! ಅವರವರು ತಮ್ಮ ಮೂಲಪುರುಷರನ್ನು ಅವತಾರ ಪುರುಷರೆಂದು ಭಾವಿಸುವಾಗ, ಪರಸ್ಪರ, ನಾಯಿ ! ಕತ್ತೆ ! ಪಿಶಾಚಿ ! ಇತ್ಯಾದಿಯಾಗಿ ಬೈದುಕೊಳ್ಳುವುದನ್ನು ಯಾವ ಅವತಾರ ಎಂದು ಹೇಳುವುದು !!! ಇಷ್ಟುಮಾತ್ರವೂ ಅಲ್ಲ ! ಯಾವ ಶಾಸ್ತ್ರದ ಗ್ರಂಥವನ್ನು ನೋಡಿದರು. ಅದರಲ್ಲಿ ಉಳಿದ ಎಲ್ಲಾ ಶಾಸ್ತ್ರಗಳನ್ನು ವಾಚಾಮಗೋಚರವಾಗಿ ಖಂಡಿಸಿರುವುದನ್ನು ನೋಡಬಹುದು. ವೇದಾಂಗಗಳು ಎಂದು ಒಪ್ಪಿರುವ ವ್ಯಾಕರಣ, ಮೀಮಾಂಸಾ, ನ್ಯಾಯ ಮುಂತಾದವುಗಳಲ್ಲೂ ಇಷ್ಟದಂತೆ ವೇದಾಂತಗಳನ್ನು ಖಂಡಿಸಿರುವುದನ್ನು ನೋಡಬಹುದು. ಪಂಡಿತರಲ್ಲಿ ಅಭಿಪ್ರಾಯಭೇದ ಸಹಜ ! ಎಂದು ಕೆಲವರು ಸಮಾಧಾನ ಮಾಡಲು ಪ್ರಯತ್ನಪಟ್ಟರೂ, ಅದು ಕೇವಲ ನಾಟಕೀಯವಾಗಿಯೇ ಮುಗಿದಿದೆ. ಕ್ರಿಯೆಗಳಲ್ಲಿ ಅಭಿಪ್ರಾಯಭೇದ ಸಹಜವಾದರೂ, ತತ್ತ್ವಗಳಲ್ಲಿ ಅಭಿಪ್ರಾಯಭೇದ ಹೇಗೆ ಸಾಧ್ಯ? 'ವಸ್ತುನಿ ವಿಕಲ್ಪಾಯೋಗಾತ್'(ಪದಾರ್ಥಸ್ವರೂಪದಲ್ಲಿ ಎರಡು ವಿಧ ಇರಲು ಸಾಧ್ಯವಿಲ್ಲ) ಎಂಬ ನ್ಯಾಯ ಸರ್ವಸಂಮತ. ಆದರೂ, ಜೀವಾತ್ಮನ ಸ್ವರೂಪ ಅಥವಾ ಪರಮಾತ್ಮನ ಸ್ವರೂಪ ಏನು? ಎಂದು ಪ್ರಶ್ನಿಸಿದರೆ, ಯಾವ ಮತ ರೀತ್ಯಾ? ಎಂದು ಪ್ರಶ್ನಿಸಿದ ಮೇಲೆಯೇ ಉತ್ತರ ಹೇಳಲು ಸಾಧ್ಯ.

ಆದರೆ, ಮತಭೇದದಿಂದ ಜೀವಸ್ವರೂಪ ಭಿನ್ನಭಿನ್ನವಾಗಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರೆ, "ನಮ್ಮ ಮತವೇ ಸರಿ, ಉಳಿದೆಲ್ಲವೂ ಅಬದ್ಧ" ಎಂಬ ಉತ್ತರ ಸರ್ವ ಸಹಜ. ಇದು ಯಾವ ನ್ಯಾಯ? ಎಂದು ಯೋಚಿಸುವರು ಯಾರಾದರೂ ಉಂಟೆ?" ಯೋಚಿಸಿದರೂ ಏನು ಪ್ರಯೋಜನ? ಅವರವರು ಸ್ಪಷ್ಟವಾಗಿಯೇ ಹೇಳಿದ್ದಾರೆ, ಹೇಗೆ ಒಮ್ಮತ ಸಾಧ್ಯ?" ಎಂದೇ ಪಂಡಿತರು ಹೇಳುವರು.

ಇವೆಲ್ಲವನ್ನೂ ಯೋಚಿಸಿ ಶ್ರೀರಾಮಾನುಜರು ಇದಕ್ಕಾಗಿಯೇ ಪ್ರಯತ್ನಪಟ್ಟರು. ಆದರೂ ಅವರ ಸಿದ್ಧಾಂತವೂ 'ಒಂದು ಏಕದೇಶಿಮತ'ವಾಗಿಯೇ

ಟಾಕಿದಿದೆ. ವೇದಾರ್ಥಸಂಗ್ರಹದ ಒಂದು ಪ್ರಕರಣದಲ್ಲಿ "ಏವಂ ಚ ಸತಿ ಅಭೇದೋ ವಾ, ಭೇದೋ ವಾ, ದ್ವ್ಯಾತ್ಮಕತಾ ವಾ? ವೇದಾಂತವೇದ್ಯಃ ಕೋಽಯಮರ್ಥಃ ಸಮರ್ಥಿತೋ ಭವತಿ?" ಎಂದು ತಾನೇ ಪ್ರಶ್ನಿಸಿಕೊಂಡು ನಿರ್ದಿಷ್ಟವಾದ ಉತ್ತರ ಹೇಳದೇ ಮುಂದೆ ಹೋಗಿದ್ದಾರೆ. ಇಲ್ಲಿ 'ಕೋಽಯಮರ್ಥಃ ಸಮರ್ಥಿತಃ' ಎಂದು ವಾಕ್ಯವಿದೆ. 'ಕಿಂ ವಾಕ್ಯಂ ಸಮರ್ಥಿತಂ' ಎಂದು ವಾಕ್ಯಗಳ ಸಮನ್ವಯ ಪ್ರಶ್ನೆ ಅಲ್ಲ, ಕೋಽಯಮರ್ಥಃ? ಎಂದು ಪದಾರ್ಥಸ್ವರೂಪದ ಪ್ರಶ್ನೆ ಇದು. ಹಾಗಾದರೂ 'ಏಕೆ ನಿರ್ದಿಷ್ಟ ಉತ್ತರವನ್ನು ಹೇಳಿಲ್ಲ? ಮತ್ತೆ ಒಂದು ರೀತಿಯಲ್ಲಿ ವಾಕ್ಯಾರ್ಥ ಪ್ರಾರಂಭವಾಗಬಹುದು.

ದಾರ್ಶನಿಕರಲ್ಲಿ ಭೇದವಾದಿಗಳು, ಅಭೇದವಾದಿಗಳು, ಭೇದಾಭೇದವಾದಿಗಳು ಎಂದು ಮೂರೇ ವಿಧ ಇರುತ್ತದೆ. ಮೂರನ್ನೂ ಪ್ರಶ್ನಿಸಿಕೊಂಡಿದ್ದಾರೆ, ಆದರೆ "ಎಲ್ಲವೂ ಇದೆ, ಏಕೆ ವೃಥಾ ಚರ್ಚೆ?" ಎಂಬ ರೀತಿಯಲ್ಲಿದೆ ಉತ್ತರ. ನಿರ್ದಿಷ್ಟವಾದ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ಹೇಳದಿರುವುದು ಸರಿಯೆ? ಅದರಲ್ಲೂ, ಯಾವ ಒಂದು ವಿಷಯದಲ್ಲಿ ಎಲ್ಲರೂ ಮಾರಾಮಾರಿಯಾಗಿ ಜಗಳಾಡುವರೊ, ಅಂತಹ ಒಂದು ಪ್ರಶ್ನೆಯನ್ನು ತಾನಾಗಿಯೇ ಕೇಳಿಕೊಂಡು, ಉತ್ತರವೀಯದಿರುವುದು ಸರಿಯೆ?

ಈ ಪ್ರಕರಣದ ಆರಂಭದಲ್ಲಿ, ಅವತಾರಿಕಾರೂಪದಲ್ಲಿ ಇದರ ವ್ಯಾಖ್ಯಾನದಲ್ಲಿ "ವಿಷಯ ಬಹಳ ಗಹನ. ಕೇವಲ ಪಂಕ್ತ್ಯರ್ಥವನ್ನು ನೋಡಬೇಡಿ" ಎಂದು ಆಚಾರ್ಯರು ಎಚ್ಚರಿಸುತ್ತಾರೆ" ಎಂದು ಸುದರ್ಶನಸೂರಿಗಳು ಹೇಳಿರುವರು. ಇದನ್ನು ಮೂಲತಃ ಹೇಳಿದವರು, ಸಾಕ್ಷಾತ್ ರಾಮಾನುಜರ ಪ್ರಶಿಷ್ಯರು. ಶ್ರೀ ರಾಮಾನುಜರ ಜ್ಞಾನಪುತ್ರರು ಎಂದು ಪ್ರಸಿದ್ಧರಾದ ಶ್ರೀ ಕುರುಕೇಶರ ಶಿಷ್ಯರು. ಇಷ್ಟು ಎಚ್ಚರಿಕೆ ಕೊಟ್ಟರೂ, ಈಗಿನ ವಿದ್ವಾಂಸರು "ಶ್ರೀರಾಮಾನುಜರು ಭೇದವಾದಿಗಳೇ" ಎಂದು ನಿರ್ಧರಿಸಿರುವುದು ಸರಿಯೆ? ಇದಕ್ಕೆ ಸರಿಯಾದ ಉತ್ತರವನ್ನು ಪಡೆದರೆ ಮಾತ್ರ, ಭಾರತೀಯ ದಾರ್ಶನಿಕರ ಗಾಂಭೀರ್ಯ ಅರ್ಥವಾಗಲು ಸಾಧ್ಯ!

ಇದು ಸಾಧ್ಯವೆ? ಎಂಬ ಪ್ರಶ್ನೆ ಸಹಜ. "ವಸ್ತುವಿನಲ್ಲಿ ಎರಡು ವಿಧ ಇರಲು ಸಾಧ್ಯವಿಲ್ಲ" ಎಂದಾದ ಮೇಲೆ, ಏಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ವಿದ್ವಾಂಸರೆಲ್ಲರೂ, ಆಗ್ರಹ, ಪೂರ್ವಾಗ್ರಹಾದಿಗಳನ್ನೂ, ಸ್ವಪ್ರತಿಷ್ಠಾದಿಗಳನ್ನೂ ಬಿಟ್ಟು, ಶ್ರದ್ಧೆಯಿಂದ ತಪೋಮಯವಾಗಿ ಆಲೋಚಿಸಿ ಒಂದು ನಿರ್ದಿಷ್ಟ

ಉತ್ತರವನ್ನು ಎಂದು ಪಡೆಯುವರೊ, ಎಂದು ಸಕಲಾಚಾರ್ಯರನ್ನೂ ಮನಃಪೂರ್ವಕವಾಗಿ ಗೌರವಿಸುವರೊ, ಅಂದೇ ಭಾರತದ ಜ್ಞಾನಕ್ಷೇತ್ರದ ಏಳಿಗೆ ಸಾಧ್ಯ.

ಹಾಗೆಲ್ಲಾ ಹೇಳಿದರೆ, ಬೌದ್ಧಾದಿ ಮತಗಳನ್ನು ಹಾಗೆಯೇ ಯೋಚಿಸ ಬೇಡವೇ? ಎಂದು ಕೇಳಬಹುದು. "ಹೌದು ಅದೂ ಯೋಚಿಸತಕ್ಕದ್ದೇ" ಎಂದೇ ಉತ್ತರ. ಜ್ಞಾನ ಎಂಬುದು ಯಾರೋ ಒಬ್ಬರ ಸ್ವಂತ ಸ್ವತ್ತು ಅಲ್ಲ, ಭಗವಂತನ ಕೃಪೆಗೆ ಯಾರು ಪಾತ್ರರು? ಎಂದು ನಿರ್ಣಯಿಸುವ ಅಧಿಕಾರವೂ ನಮಗಿಲ್ಲ. ಸಹನೆಯಿಂದ, ವಿನಯದಿಂದ, ಆರ್ತಿಯಿಂದ, ತಪಸ್ಸಿನಿಂದ ಅಸಾಧ್ಯ ಯಾವುದೂ ಇಲ್ಲ. ಮೊದಲು ನಾವು ನಮ್ಮ ಅರ್ಹತೆಯನ್ನೇ ಪರೀಕ್ಷಿಸಿಕೊಳ್ಳಬೇಕಾಗಿದೆ. ಅಂತಹ ಧೀರತನ ನಮಗಿದೆಯೆ? ಅಧ್ಯಾತ್ಮಶಾಸ್ತ್ರದಲ್ಲಿ 'ಧೀರಾಃ' ಎಂಬ ಪದ ಅನೇಕ ಕಡೆ ಬಂದಿರುವುದು ಸ್ಪಷ್ಟ. ಅಂತಹ ಧೀರತನವಿಲ್ಲದೆ ಏನೇನೂ ಸಾಧ್ಯವಿಲ್ಲ. ನಮಗೆ ಭಗವಂತನು ಅಂತಹ ಧೀರತನವನ್ನು ಕರುಣಿಸಲಿ! ನಮ್ಮ ಜೀವನವನ್ನು ಸಾರ್ಥಕಗೊಳಿಸಲಿ !! ಅನಂತರ, ಅವನ ಇಚ್ಛೆ ಇದ್ದರೆ, ಅದನ್ನು ಮತ್ತೊಬ್ಬರಿಗೂ ಹೇಳಿ ಆನಂದವನ್ನು ಹಂಚಿಕೊಳ್ಳುವ ಸುಯೋಗವನ್ನೂ ಅವನೇ ಕರುಣಿಸಲಿ !!!

ಶ್ರೀಭಾಷ್ಯ – ಹಿನ್ನೆಲೆ

ಹಿನ್ನೆಲೆ[1]

ಗ್ರಂಥಗಳನ್ನು ಪೌರುಷೇಯ–ಅಪೌರುಷೇಯ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಪೌರುಷೇಯವೆಂದರೆ ಪುರುಷಕೃತ, ಅಪೌರುಷೇಯವೆಂದರೆ ಪುರುಷಕೃತವಲ್ಲದ್ದೆಂದರ್ಥ, ಪುರುಷಕೃತ ಎಂದರೆ ಪುರುಷನು ಸ್ವಬುದ್ಧಿಯಿಂದ ರಚಿಸಿದ್ದೆಂದರ್ಥ. ಪುರುಷಕೃತವಲ್ಲವೆಂದರೆ ಪುರುಷನ ಬುದ್ಧಿಯಿಂದ ರಚಿತವಾದ್ದಲ್ಲವೆಂದರ್ಥ. ಪುರುಷನ ಬುದ್ಧಿಯಿಂದ ರಚಿತವಾದ್ದಲ್ಲವೆಂದರೆ, 'ಮತ್ತೆ ಯಾರ ಬುದ್ಧಿಯಿಂದ ರಚಿತವಾದ್ದೆಂಬ ಪ್ರಶ್ನೆ ಉದ್ಭವಿಸುತ್ತದೆ. ಯಾರ

---

1 'ಪುರುಷೇ ತ್ವಾವಿಸ್ತರಾಮಾತ್ಮಾ' (ಆತ್ಮತತ್ತ್ವವು ಮಾನವಜನ್ಮದಲ್ಲೇ ಪೂರ್ಣವಾಗಿ ವಿಕಾಸವನ್ನು ಪಡೆಯುತ್ತದೆ). ಎಂದು ಮಾನವಜನ್ಮವನ್ನು ವೇದ ಪ್ರಶಂಸಿಸುತ್ತದೆ. ಯಾವ ಪ್ರಾಣಿಗಳಿಗೂ ಇಲ್ಲದ ಬುದ್ಧಿಯ ವಿಕಾಸವು ಮಾನವಜನ್ಮದಲ್ಲೇ ಪೂರ್ಣತ್ವವನ್ನು ಪಡೆಯುತ್ತದೆ. ಬುದ್ಧಿಯ ವಿಕಾಸಕ್ಕೆ ಸಹಕರಿಸುವ ಭಾಗವನ್ನು ಎಂಬುದೇ ವಿದ್ಯಾಸ್ಥಾನಗಳು ಎಂದು ಕರೆಯುತ್ತಾರೆ. ಇವು 14 ವಿಧ. ಇವುಗಳಲ್ಲಿ 'ವೇದಾಂತಶಾಸ್ತ್ರ' ಎಂಬುದೇ ಕೊನೆಯ ಭಾಗ. ಮಾನವನ ವಿಕಾಸದ ಕೊನೆಯ ಹಂತ ಇದು ಎಂದು ಹೇಳುತ್ತಾರೆ. ಆದರೆ, ಈ ಭಾಗದಲ್ಲೇ ಅನೇಕ ವಿಧ ವ್ಯಾಖ್ಯಾನೋಪವ್ಯಾಖ್ಯಾನಗಳು ಹುಟ್ಟಿಕೊಂಡುಬಿಟ್ಟು ಗೊಂದಲಮಯವಾಗಿದೆ. 'ಸ್ನಾನ ಮಾಡಲು ಹೋಗಿ ಕೆಸರನ್ನು ಬಳಿದುಕೊಂಡಂತೆ', ವೇದಾಂತಶಾಸ್ತ್ರ ಕಾಮಕ್ರೋಧಮಯವಾಗಿ ಬಿಟ್ಟಿದೆ ಎಂದರೆ ಅತಿಶಯೋಕ್ತಿಯಲ್ಲ. ವೇದಾಂತ ಶಾಸ್ತ್ರದಲ್ಲಿ ಕಂಡುಬರುವಷ್ಟು ಖಂಡನಮಂಡನಗಳು ಬೇರೆ ಯಾವ ಶಾಸ್ತ್ರದಲ್ಲೂ ಇಲ್ಲ. ಇದಕ್ಕೆ ಪ್ರಾಮಾಣಿಕವಾದ ಉತ್ತರವನ್ನು ಕಂಡು ಹಿಡಿಯಲು ಮಾಡಿದ ಪ್ರಯತ್ನವೇ 'ಸತ್ಯಾನ್ವೇಷಣೆ'ಯಾಗಿದೆ. ಆ ಅನ್ವೇಷಣೆಯ ಸಂಗ್ರಹವೇ ಈ ಹಿನ್ನೆಲೆಯಾಗಿದೆ. ಇದು ಯಾವ ಒಂದು ಪಕ್ಷವನ್ನು ಸಮರ್ಥಿಸಲೋ ಅಥವಾ ಯಾವ ಒಂದು ಪಕ್ಷವನ್ನು ಖಂಡಿಸಲೋ ಮಾಡಿದ ಪ್ರಯತ್ನವಲ್ಲ 'ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ। ಗಂತುಂ ದುಃಖೋದಧೇಃ ಪಾರಂ ತ್ವರ ಯಾವನ್ನ ಭಿದ್ಯತೇ॥ ಎಂಬ ಮಹರ್ಷಿಗಳ ಮಾತಿಗೆ ನೇರ ವಿಪರೀತವಾಗಿದೆ, ಪ್ರಾಯಃ ಪಂಡಿತರ ನಡೆ. ಈ 'ಹಿನ್ನೆಲೆ'ಯ ವಿಷಯ ಹೊಸ ಆವಿಷ್ಕಾರ ರೂಪದ್ದು ಮತ್ತು ಕೇವಲ ಈ ಲೇಖಕನ ಬುದ್ಧಿಯಿಂದ ಮಾತ್ರ ರಚಿತವಾದ್ದಲ್ಲದ ಕಾರಣ ಓದುಗರು ಸಾವಧಾನವಾಗಿ ಓದಬೇಕಾಗಿ ವಿನಂತಿ.'

ಬುದ್ಧಿಯಿಂದಲೂ ರಚಿತವಾದುದ್ದಲ್ಲವೆಂದೇ ಅದರ ಅರ್ಥ. ಇಂತಹ ಒಂದು ಗ್ರಂಥ ಹೇಗಿರಲು ಸಾಧ್ಯ? ಎಂದು ಕೇಳಬಹುದು. ವೇದಗಳು ಬ್ರಹ್ಮರ್ಷಿಗಳ ಹೃದಯದಲ್ಲಿ ಅನಾಹತನಾದರೂಪವಾಗಿ ಆವಿರ್ಭವಿಸಿದವೆಂದೇ ಬಲ್ಲವರು ಹೇಳುತ್ತಾರೆ. ಅಂತಹ ನಾದವೊಂದು ಉಂಟೆಂಬುದು ಯೋಗಶಾಸ್ತ್ರವನ್ನು ಓದಿದರೆ ತಿಳಿಯಬಹುದು. ಹೀಗೆ ವೇದಗಳಿಗೆ ಹಿನ್ನೆಲೆಯಲ್ಲಿ ಯಾರ ಬುದ್ಧಿಯೂ ಇಲ್ಲದಿರುವುದರಿಂದಲೇ ಅವು ಅಪೌರುಷೇಯವೆನಿಸಿವೆ. ಆದ್ದರಿಂದಲೇ ವೇದಗಳು ವಿಶ್ವ ವಾಙ್ಮಯವಾಗಿ ಎಲ್ಲಾ ಕಾಲಕ್ಕೂ, ಎಲ್ಲರಿಗೂ ಪ್ರಮಾಣರೂಪವಾದವು. ಬುದ್ಧಿಪೂರ್ವಕರಚನೆಯಾಗಿದ್ದಲ್ಲಿ, ಬುದ್ಧಿಯಲ್ಲಿ ಭ್ರಮೆ ಪ್ರಮಾದಾದಿಗಳ ಸಂಭವವಿರುವುದರಿಂದ ಅದರ ಪ್ರಾಮಾಣ್ಯದಲ್ಲಿ ಸಂಶಯಕ್ಕೆ ಅವಕಾಶವಿರುತ್ತದೆ. ವೇದಗಳು ಅಪೌರುಷೇಯವಾದ ಕಾರಣದಿಂದಲೇ ಅವುಗಳು ಸ್ವತಃ ಪ್ರಮಾಣವೆಂದು ಹೇಳುತ್ತಾರೆ. ಪೌರುಷೇಯವಾದ ಗ್ರಂಥಗಳಿಗೆ ಹಿನ್ನೆಲೆಯಲ್ಲಿ ಆಯಾ ಗ್ರಂಥದ ಕರ್ತೃವಿನ ಬುದ್ಧಿ ಅಥವಾ ಆಶಯವೂ ಇದ್ದೇ ಇರುವುದು. ಈ ಬುದ್ಧಿ ಪ್ರಮಾಣರೂಪವೆಂದು ನಿಶ್ಚಯವಾದರೆ, ಆ ಗ್ರಂಥವೂ ಪ್ರಮಾಣವಾಗಬಲ್ಲದು. ಇಲ್ಲದಿದ್ದರೆ ಆ ಕರ್ತೃವಿನ ಅಭಿಪ್ರಾಯವನ್ನು ಅರಿತು, ಅದಕ್ಕೆ ತಕ್ಕಂತೆ ನಿರ್ಣಯಿಸಬೇಕಾಗುತ್ತದೆ.

ವೇದದ ಮಹತ್ತ್ವವನ್ನು ವಿಶ್ವದ ವಿದ್ವಾಂಸರು ಎಲ್ಲರೂ ಬಲ್ಲರು. ಭಾರತದೇಶದ, ಭಾರತೀಯ ಸಂಸ್ಕೃತಿಗೆ ಈ ವೇದಗಳೇ ಮೂಲಾಧಾರವಾಗಿರುವುದು. ವೇದವು ವಿಶ್ವದ ಅತಿ ಪ್ರಾಚೀನ ವಾಙ್ಮಯವೆಂದು ವಿಶ್ವದಲ್ಲೇ ಪ್ರಸಿದ್ಧ. ಒಂದು ವಾಙ್ಮಯವು ಇಷ್ಟೊಂದು ಸಾವಿರಾರು ವರ್ಷಗಳು ಉಳಿಯಬೇಕಾದರೆ ಅದರ ಸತ್ತ್ವ ಎಷ್ಟಿರಬಹುದೆಂದು ಊಹಿಸಿಕೊಳ್ಳಬೇಕು.

ಶ್ರೀಶಂಕರಬ್ರಹ್ಮಸೂತ್ರಭಾಷ್ಯದ ಹಿನ್ನೆಲೆ

ಪ್ರಕೃತ ಭಗವದ್ ರಾಮಾನುಜ ವಿರಚಿತವಾದ ಶ್ರೀಭಾಷ್ಯವೆಂಬ ಈ ಮಹಾನ್ ಗ್ರಂಥದ ಹಿನ್ನೆಲೆಯಲ್ಲಿರುವುದು ಯಾವುದು? ಇದು ಗೊತ್ತಾಗದೆ, ಈ ಗ್ರಂಥದ ಅಭಿಪ್ರಾಯವೂ ಗೊತ್ತಾಗುವಂತಿಲ್ಲ. ಇದರ ವೈಶಿಷ್ಟ್ಯವೂ ಗೊತ್ತಾಗುವುದಿಲ್ಲ. ಇದರ ಹಿನ್ನೆಲೆ ಗೊತ್ತಾಗಬೇಕಾದರೆ, ಶ್ರೀಶಂಕರಾಚಾರ್ಯರು ರಚಿಸಿರುವ ಮಹಾಕೃತಿಯಾದ ಬ್ರಹ್ಮಸೂತ್ರಭಾಷ್ಯದ ಹಿನ್ನೆಲೆಯು ಗೊತ್ತಾಗಲೇಬೇಕು. ಏಕೆಂದರೆ, ಎಷ್ಟೇ ಪರಮಪ್ರಮಾಣವಾದರೂ, ಈ ಎರಡು ಗ್ರಂಥಗಳು ಪೌರುಷೇಯವೆಂದೇ ಎಲ್ಲರೂ ಒಪ್ಪಿರುವರು. ಹೀಗಾದ ಮೇಲೆ,

ತಮ್ಮ ಗ್ರಂಥಗಳ ರಚನೆಯಲ್ಲಿ ಅವರವರ ಆಶಯವು ಇದ್ದೇ ಇರುತ್ತದೆ. ಅಂದರೆ, ಇಬ್ಬರು ಆಚಾರ್ಯರಿಗೂ ಯಾವುದೋ ಒಂದು ಅಭಿಪ್ರಾಯವೇ ಇಂತಹ ಗ್ರಂಥಗಳ ರಚನೆಗೆ ಪ್ರೇರಕವಾಗಿರುತ್ತದೆ.

ಶ್ರೀ ಶಂಕರರ ಬ್ರಹ್ಮಸೂತ್ರಭಾಷ್ಯದ ರಚನೆಗೆ ಪ್ರೇರಕ ಯಾವುದು? ಎಂಬ ಪ್ರಶ್ನೆಗೆ, ಅವರೇ ಉತ್ತರವನ್ನು ಕೊಟ್ಟಿರುತ್ತಾರೆ. ಈ ಭಾಗವನ್ನು 'ಅಧ್ಯಾಸಭಾಷ್ಯ' ಎನ್ನುತ್ತಾರೆ. ಇದರಲ್ಲಿ 'ಬ್ರಹ್ಮವೊಂದೇ ಸತ್ಯ, ಉಳಿದವೆಲ್ಲವೂ ಮಿಥ್ಯೆಯೇ' ಎಂಬ ತತ್ತ್ವವನ್ನು ಯುಕ್ತಿಯಿಂದಲೇ ವಿಸ್ತಾರವಾಗಿ ಸ್ಥಾಪಿಸಿದ್ದಾರೆ. ಒಂದು ಶ್ರುತಿಯನ್ನೂ ಪ್ರಮಾಣವಾಗಿ ಅವರು ತೋರಿಸಿಲ್ಲ. ಕೊನೆಯಲ್ಲಿ 'ಹೀಗೆ ನಾನು ಸ್ಥಾಪಿಸಿದ ಅರ್ಥವನ್ನೇ ಉಪನಿಷತ್ತುಗಳೂ ಹೇಳುತ್ತವೆಯೆಂಬುದನ್ನು ನಾವು ಈ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ತೋರಿಸುತ್ತೇವೆ' ಎಂದೂ ಅವರು ಹೇಳುತ್ತಾರೆ. 'ಉಪನಿಷತ್ತುಗಳಲ್ಲಿ ಹೇಳಿದ್ದನ್ನೇ ನಾನು ಹೇಳುತ್ತೇನೆ' ಎಂದು ಹೇಳದೆ, 'ಯುಕ್ತಿಯಿಂದ ನಾನು ಸ್ಥಾಪಿಸಿದ್ದನ್ನೇ ಈ ಶಾಸ್ತ್ರವೂ ಹೇಳುತ್ತದೆ' ಎಂದು ಹೇಳುವ ಹಿನ್ನೆಲೆ ಏನು ಇರಬೇಕು?

ಇಷ್ಟು ಮಾತ್ರವಲ್ಲ; ಬ್ರಹ್ಮಸೂತ್ರಗಳನ್ನೇ ಇದಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕೆಂದೂ ಅವರು ಹೇಳಿರುವರು. ಬ್ರಹ್ಮಸೂತ್ರಗಳು ಸ್ಮೃತಿಗಳಾದ ಕಾರಣ ಅವುಗಳು ಶ್ರುತಿಗಳಂತಾಗುವಂತಿಲ್ಲವೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಬ್ರಹ್ಮಸೂತ್ರಗಳು ಸ್ಮೃತಿಗಳಲ್ಲ, ಆದರೆ ಶ್ರುತಿಗಳ ಅರ್ಥವನ್ನು ನಿರ್ಣಯಿಸಿಕೊಡುವ ನ್ಯಾಯಗಳು. ನ್ಯಾಯಗಳನ್ನು ನಮ್ಮ ಇಷ್ಟ ಬಂದಂತೆ ವ್ಯಾಖ್ಯಾನಿಸಬಾರದು. ಈ ಸೂಕ್ಷ್ಮ ವಿಷಯ ಸರ್ವಜ್ಞರಾದ ಆಚಾರ್ಯರಿಗೆ ತಿಳಿಯದೇ ಇರಲು ಸಾಧ್ಯವಿಲ್ಲ. ಆದ್ದರಿಂದ ಹಾಗೆಲ್ಲ ಹೇಳುವ ಆಚಾರ್ಯರ ಹೃದಯದಲ್ಲಿ ಏನೋ ಒಂದು ರಹಸ್ಯವಿರಲೇಬೇಕು.

ಶ್ರೀಶಂಕರರು ಮತ್ತು ಶ್ರೀರಾಮಾನುಜರಿಬ್ಬರೂ ಈ ರಹಸ್ಯವನ್ನರಿತಿದ್ದುದರಿಂದಲೇ 'ಸೂತ್ರಾಣಿ ಯಥಾಕಥಂಚಿತ್ ಯೋಜನೀಯಾನಿ' 'ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ' ಎಂಬ ವಿನ್ಯಾಸದ ವೈಚಿತ್ರ್ಯ ಬಂದಿದ್ದಾಗಿದೆ. ಮೊದಲನೆಯದು ಕಾಲದ ಪ್ರಭಾವ. ಎರಡನೆಯದು ವಸ್ತುಸ್ಥಿತಿಯಾದ್ದರಿಂದ ಎರಡೂ ಅನಿವಾರ್ಯವೇ ಆಗಿದೆ. ಅಂದರೆ, ಶ್ರೀಶಂಕರರ ಕಾಲದಲ್ಲಿ ರಾಮಾನುಜರು ಹುಟ್ಟಿದ್ದರೆ, ಶ್ರೀಶಂಕರರ ಕೆಲಸವನ್ನೇ ಶ್ರೀರಾಮಾನುಜರೂ ಮಾಡುತ್ತಿದ್ದರು. ಹಾಗೆಯೇ ಶ್ರೀರಾಮಾನುಜರ ಕಾಲದಲ್ಲಿ ಶ್ರೀಶಂಕರರು

ಹುಟ್ಟಿದ್ದರೆ, ಶ್ರೀರಾಮಾನುಜರು ಮಾಡಿದ್ದನ್ನೇ ಶ್ರೀಶಂಕರರೂ ಮಾಡುತ್ತಿದ್ದರು; ಇದರಲ್ಲಿ ಸಂಶಯವಿಲ್ಲ.

40 ವರ್ಷಗಳ ಹಿಂದೆ, ಮೈಸೂರಿನ ಶ್ರೀ ಪರಕಾಲಮಠಾಧೀಶರಾಗಿ, ಸರ್ವಸಮ್ಮತ ಮಹಾವಿದ್ವಾಂಸರಾಗಿ, ನಿರ್ಮತ್ಸರರೂ, ಮಹಾವಿಮರ್ಶಕರೂ ಆಗಿದ್ದ ಶ್ರೀಶ್ರೀ ರಂಗನಾಥಬ್ರಹ್ಮತಂತ್ರ ಪರಕಾಲ ಮಹಾಸ್ವಾಮಿಗಳು, ಅನೇಕ ಸಲ ವಿದ್ವತ್ಸಭೆಯ ಮಧ್ಯದಲ್ಲೇ, 'ಶ್ರೀರಾಮಾನುಜರು ಮಾತ್ರವೇ ಅವತಾರ ಪುರುಷರು, ಶ್ರೀಶಂಕರರಲ್ಲವೆಂಬ ವಾದವನ್ನು ನಾನು ಒಪ್ಪುವುದಿಲ್ಲ. ಆದರೆ, ಶ್ರೀಶಂಕರರ ಕಾಲದಲ್ಲಿ ಬೌದ್ಧರ ಪ್ರಭಾವ ಬಹಳ ಹೆಚ್ಚಾಗಿದ್ದುದರಿಂದ, ಕೆಲವು ವಿಷಯಗಳನ್ನು ನೇರವಾಗಿ ಹೇಳಲು ಅವರಿಗೆ ಸಾಧ್ಯವಾಗಲಿಲ್ಲ. ಸರಿಯಾಗಿ ನೋಡಿದರೆ, ಬ್ರಹ್ಮ ಸವಿಶೇಷವೆ? ನಿರ್ವಿಶೇಷವೇ? ಎಂಬುದರಲ್ಲೇ ವಿಚಾರವು ಎದ್ದು ಕಾಣುವುದಾಗಿದೆ. ವಾಸ್ತವವಾಗಿ ಪರಿಶೀಲಿಸಿದರೆ, ಅವರು ಪರಮವೈದಿಕರೇ ಆಗಿದ್ದರಿಂದ ಅಂತರಂಗದಲ್ಲಿ 'ಬ್ರಹ್ಮ ಸವಿಶೇಷವೇ' ಎಂಬ ಅಭಿಪ್ರಾಯವಿತ್ತೆಂಬುದು ಸ್ಪಷ್ಟವಾಗುವುದು' ಎಂದು ಹೇಳುತ್ತಿದ್ದರು. ಶ್ರೀಶಂಕರರ ಸ್ತೋತ್ರಸಾಹಿತ್ಯದಲ್ಲಿ ಈ ಅಂಶ ಸ್ಪಷ್ಟವಾಗಿದೆ. 'ಆ ಸ್ತೋತ್ರಗಳು ಮಂದಾಧಿಕಾರಿಗಳಿಗಾಗಿ, ಉತ್ತಮಾಧಿಕಾರಿಗಳಿಗಾಗಿಯಲ್ಲ' ಎಂಬ ವಾದವೇ ಅವರು 'ಪ್ರಚ್ಛನ್ನಬೌದ್ಧರು' ಎಂಬ ಅಪವಾದಕ್ಕೆ ಕಾರಣವಾಯಿತು. 'ನಾವು ಪ್ರಚ್ಛನ್ನಬೌದ್ಧರಲ್ಲ; ಬೌದ್ಧರೇ ಪ್ರಚ್ಛನ್ನವೈದಿಕರು' ಎಂಬ ಅವರ ಸಮಾಧಾನವೂ ಸಹ ಆ ಅಪವಾದವನ್ನೇ ದೃಢಪಡಿಸುವುದೇ ಹೊರತು, ನಿರಾಕರಿಸುವುದಿಲ್ಲ.

ವಾಸ್ತವವಾಗಿ ಹೇಳುವುದಾದರೆ, ಜ್ಞಾನಿಗಳಲ್ಲೇ ತಾರತಮ್ಯವು ಅನಿವಾರ್ಯ-ವಾಗಿರುವುದರಿಂದ, ಉಳಿದವರೆಲ್ಲರೂ ಮಂದಾಧಿಕಾರಿಗಳೇ. ಪುಸ್ತಕದ ಪಾಂಡಿತ್ಯವನ್ನು ಗಳಿಸಿದ ಮಾತ್ರಕ್ಕೆ ಅವನು ಈ ಗಹನವಾದ ಅಧ್ಯಾತ್ಮಶಾಸ್ತ್ರದಲ್ಲಿ ಏನು ಮಾಡಬಲ್ಲ? 'ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ'(ತಿಳಿದವರು ಹೇಳಿದರೆ ಮಾತ್ರ ಈ ಅಧ್ಯಾತ್ಮವನ್ನು ತಿಳಿಯಲು ಸಾಧ್ಯ. ಬೇರೆ ಗತಿಯೇ ಇಲ್ಲ) ಎಂದಿರುವಾಗ, ಕೇವಲ ಪುಸ್ತಕ ಪಂಡಿತ ಏನು ಮಾಡಬಲ್ಲ? ಜ್ಞಾನಿಗಳಿಗೆ ಯಾವ ಪುಸ್ತಕದ ಅವಶ್ಯಕತೆಯೂ ಇರುವುದಿಲ್ಲ. ಆದ್ದರಿಂದ ಶ್ರೀಶಂಕರಾಚಾರ್ಯರ ಗ್ರಂಥಗಳ ಹಿನ್ನೆಲೆ ಗೊತ್ತಾಗದೆ, ಅವುಗಳ ಅಂತರಂಗದ ಉದ್ದೇಶವನ್ನು ತಿಳಿಯಲು ಸಾಧ್ಯವೇ ಇಲ್ಲ.

ಶ್ರೀಶಂಕರಾಚಾರ್ಯರು

ಈ ವಿಷಯಗಳು ನಿರ್ಧಾರವಾಗಬೇಕಾದರೆ ಶ್ರೀಶಂಕರಾಚಾರ್ಯರ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಆದರೆ, ಅವರ ಚರಿತ್ರೆ ಯಾವುದೂ ಪ್ರಾಮಾಣಿಕವಾಗಿ ಸಿಕ್ಕುವುದೇ ಇಲ್ಲ. 'ವೇದ ವಿರೋಧಿಗಳಾದ ಬೌದ್ಧ-ಜೈನರಿಂದ ವೈದಿಕಸಂಸ್ಕೃತಿಯನ್ನು ರಕ್ಷಿಸಿ, ವೈದಿಕ ಸಂಸ್ಕೃತಿಗೆ ಒಂದು ತಿರುವನ್ನೇ ಅವರು ಕೊಟ್ಟರು' ಎಂಬ ಕೀರ್ತಿಗೆ ಪಾತ್ರರಾದ ಶ್ರೀಶಂಕರರು, ಕೇವಲ ಯುಕ್ತಿವಾದದಿಂದ ಸಿದ್ಧವಾದದ್ದನ್ನೇ ವೇದಗಳೂ ಹೇಳುತ್ತವೆಯೆಂದು ಹೇಳಬೇಕಾದರೆ, ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಚರಿತ್ರೆಯನ್ನು ನೋಡಬೇಕು.

ಶ್ರೀಶಂಕರರು ಕೇರಳದ ಕಾಲಟಿ ಕ್ಷೇತ್ರದಲ್ಲಿ ಹುಟ್ಟಿದರೆಂಬುದನ್ನು ಬಿಟ್ಟು, ಉಳಿದ ಯಾವ ವಿಷಯವೂ ಪ್ರಮಾಣದಿಂದ ಸಿದ್ಧಿಸುವುದೇ ಇಲ್ಲ. ಅವರ ಚರಿತ್ರೆಯನ್ನು ಹೇಳುವ ಗ್ರಂಥಗಳ ವಿಷಯಗಳೆಲ್ಲವೂ ಕೇವಲ ಕಲ್ಪನೆಗಳೆಂದೇ ವಿಮರ್ಶಕರು ಹೇಳುವರು. ಶ್ರೀರಾಮಾನುಜರು ಮತ್ತು ಆನಂದತೀರ್ಥರ ವಿಷಯಕ್ಕೆ ಆಧಾರವಾಗಿ ಶಾಸನ ಸಿಕ್ಕಿರುವಂತೆ, ಅಂತಹ ಮಹನೀಯರಿಗೆ ಒಂದು ಶಾಸನವೂ ದೊರೆಯದೇ ಇರಲು ಕಾರಣವೇನು? ಕ್ರಿಸ್ತ 8ನೇ ಶತಮಾನದ ಉತ್ತರಭಾಗದಿಂದ ಕ್ರಿಸ್ತ 10ನೇ ಶತಮಾನದ ಪೂರ್ವಭಾಗದವರೆಗಿನ ಸುಮಾರು 2 ಶತಕದ ಕಾಲವನ್ನು 'ಕತ್ತಲೆ ಯುಗ' (Dark period) ಎಂದು ವಿಮರ್ಶಕರು ಕರೆಯುತ್ತಾರೆ. ಅಂದರೆ, ಆ ಕಾಲದ ಚರಿತ್ರೆಯು ಸಮಗ್ರವಾಗಿ ಸರಿಯಾಗಿ ಸಿಕ್ಕುವುದಿಲ್ಲ. ಏಕೆಂದರೆ, ಆ ಕಾಲದಲ್ಲಿ ಭಾರತದೇಶದಲ್ಲಿ ವಿಶೇಷತಃ ದಕ್ಷಿಣಭಾರತದಲ್ಲಿ, ವೈದಿಕರಿಗೂ, ಅವೈದಿಕರಿಗೂ ಭಯಂಕರವಾದ ಘರ್ಷಣೆಗಳು ನಡೆದವು. ಇದರಂತೆಯೇ ಪಾಶ್ಚಾತ್ಯ ದೇಶದಲ್ಲಿ, ಹಳೆಯ ಸಂಪ್ರದಾಯವಾದಿಗಳಿಗೂ, ಹೊಸ ಕ್ರಿಸ್ತ ಸಂಪ್ರದಾಯದವರಿಗೂ ಭಯಂಕರವಾದ ಮಾರಾಮಾರಿಯೇ ಹಿಂದೆ ನಡೆದ ವಿಷಯ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ.

ಆರಂಭಕಾಲದಲ್ಲಿ ವಿಶಾಲಹೃದಯರಾದ ವೈದಿಕರ ತೆಕ್ಕೆಯಲ್ಲೇ ಬೆಳೆದ ಬೌದ್ಧ-ಜೈನ ಧರ್ಮಗಳು, ಕಾಲಕ್ರಮದಲ್ಲಿ ವೇದವಿರುದ್ಧವಾಗಿ ಪರಿಣಮಿಸಿ, ಪರಸ್ಪರ ಘರ್ಷಣೆಯನ್ನು ಪ್ರಾರಂಭಿಸಿತು. ಕ್ರಮವಾಗಿ ಈ ಘರ್ಷಣೆ ಪರಸ್ಪರ ಮಾರಕವಾಗಿಯೂ ಪರಿಣಮಿಸಿತು. ಆರಂಭದಲ್ಲಿ ಅನೇಕ ವೈದಿಕರು

ಬಲಿಯಾದರು. ಆ ಸಮಯಲ್ಲೇ 63 ಶೈವಪುರಾತನರು, 12 ವೈಷ್ಣವ ಸಂತರೂ ಅವತರಿಸಿ, ಜನಸಮುದಾಯದಲ್ಲಿ ದೈವಭಕ್ತಿಯನ್ನು ಅತಿ ಗಾಢವಾಗಿ ಬೆಳಸಿದರು. ಆದರೂ, ಅನೇಕ ವಿಧ ಮಣಿ-ಮಂತ್ರ-ಓಷಧಾದಿ ಸಿದ್ಧಿಗಳಿಂದ ಬೌದ್ಧರು ಮತ್ತು ಜೈನರು ರಾಜಾಧಿರಾಜರನ್ನು ತಮ್ಮ ವಶದಲ್ಲಿಟ್ಟುಕೊಂಡು, ಅವರ ಮೂಲಕ, 'ವೈದಿಕರು ಧರ್ಮವಿರೋಧಿ'ಗಳೆಂದು ಘೋಷಿಸಿ ಶೂಲಾರೋಪಣಾದಿಗಳಿಂದ ಕೊಲ್ಲಿಸುತ್ತಿದ್ದ ವಿಷಯ ಶಾಸನಸಿದ್ಧವಾಗಿದೆ.

ಅಧ್ಯಾಸಭಾಷ್ಯ

ಈ ಇಕ್ಕಟ್ಟಾದ ಸನ್ನಿವೇಶದಲ್ಲೇ ಶ್ರೀಶಂಕರರು ಅವತರಿಸಿದ್ದರಿಂದ, ಅವರು ಬಹಿರಂಗವಾಗಿ ಅವೈದಿಕರ ವಿರೋಧವನ್ನು ಪ್ರತಿಪಾದಿಸಿದ್ದರೆ, ಅವೈದಿಕರಾದ ಬೌದ್ಧ ಜೈನ ವಿದ್ವಾಂಸರು, ತಮ್ಮ ವಶದಲ್ಲಿದ್ದ ರಾಜರಿಂದ ಶ್ರೀಶಂಕರರ ಹತ್ಯೆಯನ್ನು ಮಾಡಿಸುವ ಸಂಭವವಿತ್ತೆಂದು ಆ ಕಾಲದ ಸ್ಥಿತಿಯಿಂದ ಗೊತ್ತಾಗುತ್ತದೆ. ಶ್ರೀಶಂಕರರು ರಾಜರ ಆಶ್ರಯವನ್ನು ಪಡೆಯುವ ಸಂಭವವಿಲ್ಲದ್ದರಿಂದ ಅವರು ಬಹಿರಂಗವಾಗಿ ತಮ್ಮ ಕಾರ್ಯವನ್ನು ಪ್ರಾರಂಭಿಸಲೇ ಇಲ್ಲ. ದಿವ್ಯಶಕ್ತಿಸಂಪನ್ನರಾದ ಅವರು ಆ ದಿವ್ಯಶಕ್ತಿಯ ಪ್ರೇರಣೆಯಂತೆ ಬೌದ್ಧ-ಜೈನ ವಿಹಾರಗಳಿಗೆ ಹೋಗಿ, ದೈವಬಲ, ತಪೋಬಲ ತಮ್ಮ ಅದ್ಭುತ ವಿಮರ್ಶನಾಚಾತುರ್ಯದಿಂದ ಅವರ ಮನಸ್ಸನ್ನು ಬದಲಾಯಿಸಲು ಪ್ರಾರಂಭಿಸಿದರು. ಜೀವಾತ್ಮರನ್ನು ಮಾತ್ರ ಒಪ್ಪಿ ಈಶ್ವರನನ್ನು ನಿರಾಕರಿಸುತ್ತಿದ್ದ ಅವರನ್ನು, 'ಇದಕ್ಕಿಂತಲೂ ಈಶ್ವರನನ್ನು ಒಪ್ಪಿ ಜೀವರನ್ನು ನಿರಾಕರಿಸುವುದು ಉಚಿತವಲ್ಲವೆ!' ಎಂದು ಪ್ರತಿಪಾದಿಸಿದ್ದರಿಂದ, ಆತ್ಮತತ್ತ್ವ ಒಂದೇಯಾದ್ದರಿಂದಲೂ, ಶೂನ್ಯಾದ್ವೈತ ಅಥವಾ ವಿಜ್ಞಾನಾದ್ವೈತ ವಾದಕ್ಕೆ ಹೋಲುವುದರಿಂದಲೂ ಇದನ್ನು ಆ ಅವೈದಿಕರು ಸುಲಭವಾಗಿ ಒಪ್ಪುವಂತೆ ಮಾಡಿದರು. ಇದಲ್ಲದೆ, ಅಷ್ಟರಲ್ಲೇ, ಶೈವ-ವೈಷ್ಣವ ಸಂತರ ದಿವ್ಯಗಾನಗಳಿಂದ ಸಾಮಾನ್ಯ ಜನರಲ್ಲಿ ಈಶ್ವರಭಕ್ತಿ ಬೆಳೆದಿತ್ತಾದ್ದರಿಂದ ಬೌದ್ಧ-ಜೈನ ಪಂಡಿತರನೇಕರು ಕ್ರಮವಾಗಿ ಬದಲಾದರು. 'ವೈದಿಕರು 'ಭೋಕ್ತಾ-ಭೋಗ್ಯ-ಈಶ್ವರ' ಎಂಬ ತ್ರಿತತ್ತ್ವವಾದಿಗಳು. ನಾವಂತು ನಿಮ್ಮಂತೆ ಏಕತತ್ತ್ವವಾದಿಗಳೇ' ಇತ್ಯಾದಿಯಾಗಿ ಅವರು ಅವೈದಿಕರನ್ನು ಒಲಿಸುವ ಸಲುವಾಗಿ ಪ್ರತಿಪಾದಿಸಿದರು. 'ಅಸ್ತು ತರ್ಹಿ ಕ್ಷಣಿಕವಿಜ್ಞಾನೇ ಗೌರವಾನ್ನಿತ್ಯವಿಜ್ಞಾನಮೇವಾತ್ಮಾ', 'ತೇಷಾಮಲ್ಪಾಪರಾಧಂ ತು ದರ್ಶನಂ ನಿತ್ಯತೋಕ್ತಿತಃ' ಇತ್ಯಾದಿಗಳಲ್ಲಿ ಇದರ ಪ್ರಭಾವವನ್ನು ನೋಡಬಹುದು.

ಈ ವಿಷಯಗಳನ್ನು 'ತತ್ತ್ವಮುಕ್ತಾಕಲಾಪ' ಎಂಬ ಗ್ರಂಥದ 'ಸರ್ವಾಂಕಷಾ' ಎಂಬ ವ್ಯಾಖ್ಯಾನದ ಟೀಕೆಯಾದ 'ಸತ್ಯಾನ್ವೇಷಣೆ'ಯಲ್ಲಿ ಪ್ರತಿಪಾದಿಸಲಾಗಿದೆ.

ಬೌದ್ಧರು ಕೇವಲ ಯುಕ್ತಿವಾದಿಗಳಾದ ಕಾರಣ, ಅಧ್ಯಾಸಭಾಷ್ಯದಲ್ಲೂ ಒಂದು ಶ್ರುತಿಯನ್ನೂ ಉದಾಹರಿಸದೇ, ಕೇವಲ ಯುಕ್ತಿವಾದವನ್ನೇ ಅವರು ಹೂಡಿದರು. ಇಲ್ಲದಿದ್ದಲ್ಲಿ ವೇದವಿರೋಧಿಗಳಾದ ಬೌದ್ಧ-ಜೈನರ ಆಭಿಮುಖ್ಯವನ್ನು ನಿರೀಕ್ಷಿಸಲಾಗದು. ಅವರಿಗೆ ನೇರವಾಗಿ ತತ್ತ್ವವನ್ನು ಪ್ರತಿಪಾದಿಸಿದ್ದರೆ, ಖಂಡಿತವಾಗಿ ಶ್ರೀಶಂಕರರ ಹತ್ಯೆಯೇ ಆಗುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ ಎಂಬುದು ಆ ಕಾಲದ ದಕ್ಷಿಣದೇಶದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಮನದಟ್ಟಾಗುವುದು. ಹೀಗೆ ಪರಮ ವೈದಿಕರಾದ ಶ್ರೀಶಂಕರರು, ತನ್ನ ನಿಜ ಅಭಿಪ್ರಾಯವನ್ನು ಸೂಚಿಸಿದರೂ, ವಾದಗ್ರಂಥಗಳಲ್ಲಿ ತನ್ನ ನಿಜಸ್ವರೂಪವನ್ನು ಪ್ರಕಾಶಪಡಿಸದೇ, ಚಾಣಾಕ್ಷತೆಯಿಂದ ವರ್ತಿಸಿ ವೈದಿಕ ಸಂಸ್ಕೃತಿಗೆ ಒಂದು ತಿರುವನ್ನು (Turning-point) ಕೊಟ್ಟಿದ್ದರಿಂದಲೇ ಭಾರತದೇಶದ ಸಂಸ್ಕೃತಿಯು ಉಳಿಯಿತು. ಇದು ಮುಂದೆ ಬಂದವರಿಗೆ ಎಷ್ಟು ಅನುಕೂಲವಾಯಿತೆಂಬುದು ಚರಿತ್ರೆಯಿಂದ ಸಿದ್ಧವಿಷಯವಾಗಿದೆ. ಶ್ರೀಶಂಕರರು ರಾಜಾಶ್ರಯವನ್ನು ಪಡೆಯದೇ ಬಹಿರಂಗವಾಗಿ (public) ಬರದೆ ಹೋದದ್ದರಿಂದಲೇ ಅವರ ವಿಷಯದಲ್ಲಿ ಒಂದು ಶಾಸನವೂ ಬರಲು ಅವಕಾಶವಾಗಲಿಲ್ಲ.

ವೇದವಿರೋಧಿಗಳೂ, ನಿರೀಶ್ವರವಾದಿಗಳೂ ಆಗಿದ್ದ ಜೈನ-ಬೌದ್ಧರು ಅನೇಕ ಸಿದ್ಧಿಗಳಿಂದ ಕೂಡಿದ್ದು ರಾಜಾಧಿರಾಜರನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದ ವಿಷಯ ಶೈವ ಪುರಾತನರು ಮತ್ತು ವೈಷ್ಣವ ಆಳ್ವಾರುಗಳ ಚರಿತ್ರೆಯಲ್ಲೂ ಕಂಡುಬರುತ್ತದೆ. ವಿಶೇಷವಾಗಿ 7ನೇ ಶತಮಾನದ ಉತ್ತರ ಭಾಗದಲ್ಲಿ ಶ್ರೀ ಜ್ಞಾನಸಂಬಂಧ ಸ್ವಾಮಿಗಳು ದೇವರ ಆಜ್ಞೆಯಿಂದ ಜನಸಾಮಾನ್ಯರಲ್ಲಿ ಭಕ್ತಿಮಾರ್ಗವನ್ನು ರೂಢಿಗೊಳಿಸಿದ ವಿಷಯವನ್ನು ಶ್ರೀಮದಾಚಾರ್ಯರೇ ಸೌಂದರ್ಯಲಹರಿಯಲ್ಲಿ (ಶ್ಲೋ.75) ಬಣ್ಣಿಸಿದ್ದಾರೆ. ಹೀಗೆ ಶೈವ-ವೈಷ್ಣವರಿಗೂ, ಜೈನ-ಬೌದ್ಧರಿಗೂ ಸೌಹಾರ್ದವು ಶ್ರೀಜ್ಞಾನಸಂಬಂಧ ಸ್ವಾಮಿಗಳಿಂದ ಉಂಟಾಯಿತು. ಸಾಮಾನ್ಯ ಜನರು ಅಥವಾ ಸಮಾಜವು ಸುಧಾರಿಸಿತಾದರೂ ಕಟ್ಟಾ ಪಂಡಿತರ ಮಟ್ಟದಲ್ಲಿ ಘರ್ಷಣೆ ಶಾಂತವಾಗಲಿಲ್ಲ. ಇದು ಶ್ರೀಶಂಕರಾಚಾರ್ಯರ ಸಾಹಸದಿಂದಲೇ ಸ್ವಲ್ಪ ಶಾಂತವಾಯಿತು.

ಶ್ರೀಶಂಕರಾಚಾರ್ಯರ ಕೊಡುಗೆ

ವೈದಿಕರಿಗೂ ಮತ್ತು ವೇದಬಾಹ್ಯರಿಗೂ ಇದ್ದ ಅಂತರಾಳವನ್ನು ಕಡಿಮೆ ಮಾಡಲು ಶ್ರೀ ಆಚಾರ್ಯರು ಬಹುವಾಗಿ ಪ್ರಯತ್ನಿಸಿದರು. ವೈಭಾಷಿಕರು, ಸೌತ್ರಾಂತಿಕರು, ಯೋಗಾಚಾರರು, ಮಾಧ್ಯಮಿಕರು ಎಂದು ಬೌದ್ಧರು ನಾಲ್ಕು ವಿಧವಿರುವರು. ಮೊದಲೆರಡು ಪಂಗಡ ತಂತ್ರಪ್ರಧಾನ, ಕೊನೆಯ ಎರಡು ಪಂಗಡ ಜ್ಞಾನಪ್ರಧಾನ. ಜ್ಞಾನವೇ ಜೀವನದ ಪರಮಗುರಿಯಾದ್ದರಿಂದ ಯೋಗಾಚಾರ ಮತ್ತು ಮಾಧ್ಯಮಿಕರು ಮಹಾಯಾನದವರೆಂದು ಪ್ರಸಿದ್ಧರಾದರು. ವೈಭಾಷಿಕ ಮತ್ತು ಸೌತ್ರಾಂತಿಕರು ತಂತ್ರ ಪ್ರಧಾನರಾದ ಕಾರಣ ಹೀನಯಾನದವರೆಂದೆನಿಸಿಕೊಂಡರು. ಇದು ನಮ್ಮ ಆಚಾರ ಪ್ರಧಾನರಾದ ವೈದಿಕರು ಮತ್ತು ಜ್ಞಾನಪ್ರಧಾನರಾದ ಪಂಡಿತರ ವಿಭಾಗದಂತೆ ಎಂದು ಭಾವಿಸಬಹುದು. ನಾಲ್ಕು ವಿಧ ಬೌದ್ಧರೆಲ್ಲರೂ ನಿರ್ವಿಶೇಷವಾದಿಗಳೇ ಆಗಿರುವರು. ಶ್ರೀಶಂಕರರು ಪ್ರಬಲರಾದ ಮಹಾಯಾನದ ಪಕ್ಷದೊಂದಿಗೆ ವೇದಾಂತಿಗಳ ಸಂಧಾನಕ್ಕಾಗಿ ತಮ್ಮ ಅಪೂರ್ವ ಪ್ರತಿಭೆ ಮತ್ತು ಪಾಂಡಿತ್ಯದಿಂದ, 'ವೇದಾಂತಪ್ರತಿಪಾದ್ಯವಾದ ಬ್ರಹ್ಮವು ನಿರ್ವಿಶೇಷವೇ' ಎಂದು ಪ್ರತಿಪಾದಿಸಿದರು. ಭಕ್ತಿಮಾರ್ಗವು ಪೂಜಾ-ಪುರಸ್ಕಾರಾದಿಗಳಿಂದ ಕೂಡಿದ್ದಾದ್ದರಿಂದ ಅದು ಹೀನಯಾನಕ್ಕೆ ಸಮಾನವಾದದ್ದು. ಜ್ಞಾನಮಾರ್ಗವಂತು ಮಹಾಯಾನ ಸದೃಶ. ಹೀಗೆ ಅವರು ಪ್ರತಿಪಾದಿಸಿದ್ದರಿಂದ ಬೌದ್ಧರು ಸ್ವಲ್ಪಮಟ್ಟಿಗೆ ಸಮಾಧಾನಗೊಂಡರು.

ಈ ಸಂಧಿಕಾಲದಲ್ಲಿ ಬ್ರಹ್ಮಸೂತ್ರಭಾಷ್ಯದ ರಚನೆಯಾದ್ದರಿಂದಲೇ 'ಅಧ್ಯಾಸಭಾಷ್ಯ'ದ ಆವಶ್ಯಕತೆ ಅನಿವಾರ್ಯವಾಯಿತು. ಆದ್ದರಿಂದಲೇ ಅದರಲ್ಲಿ ಒಂದು ಶ್ರುತಿಯನ್ನೂ ಪ್ರಮಾಣಿಸಲಿಲ್ಲ.

ಈ ದೃಷ್ಟಿಯಿಂದಲೇ, ಶ್ರೀಶಂಕರರಿಗೆ ಸ್ವಲ್ಪವೇ ಸಮನಂತರ ಕಾಲದಲ್ಲಿ ಬಂದ ಪರಮ ವೈದಿಕರಾದ ಭಾಸ್ಕರಾಚಾರ್ಯರು, ಶ್ರೀಶಂಕರರ ಅಂತರಂಗದ ಅಭಿಪ್ರಾಯವು ಗೊತ್ತಾಗದ ಕಾರಣ ಅವರ ಪಕ್ಷವನ್ನು 'ಮಾಹಾಯಾನಿಕ' ಎಂದೇ ಹೇಳಿರುವರು. ಇದನ್ನು ಭಾಸ್ಕರಭಾಷ್ಯದ ಪೀಠಿಕೆಯಲ್ಲೇ ನೋಡಬಹುದು. ಆದರೆ, ಶ್ರೀಶಂಕರರ ಶಿಷ್ಯರು ಪೂರ್ವವಾಸನೆಯಿಂದ ಭಾಸ್ಕರರ ವಾದವನ್ನು ಸಹಿಸದೆ, ಬೌದ್ಧರ ಕಡೆಗೇ ಹೆಚ್ಚಾಗಿ ವಾಲಿದಂತೆ ಆದರು. ಈ ಸಮಯದಲ್ಲೇ 'ನೈಷ್ಕರ್ಮ್ಯಸಿದ್ಧಿ' ಮುಂತಾದ ಗ್ರಂಥಗಳ ರಚನೆಯಾಯಿತು. ಇದನ್ನೆಲ್ಲಾ 'ಸರ್ವಂಕಷಾ' ವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.

ಬೌದ್ಧರ ಮತ್ತು ವೈದಿಕರ ಮಾರ್ಗಗಳ ಸ್ವರೂಪವನ್ನು ಕುರಿತು ಹೇಳಬೇಕಾದರೆ, ಒಂದು ದೊಡ್ಡ ಗ್ರಂಥವೇ ಆಗಬೇಕಾಗುತ್ತದೆ. ಸಾರವಾಗಿ ಹೇಳುವುದಾದರೆ,

ಹಂತ! ಬ್ರಹ್ಮಪದೇಶೋಽಯಂ ಶ್ರದ್ಧಧಾನೇಷು ಶೋಭತೇ ।
ವಯಮಶ್ರದ್ಧಧಾನಾಃ ಸ್ಮಃ ಯೇ ಯುಕ್ತಿಂ ಪ್ರಾರ್ಥಯಾಮಹೇ ॥

ಎಂಬುದೇ ಆಗಿದೆ. ಶ್ರದ್ಧಾಭಕ್ತ್ಯಾದಿಗಳು ವೈದಿಕರ ಪ್ರಾಣವಾದರೆ, ಬೌದ್ಧರಿಗೆ ತರ್ಕವೇ ಪ್ರಾಣವಾಗಿದೆ. ವೈದಿಕರಿಗೆ 'ತರ್ಕ'ಪ್ರಮಾಣಕ್ಕೆ ಸಹಕಾರಿಯೇ ಹೊರತು ಪ್ರಮಾಣವಲ್ಲ. ಬೌದ್ಧರಿಗೆ ತರ್ಕವೇ ಪರಮಪ್ರಮಾಣ. ಏಕೆಂದರೆ ಪ್ರತ್ಯಕ್ಷವೂ ಸಮಯದಲ್ಲಿ ಸುಳ್ಳಾಗುತ್ತದೆ. ತರ್ಕ ಹಾಗಲ್ಲ ಎಂಬುದು ಬೌದ್ಧರ ನಿಲುವು. ಐಂದ್ರಿಯಿಕವಿಷಯಗಳಲ್ಲಿ ತರ್ಕ ಸ್ವಲ್ಪ ಸಹಕರಿಸಬಹುದಾದರೂ ಅತೀಂದ್ರಿಯ ವಿಷಯಗಳಲ್ಲಿ ತರ್ಕ ನಿರ್ವೀರ್ಯವಾಗುತ್ತದೆ. ಆದ್ದರಿಂದಲೇ 'ತರ್ಕಾಪ್ರತಿಷ್ಠಾನಾತ್' (ಬ್ರ.ಸೂ.2–1–11) ಎಂದೇ ಘೋಷಿಸಬೇಕಾಯಿತು. ಆದ್ದರಿಂದ ಬ್ರಹ್ಮವು ವೇದೈಕಗಮ್ಯವೆಂಬುದೇ ವೈದಿಕರ ಎಲ್ಲರ ನಿಲುವಾಗಿದೆ. ಆ ಬ್ರಹ್ಮವನ್ನೂ ಎರಡು ಮಾಡಿಬಿಟ್ಟರೆ, ಯಾವುದು ಅದರಲ್ಲಿ ವೇದೈಕಗಮ್ಯ?

ವಸ್ತುಸ್ಥಿತಿ

ವಾಸ್ತವವಾಗಿ ನೋಡುವ ಪಕ್ಷದಲ್ಲಿ 'ತದ್ಧ ಇದಂ ತರ್ಹ್ಯವ್ಯಾಕೃತಮಾಸೀತ್, ತನ್ನಾಮರೂಪಾಭ್ಯಾಂ ವ್ಯಾಕ್ರಿಯತ' (ಬೃ.ಉ.33–4–7) 'ಅಸದ್ವಾ ಇದಮಗ್ರ ಆಸೀತ್, ತತೋ ವೈ ಸದಜಾಯತ. ತದಾತ್ಮಾನಂ ಸ್ವಯಮಕುರುತ' (ತೈ. ಆನಂದ.7) 'ಸದೇವ ಸೌಮ್ಯ ! ಇದಮಗ್ರ ಆಸೀತ್ ಏಕಮೇವಾದ್ವಿತೀಯಂ...... ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' (ಛಾಂ.ಉ.6–2–1) ಇತ್ಯಾದಿಗಳಲ್ಲಿ ನಿರ್ವಿಶೇಷ ಮತ್ತು ಸವಿಶೇಷ ಎಂಬ ಎರಡೂ ಒಂದೇ ತತ್ತ್ವವೇ ಎಂಬುದು ಸ್ಪಷ್ಟವಾಗಿದೆ. ಆಚಾರ್ಯರ ಭಾಷ್ಯವೂ 'ದ್ವಿರೂಪಂ ಹಿ ಬ್ರಹ್ಮಾವಗಮ್ಯತೇ' ಎಂದೇ ಇರುವುದು. ಅದು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಉತ್ತರವನ್ನು ವೇದದಿಂದಲೇ ಪಡೆಯಬೇಕೆ ಹೊರತು, ತರ್ಕದಿಂದಲ್ಲ. ಇದು ಬ್ರಹ್ಮಸೂತ್ರಗಳಲ್ಲಿ ಸ್ಪಷ್ಟವಾಗಿದೆ. ವಿಶೇಷವಾಗಿ ಎರಡನೆಯ ಅಧ್ಯಾಯದ ಮೊದಲನೆಯ ಪಾದ ಮತ್ತು 'ಕೃತ್ಸ್ನಪ್ರಸಕ್ತ್ಯಧಿಕರಣ' (ಬ್ರ.ಸೂ.2–1–26) ಇದಕ್ಕಾಗಿಯೇ ಬಂದಿದೆ ಎಂಬುದು ಸರ್ವಸಮ್ಮತವಾದ ವಿಷಯ. 'ನೈಷಾ ತರ್ಕೇಣ ಮತಿರಾಪನೇಯಾ'(ಕಠ.2–9). 'ಅಣೀಯಾನ್ ಹ್ಯತರ್ಕ್ಯಮ್'(ಕಠ.2–8) ಇತ್ಯಾದಿ ಶ್ರುತಿಗಳೂ ಇದನ್ನು ಹೇಳುತ್ತವೆ.

ಬ್ರಹ್ಮಸೂತ್ರಗಳ ರಚನೆಯೇ ಇದಕ್ಕಾಗಿಯೇ ಆಗಿದೆ ಎಂಬುದೇ ಸತ್ಯಾಂಶ. 'ತರ್ಕಾಪ್ರತಿಷ್ಠಾನಾದಪಿ' (ಬ್ರ.ಸೂ.2-1-11) 'ಸರ್ವೋಪೇತಾ ಚ ತದ್ದರ್ಶನಾತ್' 'ಸರ್ವಧರ್ಮೋಪಪತ್ತೇಶ್ಚ' (ಬ್ರ.ಸೂ.2-1-36, 37) ಇತ್ಯಾದಿಗಳಲ್ಲಿ ಇದನ್ನು ನೋಡಬಹುದು. ಹೀಗಿರುವಾಗ ಬ್ರಹ್ಮಸೂತ್ರಗಳನ್ನೇ ಹೇಗಾದರೂ ಹೊಂದಿಸಿಕೊಳ್ಳಬೇಕೆಂಬ ವಾದ ಮೀಮಾಂಸಾಶಾಸ್ತ್ರಕ್ಕೆ ವಿರುದ್ಧವಾದುದು, ಮತ್ತು ಅನ್ಯೋನ್ಯಾಶ್ರಯದಲ್ಲಿ ಕೊನೆಗೊಳ್ಳುವುದು. ಮಹಾಮೇಧಾವಿಗಳಾದ ಶ್ರೀಶಂಕರಾಚಾರ್ಯರಿಗೆ ಇದು ಗೊತ್ತಾಗದಿರಲು ಸಾಧ್ಯವಿಲ್ಲ. ಮಧ್ಯಸ್ಥರೆಲ್ಲರೂ 'ಬ್ರಹ್ಮಸೂತ್ರಗಳು ಈಗಿನ ಅದ್ವೈತಪಂಡಿತರ ನಿರ್ವಿಶೇಷವಾದಕ್ಕೆ ಅವಕಾಶ ಕೊಡುವುದೇ ಇಲ್ಲ'ವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

'ಜನ್ಮಾದ್ಯಸ್ಯ ಯತಃ' ಇತ್ಯಾದಿಯಾಗಿ ಜಗತ್ಕಾರಣತ್ವವನ್ನೇ ಬ್ರಹ್ಮದ ಲಕ್ಷಣವಾಗಿ ಹೇಳಿರುವಾಗ, ಅದು ಬ್ರಹ್ಮದ ಲಕ್ಷಣವೇ ಅಲ್ಲವೆಂದು ವಾದಿಸುವುದೂ ಸಮಂಜಸದಂತೆ ಕಾಣುವುದಿಲ್ಲ. ಮುಂದೆ 'ಪರಮತಸ್ಸೇತೂನ್ಮಾನ' (ಬ್ರ.ಸೂ.3-2-21) ಇತ್ಯಾದಿಗಳಲ್ಲಿ 'ಇಲ್ಲಿಯವರೆಗೆ ಪ್ರತಿಪಾದಿತವಾದ ಜಗತ್ತಿಗೆ ಕಾರಣವಾದ ಬ್ರಹ್ಮಕ್ಕಿಂತಲೂ ಬೇರೆ ತತ್ತ್ವವಿರುವುದಿಲ್ಲ' ಎಂದು ಪ್ರತಿಪಾದಿಸಿರುವಾಗ ಬ್ರಹ್ಮವು ಎರಡು ವಿಧವೆಂದು ಹೇಳಲು ಔಚಿತ್ಯವಿರುವುದೇ ಇಲ್ಲ. 'ಯಚ್ಚೇಹಾಸ್ತಿ ಯಚ್ಚ ನಾಸ್ತಿ ಸರ್ವಂ ಸದಸ್ಮಿನ್ ಸಮಾಹಿತಂ' (ಛಾಂ.ಉ.8-1-3) ಎಂದಿರುವ ಬ್ರಹ್ಮವು ನಿರ್ವಿಶೇಷವಾಗಲು ಹೇಗೆ ಸಾಧ್ಯ? ಇವೆಲ್ಲವೂ ನಿರ್ವಿಶೇಷವಾದಿಗಳಾದ ಬೌದ್ಧರನ್ನು ಸಂತೈಸುವುದಕ್ಕಾಗಿಯೇ ಎಂಬುದು ಸ್ಪಷ್ಟ. ಪರಕಾಲ ಮಠಾಧೀಶರಾಗಿದ್ದ ಸ್ವಾಮಿಗಳು 'ಗೂಢಾರ್ಥಸಂಗ್ರಹ'ವೆಂಬ ವಿಪುಲವಾದ ಶ್ರೀಭಾಷ್ಯವ್ಯಾಖ್ಯಾನದಲ್ಲಿ 'ಬ್ರಹ್ಮ ಎರಡು ವಿಧ' ಎಂಬ ವಾದಕ್ಕೆ ಅವಕಾಶವೇ ಇಲ್ಲವೆಂಬುದನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಶ್ರೀಶಂಕರರ ಧರ್ಮಸಂಕಟ

ಶ್ರೀಶಂಕರರ ಭಾಷ್ಯದಲ್ಲಿ ಅವಚ್ಛೇದವಾದ ಮತ್ತು ಪ್ರತಿಬಿಂಬವಾದಗಳಿಗೆ ಅವಕಾಶವಿರುವಂತೆಯೇ, ಸವಿಶೇಷ-ನಿರ್ವಿಶೇಷವಾದಗಳಿಗೂ ಅವಕಾಶ-ವಿರುವುದನ್ನು ನೋಡಬಹುದು. ಮಹಾಜ್ಞಾನಿಗಳನ್ನು ಬಿಟ್ಟರೆ, ಎಂತಹ ವಿದ್ವಾಂಸರೇ ಆಗಲಿ ಪೂರ್ವಾಗ್ರಹವಿಲ್ಲದಿರಲು ಬಹಳ ಕಷ್ಟವಾದ ವಿಷಯ. ಜೈನ ಅಥವಾ ಬೌದ್ಧ ವಿದ್ವಾಂಸರುಗಳು ಸಹ ಹೊರದೇಶದವರಲ್ಲವಲ್ಲ! ಇಲ್ಲಿರುವ ಜನರೇ ಬೌದ್ಧರಾಗುತ್ತಾರೆ, ಅಥವಾ ಜೈನರಾಗುತ್ತಾರೆ. ಸಮಯದಲ್ಲಿ

ಮತ್ತೆ ತಮ್ಮ ಮೂಲ ವೈದಿಕಧರ್ಮಕ್ಕೆ ತಿರುಗುತ್ತಾರೆ, ಒಟ್ಟಿನಲ್ಲಿ 'ಕಾಲಾಯ ತಸ್ಮೈ ನಮಃ'!

ಇಂತಹ ಸನ್ನಿವೇಶದಲ್ಲೇ

ವೇದೋಽನೃತೋ ಬುದ್ಧಕೃದಾಗಮೋಽನೃತೋ
ಪ್ರಾಮಾಣ್ಯಮೇತಸ್ಯ ಚ ತಸ್ಯ ಚಾನೃತಮ್ ।
ಬೋದ್ಧಾನೃತೋ ಬೋದ್ಧೃಫಲೇ ತಥಾನೃತೇ
ಯೂಯಂ ಚ ಬೌದ್ಧಾಶ್ಚ ಸಮಾನಸಂಪದಃ॥

ಎಂಬ ಯಾದವಪ್ರಕಾಶರ ಶ್ಲೋಕವೂ,

ಸೂತ್ರಾಭಿಪ್ರಾಯಸಂವೃತ್ತ್ಯಾ ಸ್ವಾಭಿಪ್ರಾಯನಿವೇದನಾತ್ ।
ವ್ಯಾಖ್ಯಾತಂ ಯೈರಿದಂ ಶಾಸ್ತ್ರಂ ವ್ಯಾಖ್ಯೇಯಂ ತನ್ನಿವೃತ್ತಯೇ ॥

ಇತ್ಯಾದಿ ಭಾಸ್ಕರರ ಶ್ಲೋಕವೂ ಹುಟ್ಟಿಕೊಳ್ಳುವುದು ಸಹಜವೇ ಆಗಿದೆ.

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ವಾದದಲ್ಲಿ, ಬ್ರಹ್ಮ ಭಿನ್ನವಾದ ವೇದವೂ, ಅದರ ಪ್ರಾಮಾಣ್ಯವೂ, ರಾಮಕೃಷ್ಣಾದ್ಯವತಾರಗಳೂ, ಭಗವದ್ಗೀತಾದಿ ಧರ್ಮಗ್ರಂಥಗಳೂ, ಎಲ್ಲಾ ತರಹದ ವೇದವಿಹಿತ ಕರ್ಮಗಳೂ ಎಲ್ಲವೂ ಸಂಪೂರ್ಣ ಮಿಥ್ಯೆಯೇ ಎಂದರೆ, ಯಾವ ಭಾರತೀಯನು ಸಹಿಸಿಯಾನು! ಕಟ್ಟಾ ಅದ್ವೈತಿಗಳಂತು ಈಗಲೂ 'ದ್ವೈತಿಗಳಿಗೆ ಭೇದವಾಸನೆ ದೃಢವಾಗಿರುವುದರಿಂದ ಸತ್ಯ ಹೊಳೆಯುತ್ತಿಲ್ಲ. ಪೂರ್ಣಬ್ರಹ್ಮಜ್ಞಾನಿಯ ದೃಷ್ಟಿಯಿಂದಂತು ಎಲ್ಲವೂ ಮಿಥ್ಯೆಯೇ. ಸಂದೇಹವೇನು? ಬ್ರಹ್ಮ ಒಂದೇ ಸತ್ಯ' ಎಂದು ಘೋಷಿಸಿಯೇ ಘೋಷಿಸುತ್ತಾರೆ. ಆದ್ದರಿಂದ ಸತ್ಯವನ್ನರಿಯಲು ಮಧ್ಯಸ್ಥ ದೃಷ್ಟಿಯಿಂದ ವಿಷಯವನ್ನು ನಿರ್ಣಯಿಸಬೇಕಾದರೆ, ಮೊದಲು ನಾವು ಪೂರ್ವಮಾನಾಭಿಮಾನಗಳನ್ನು ಸ್ವಲ್ಪ ಹೊತ್ತಿಗಾದರೂ, ಒಂದು ಮೂಲೆಯಲ್ಲಿ ಬದಿಗಿಟ್ಟು, ಅಂತರ್ಯಾಮಿಯನ್ನು ಸಾಕ್ಷಿಯಾಗಿಟ್ಟು, ಶಾಂತವಾಗಿ ಚಿಂತಿಸಬೇಕು. ಉಳಿದ ವಿಷಯಗಳನ್ನು ಹಿಂದೆಯೇ ಹೇಳಿಯಾಗಿದೆ.

ಮೊದಲು 'ದ್ವೈತಿಗಳಿಗೆ ಭೇದವಾಸನೆಯೇ ಅಭೇದನಿಷ್ಠೆಯಕ್ಕೆ ಪ್ರತಿಬಂಧಕವಾಗಿದೆ' ಎಂಬ ವಾದವನ್ನು ನೋಡೋಣ. ಸೃಷ್ಟಿಯ ಪ್ರಾರಂಭದಿಂದಲೇ ಭೇದ ಅನುವೃತ್ತಿಯಾಗುತ್ತಿರುವುದರಿಂದ, ಭೇದವಾಸನೆ ದೃಢವಾಗಿರುವುದು ಸಹಜವೇ. ಹೌದು. ಆದರೆ ಅಭೇದದ ಅನುಭವ

ಒಂದೆಂದೂ ಇಲ್ಲದಿದ್ದರೂ ಅಭೇದವಾಸನೆ ಬರಲು ಹೇಗೆ ಸಾಧ್ಯ? ಕೊನೆಯ ಗಳಿಗೆಯ ತನಕವೂ ಭೇದಾನುಭವ ಅನಿವಾರ್ಯವೇ ಅಲ್ಲವೆ? ಆದ್ದರಿಂದ ಭೇದವಾಸನೆಯೂ ಅನಿವಾರ್ಯವೆ ಆಗಿದೆ. ಅಭೇದವಾಸನೆ ಅದ್ವೈತಪಂಡಿತರಿಗೆ ಬರಲು ಹೇಗೆ ಸಾಧ್ಯ? ಶ್ರುತಿವಾಕ್ಯದಿಂದಲೋ; ಗುರೂಪದೇಶದಿಂದಲೋ ಬರುವ ಜ್ಞಾನ ಅತ್ಯಂತ ಪರೋಕ್ಷವಾಗುವುದರಿಂದ 'ಅಭೇದವಾಸನೆ' ಹುಟ್ಟಲು ಹೇಗೆ ಸಾಧ್ಯ? ವಾಸನೆಗೆ ಕಾರಣ ದೃಢವಾದ ಅನುಭವವಲ್ಲವೆ? ಅಂತಹ ಅನುಭವ ಈ ಲೋಕದಲ್ಲೇ ಎಂದೆಂದೂ ಸಾಧ್ಯವೇ ಇಲ್ಲ. ಆದ್ದರಿಂದ, ಎಂದೂ ಅಭೇದವಾಸನೆ ಬರಲೂ ಮತ್ತು ಪ್ರಬಲವಾಗಲೂ ಸಾಧ್ಯವೇ ಇಲ್ಲ.

ಸವಿಶೇಷಾದ್ವೈತಿಗಳಿಗೂ ಸಹ ಭೇದಾನುಭವ ಅನಾದಿಯಾಗಿರುವುದರಿಂದ ಕೊನೆಯಲ್ಲಾದರು ಅದ್ವೈತ ಹೇಗೆ ಸಾಧ್ಯ? ಎಂದರೆ, ಸವಿಶೇಷಾದ್ವೈತವನ್ನು ಪ್ರತಿಪಾದಿಸುವ ವೇದಾಂತಶಾಸ್ತ್ರದಲ್ಲಿ 'ಫಲಮತ ಉಪಪತ್ತೇಃ' (3-2-32) 'ಹಾರ್ದಾನುಗೃಹೀತಃ' (4-2-11) ಎಂದು ಐಕ್ಯವು ಪರಮಾತ್ಮನ ಅನುಗ್ರಹದಿಂದಲೇ ಆಗುವುದೆಂಬುದೇ ವೈದಿಕರ ನಿಲುವಾಗಿದೆ. 'ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ' (ಋಗ್ವೇದ, 7-59-12; ತೈ.ಸಂ.1-8-6) ಎಂಬಲ್ಲಿ ಹೇಳಿರುವಂತೆ ಐಕ್ಯವು ಕೊನೆಯಲ್ಲಿ ಸಹಜವಾಗಿ ಬರುವುದು. ಈವಾಗ ಅದರ ಚಿಂತೆಯ ಅಗತ್ಯವಿಲ್ಲ.

ಶ್ರುತಿಯೇ ಮಿಥ್ಯೆ ಎಂದರೆ, ವೈದಿಕರಿಗೆ ಅವನು ಪಾಷಂಡಿಯೇ ಆಗುವ ಕಾರಣ, ಅಸತ್ಯದಿಂದ ಸತ್ಯಸಿದ್ಧಿಯ ವಾದವೂ ತರ್ಕಮಾತ್ರವೇ ಆಗಬೇಕಾಗುತ್ತದೆ. ಅಭೇದವು ಪಾರಮಾರ್ಥಿಕವಾದರೂ ಅದು ತಾನಾಗಿಯೇ ಎಂದೋ ಒಂದು ದಿನ ಆಗಬಹುದೇ ಹೊರತು, ಅದು ಮಾನವನ ಬುದ್ಧಿ ಮತ್ತು ಪ್ರಯತ್ನಾದಿಗಳಿಂದ ಸಾಧ್ಯವೇ ಇಲ್ಲ. ಆದ್ದರಿಂದ ಅಭೇದಕ್ಕಾಗಿ ಸಾಧನೆಯೇ ಸಿದ್ಧಿಸುವಂತಿಲ್ಲ. ಈ ಗಹನವಾದ ಸತ್ಯ ದೃಷ್ಟಿಯಿಂದಲೇ ದಾರಿದೀಪವಾಗಿ –

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ॥

ಎಂಬ ವಿಷಯ ಬಂದಿದೆ. ಸಾಧನೆಯಲ್ಲಿ ಭೇದವು ಅನಿವಾರ್ಯವಾಗುವುದರಿಂದ, ಭೇದಭಾವನೆಯಿಂದ ಅಹಂಕಾರವು ದೃಢವಾಗುವ ಕಾರಣ, ಸಾಧನೆಯಲ್ಲಿರುವ ಈ ರಹಸ್ಯವನ್ನರಿಯಬೇಕಾದರೆ, 'ಮಾ ಕರ್ಮಫಲಹೇತುರ್ಭೂಃ' ಎಂಬ ಒಗಟನ್ನು ಬಿಡಿಸಬೇಕಾಗುತ್ತದೆ. 'ನೀನು

ನಿನ್ನ ಹಂತದಲ್ಲಿ ಪ್ರಾಮಾಣಿಕವಾಗಿರು. ಉಳಿದದ್ದನ್ನು ನಾನು ನೋಡಿಕೊಳ್ಳುವೆನು' ಎಂಬುದೇ ದೈವದ ಸಂದೇಶ. ಕೇವಲ ಬುದ್ಧಿಯ ಬಲದಿಂದ ಏನನ್ನು ಸಾಧಿಸಲಾಗುವುದಿಲ್ಲವೆಂಬ ಕಠಿಯಾದ ಶುದ್ಧ ವೈದಿಕರ ಸತ್ಯವನ್ನೇ 'ಫಲಮತ ಉಪಪತ್ತೇಃ' (3–2–37) 'ಹಾರ್ದಾನುಗೃಹೀತಃ' (4–2–11) ಎಂಬ ಸೂತ್ರಗಳು ತಿಳಿಸುತ್ತವೆ. ವೈದಿಕ ಕರ್ಮಗಳು ಜ್ಞಾನಕ್ಕೆ ವಿರೋಧಿ ಎಂಬುದು ಶುಷ್ಕಬುದ್ಧಿಜೀವಿಗಳ ವಾದವೇ ಆಗಿದೆ. ಅವು ಜ್ಞಾನಕ್ಕೆ ವಿರೋಧಿಯಾದರೆ, ಚಿತ್ತಶುದ್ಧಿಯಾದರೂ ಆ ಕರ್ಮಗಳಿಂದ ಹೇಗೆ ಸಾಧ್ಯ? ಅಷ್ಟು ಮಾತ್ರವಲ್ಲ; ವರ್ಣಾಶ್ರಮಧರ್ಮಗಳೆಲ್ಲವೂ ವೈದಿಕವಾದ್ದರಿಂದ, ಅವೆಲ್ಲವೂ ಜ್ಞಾನಕ್ಕೆ ವಿರೋಧಿಯೇ ಆಗಬೇಕಾಗಿ ಬರುವುದರಿಂದ, ಸನಾತನ ಭಾರತದ ಆರ್ಯರ ಸಂಸ್ಕೃತಿಯೇ ಅರ್ಥಶೂನ್ಯವಾಗಬೇಕಾಗುತ್ತದೆ.

ಎಲ್ಲವೂ ವ್ಯವಹಾರದ ಅವಸ್ಥೆಗೆ ಸೇರುವುದರಿಂದ, ಅವು ಪಾರಮಾರ್ಥಿಕ-ವಾಗಲು ಹೇಗೆ ಸಾಧ್ಯ? ಎಂದರೆ, ಈ ವಾದವು ಮೇಲೆ ಹೇಳಿದ ದೋಷವನ್ನೇ ಮತ್ತಷ್ಟು ದೃಢಗೊಳಿಸುತ್ತದೆ. ಏಕೆಂದರೆ ವ್ಯಾವಹಾರಿಕವೆಂದರೆ ಸುಳ್ಳೆಂದೇ ಅವರು ನಿರ್ಧರಿಸಿರುವರು. ಬ್ರಹ್ಮೋಪದೇಶವೂ ಸುಳ್ಳಾಗುತ್ತದೆ. ಪುಣ್ಯಪಾಪಾದಿಗಳೂ ಸುಳ್ಳಾಗುವುದರಿಂದ ಸ್ವೇಚ್ಛಾಚಾರದಲ್ಲೇ ಕೊನೆಗೊಳ್ಳಬೇಕಾಗುತ್ತದೆ. ಆದ್ದರಿಂದ ಜಗನ್ಮಿಥ್ಯಾತ್ವವಾದವು ಭಗವಂತನ ಸಕಲ ವಿಭೂತಿಗಳನ್ನು ನಿರಾಕರಿಸುವುದರಿಂದ ಅದು ವೈದಿಕರು ಒಪ್ಪುವಂತಹದ್ದೇ ಅಲ್ಲ. ವೈದಿಕಸಂಸ್ಕೃತಿಯನ್ನು ಉಳಿಸುವ ಸಲುವಾಗಿ ಬಂದವರಾದ ಆ ಆಚಾರ್ಯರ ಈ ವಾದ, ವೇದವಿರೋಧಿಗಳಾದ ಜೈನ ಮತ್ತು ಬೌದ್ಧರನ್ನು ತೃಪ್ತಿಪಡಿಸುವುದಕ್ಕಾಗಿಯೇ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವೇ ಇಲ್ಲ.

ಹೀಗೆ ಕಾಲಸನ್ನಿವೇಶಾದಿಗಳಿಂದ, ನಿರ್ವಿಶೇಷವಾದಿಗಳಾದ ಬೌದ್ಧರನ್ನು ತೃಪ್ತಿಪಡಿಸಲೇ, 'ಬ್ರಹ್ಮ ಎರಡು ವಿಧ' ಇತ್ಯಾದಿಗಳನ್ನು ಹೇಳಬೇಕಾದ ನಿರ್ಬಂಧವು ಆಚಾರ್ಯರಿಗೆ ಅನಿವಾರ್ಯವಾಯಿತು. ಬೌದ್ಧರು ಸ್ವಲಕ್ಷಣವಾದಿಗಳಾದ್ದರಿಂದ ನಿರ್ವಿಶೇಷವಾದಿಗಳೆಂಬುದು ಸರ್ವಸಮ್ಮತ. ಆಚಾರ್ಯರ ಅಂತರಂಗವನ್ನು ಅರಿಯಲಾರದೆ ಹೋದದ್ದರಿಂದಲೂ, ಪೂರ್ವವಾಸನೆ ಅತಿ ಪ್ರಬಲವಾದ್ದರಿಂದಲೂ ಅನಂತರ ಬಂದ ಪಂಡಿತರು ಮತ್ತೆ ಬೌದ್ಧರ ಮಾರ್ಗವನ್ನೇ ತುಳಿದದ್ದು ಶೋಚನೀಯವೇ ಸರಿ! ಈ ಅಂಶವನ್ನು, ಕಳೆದ ಶತಮಾನದ ಆದಿಯಲ್ಲಿದ್ದ, ದೊಡ್ಡ (ಮಹಾ) ಅದ್ವೈತ ವಿದ್ವಾಂಸರೂ,

ಮಹಾಮಹೋಪಾಧ್ಯಾಯಾದಿ ಬಿರುದು ಸಂಪನ್ನರೂ ಆಗಿದ್ದ ತಿರುವಿಶನಲ್ಲೂರು ರಾಮಸುಬ್ರಹ್ಮಣ್ಯಶಾಸ್ತ್ರಿಗಳವರು 'ಅಣುಭಾಷ್ಯಗಾಂಭೀರ್ಯಮ್' ಎಂಬ ತಮ್ಮ ಗ್ರಂಥದಲ್ಲಿ ಸ್ಥಾಪಿಸಿರುವುದನ್ನು ನೋಡಬಹುದು.

ಶ್ರೀಭಾಷ್ಯದ ಅವತಾರ

ಹೀಗೆ, ಶ್ರೀಶಂಕರಾಚಾರ್ಯರ ಉದ್ದೇಶವೇ ವಿಫಲವಾಗುವ ಸಂಭವ ಕಂಡುಬಂದಿದ್ದರಿಂದಲೇ ಭಗವದ್ರಾಮಾನುಜರು, ಯಥಾವತ್ತಾದ ಬ್ರಹ್ಮಸೂತ್ರಗಳ ಭಾವವನ್ನು ಪ್ರಕಾಶಪಡಿಸಬೇಕಾದ ನಿರ್ಬಂಧದಿಂದಲೇ, ಎರಡೇ ವಾಕ್ಯಗಳನ್ನು ತಮ್ಮ ಭಾಷ್ಯದ ಪೀಠಿಕೆಯಾಗಿ ಹೇಳಿದರು. ಶ್ರೀಶಂಕರಾಚಾರ್ಯರ ನಿರ್ವಿಶೇಷವಾದ, ಕಾಲಸನ್ನಿವೇಶಾದಿಗಳ ನಿರ್ಬಂಧ ಪ್ರಯುಕ್ತವೇ ಆಗಿದೆ. ಏಕೆಂದರೆ ಪ್ರಾಚೀನ ವೈದಿಕೋತ್ತಮರಾದ ಬೋಧಾಯನಾದಿಗಳ ಸಂಪ್ರದಾಯವೇ ಬ್ರಹ್ಮಸೂತ್ರಕಾರರಾದ ಬಾದರಾಯಣರಿಗೆ ಸಮ್ಮತವಾಗಿರಲು ಸಾಧ್ಯವೆ ಹೊರತು, ಮಧ್ಯಕಾಲದ ಶುಷ್ಕತಾರ್ಕಿಕರಾದ ಬೌದ್ಧರ ವಾದವೇ ಅವರಿಗೆ ಸಮ್ಮತವೆಂಬ ವಾದವು ಪರಮವೈದಿಕರಾದ ಶ್ರೀಶಂಕರರಿಗೆ ಸಮ್ಮತವಾಗಲು ಸಾಧ್ಯವೇ ಇಲ್ಲ ಎಂದು ಪ್ರದರ್ಶನ ಮಾಡುವುದೇ ಶ್ರೀರಾಮಾನುಜರ ಪರಮೋದ್ದೇಶವಾಗಿದೆ. ಶ್ರೀಶಂಕರರ ಹೆಸರನ್ನಾಗಲಿ, ಅವರ ಗ್ರಂಥದ ಹೆಸರನ್ನಾಗಲಿ, ಗ್ರಂಥಗಳ ಪಂಕ್ತಿಗಳ ಉದ್ಧಾರವನ್ನಾಗಲಿ ಎಲ್ಲೂ ಮಾಡಲೇ ಇಲ್ಲ. ಶ್ರೀಶಂಕರಭಾಷ್ಯದ ವ್ಯಾಖ್ಯಾನಕಾರರ ಮತವನ್ನೇ ಭಗವದ್‌ರಾಮಾನುಜರು ವಿಮರ್ಶಿಸಿರುವರು. ನಿರ್ವಿಶೇಷವಾದ ವಸ್ತುವು ಯಾವುದೂ ಇರಲು ಸಾಧ್ಯವಿಲ್ಲದಿರುವಾಗ, ಸರ್ವಜಗತ್ತಿನ ಎಲ್ಲಾ ವಿಧ ಚಲನೆಗಳಿಗೂ ಕಾರಣವಾದ ಬ್ರಹ್ಮವು ನಿರ್ವಿಶೇಷವಾಗಿರಲು ಹೇಗೆ ಸಾಧ್ಯ? ಆ ವಿಶೇಷವು ಕೆಲಸಮಯ ಪ್ರತ್ಯೇಕವಾಗಿ ಎದ್ದು ಕಾಣಬಹುದು. ಕೆಲ ಸಮಯ ಹಾಗೆ ಕಾಣದೇ ಹೋಗಬಹುದು. ಇದಕ್ಕೆ ದೃಷ್ಟಾಂತವು ಆಲಮರದ ಬೀಜವೇ ಆಗಿದೆ.

ಜಗತ್ಕಾರಣ ಸವಿಶೇಷವೇ

ಛಾಂದೋಗ್ಯದ ಆರನೆಯ ಅಧ್ಯಾಯದ ಹನ್ನೆರಡನೆಯ ಖಂಡದಲ್ಲಿ ಒಂದು ಪ್ರತ್ಯಕ್ಷ ಪ್ರಯೋಗವನ್ನೇ ಕೊಡಲಾಗಿದೆ. ಆಚಾರ್ಯರು ಶಿಷ್ಯನಿಗೆ ಆಲದ ಮರದ ಹಣ್ಣನ್ನು ತರಲು ಹೇಳಿ, ಅದರೊಳಗೆ ಸಣ್ಣದಾಗಿರುವ ಬೀಜವನ್ನು ಉಪಾಯವಾಗಿ ಎರಡು ಭಾಗವಾಗಿ ಮಾಡಲು ಹೇಳುತ್ತಾರೆ. ಶಿಷ್ಯನು ಹಾಗೆಯೇ ಮಾಡಿದಾಗ, 'ಅದರೊಳಗೆ ಏನನ್ನು ನೋಡುತ್ತೀಯೆ'? ಎಂದು

ಕೇಳಿದಾಗ 'ಏನನ್ನೂ ನೋಡುತ್ತಿಲ್ಲ' ಎಂದು ಶಿಷ್ಯನು ಉತ್ತರಕೊಡುತ್ತಾನೆ. ಆಚಾರ್ಯರು 'ನೋಡಿದೆಯೇ? ವಿಷಯವು ಎಷ್ಟು ಸೂಕ್ಷ್ಮ? ಬೀಜದೊಳಗೆ ಏನೂ ಇಲ್ಲದಿದ್ದರೆ, ಅದರಿಂದ ಈ ಬೃಹತ್ತಾದ ಆಲದ ಮರ ಹೇಗೆ ಹೊರಬರಲು ಸಾಧ್ಯ! ಬೀಜದೊಳಗೆ ಏನೂ ಇಲ್ಲದಿದ್ದರೆ, ಅಂತಹ ಒಂದು ಸಣ್ಣ ಕಲ್ಲಿನಿಂದಲೂ ಆ ಮರ ಹೊರಬರಬಹುದಲ್ಲವೆ? ಅಷ್ಟು ಮಾತ್ರವಲ್ಲ; ಯಾವ ಬೀಜದಿಂದಲೂ ಯಾವ ಮರಬೇಕಾದರೂ ಬರಬಹುದಲ್ಲವೆ? ಆದ್ದರಿಂದ ಈ ಮಹಾನ್‌ವೃಕ್ಷ ಯಾವುದೋ ಒಂದು ರೀತಿಯಲ್ಲಿ ಬೀಜರೂಪದಲ್ಲಿ ಅತಿ ಸೂಕ್ಷ್ಮವಾಗಿರಲೇಬೇಕಲ್ಲವೆ? ವಿಷಯವು ಎಷ್ಟು ಸೂಕ್ಷ್ಮ ನೋಡು! ಪ್ರತ್ಯಕ್ಷವಾದ ಈ ಪ್ರಪಂಚದಲ್ಲೇ ಇಂತಹ ಸೂಕ್ಷ್ಮ ವಿಷಯವು ಅನುಭವ ಸಿದ್ಧವಾಗಿರುವಾಗ 'ಅಣೋರಣೀಯಾನ್' ಎಂದು ಬಣ್ಣಿಸಲ್ಪಡುವ ಬ್ರಹ್ಮದ ಸೂಕ್ಷ್ಮತೆಯನ್ನು ಹೇಗೆ ಅರಿಯಲು ಸಾಧ್ಯ? ಎಂದು ಹೇಳಿ ಮುಗಿಸುತ್ತಾರೆ.

ಹೀಗೆ ಇಡೀ ವಿಶ್ವಕ್ಕೆ ಮೂಲಕಾರಣವಾದ ಬ್ರಹ್ಮದಲ್ಲಿರುವ ವಿಶೇಷವನ್ನು ಹೇಳಲು ಸಾಧ್ಯವಾಗದಿದ್ದರೂ, ಅದು ಸವಿಶೇಷವೇ. ಲೋಕದಲ್ಲೂ ಶಬ್ದದಿಂದ ಹೇಳಲು ಸಾಧ್ಯವಾಗದಿದ್ದಾಗ 'ವಿಶೇಷ'ಪದವನ್ನೇ ಎಲ್ಲರೂ ಉಪಯೋಗಿಸುವುದನ್ನು ನಾವು ನೋಡಬಹುದು. ಪ್ರಕೃತ ಬ್ರಹ್ಮದಲ್ಲಿರುವ ವಿಶೇಷವನ್ನು ಗುಣ–ವಿಗ್ರಹ–ವಿಭೂತಿಗಳೆಂದು ಶ್ರೀಪರಕಾಲಮಠಾಧೀಶರು ಹೇಳುವರು. ಗುಣಪದದಿಂದ ಅನಂತಾನಂತಕಲ್ಯಾಣಗುಣಗಳೂ, ವಿಗ್ರಹಪದದಿಂದ ಪರಮಾತ್ಮನ ದಿವ್ಯಮಂಗಳ ಮೂರ್ತಿಗಳೂ, ವಿಭೂತಿಪದದಿಂದ ನಿತ್ಯವಿಭೂತಿ ಮತ್ತು ಲೀಲಾವಿಭೂತಿಗಳೂ ಸಿದ್ಧವಾಗುತ್ತವೆ. ವಿಭೂತಿಯೆಂಬುದರಲ್ಲೇ ಚೇತನಾಚೇತನರು ಸೇರಿರುವರು.

'ಬ್ರಹ್ಮ ಎರಡು ವಿಧ' ಎಂಬ ವಾದವೂ ಬೌದ್ಧರಿಗಾಗಿಯೇ ಬಂದಿರುವುದು. ಏಕೆಂದರೆ, 'ಬ್ರಹ್ಮವು ಒಂದೂ ಆಗಬಹುದು ಎಂಬುದೇ ವಸ್ತುಸ್ಥಿತಿಯಾಗಿದೆ. 'ಏಕಮೇವಾದ್ವಿತೀಯಂ' ಎಂಬ ವಾಕ್ಯದ ಸಮನಂತರವೇ 'ತದೈಕ್ಷತ ಬಹು ಸ್ಯಾಮ್' ಎಂದಿರುವುದನ್ನೂ ನೋಡಬಹುದು. 'ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ । ಅಚಿಂತ್ಯಂ ಬ್ರಹ್ಮಣೋ ರೂಪಂ ಕಸ್ತದ್ವೇದಿತುಮರ್ಹತಿ'॥ ಫೇನ–ನೊರೆ. ಬುದ್ಬುದ–ನೀರ್ಗುಳ್ಳೆ. ತರಂಗ–ಅಲೆಗಳು; ಹೀಗೆ ಅರ್ಭಟಿಸುವ ಸಾಗರದ ಶಾಂತತೆಯನ್ನು ನೋಡಬೇಕಾದರೆ. ವಾಯುವಿನ ವೇಗವಿಲ್ಲದ ಶಾಂತಸಾಗರದತ್ತ ಹೋಗಬೇಕು. ಈ ವಾಯುವಿನ

ಸ್ಥಾನದಲ್ಲೇ, ಬ್ರಹ್ಮದಲ್ಲಿರುವ ಅದ್ಭುತ ದಿವ್ಯಶಕ್ತಿಯನ್ನೇ ಮಾಯೆಯೆನ್ನುವರು. ಮಾಯೆಯಿಂದ ಮರುಳಾಗಿರುವ ಜೀವನು ಮಾಯೆಯನ್ನು ಚಿಂತಿಸಲೂ ಶಕ್ತನಲ್ಲ. ಮಾಯೆಯನ್ನು ದಾಟಲು ಇರುವ ಒಂದೇ ಉಪಾಯ 'ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ', ಅಷ್ಟೇ!

ಇಲ್ಲಿ ಒಂದು ಆಶ್ಚರ್ಯವನ್ನು ನೋಡಬಹುದು. ಒಂದು ಬೀಜದಿಂದ ಬೆಳೆದ ಮರದಲ್ಲಿ ಅನೇಕ ಹಣ್ಣುಗಳಾದಾಗ, ಆ ಹಣ್ಣುಗಳೊಳಗೆ ಬೀಜಗಳೂ ಅನೇಕವಿರುತ್ತವೆ. ಮೂಲವಾದ ಬೀಜವು ನಶಿಸಿಹೋಗಿಲ್ಲ. ಮರವಾಗಿ ನಿಂತಿದೆ. ಅದು ನಿಂತಿರುವಾಗಲೇ, ಪ್ರತಿಯೊಂದು ಹಣ್ಣಿನ ಒಳಗೂ ಆ ಮರವು ಬೀಜಗಳೊಳಗೆ ಅನೇಕವಾಗಿಯೂ ನಿಂತಿದೆ. ಇದು ಒಂದು ವರ್ಷದ ಕಥೆ. ಸಾವಿರಾರು ವರ್ಷಗಳು ಬದುಕಬಲ್ಲ ಒಂದು ಮರದ ಕಥೆಯನ್ನು ಯೋಚಿಸಲು ಈ ಅಲ್ಪಪ್ರಜ್ಞನಾದ ಜೀವನು ಸಮರ್ಥನೆ!

ಹೀಗೆ ಬ್ರಹ್ಮವು 'ಸಂಸಾರಮಹೀರುಹಸ್ಯ ಬೀಜಾಯ' ಎಂದು ಹೇಳಿದಂತೆ ಸರ್ವಜಗತ್ತಿಗೆ ಬೀಜವಾಗಿ ಮೂಲಕಾರಣವಾಗುವುದರಿಂದಲೇ ಸರ್ವಾತ್ಮಕವೂ ಆಗಬಲ್ಲದೆಂಬುದನ್ನು ಉಪನಿಷತ್ತಿನ ಅನೇಕ ಕಡೆಗಳಲ್ಲಿ ನೋಡಬಹುದು.

ಬೋಧಾಯನರು ಯಾರು?

ಬ್ರಹ್ಮಸೂತ್ರಗಳ ವೃತ್ತಿಕಾರರಾದ ಬೋಧಾಯನರು ಯಾರು? ಅವರು ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆದಿದ್ದರೆ? ಹಾಗಾದರೆ, ಶ್ರೀರಾಮಾನುಜರು ಮತ್ತೆ ಭಾಷ್ಯವನ್ನು ಏತಕ್ಕೆ ಬರೆದರು? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಕಟ್ಟಾ ಅದ್ವೈತಿಗಳಾದ ಕೆಲಪಂಡಿತರುಗಳು 'ರಾಮಾನುಜರು ತಮ್ಮ ಭಾಷ್ಯವೇ ಸಂಪ್ರದಾಯಸಿದ್ಧವೆಂದು ತೋರಿಸಿಕೊಳ್ಳುವುದಕ್ಕಾಗಿ ಸುಳ್ಳನ್ನೇ ರಾಮಾನುಜರು ಹೇಳಿರುವರು' ಎಂದು ಪಾಪದ ಭಯವೆಳ್ಳಷ್ಟೂ ಇಲ್ಲದೇ ಹೇಳುವರು. ಆದರೆ ಕೊಚ್ಚಿಯ ಮಹಾರಾಜರೂ, ಮಹಾಸಂಸ್ಕೃತ ಪಂಡಿತರೂ ಆದ ಶ್ರೀಪರೀಕ್ಷಿತ್ ಮಹಾರಾಜರು 'ಹಾಗೆ ಹೇಳುವುದು ಮಹಾ ಸಾಹಸವೇ ಆಗುತ್ತದೆ' ಎಂದು ಹೇಳಿರುವರು. ಶ್ರೀಪರಕಾಲಮಠಾಧೀಶರು ತಮ್ಮ ಶ್ರೀಭಾಷ್ಯವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಈ ವಿಷಯವನ್ನು ವಿಮರ್ಶಿಸಿರುವರು. 10ನೇ ಶತಮಾನದ ಅದ್ವೈತಸಂಪ್ರದಾಯದ 'ಪ್ರಪಂಚಹೃದಯ' ಎಂಬ ಯೋಗಶಾಸ್ತ್ರದ ಗ್ರಂಥದಲ್ಲಿ, ಅವರ ಕಾಲ ಪರ್ಯಂತವಾಗಿ ಬೆಳೆದು ಬಂದ ಜ್ಞಾನದ ಪರಂಪರೆಯನ್ನು

ಬಣ್ಣಿಸುವಾಗ 20 ಅಧ್ಯಾಯಾತ್ಮಕವಾದ ಮೀಮಾಂಸಾಸೂತ್ರಗಳಿಗೆ (ಪೂರ್ವಮೀಮಾಂಸೆ 12 ಅಧ್ಯಾಯ, ದೇವತಾಕಾಂಡ 4 ಅಧ್ಯಾಯ, ಉತ್ತರಮೀಮಾಂಸೆ 4 ಅಧ್ಯಾಯ, ಒಟ್ಟು ಮೀಮಾಂಸಾಶಾಸ್ತ್ರ 20 ಅಧ್ಯಾಯ) ಬೋಧಾಯನರು ವಿಸ್ತಾರವಾದ ವೃತ್ತಿಯನ್ನು ಬರೆದರು. ಅದನ್ನು ಸಂಗ್ರಹಿಸಿ ಸ್ವಲ್ಪ ಲಘುವಾದ ವೃತ್ತಿಯನ್ನು ಉಪವರ್ಷರು ಬರೆದರು ಎಂದು ಹೇಳಿದ್ದಾರೆ. ದುರಾಗ್ರಹದಿಂದಲೂ, ವಿತಂಡವಾದದಿಂದಲೂ ಇದನ್ನೆಲ್ಲಾ ಅಲ್ಲಗಳೆಯುವವರಿಗೆ ಉತ್ತರವನ್ನು ಶ್ರೀಪರಕಾಲಮಠಾಧೀಶರೇ ಕೊಟ್ಟಿದ್ದಾರೆ. ಶ್ರೀರಾಮಾನುಜರು ಶ್ರೀಶಂಕರಾಚಾರ್ಯರನ್ನು ಖಂಡಿಸಿಬಿಟ್ಟರು ಎಂಬುದು ಕೆಲವರ ಕೋಪ, ಶ್ರೀಶಂಕರರನ್ನು ಅವರ ಸಮೀಪಕಾಲದವರಾದ ಭಾಸ್ಕರಾದಿಗಳೇ ಸ್ಪಷ್ಟವಾಗಿ ಬೌದ್ಧರೆಂದು ಕರೆದಿರುವುದನ್ನು ನೋಡಿ, 'ಅದು ಸರಿಯಲ್ಲ, ಮೇಲುತೋರಿಕೆಯಲ್ಲಿ ಆ ಕಾಲದ ಸನ್ನಿವೇಶದಿಂದ ಕೆಲವು ವಾದಗಳು ಹಾಗೆ ಕಂಡುಬಂದರೂ, ಬೇರೆ ರೀತಿಯಾದ ವಾಕ್ಯಗಳೂ ಅಲ್ಲಲ್ಲಿ ಕಂಡುಬರುವುದರಿಂದಲೂ, ಶ್ರೀಶಂಕರರ ಸ್ತೋತ್ರ ಸಾಹಿತ್ಯಾದಿಗಳಿಂದಲೂ ಶ್ರೀಶಂಕರರು ಪರಮವೈದಿಕರೇ' ಎಂಬ ಅಭಿಪ್ರಾಯದಿಂದ, ವ್ಯಾಖ್ಯಾನಕಾರರ ಮತಗಳನ್ನೇ ಭಗವದ್ರಾಮಾನುಜರು ವಿಮರ್ಶಿಸಿದರು. ಆ ವೃತ್ತಿಗ್ರಂಥವು ಬಹಳ ಹಿಂದೆಯೇ ಲುಪ್ತವಾಗಿಬಿಟ್ಟಿತು. ಅದು ಸವಿಶೇಷಾದ್ವೈತಪರವಾಗಿತ್ತೆಂಬುದು, ದೊರೆತಿರುವ ಕೆಲವು ಭಾಗಗಳಿಂದಲೇ ತಿಳಿಯಲು ಸಾಧ್ಯವಾಗಿದೆ.

ಶ್ರೀಶಂಕರರ ಭಾಷ್ಯದಲ್ಲೇ ಅನೇಕ ಕಡೆ (ಬ್ರ.ಸೂ. 1–1–19, 1–3–19, 3–3–53 ಇತ್ಯಾದಿ) ವೃತ್ತಿಕಾರಮತವನ್ನು ಉಲ್ಲೇಖಿಸಿರುವುದರಿಂದ ವೃತ್ತಿಗ್ರಂಥ ಸುಳ್ಳಲ್ಲ. ಆದರೆ, ಬೌದ್ಧರನ್ನು ತೃಪ್ತಿಪಡಿಸಲು ವೈದಿಕರಾದ ವೃತ್ತಿಕಾರರ ಮತವನ್ನು ಆಚಾರ್ಯರು ಅಂಗೀಕರಿಸಲಿಲ್ಲ. ಶ್ರೀಶಂಕರಾಚಾರ್ಯರು ಬೋಧಾಯನರ ಶಿಷ್ಯರಾದ ಉಪವರ್ಷರನ್ನು 'ಭಗವಾನ್' ಎಂದೇ ಕರೆದಿದ್ದಾರೆ. ಉಪವರ್ಷರು ಪೂರ್ವೋತ್ತರಮೀಮಾಂಸಾ ವೃತ್ತಿಕಾರರೆಂದೂ ಅವರು ಹೇಳಿರುವರು (ಬ್ರ.ಸೂ.ಭಾ. 3–3–53). ಇಲ್ಲಿ ಅವರು ಹೇಳಿರುವುದನ್ನು ನೋಡಿದರೆ ಶ್ರೀರಾಮಾನುಜರಿಗೂ ಅವರಿಗೂ ವಾಸ್ತವಿಕವಾಗಿ ಅಭಿಪ್ರಾಯಭೇದಕ್ಕೆ ಕಾರಣವಿಲ್ಲ. ಈ ತತ್ತ್ವವನ್ನು ತಿಳಿಯಲಾರದೆ ಪಂಡಿತರುಗಳೇ ಪರಸ್ಪರ ಜಗಳವಾಡಿದರೆಂದೇ ತೋರುವುದು. ಪ್ರಪಂಚದ ಎಲ್ಲಾ ಮತಗಳಲ್ಲೂ. ಅವಾಂತರ ಭೇದಗಳಿಗೆ ಪಂಡಿತರುಗಳೇ ಕಾರಣರೆಂಬುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ಬ್ರಹ್ಮಸೂತ್ರಗಳಲ್ಲೇ

ಅನೇಕ ಮಹರ್ಷಿಗಳ ಅಭಿಪ್ರಾಯಭೇದದ ಸೂಚನೆಯಿರುವುದರಿಂದ, ಗಹನವಾದ ಆತ್ಮತತ್ತ್ವದ ವಿಷಯದಲ್ಲಿ ಶುಷ್ಕಪಂಡಿತರ ಅಭಿಪ್ರಾಯಭೇದವು ಆಶ್ಚರ್ಯಕರವೇನಲ್ಲ.

ಪಂಡಿತರಲ್ಲಿ ವಿನಂತಿ

ಜಗತ್ತು ಸತ್ಯ ಎಂದು ಹೇಳುವ ಪಂಡಿತರುಗಳು ವಾಸ್ತವವಾದ ದೃಷ್ಟಿಯಿಂದಲೂ ಒಂದು ವಿಷಯವನ್ನು ಚಿಂತಿಸಬೇಕು. ಬ್ರಹ್ಮದಂತೆಯೇ ಜಗತ್ತು ಸತ್ಯವಾದರೆ, ಸತ್ಯವನ್ನು ಬಿಡಲು ಸಾಧ್ಯವೆ ? ಸಾಲದ್ದಕ್ಕೆ ಶ್ರೀರಾಮಾನುಜರೇ ಜನ್ಮಾದ್ಯಧಿಕರಣದ ಕೊನೆಯಲ್ಲಿ 'ಸತ್ಯಪದದಿಂದ ಅಚೇತನವು ಮತ್ತು ಅದರೊಂದಿಗೆ ಬೆರೆತ ಚೇತನರು ವ್ಯಾವೃತ್ತರು' ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಿಂದ ಜಗತ್ತು ಬ್ರಹ್ಮದಂತೆ ಸತ್ಯವಲ್ಲವೆಂಬುದೇ ಶ್ರೀರಾಮಾನುಜರಿಗೂ ಸಮ್ಮತವೆಂಬುದು ಸ್ಪಷ್ಟ.

ಶ್ರೀಶಂಕರರೂ 'ಸತ್ಯಂ ಚಾನೃತಂ ಚ ಸತ್ಯಮಭವತ್' (ತೈ.ಭೃ.6) ಎಂಬಲ್ಲಿ 'ಬ್ರಹ್ಮ ಒಂದೇ ಪೂರ್ಣ ಸತ್ಯ – ಮರೀಚಿಕೆ (ಬಿಸಿಲುಗುದುರೆ)ಗಿಂತಲೂ ನೀರು ಮುಂತಾದವು ಸತ್ಯವಾಗುತ್ತದೆ. ಅಸತ್ಯವೆಂದರೆ, ಇದಕ್ಕಿಂತಲೂ ಬೇರೆಯಾದ್ದು' ಎಂದೇ ಕೊನೆಯಲ್ಲಿ ಹೇಳಿರುವರು. ಅನೃತವೇ ಬೇರೆ, ಅಸತ್ಯವೇ ಬೇರೆ ಎಂಬುದನ್ನು ಪಂಡಿತರುಗಳು ಗಮನಿಸಬೇಕು. ಅಧ್ಯಾಸಭಾಷ್ಯದಲ್ಲೂ 'ಸತ್ಯಾನೃತೇ ಮಿಥುನೀಕೃತ್ಯ ಸರ್ವೋಽಪಿ ಲೋಕವ್ಯವಹಾರಃ' ಎಂದೇ ಇದೆ. 'ಸತ್ಯಾಸತ್ಯೇ' ಎಂದಿಲ್ಲ. ಆದ್ದರಿಂದ ಜಗತ್ತು ಪೂರ್ಣ ಸತ್ಯವಲ್ಲವೆಂಬ ಅಂಶ ಎರಡು ಆಚಾರ್ಯರಿಗೂ ಸಮಾನ.

ಲೋಕದ ಅನುಭವದಲ್ಲೂ ಪ್ರತಿಯೊಂದರಲ್ಲೂ ತಾರತಮ್ಯ ಕಂಡುಬಂದೇ ಬರುತ್ತದೆ. ಆದ್ದರಿಂದ, 'ಒಂದು ವಸ್ತುವನ್ನು ಯಾವ ಜಾಗದಲ್ಲಿ ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಕಂಡಿದ್ದೇವೋ, ಆ ವಸ್ತುವು ಕಾಲಾಂತರದಲ್ಲಿ 'ಹಾಗೆ ಕಂಡಿಲ್ಲ' ಎಂಬ ಬಾಧಕವಾದ ಜ್ಞಾನ ಬರದೇ ಇರುವುದರಿಂದ, ಆಯಾ ವಸ್ತುಗಳ ಸತ್ಯತ್ವವು ಆಂಶಿಕವಾಗಿರುತ್ತದೆಯೇ ಹೊರತು ಪೂರ್ಣಮಿಥ್ಯೆಯಾಗಿರುವುದಿಲ್ಲ. ಬ್ರಹ್ಮಕ್ಕೆ ಯಾವ ಕಾಲದಲ್ಲೂ, ಯಾವ ದೇಶದಲ್ಲೂ, ಯಾವ ರೀತಿಯಲ್ಲೂ ಬಾಧಕ ಜ್ಞಾನವು ಯಾರಿಗೂ ಇಲ್ಲದ್ದರಿಂದ ಬ್ರಹ್ಮವು ಪೂರ್ಣಸತ್ಯ, ಉಳಿದವು ಅಪೂರ್ಣಸತ್ಯವೆಂದೇ ಹೇಳಬೇಕು.

ಹೀಗೆಯೇ 'ಜಗತ್ತು ಮಿಥ್ಯೆ' ಎಂದು ಹೇಳುವ ಪಂಡಿತರುಗಳೂ ಗಾಢವಾಗಿ ಚಿಂತಿಸಬೇಕು. ಬ್ರಹ್ಮಕ್ಕಿಂತಲೂ ಬೇರೆ ಎಲ್ಲವೂ ಮಿಥ್ಯೆಯಾದರೆ, 'ದ್ವಿರೂಪಂ ಬ್ರಹ್ಮಾವಗಮ್ಯತೇ' 'ಕಿಂ ದ್ವೇ ಬ್ರಹ್ಮಣೀ ಪರಮಪರಂ ಚೇತಿ? ಬಾಢಂ, ದ್ವೇ' 'ಏತದ್ವೈ ಸತ್ಯಕಾಮ, ಪರಂ ಚಾಪರಂ ಚ ಬ್ರಹ್ಮ'ಇತ್ಯಾದಿ ವಾಕ್ಯಗಳಲ್ಲೂ 'ಕಾರ್ಯಂ ಬಾದರಿಃ' 'ಪರಂ ಜೈಮಿನಿಃ' ಎಂಬ ಸೂತ್ರಗಳಲ್ಲೂ ಕಂಡುಬರುವ ಎರಡು ಬ್ರಹ್ಮಗಳಲ್ಲಿ, ಯಾವುದು ಸತ್ಯ, ಯಾವುದು ಮಿಥ್ಯೆ, ಹೇಗೆ ನಿರ್ಣಯಿಸುವುದು? ಸತ್ಯದಲ್ಲಿ ತಾರತಮ್ಯವನ್ನು ಒಪ್ಪದಿದ್ದರೆ, ಇವುಗಳನ್ನೆಲ್ಲಾ ನಿರ್ಣಯಿಸುವುದು ಬಹಳ ಕಷ್ಟವೇ ಆಗುತ್ತದೆ. 'ಸತ್ಯ ಎರಡಲ್ಲ, ಮೂರೂ ಇದೆ. ಪಾರಮಾರ್ಥಿಕ, ವ್ಯಾವಹಾರಿಕ, ಪ್ರಾತಿಭಾಸಿಕ ಎಂದು' ಎಂದರೆ, ಹಾಗಾದರೆ, ಸರ್ಪವು, ರಜ್ಜುಸರ್ಪ, ವಲ್ಮೀಕಸರ್ಪ ಎಂದು ಎರಡು ವಿಧ ಎಂದು ಹೇಳಬೇಕಾಗುತ್ತದೆ. ಇದೂ ಇಷ್ಟವೇ ಎಂದರೆ, ಸರ್ಪವು ಎರಡು ವಿಧ ಮಾತ್ರವಲ್ಲ. ವಂಶಸರ್ಪ, ಅಂಬುಧಾರಾಸರ್ಪ, ಭೂವಿದಳನಸರ್ಪ, ಮಾಲಾಸರ್ಪ ಇತ್ಯಾದಿ ಅನಂತವೇ ಆಗಬೇಕಾಗುತ್ತದೆ. ಸತ್ಯವನ್ನು ಮಿಥ್ಯೆಯನ್ನು ಒಟ್ಟು ಒಂದು ಗಣನೆಗೆ ತೆಗೆದುಕೊಳ್ಳುವುದನ್ನೂ ಯಾರೂ ಒಪ್ಪಲಾರರು. ಈ ಎಲ್ಲಾ ಗೊಂದಲಗಳನ್ನು ಪರಿಹರಿಸಬೇಕಾದರೆ ಸತ್ಯದಲ್ಲಿ ತಾರತಮ್ಯವನ್ನು ಒಪ್ಪಲೇಬೇಕು. ಒಂದು ನಿದರ್ಶನವನ್ನು ನೋಡೋಣ.

ಪರಮಪುಣ್ಯ ಗಂಗಾನದಿಯು ವಾರಾಣಸಿ ಕ್ಷೇತ್ರದಲ್ಲಿ ಹರಿಯುತ್ತದೆ. ಅದೇ ನದಿಯು ನಾಲೆಗಳ ಮೂಲಕವೂ, ನಲ್ಲಿಗಳ ಮೂಲಕವೂ ಮನೆ ಮನೆಗೆ ಹರಿದು ಬರುತ್ತದೆ. ಕೊನೆಗೆ ಕೈಕಾಲು ತೊಳೆಯುವುದಕ್ಕೂ ಅದೇ ಆಗುತ್ತದೆ. ಕೊನೆ ಕೊನೆಗೆ ತನ್ನ ಎಲ್ಲಾ ಪಾವನತ್ವವನ್ನು ಕಳೆದುಕೊಂಡು ದುರ್ಗಂಧದಿಂದ ಚರಂಡಿಯಲ್ಲೂ ಅದು ಹರಿಯುತ್ತದೆ. ಈ ಸ್ಥಿತಿಯಲ್ಲಿ ಆ ದುರ್ಗಂಧ ನೀರನ್ನು 'ಗಂಗೆಯ ನೀರು' ಎಂದು ಹೇಳುವುದರಲ್ಲಿ ಔಚಿತ್ಯವೇನಿದೆ? ಯೋಚಿಸಬೇಕು. ಗಂಗೆಯ ಪಾವನತ್ವವು ಕ್ರಮಕ್ರಮವಾಗಿ ಕೆಡುವುದು ಮಾತ್ರವಲ್ಲ. ಪರಮ ಅಶುದ್ಧವಾಗಿಯೂ ಪರಿಣಮಿಸುವುದು ಎಲ್ಲರಿಗೂ ಪ್ರತ್ಯಕ್ಷಸಿದ್ಧ.

ಹೀಗೆಯೇ ಈ ಪ್ರಪಂಚವೂ ಸತ್ಯವಾದ ಪರಬ್ರಹ್ಮದಿಂದಲೇ ಆಗಿದ್ದರೂ, ಕ್ರಮಕ್ರಮವಾಗಿ ತನ್ನತನವನ್ನು ಕಳೆದುಕೊಳ್ಳುವುದು ಅನಿವಾರ್ಯ. ಇದನ್ನೇ 'ವಿವರ್ತ' ಎಂದಿದ್ದರು. ಅಷ್ಟು ಮಾತ್ರಕ್ಕೆ ಸುಳ್ಳೆಂದರ್ಥವಲ್ಲ. ಜೀವವರ್ಗದಲ್ಲಿ ಸ್ವಲ್ಪಮಟ್ಟಿಗೆ ಚೈತನ್ಯಾಂಶವಿದ್ದರೂ, ಪರಮಾತ್ಮನ ಗುಣಗಳನ್ನು ಕಳೆದುಕೊಳ್ಳುವುದು ಪ್ರತ್ಯಕ್ಷಸಿದ್ಧ. ಮತ್ತಷ್ಟು ದೂರಸರಿದಾಗ ಆ ಚೈತನ್ಯಾಂಶವನ್ನೂ ಕಳೆದುಕೊಂಡು

ಜಡವೆನಿಸಿಕೊಳ್ಳುವುದಕ್ಕೂ ಅವಕಾಶವಿದೆ. ಒಂದು ಪ್ರಾಮಾಣಿಕವಾದ ವಚನವನ್ನು ನೋಡಬೇಕು –

ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಂ ।
ಆದ್ಯತ್ರಯಂ ಬ್ರಹ್ಮನಿಷ್ಠಂ ಇತರತ್ತು ಜಗದ್ಗತಮ್॥

ಬ್ರಹ್ಮದಲ್ಲಿ ಅಸ್ತಿತ್ವ, ಸ್ವಪ್ರಕಾಶತ್ವ, ಆನಂದತ್ವ ಇವು ಪರಿಪೂರ್ಣವಾಗಿರುತ್ತವೆ. ಜಡವಸ್ತುವಿನಲ್ಲಿ ಅಸ್ತಿತ್ವ ಮಾತ್ರ, ಜೀವರಲ್ಲಿ ಅಸ್ತಿ, ಭಾತಿ ಮಾತ್ರ, ಬ್ರಹ್ಮದಲ್ಲಿ ಅಸ್ತಿತ್ವ, ಸ್ವಪ್ರಕಾಶತ್ವ, ಆನಂದತ್ವ ಮೂರೂ ಇರುವವು, ಬಾಹ್ಯವಾದ ನಾಮ ರೂಪಗಳಂತು ಜಡಕ್ಕೆ ಸೇರಿವೆ. ಆದರೆ, ಸಹಸ್ರನಾಮಗಳಲ್ಲಿರುವ ಭಗವಂತನ ನಾಮರೂಪಗಳು ಜಡಪ್ರಪಂಚದ ನಾಮರೂಪಸಮಾನಗಳಲ್ಲ. ಎರಡಕ್ಕೂ ಬಹಳಷ್ಟು ಅಂತರಗಳಿವೆ, ಕತ್ತೆ, ಕುದುರೆ ಮುಂತಾದ ನಾಮಗಳು, ಭಗವಂತನ ನಾಮಗಳು ಎರಡೂ ಸಮಾನವಾಗಿ ಸುಳ್ಳೆ? ಆದ್ದರಿಂದ ಇವುಗಳ ತಾರತಮ್ಯಗಳನ್ನು ಸರಿಯಾಗಿ ತಿಳಿಯಬೇಕು. ಹೀಗೆ ಉಪಾದಾನವಾದ ಬ್ರಹ್ಮತತ್ತ್ವವು ಕ್ರಮಕ್ರಮವಾಗಿ ತನ್ನತನವನ್ನು ಕಳೆದುಕೊಳ್ಳುತ್ತಾ ಜಡವಾಗಿ ಆಗುವುದನ್ನೇ ವಿವರ್ತವಾದ ಎಂದು ಹೇಳುವರು.

ಆದ್ದರಿಂದ ಪಂಡಿತರುಗಳು ಹಠವಾದವನ್ನೂ, ಪೂರ್ವವಾಸನೆಯನ್ನೂ, ತ್ಯಜಿಸಿ ಗಂಭೀರವಾಗಿ ಚಿಂತಿಸಿದರೆ, ತಾವೂ ಉದ್ಧಾರವಾಗಿ ಜಗತ್ತಿಗೂ ಒಳ್ಳೆಯ ಮಾರ್ಗದರ್ಶನವನ್ನು ಖಂಡಿತವಾಗಿ ನೀಡಬಹುದು. ಇದಕ್ಕೆ ಕಾಲವೂ ಬಂದಿದೆ ಎಂದೂ ತೋರುತ್ತಿದೆ.

ಬ್ರಹ್ಮಸೂತ್ರರಚನೆಯ ಹಿನ್ನೆಲೆ

ಮೇಲ್ಕಂಡ ಸತ್ಯಾಂಶವನ್ನು ನಿರ್ಧರಿಸಲು ಶ್ರೀಬಾದರಾಯಣರಿಗೆ ಬ್ರಹ್ಮಸೂತ್ರ ರಚನೆಯ ಉದ್ದೇಶವೇನು? ಎಂಬ ಪ್ರಶ್ನೆಗೆ ಉತ್ತರವನ್ನೂ ಅರಿಯಬೇಕು.

ಬ್ರಹ್ಮಸೂತ್ರಗಳ ಮೊದಲನೆ ಅಧ್ಯಾಯ ಪೂರ್ತಿಯಾಗಿ ಸಾಂಖ್ಯಪ್ರಕ್ರಿಯೆಯ ಖಂಡನೆಯೇ ಆಗಿದೆ. ಸಾಂಖ್ಯರು ಜೀವ ಮತ್ತು ಪ್ರಕೃತಿ ತತ್ತ್ವದಿಂದಲೇ. ಅಂದರೆ ಎರಡು ತತ್ತ್ವಗಳಿಂದಲೇ ಸೃಷ್ಟ್ಯಾದಿಗಳನ್ನು ಸಮರ್ಥಿಸುತ್ತಾರೆ. ವೇದಾಂತಿಗಳಂತೂ ಇದರೊಂದಿಗೆ ಪರಮಾತ್ಮತತ್ತ್ವದ ಆವಶ್ಯಕತೆಯನ್ನು ಹೇಳುತ್ತಾರೆ. ಚತುಸ್ಸೂತ್ರಿಯಲ್ಲಿ ಸಕಲ ಚೇತನಾಚೇತನ (ಜೀವ–ಪ್ರಕೃತಿ)

ವಿಲಕ್ಷಣವಾದ ಪರಬ್ರಹ್ಮವೇ ಜಗತ್ತಿಗೆ ಮೂಲಕಾರಣವೆಂದು ಸಾಧಿಸಿಯಾಯಿತು. ಮುಂದಿನ ಸೂತ್ರಗಳಿಗೆ ಕೆಲಸವೇನು? ಎಂಬ ಸಂಶಯ ಬಂದರೆ, 'ಇದು ಸರಿಯಲ್ಲ, ಸಾಂಖ್ಯರು ದ್ವಿತತ್ತ್ವ (ಜೀವ-ಪ್ರಕೃತಿ)ದಿಂದಲೇ ಎಲ್ಲವನ್ನು ಸಮರ್ಥಿಸುತ್ತಾರೆ, ಪರಬ್ರಹ್ಮದ ಆವಶ್ಯಕತೆ ಏನು? ವೇದಾಂತಗಳೆಂಬ ಉಪನಿಷತ್ತುಗಳೂ ಇದನ್ನೇ ಹೇಳುತ್ತವೆ' ಎಂಬ ಆಕ್ಷೇಪಕ್ಕೆ ಸಮಾಧಾನವಾಗಿ, 'ಉಪನಿಷತ್ತುಗಳಲ್ಲಿ ಎಲ್ಲಿಯೂ ಸಾಂಖ್ಯರ ದ್ವಿತತ್ತ್ವವಾದಕ್ಕೆ ಪ್ರಸಂಗವೇ ಇಲ್ಲ' ಎಂದು ಹೇಳಲು, ಪ್ರತಿಯೊಂದು ವಾಕ್ಯವನ್ನು ಉದಾಹರಿಸಿ, 'ಇದು ಪ್ರಕೃತಿ-ಜೀವರನ್ನು ಹೇಳುವುದಿಲ್ಲ. ಪರಮಾತ್ಮನನ್ನೇ ಹೇಳುತ್ತದೆ' ಎಂಬುದನ್ನೇ ಎಲ್ಲಾ ಭಾಷ್ಯಕಾರರೂ ಹೇಳುತ್ತಾರೆ', ಎಂದು ಹೇಳುವುದೇ ಮೊದಲನೆಯ ಅಧ್ಯಾಯದ ಉದ್ದೇಶವಾಗಿದೆ. ಎರಡನೆಯ ಅಧ್ಯಾಯದ ಮೊದಲನೆಯ ಪಾದ ಸಾಂಖ್ಯಮತ ನಿರಾಕರಣೆಗಾಗಿಯೇ ಎಂಬುದರಲ್ಲಿ ವಿವಾದವೇ ಇಲ್ಲ. ಕರ್ತೃತ್ವಾದಿ ಅಧಿಕರಣಗಳು, 'ಪುರುಷನು ಕರ್ತನಲ್ಲ' ಎಂಬ ಸಾಂಖ್ಯರ ವಾದವನ್ನು ನಿರಾಕರಿಸುವುದಕ್ಕಾಗಿಯೇ ಇರುತ್ತವೆ. ಮೂರನೆಯ ಅಧ್ಯಾಯದಲ್ಲೂ ಮೋಕ್ಷೋಪಾಯವು 'ಭಕ್ತಿ ಎಂಬ ಉಪಾಸನೆಯೇ ಹೊರತು, ಸಾಂಖ್ಯರು ಹೇಳುವ ಪ್ರಕೃತಿ ಪುರುಷ ವಿವೇಚನೆಯಲ್ಲ'ವೆಂಬ ವೈದಿಕಸಿದ್ಧಾಂತವೇ ಸ್ಥಾಪಿಸಲ್ಪಟ್ಟಿದೆ. 4ನೆಯ ಅಧ್ಯಾಯದಲ್ಲೂ 'ಸಾಂಖ್ಯರ ಕೈವಲ್ಯವು ಪರಮಪುರುಷಾರ್ಥವಲ್ಲ, ಪರಮಾತ್ಮನೊಂದಿಗೆ ಸೇರಿ, ಅದರಿಂದ ಆಗುವ ಸ್ವರೂಪಾವಿರ್ಭಾವವೇ ಪರಮಪುರುಷಾರ್ಥ' ಎಂದೇ ಸ್ಥಾಪಿಸಲ್ಪಡುತ್ತದೆ.

ಇದರ ಮೇಲೂ – 'ಭಗವದ್ಗೀತೆಯ 2ನೇ ಅಧ್ಯಾಯದಲ್ಲಿ ಜ್ಞಾನಯೋಗ ಮತ್ತು ಕರ್ಮಯೋಗ ಎರಡನ್ನೂ ಕುರಿತಾದ ಪ್ರಶಂಸೆಗಳಿಗೆ ಏನರ್ಥ'ಇತ್ಯಾದಿ ಸಂಶಯಗಳು ಬರುವುದು ಸಹಜ. ಆದರೆ, ಈಗಿನ ಪಂಡಿತರ ಬುದ್ಧಿಯಲ್ಲಿರುವ ಸಾಂಖ್ಯ ಮುಂತಾದ ದರ್ಶನಗಳ ಸ್ವರೂಪಗಳೇ ಬೇರೆ, ವಸ್ತುಸ್ಥಿತಿಯೇ ಬೇರೆಯೆಂಬುದೇ ಸಂಗ್ರಹವಾದ ಉತ್ತರವಾಗಿದೆ. ಎಲ್ಲವೂ ಸಾಂಕರ್ಯಮಯವಾಗಿ ಬಿಟ್ಟಿರುವಾಗ, ಸ್ವಲ್ಪ ಸಹನೆಯೇ ಈವಾಗ ಬೇಕಾಗಿದೆ. ಒಟ್ಟಿನಲ್ಲಿ ಸಾಂಖ್ಯರು ದ್ವಿತತ್ತ್ವವಾದಿಗಳು, ವೈದಿಕರು ತ್ರಿತತ್ತ್ವವಾದಿಗಳೆನ್ನುವುದರಲ್ಲಿ ಸಂಶಯವಿಲ್ಲ.

ಹೀಗೆ ಸಾಂಖ್ಯರೇ ವೇದಾಂತಸೂತ್ರಗಳ ಪ್ರಧಾನಪೂರ್ವಪಕ್ಷಿಗಳು ಎನ್ನುವುದನ್ನು ಪ್ರತಿಯೊಂದು ಕಡೆಯಲ್ಲೂ ಹೇಳಿದೆ ಎಂದು ತಿಳಿದಾಗ ದ್ವಿತತ್ತ್ವವಾದ ವೈದಿಕವಲ್ಲ. ತತ್ತ್ವವಾದವೇ ವೈದಿಕ ಎಂಬ ನಿಶ್ಚಯಕ್ಕೆ

ಬರುವುದರಿಂದ, ನಿರ್ವಿಶೇಷವಾದಕ್ಕೆ ಉಪನಿಷತ್ತುಗಳು ಅನುಕೂಲವೇ ಅಲ್ಲ, ತ್ರಿತತ್ತ್ವವಾದವೇ ವೈದಿಕವೆನ್ನುವುದು ಸ್ಥಾಪಿತವಾಗುತ್ತದೆ. ಈ ತ್ರಿತತ್ತ್ವವಾದವೂ ಕೊನೆಯಲ್ಲಿ ಬ್ರಹ್ಮವಾದದಲ್ಲೇ ಅಡಗುತ್ತದೆ ಎಂದು 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ' ಎಂಬ ಶ್ರುತಿ (ಶ್ವೇ.ಉ.1-12) ಸ್ಪಷ್ಟವಾಗಿ ಹೇಳಿದೆ.

ಸತ್ಯ ಅಥವಾ ಮಿಥ್ಯಾತ್ವದಲ್ಲಿ ತಾರತಮ್ಯ –

ಹೀಗೆ ಕೂಲಂಕಷವಾಗಿ ಎಲ್ಲವನ್ನೂ ವಿಮರ್ಶಿಸಿದರೆ, ಶ್ರೀರಾಮಾನುಜರಿಗೂ, ಶ್ರೀಶಂಕರರಿಗೂ ಅಭಿಪ್ರಾಯಭೇದಕ್ಕೆ ಸರಿಯಾದ ಕಾರಣವೇ ಇಲ್ಲ. ಅಲ್ಪ ವಿಷಯಗಳಲ್ಲಿ ಅನಾವಶ್ಯಕವಾಗಿ ಬುದ್ಧಿಯನ್ನು ಕೆಡಿಸಿಕೊಳ್ಳುವುದರಿಂದ ಅದು ಅವರವರಿಗೇ ಅನರ್ಥಕಾರಿ ಎಂಬುದೇ ಸತ್ಯ.

ಎಲ್ಲಕ್ಕಿಂತಲೂ ಜ್ಞಾನಿಗಳಲ್ಲೂ ಎಲ್ಲರೂ ಎಲ್ಲಾ ಕಾಲಕ್ಕೂ ಎಲ್ಲಾ ರೀತಿಯಲ್ಲೂ ಸನಿಹರಾಗಿರಲೂ ಸಾಧ್ಯವಿಲ್ಲದ್ದರಿಂದ, ಪರಮಾತ್ಮನೇ ಸತ್ಯವನ್ನು ಆಯಾ ಕಾಲಕ್ಕೆ ತಕ್ಕಂತೆ ಪ್ರಕಟಪಡಿಸುತ್ತಾನೆ ಎಂದರಿಯಬೇಕು. ಹೀಗೆ ಜ್ಞಾನಿಗಳಲ್ಲೂ ತಾರತಮ್ಯ ಅನಿವಾರ್ಯವೆಂಬುದನ್ನು ಶ್ರೀರಾಮಾನುಜರೇ –

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ (ಭ.ಗೀ.7.3)

ಎಂಬ ಪದ್ಯದ ವ್ಯಾಖ್ಯಾನದಲ್ಲಿ – 'ಮನುಷ್ಯರನೇಕರಲ್ಲಿ ಯಾರೋ ಕೆಲವರು ಮಾತ್ರ ಮುಕ್ತಿಯನ್ನು ಪಡೆಯಲು ಅಥವಾ ಪೂರ್ಣ ಸತ್ಯವನ್ನರಿಯಲು ಯತ್ನಿಸುತ್ತಾರೆ. ಅವರಲ್ಲಿ ಕೆಲವರು ಸ್ವಲ್ಪಮಟ್ಟಿಗೆ ಮಾತ್ರ ಜ್ಞಾನಿಗಳಾಗುತ್ತಾರೆ, ಅವರಲ್ಲೂ ಯಾರೊ ಒಬ್ಬರು ಮಾತ್ರ, ತತ್ತ್ವಶಃ ಪೂರ್ಣವಾಗಿ ಸತ್ಯವನ್ನರಿಯುತ್ತಾರೆ' ಎಂದಿದ್ದಾರೆ. ಕೊನೆಯಲ್ಲಿ 'ತತ್ತ್ವತಃ' ಎಂದಿರುವುದರಿಂದ, ಅನೇಕರು ಅಪರಿಪೂರ್ಣರಾಗಿಯೇ ಇರುತ್ತಾರೆ. ಆತ್ಮತತ್ತ್ವವು ಅತ್ಯಂತ ಗಹನವಾದ್ದು. ಇದರಿಂದಲೇ ಭಗವದ್ ರಾಮಾನುಜರು ವೇದಾರ್ಥಸಂಗ್ರಹದಲ್ಲಿ 'ಭೇದವೇ? ಅಭೇದವೇ? ಭೇದಾಭೇದವೇ? ಏನೆಂದು ಸಮರ್ಥಿಸಲಾಯಿತು? ಎಂದು ಪ್ರಶ್ನಿಸಿಕೊಂಡು 'ಸರ್ವಸ್ಯಾಪಿ ವೇದವೇದ್ಯತ್ವಾತ್ ಸರ್ವಂ ಸಮರ್ಥಿತಮ್' ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಅವರು ಕೇವಲ ಭೇದವಾದಿಗಳಲ್ಲವೆಂಬುದೂ ಸ್ಪಷ್ಟ. ಹಾಗಾದರೆ, ಉತ್ತರ ಏನು

ಹೇಳಿದಂತಾಯಿತು? ಎಂದರೆ – ಸೃಷ್ಟಿಗೆ ಮೊದಲು ಬೀಜದಲ್ಲಿ ವೃಕ್ಷವಿರುವಂತೆ ಬ್ರಹ್ಮದಲ್ಲಿ ಜಗತ್ತೆಲ್ಲವೂ ಅಡಗಿ ಒಂದೇ ವಸ್ತು ಆಗಿತ್ತು. ಕೊನೆಯ ಲಯದಲ್ಲೂ, ಅಂದರೆ ವೃಕ್ಷದಲ್ಲಿ ಹಣ್ಣು ಆದಾಗ ಎಲ್ಲವೂ ಬೀಜದಲ್ಲಿ ಲಯಿಸಿ ಒಂದೇ ಆಗುತ್ತದೆ. ಮಧ್ಯಕಾಲದಲ್ಲಂತು ಎಲೆ, ಹೂವು, ಕಾಯಿ ಇತ್ಯಾದಿಯಾಗಿ ಅನೇಕತತ್ತ್ವವಿರುತ್ತದೆ. ಆದ್ದರಿಂದ ಎಲ್ಲವನ್ನೂ, ಆಯಾ ಕಾಲಕ್ಕೆ ತಕ್ಕಂತೆ ಭೇದವು ಅಭೇದವೂ ಇರುವುದರಲ್ಲಿ ವಿರೋಧವಿಲ್ಲವೆಂಬುದೇ ಅವರ ಅಭಿಪ್ರಾಯ. ಉಪನಿಷತ್ತುಗಳಲ್ಲೂ ಬ್ರಹ್ಮಸೂತ್ರಗಳಲ್ಲೂ ಭೇದವನ್ನು ಹೇಳುವಾಗ 'ಭಿನ್ನ' ಎಂದು ಹೇಳದೆ, ಎಲ್ಲಾ ಕಡೆಯಲ್ಲೂ 'ಅನ್ಯ'ಪದವೇ ಕಂಡುಬರುವುದನ್ನು ಗಮನಿಸಬೇಕು. ಹೀಗೆಯೇ ಅಭೇದವನ್ನು ಹೇಳುವಾಗ 'ಅನನ್ಯ'ವೆಂದು ಹೇಳಿರುವುದನ್ನು ಗಮನಿಸಬೇಕು. 'ಅನ್ಯ'ಪದದಲ್ಲಿ ಅಡಗಿರುವ ಭೇದವು 'ಭಿನ್ನ' ಪದದಲ್ಲಿ ಅಡಗಿರುವ ಭೇದಕ್ಕಿಂತಲೂ ಅತ್ಯಂತ ವಿಲಕ್ಷಣವಾದ್ದರಿಂದ ಭೇದದಲ್ಲೇ ತಾರತಮ್ಯ ಇರುವುದೆಂದು ತಿಳಿಯುವುದೇ ಸರ್ವ ಪ್ರಶ್ನೆಗೂ ಉತ್ತರವೆಂಬುದೇ ವಸ್ತುಸ್ಥಿತಿಯೆಂದರಿಯುವುದೆ ಅತ್ಯಂತ ಶ್ರೇಯಸ್ಕರ. ಇದನ್ನೇ ತ್ರಿಕಾಲ ಸತ್ಯವೆನ್ನಬಹುದು. ಇದರಿಂದ ಸತ್ಯತ್ವ–ಮಿಥ್ಯಾತ್ವಾದಿಗಳಲ್ಲೂ ತಾರತಮ್ಯವನ್ನರಿಯಬಹುದು.

ಹೀಗೆ, 'ಅನ್ಯ' ಮತ್ತು 'ಅನನ್ಯ' ಪದಗಳಲ್ಲಿ ಅಡಗಿರುವ ಭೇದದ ತಾರತಮ್ಯವನ್ನು, ಅನುಭವ ಪೂರ್ವಕವಾಗಿ ಅರಿತರೆ, ಎಲ್ಲಾ ವಾದಗಳಿಗೂ ಉತ್ತರ ಸಿಗುತ್ತದೆ. ಆಚಾರ್ಯರೆಲ್ಲರೂ ಮಹಾಜ್ಞಾನಿಗಳೇ ಆಗಿದ್ದರೂ, ಆಯಾ ಕಾಲ, ದೇಶ, ಸನ್ನಿವೇಶ ಇವುಗಳಿಗೆ ತಕ್ಕಂತೆ ವಿಷಯಗಳನ್ನು ಪ್ರತಿಪಾದಿಸುವುದು ಅನಿವಾರ್ಯವಾಗುತ್ತದೆ ಎಂಬ ಅಂಶವನ್ನು ನಾವು ಅರಿಯಬೇಕು.

ವೇದಾರ್ಥಸಂಗ್ರಹದಲ್ಲಿ 'ಏತಾವತಾ ಭೇದೋ ವಾ, ಅಭೇದೋ ವಾ ದ್ವ್ಯಾತ್ಮಕತಾ ವಾ ಕೋಽಯಮರ್ಥಃ ಸಮರ್ಥಿತಃ?' ಎಂದು ತಾನೇ ಪ್ರಶ್ನಿಸಿಕೊಂಡು 'ಸರ್ವಸ್ಯಾಪಿ ವೇದವೇದ್ಯತ್ವಾತ್ ಸರ್ವಂ ಸಮರ್ಥಿತಮ್' ಎಂದೇ ಉತ್ತರವನ್ನು ಹೇಳಿರುವರು. ಭಾಸ್ಕರಾದಿಗಳು ಕೇವಲ ಭೇದಾಭೇದವಾದಿಗಳು. ವೇದಾರ್ಥ ಸಂಗ್ರಹದಲ್ಲೂ, ಶ್ರೀಭಾಷ್ಯದ ಸಮನ್ವಯಾಧಿಕರಣದಲ್ಲೂ ಭೇದಾಭೇದವಾದದ ವಿಸ್ತಾರವಾದ ವಿವೇಚನೆಯನ್ನೂ ನೋಡಿದರೆ ಶ್ರೀರಾಮಾನುಜರು ಕೇವಲ ಭೇದಾಭೇದವಾದಿಗಳಲ್ಲ, ಸರ್ವಸಮನ್ವಯವಾದಿಗಳೆಂಬುದು ಸ್ಪಷ್ಟವಾಗುವುದು. ಸರ್ವಾಪಲಾಪವಾದಿಗಳಾದ ಮಾಧ್ಯಮಿಕರು 'ಚತುಷ್ಕೋಟಿವಿನಿರ್ಮುಕ್ತಂ

ತತ್ತ್ವಮ್' ಎಂದು ಹೇಳಿದರೆ ಬ್ರಹ್ಮತತ್ತ್ವವು ಸರ್ವಾತ್ಮಕವೆಂಬುದೇ ವೈದಿಕರ ನಿಲುವೆಂಬುದೇ ಸಾರ.

ಉಪಸಂಹಾರ

ಹೀಗೆ ಬ್ರಹ್ಮಸೂತ್ರಗಳ ರಚನೆಗೆ ಹಿನ್ನೆಲೆ ಸಾಂಖ್ಯದರ್ಶನವಾದ್ದರಿಂದ ಸಾಂಖ್ಯರ ದ್ವಿತತ್ತ್ವವಾದದಿಂದ ಜಗತ್ತಿನ ಸೃಷ್ಟಿಸ್ಥಿತಿಪ್ರಳಯಗಳನ್ನು ಸಮರ್ಥಿಸಲು ಸಾಧ್ಯವಿಲ್ಲ; ವೈದಿಕರ ಭೋಕ್ತಾ-ಭೋಗ್ಯ-ಈಶ್ವರ ಎಂಬ ತ್ರಿತತ್ತ್ವವಾದದಿಂದಲೇ ಜಗತ್ತಿನ ಸೃಷ್ಟಿ-ಸ್ಥಿತಿ-ಪ್ರಳಯಗಳನ್ನು ಸಮರ್ಥಿಸಬೇಕು ಎಂಬುದು ಸ್ಪಷ್ಟ.

ಇದರಿಂದ ಶ್ರೀಶಂಕರರ ಅಧ್ಯಾಸಭಾಷ್ಯವು ಆಗಿನ ಸನ್ನಿವೇಶದ ಪ್ರಭಾವದಿಂದ ಅನಿವಾರ್ಯವಾಯಿತೆ ಹೊರತು ಬ್ರಹ್ಮಸೂತ್ರಗಳ ತಾತ್ಪರ್ಯಕ್ಕೆ ಅದು ಪೋಷಕವಾಗಲಾರದು. ಯುಕ್ತಿಸಿದ್ಧವಾದ ಅರ್ಥವೇ ಬ್ರಹ್ಮಸೂತ್ರಗಳಿಗೆ ಸಮ್ಮತವೆಂದು ನಾವು ಇಲ್ಲಿ ತೋರಿಸುತ್ತೇವೆ' ಎಂಬ ವಿನ್ಯಾಸವೂ, ಮುಂದಿನ 'ಸೂತ್ರಾಣಿ ಯಥಾಕಥಂಚಿತ್ ಯೋಜನೀಯಾನಿ'(1-1-6) ಎಂಬ ವಿನ್ಯಾಸವೂ ಅವರ ಅಂತರಂಗವನ್ನು ಸೂಚಿಸಿದರೂ, ವ್ಯಾಖ್ಯಾನಕಾರರು ಆಚಾರ್ಯರ ಅಂತರಂಗವನ್ನರಿಯಲು ಸಮರ್ಥರಾಗದಿರುವುದಕ್ಕೆ ಆತ್ಮತತ್ತ್ವವೇ ಒಂದು ವಿಧದಲ್ಲಿ ಸಮಸ್ಯಾತ್ಮಕವೆಂಬಂಶ ಮತ್ತು ಪೂರ್ವವಾಸನೆಯೇ ಕಾರಣವೆಂಬುದು ಸ್ಪಷ್ಟವಾಗುತ್ತದೆ.

ಇದಕ್ಕೆ ನೇರೆದುರಾಗಿ, 'ಪ್ರಾಚೀನರ ವ್ಯಾಖ್ಯಾನವನ್ನನುಸರಿಸಿ ಸೂತ್ರಗಳಿಗೆ ಸ್ವರಸ ಸಿದ್ಧವಾದ ಅರ್ಥವನ್ನೇ ತೋರಿಸಲಾಗುತ್ತದೆ' ಎಂಬ ಶ್ರೀಭಾಷ್ಯದ ಪೀಠಿಕೆಯನ್ನು ನೋಡಿದರೆ ಎರಡರ ತತ್ತ್ವಸ್ಥಿತಿಯು ಅರ್ಥವಾಗದಿರಲಾರದು.

ಜಗತ್ತು ಯಾವತ್ತು ಒಂದೇ ರೀತಿಯಲ್ಲಿರಲು ಸಾಧ್ಯವಿಲ್ಲ. ಸತ್ತ್ವರಜಸ್ತಮೋಗುಣಗಳ ಪ್ರಭಾವವು ಸದಾ ಆಗುತ್ತಿರುವುದರಿಂದ ಎಲ್ಲರೂ ಒಂದೇ ರೀತಿಯಲ್ಲಿ ಚಿಂತಿಸಲು ಹೇಗೆ ಸಾಧ್ಯ? ವೈಷಮ್ಯವೇ ಸೃಷ್ಟಿ, ಸಾಮ್ಯವೇ ಲಯವೆಂಬುದು ವಿಜ್ಞಾನದಿಂದ ಸಿದ್ಧವಾದ ವಿಷಯ. 'ಭಿನ್ನರುಚಿರ್ಹಿ ಲೋಕಃ' ಎಂಬುದೇ ಎಲ್ಲಾ ಕಾಲಕ್ಕೂ ಅನ್ವಯಿಸುವ ನ್ಯಾಯ. ಆದ್ದರಿಂದ ಎಲ್ಲಾ ಜನರನ್ನು ಒಂದೇ ರೀತಿಗೆ ಕಟ್ಟಿಹಾಕಿಡಲು ಯಾರಿಂದಲೂ, ಎಂದಿಗೂ ಸಾಧ್ಯವಿಲ್ಲ. ಅವರವರಿಗೆ ಯಾವುದು ರುಚಿಸುವುದೊ, ಅದರಂತೆ ಅವರವರು ವರ್ತಿಸುವುದೇ

ಸಹಜ. ಯಾವ ಅಭಿಪ್ರಾಯವನ್ನೂ ಯಾರ ಮೇಲೂ ಹೊರಿಸಲು ಶ್ರಮಿಸಬೇಕಾದ ಅಗತ್ಯವೂ ಇಲ್ಲ. ಅಂದರೆ, ಪರರ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವುದೂ ಶಾಂತಿಗೆ ಪ್ರಧಾನವಾದ ಮಾರ್ಗ. ಮಹರ್ಷಿಗಳ ಅಭಿಪ್ರಾಯವೂ ಎಲ್ಲಕ್ಕೂ ಅವಕಾಶ ಕೊಡುವುದರಿಂದ ಆತ್ಮತತ್ತ್ವದ ವಿಷಯದಲ್ಲಿ, ಕುರುಡರು ಆನೆಯನ್ನು ಕಂಡಂತೆ ಆಗಬಾರದು.

ಮೂಲಭೂತವಾಗಿ ಒಂದು ಸೂಕ್ಷ್ಮಾಂಶವನ್ನು ಎಲ್ಲರೂ ಗಮನಿಸಬೇಕು. 'ಶಬ್ದಾರ್ಥಪ್ರತ್ಯಯಾನಾಮಿತರೇತರಾಧ್ಯಾಸಾತ್ಸಂಕರಃ' (ಯೋ.ಸೂ.3–17) ಎಂದು ಯೋಗಸೂತ್ರವಿದೆ. ವ್ಯಾಕರಣನಿಯಮದಂತೆ 'ಪ್ರತ್ಯಯ'ಪದವು ಅಥವಾ ವಸ್ತು. ವಸ್ತುವಿನ ಸ್ಥಿತಿ, ಅದರ ಅನುಭವ, ಅದರ ವ್ಯವಹಾರ ಎಂಬುದು ಕ್ರಮ. ಈ ಮೂರರ ಸಾಂಕರ್ಯ ಬೆರಕೆ ಸಹಜ. ವಿಮರ್ಶಕನಿಗೆ ಮೂರನ್ನೂ ಬೇರ್ಪಡಿಸಿ ಚಿಂತಿಸುವ ಶಕ್ತಿಯಿದ್ದಾಗಲೇ ವಿಮರ್ಶೆ ಪ್ರಾಮಾಣಿಕವಾಗುತ್ತದೆ. ಇಲ್ಲದಿದ್ದರೆ, ಸಾಂಕರ್ಯ ಮತ್ತು ಗೊಂದಲ ಅನಿವಾರ್ಯ. ಅಭಿಪ್ರಾಯ ಭೇದಗಳಿಗೆಲ್ಲಾ ಇದೇ ಮೂಲವಾಗಿದೆ. ಅಂತಹ ಶಕ್ತಿಯಿಲ್ಲದವರು ವಿಮರ್ಶೆಗೆ ಇಳಿಯಲೇಬಾರದು. ಇದಲ್ಲದೆ, ಶ್ರೀಭಾಗವತದಲ್ಲಿ (3–3–3) 'ಶಬ್ದದಲ್ಲಿ ಒಂದು ಮಾಯೆ ಇದೆ. ಅರ್ಥ ಆಗದೆ ಇದ್ದರೂ, ಅರ್ಥವಾದಂತೆ ಭ್ರಮೆಯನ್ನು ಹುಟ್ಟಿಸುತ್ತದೆ' ಎಂಬ ಸೂಕ್ಷ್ಮಾಂಶವನ್ನು ಹೇಳಿದೆ. ಅತೀಂದ್ರಿಯವಾದ ವಸ್ತುಗಳ ವ್ಯವಹಾರದಲ್ಲಿ ಇದನ್ನು ನೋಡಬಹುದು. ಆದ್ದರಿಂದ ಎಚ್ಚರಿಕೆ ಅತ್ಯಾವಶ್ಯಕ.

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಸ್ಸದಾ ॥

ಎಂಬ ಆರ್ಷವಚನದಲ್ಲಿರುವ ಹಿತವನ್ನರಿತು ತನ್ನನ್ನು ತಾನು ಕಾಪಾಡಿಕೊಳ್ಳುವುದೇ ಜಾಣ್ಮೆಯಾಗುವುದು.

ಬ್ರಹ್ಮಸೂತ್ರಗಳು ಶ್ರುತಿಗಳ ಅರ್ಥವನ್ನು ನಿರ್ಣಯಿಸುವ ನ್ಯಾಯಗಳನ್ನು ನಿರೂಪಿಸುವುದಕ್ಕಾಗಿ ಬಂದವೇ ಹೊರತು, ಅವು ಕೇವಲ ಧರ್ಮಗ್ರಂಥವಾದ ಸ್ಮೃತಿಗಳಿಗೆ ಸಮಾನವಲ್ಲ. ಇಲ್ಲದಿದ್ದರೆ, ಅನ್ಯೋನ್ಯಾಶ್ರಯದೋಷವು ಅನಿವಾರ್ಯ. ಈ ಅಂಶವು ಮಹಾದಾರ್ಶನಿಕರಾದ ಶ್ರೀಶಂಕರಾಚಾರ್ಯರಿಗೆ ತಿಳಿಯದಿರಲು ಸಾಧ್ಯವೇ ಇಲ್ಲ. ಮಹಾಮೀಮಾಂಸಕರಾದ ಭಾಮತೀಕಾರರಿಗೂ ತಿಳಿಯದಿರಲು ಸಾಧ್ಯವೂ ಇಲ್ಲ. ಸಾರವಾಗಿ ಹೇಳುವುದಾದರೆ, ಶ್ರೀಶಂಕರರು ಪ್ರಾರಂಭಿಸಿದ

ವೈದಿಕಸಂಸ್ಕೃತಿಯ ಪುನರುತ್ಥಾನವನ್ನು ಶ್ರೀರಾಮಾನುಜರು ಪೂರೈಸಿದರೆಂಬುದೇ ಸತ್ಯ. ಇದನ್ನು ಎರಡೂ ಕಡೆಯ ಕೆಲವು ಸಂಪ್ರದಾಯವಾದಿಗಳು(!) ಒಪ್ಪದಿದ್ದರೆ, 'ಸತ್ಯ' ಎಂದೂ ಕಹಿಯಾದ್ದೇ ಎಂಬುದೇ ಉತ್ತರ. ಎಲ್ಲವನ್ನು ಯೋಚಿಸಿದರೆ 'ಕಾಲಾಯ ತಸ್ಮೈ ನಮಃ' ಎಂದೇ ಹೇಳಬೇಕಾಗಿದೆ.

****

ಗ್ರಂಥ-ಋಣ

ಶ್ರೀಭಾಷ್ಯ

ಸಂಸ್ಕೃತ ಸಂಶೋಧನ ಸಂಸತ್

ಮೇಲುಕೋಟೆ, 2009

'ಅಥ' ಶಬ್ದಾರ್ಥನಿರೂಪಣೆ

ವಿಜ್ಞಾಪನೆ

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಸ್ಸದಾ ॥

ಎಂದು ಮಹಾಭಾರತ ಹೇಳುತ್ತದೆ. ' ಎಲ್ಲ ಶಾಸ್ತ್ರಗಳೂ ಶಾಂತಿಗಾಗಿಯೇ ಏರ್ಪಟ್ಟಿವೆ. ಯಾವನ ಮನಸ್ಸು ಸದಾ ಶಾಂತವಾಗಿಯೇ ಇರುವುದೊ, ಅವನೇ ಎಲ್ಲ ಶಾಸ್ತ್ರಗಳನ್ನು ಅರಿತವನು' ಎಂಬುದು ಇದರ ಸಹಜವಾದ ಅರ್ಥ.

ಪ್ರಸಿದ್ಧ ದಾರ್ಶನಿಕರಾದ ಮಹಾಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಈ ಶ್ಲೋಕಕ್ಕೆ 'ಯಾವನ ಮನಸ್ಸು ಶಾಂತವಾಗಿರುವುದೊ ಅವನೇ ಎಲ್ಲ ಶಾಸ್ತ್ರವನ್ನು ತಿಳಿಯಬಲ್ಲವನಾಗುತ್ತಾನೆ' ಎಂಬ ಮತ್ತೊಂದು ಅರ್ಥವನ್ನು ಹೇಳುವರು. ಈ ಎರಡನೆಯ ಅರ್ಥದ ವೈಶಿಷ್ಟ್ಯವನ್ನು ತಿಳಿಯಬಲ್ಲವರೂ ವಿರಳ ಎಂದೇ ಹೇಳಬೇಕು.

'ಶಾಸ್ತ್ರಪಂಡಿತರಲ್ಲಿ ಕೆಲವರು ಯಾವುದನ್ನೂ ಮಧ್ಯಸ್ಥದೃಷ್ಟಿಯಿಂದ ತಿಳಿಯಲಾರರು' ಎಂಬ ಒಂದು ಅಪವಾದ ಲೋಕದಲ್ಲಿ ಉಂಟು. 'ತಾನು ಓದಿದ, ತಾನು ಅಭಿಮಾನಿಸಿದ ಶಾಸ್ತ್ರವೊಂದೇ ಶಾಸ್ತ್ರ, ಉಳಿದವೆಲ್ಲವೂ ದಂಡ' ಎಂಬುದು ಅಂತಹ ಪಂಡಿತರ ಭಾವನೆ. ಆದರೆ ಪ್ರತಿಯೊಂದು ಶಾಸ್ತ್ರಕ್ಕೂ ಅಸಾಧಾರಣವಾದ ಒಂದು ವಿಷಯ ಇದೆ. ಆಯಾ ವಿಷಯದಲ್ಲಿ ಅದೇ ಪ್ರಮಾಣ. 'ಪದವಾಕ್ಯಪ್ರಮಾಣ' ಶಾಸ್ತ್ರಗಳೆಂದು ವ್ಯಾಕರಣ, ಮೀಮಾಂಸೆ, ನ್ಯಾಯಶಾಸ್ತ್ರಗಳಿಗೆ ಪ್ರಸಿದ್ಧಿ ಇರುವುದು ಎಲ್ಲರಿಗೂ ತಿಳಿದ ವಿಷಯ. ಆದರೂ ಈಗಿನ ಶಾಸ್ತ್ರಗ್ರಂಥಗಳಲ್ಲಿ ತೀವ್ರವಾದ ಪರಸ್ಪರ ಖಂಡನೆಗಳನ್ನು ನೋಡಬಹುದು. ಶಾಂತಿ ಪ್ರಧಾನವಾದ ವೇದಾಂತಶಾಸ್ತ್ರದಲ್ಲಿರುವ ಖಂಡನಮಂಡನಗಳಂತೂ ಎಲ್ಲವನ್ನೂ ಮೀರುವಂತಿದೆ.

ಮಹಾದಾರ್ಶನಿಕರೂ, ನಿರ್ಮತ್ಸರ ಅಪ್ರತಿಮ ವಿದ್ವಾಂಸರೂ ಆಗಿದ್ದ ನನ್ನ ಪರಮಾಚಾರ್ಯರಾದ ಶ್ರೀ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳು 'ಶ್ರೀಮದ್ರಾಮಾನುಜರೊಬ್ಬರೇ ಅವತಾರ ಪುರುಷರು, ಉಳಿದವರಲ್ಲ ಎಂದು ನಾನು ಒಪ್ಪುವುದಿಲ್ಲ. ಆದರೆ ಅವರುಗಳ ಆಶಯವನ್ನು ಬಹಳ ಕಷ್ಟಪಟ್ಟು ತಿಳಿದುಕೊಳ್ಳಬೇಕು' ಎಂದು ಆಗಾಗ ಅನುಗ್ರಹಿಸುತ್ತಿದ್ದರು. ಅಂತಹ ಮಹಾತ್ಮರ ಆಶೀರ್ವಾದದಿಂದಲೂ, ಜಗದ್ಗುರುವಾದ ಪರಮಾತ್ಮನ ಕೃಪೆಯಿಂದಲೂ ನಾನು ಆ ಆಶಯಾನ್ವೇಷಣೆಯಲ್ಲಿ, ಸಾಮಾನ್ಯರು ಯಾರೂ ಊಹಿಸಲಾರದಷ್ಟು ಜಯಶೀಲನಾಗಿರುವೆನು. ಆದಕಾರಣ ನಿರರ್ಥಕವಾದ ಖಂಡನಮಂಡನ ಅಥವಾ ಪರನಿಂದನಗಳಲ್ಲಿ ಇಳಿಯಲು ನನಗೆ ಶಕ್ಯವಿಲ್ಲ. ಆದರೇ 'ಸತ್ಯಾಂಶವನ್ನು ಹೊರಗೆಡುಹಿಸಬೇಕಾದ ನಿರ್ಬಂಧ ಒದಗಿದಾಗ ಹಿಂಜರಿಯುವುದು' ಎಂದು ಇದರ ಅರ್ಥವಲ್ಲ. ಇದರಿಂದಲೇ ಶ್ರೀ ಶ್ರೀಗಳವರ ಆದೇಶಾನುಸಾರ ಈ ಕಿರುಹೊತ್ತಿಗೆಯನ್ನು ನಾನು ಬರೆದಿರುವೆನು. ಇದರಲ್ಲಿರುವ ವಿಷಯಗಳೆಲ್ಲವೂ ನನ್ನ ಪರಮಾಚಾರ್ಯರದ್ದೇ ಆಗಿವೆ.

ಪರಮತಖಂಡನೆಯೇ ತಪ್ಪಾದರೆ, ಎಲ್ಲ ಆಚಾರ್ಯರೂ ಅದನ್ನು ಹೇಗೆ ಮಾಡಿದರು? ಎಂಬ ಪ್ರಶ್ನೆ ಏಳುವುದು ಸಹಜ. ಇದಕ್ಕೆ ಶ್ರೀಮದ್ವೇದಾಂತದೇಶಿಕರು ಬ್ರಹ್ಮಸೂತ್ರಗಳ ತರ್ಕಪಾದದ ಆರಂಭದಲ್ಲಿ 'ಮಹಾಜ್ಞಾನಿಯಾದ ವ್ಯಾಸರು ಪರನಿಂದೆಯನ್ನು ಮಾಡುವುದು ಸರಿಯೆ' ಎಂದು ಶಂಕಿಸಿಕೊಂಡು, ಮಂದ ಜನರ ಸಂದೇಹಶಾಂತಿಗಾಗಿ ಇದನ್ನು ಮಾಡಿರುವುದಾಗಿ ಉತ್ತರವನ್ನು ಕೊಟ್ಟಿರುವರು.

ಇದರಲ್ಲಿ 'ಮಹಾಜ್ಞಾನಿಗೆ ಪರನಿಂದೆ ಯುಕ್ತವಲ್ಲ' ಎಂಬ ಆಕ್ಷೇಪವೂ, 'ಅಲ್ಪಪ್ರಜ್ಞರ ಮನಸ್ಸಿನ ಸ್ಥಿರತೆಗಾಗಿ ಇದನ್ನು ರಚಿಸಲಾಗಿದೆ' ಎಂಬ ಸಮಾಧಾನವೂ ಗಮನಾರ್ಹ. ಇದರ ಮೇಲೂ ರಾಗದ್ವೇಷದಿಂದ ದೋಷಾರೋಪಣೆ ಮಾಡಬಹುದು. 'ಬ್ರಾಹ್ಮಣಾಃ ಪರನಿಂದಯಾ' ಎಂದು ತನ್ನ ಬ್ರಾಹ್ಮಣ್ಯವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಬಹುದು.

ಆದರೆ ತನ್ನ ಮಾರ್ಗದಲ್ಲಿ ನಿಷ್ಠೆಯನ್ನು ಕಾಣದವರಿಗೆ ಮಾತ್ರವೇ ಪರನಿಂದೆ ರುಚಿಸುತ್ತದೆ. ಮೊದಲು ತನಗೆ ಒಂದು ಮಾರ್ಗ ಬೇಕು. ಅದರಲ್ಲಿ ಅವನು ಮುಂದುವರಿಯುತ್ತಿರಬೇಕು. ಅದರಲ್ಲಿ ಆನಂದವನ್ನು ಕಾಣುತ್ತಿರಬೇಕು. ಇಂತಹವನಿಗೆ ಯಾವ ಪರನಿಂದೆಯೂ ರುಚಿಸದು. 'ಪುಸ್ತಕಪಾಂಡಿತ್ಯವೇ

ಪರಮಪುರುಷಾರ್ಥ' ಎಂದಿರುವವರಿಗೆ ಪರನಿಂದೆ ಮೋಕ್ಷಸಾಧನವಲ್ಲ. ಮೋಕ್ಷವೇ ಆಗುತ್ತದೆ.

ಸ್ವಮತನಿಷ್ಠೆ, ಅಭಿಮಾನ, ಆಗ್ರಹ ಮುಂತಾದವುಗಳಿಗೆ ತಾರತಮ್ಯವನ್ನೇ ಅರಿಯದ ಸ್ಥಿತಿಯಲ್ಲಿ ನಾವಿದ್ದೇವೆ. ಇಂತಹ ಸ್ಥಿತಿಯಲ್ಲಿ ಪರನಿಂದೆಯು ಸ್ವರೂಪಸ್ಥಾನಮಾನಾದಿಗಳೂ ಗೊಂದಲದಲ್ಲೇ ಕೊನೆಗಾಣುತ್ತವೆ.

ಶ್ರೀಮದಾನಂದತೀರ್ಥರೂ ಸಹ ಮುಮುಕ್ಷುವಿಗೆ ತನ್ನ ಮನಸ್ಸಿನ ಸ್ಥೈರ್ಯಕ್ಕಾಗಿ 'ಅಯಥಾರ್ಥನಿಂದೆ'ಆರಂಭಾವಸ್ಥೆಯಲ್ಲಿ ಆವಶ್ಯಕ ಎಂದಿಷ್ಟೇ ಹೇಳಿರುವರು. ಇದು ಕಾಲಾಂತರದಲ್ಲಿ ಪರನಿಂದೆಯ ರೂಪವನ್ನು ತಾಳಿ 'ವೈದಿಕರಲ್ಲಿ ಆನಂದತೀರ್ಥರೊಬ್ಬರೇ ಪರನಿಂದೆಗೆ ಮೋಕ್ಷಸಾಧನತ್ವವನ್ನು ಹೇಳುತ್ತಾರೆ' ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ. ಆದರೆ, ಆಚಾರ್ಯರಿಗೆ 'ಅಯಥಾರ್ಥನಿಂದಾ'ಪದದ ಈಗಿನ ಅರ್ಥ ಸಮ್ಮತವಾಗಿರಲಾರದು ಎಂಬುದೇ ನಮ್ಮ ಅಭಿಪ್ರಾಯ.

ಇದಲ್ಲದೆ, 'ಪರ' ಪದದ ಅರ್ಥ, 'ನಿಂದೆ' ಪದದ ಅರ್ಥ ಇದೆಲ್ಲ ಅಷ್ಟು ಸುಲಭವಾಗಿ ನಿರ್ಣಯವಾಗುವ ವಿಷಯವಲ್ಲ. ಇದಲ್ಲದೆ, 'ಯಥಾಶಕ್ತಿ' ಎಂಬ ವಿಶೇಷಣವನ್ನು ಇಲ್ಲಿ ಸೇರಿಸಬೇಕು. ಪ್ರಮಾಣವೂ 'ಯಥಾಶಕ್ತಿ ನಿಗೃಹ್ಣೀಯಾತ್ ದೇವತಾಗುರುನಿಂದಕಾನ್' ಎಂದೇ ಇರುವುದು. ಯಥಾಶಕ್ತಿ ಪದದ ಅರ್ಥವನ್ನು ನಿಶ್ಚಯಿಸುವುದಂತೂ ಮತ್ತಷ್ಟು ಕಷ್ಟ. ಅವರವರ ವಾಸನಾನುಸಾರವಾಗಿ ಇದಕ್ಕೆ ಅರ್ಥವನ್ನು ಹೇಳಬಹುದೇ ಹೊರತು, ಇಷ್ಟೇ ಇದರ ಅರ್ಥ ಎಂದು ಹೇಳುವುದು ಬಹಳ ಕಷ್ಟಕರ.

ಪರಮತಖಂಡನೆಯೂ ಸಹ ಮಂದಮತಿಗಳಿಗಾಗಿಯೇ ಎಂದೇ ಶ್ರೀಮದ್ವೇದಾಂತದೇಶಿಕರು ಹೇಳಿರುವರು. ಅವರಿಗೆ ಅಷ್ಟೊಂದು ವಿಶಾಲ ಭಾವನೆ ಇದ್ದರೆ ಅವರು ಮಾತ್ರ ಹೇಗೆ ಪರಮತಗಳನ್ನು ಖಂಡಿಸಿದರು? ಎಂದು ಪ್ರಶ್ನಿಸಬಹುದು.

'ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ' ಎಂದು ಹೇಳುವ ಭಗವಂತನು 'ತಾನಹಂ ದ್ವಿಷತಃ ಕ್ರೂರಾನ್ ನರಾಧಮಾನ್' ಎಂದು ಆಗ್ರಹಪಡುವುದು ಹೇಗೆ? ಎಂಬುದಕ್ಕೆ ಸರಿಯಾದ ಉತ್ತರವನ್ನು ತಿಳಿಯಲು ಶಕ್ತರು ಇದಕ್ಕೂ ಉತ್ತರವನ್ನು ಪಡೆಯಬಹುದು. ಅತ್ಯಸಂಭಾವಿತರಾದ

ನಾವು ನಮ್ಮನ್ನು ದೇವರ ಆಜ್ಞಾಧಾರಕರಾಗಿ ನಾವಾಗಿಯೇ ಭಾವಿಸಿಕೊಂಡು ಮಹಾತ್ಮರನ್ನು ನಿಂದಿಸಲು ಹೊರಡಬಾರದು. ಅಧಿಕ ಈಗ ಅಪ್ರಸಕ್ತ.

ಅದರಲ್ಲೂ, ಭಾರತದೇಶದ ಆಧ್ಯಾತ್ಮಿಕಕ್ಷೇತ್ರದಲ್ಲಿ, ಗೊಂದಲಮಯವಾದ ಒಂದು ಭಯಂಕರ ಸನ್ನಿವೇಶದಲ್ಲಿ, ಭಕ್ತಿಮಾರ್ಗವನ್ನು ಪುನರುದ್ಧಾರಮಾಡಿ, ಭಾರತ ಸಂಸ್ಕೃತಿಗೇ ಒಂದು ಪರಿವರ್ತನೆಯನ್ನು ಸಾಧಿಸಿದ ಮಹಾಪರಮೈಕಾಂತಿಯಾದ ಶ್ರೀಮದ್ರಾಮಾನುಜರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿಬಿಟ್ಟು, ತಾನು ಮೋಕ್ಷಸಾಧನೆಯನ್ನಾಚರಿಸಿದ್ದಾಗಿ ಒಬ್ಬನು ಭಾವಿಸಿಕೊಂಡರೆ, ಇದಕ್ಕೆ ಆಶ್ಚರ್ಯಪಡುವುದೆ, ಅಥವಾ ಅನುತಾಪಪಡುವುದೆ? ಭಗವಂತನ ಮಾಯೆ ಹೀಗೆಯೂ ಬೆಳೆಯಬೇಕೆ?

ಯಾರೇ ಆಗಲಿ, ಯಾವ ಮತದವರೇ ಆಗಲಿ, ಸಂಪ್ರತಿಪನ್ನರಾದ ಆಚಾರ್ಯರನ್ನು ನಿಂದಿಸಿಬಿಟ್ಟು ಇದರಿಂದ ದೇವರಿಗೆ ಪ್ರೀತಿಯಾಗುತ್ತದೆ ಎಂದು ಭಾವಿಸಿದರೆ ಇದನ್ನು ಏನೆಂದು ಹೇಳೋಣ! ಶ್ರೀಮದ್ರಾಮಾನುಜರ ಧ್ಯಾನಶ್ಲೋಕವನ್ನು ನೋಡಬೇಕು. 'ಯೋ ನಿತ್ಯಮಚ್ಯುತಪದಾಂಬುಜ –ಯುಗ್ಮರುಕ್ಮ–ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ'– 'ಸದಾ ಪರಮಾತ್ಮನ ಪಾದಪದ್ಮಗಳ ವ್ಯಾಮೋಹದಿಂದ ಉಳಿದ ಎಲ್ಲವನ್ನೂ ತೃಣವಾಗಿ ಭಾವಿಸಿದ್ದರು' ಎಂದಿದೆ. ಇಂತಹ ಭಗವದ್ಭಕ್ತರನ್ನು ನಾವು ನಿಂದಿಸಿದರೆ ಅದರಿಂದ ಯಾರಿಗೆ ಹಾನಿ! ದೇವರನ್ನು ಒಲಿಸಿಕೊಳ್ಳುವ ಮಾರ್ಗ ತಿಳಿದವರನ್ನು ಕೇಳಿದರೆ ಇದಕ್ಕೆ ನಿರ್ದಿಷ್ಟವಾದ ಉತ್ತರ ಸಿಕ್ಕುವುದು. ಕೊನೆಯಪಕ್ಷ ಮನಸ್ಸಾಕ್ಷಿಯಾದರೂ ಇದ್ದರೆ ತಾನಾಗಿಯೇ ಉತ್ತರವು ಸಿಕ್ಕಬಹುದು.

'ಶ್ರೀಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತಮಮ್' ಎಂದಿದೆ. ಆದರೆ ಈಗಿನ ದುರದೃಷ್ಟಕರ ಸ್ಥಿತಿಯಲ್ಲಿ, ಎಷ್ಟೇ ಮಹಾಜ್ಞಾನಿಯಾದರೂ ಒಂದು ಮತದವರಿಗೆ ಮತ್ತೊಂದು ಮತದವರು ಜ್ಞಾನಿಗಳೇ ಅಲ್ಲವೆಂಬುದು ಮಾತ್ರವಲ್ಲ. ನಾಯಿಗಿಂತಲೂ ನೀಚರು. ಇದಕ್ಕಿಂತಲೂ ಆತ್ಮದ್ರೋಹ ಒಂದು ಇರುವುದೆ? ನಾಮ ಹಾಕಿದವನು ಪರಮಾತ್ಮನನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಗೋಪಿ ಧರಿಸಿದವನಿಗೆ ಪರಮ ನೀಚ. ನಾಮ ಹಾಕಿದವನಿಗೆ ಗೋಪಿ ಹಾಕಿದವನು ಎಷ್ಟೇ ದೊಡ್ಡವನಾದರೂ ಪರಮ ನೀಚ. ಆಹಾ! ಈಗಿನ ಧರ್ಮನಿರ್ಣಯ ಪ್ರಮಾಣ ಹೇಗಿದೆ? 'ನ ಲಿಂಗಂ ಧರ್ಮಕಾರಣಂ' ಬಾಹ್ಯ ಚಿಹ್ನೆಗಳು ಯಾವುದೂ ಧರ್ಮಕ್ಕೆ ಪ್ರಮಾಣವಲ್ಲ ಎಂಬ ಮಹರ್ಷಿಗಳ ಮಾತೂ ಗೊತ್ತಾಗುವುದಿಲ್ಲ!

'ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ' 'ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಮ್' ಎಂದು ಮಹರ್ಷಿಗಳು ಒಪ್ಪಿದರೆ, ನಮಗೆ ಅದು ಎಷ್ಟು ಸುಲಭ! 'ವಿದ್ವದ್ಭಿಃ ಸೇವಿತಸ್ಸದ್ಭಿಃ ನಿತ್ಯಮದ್ವೇಷರಾಗಿಭಿಃ । ಹೃದಯೇನಾಭ್ಯನುಜ್ಞಾತಃ ಧರ್ಮಃ'– ರಾಗದ್ವೇಷಾದಿರಹಿತಜ್ಞಾನಿಗಳ ಹೃದಯದಿಂದ ಅರಿಯಲ್ಪಡುವುದು ಧರ್ಮ ಎಂದರೆ, ನಾವು ರಾಗದ್ವೇಷಾದಿಪೂರ್ಣ ತಲೆಯಿಂದಲೇ ಧರ್ಮವನ್ನು ನಿರ್ಣಯಿಸಿಬಿಡುತ್ತೇವೆ.

ನಾವು ಎಷ್ಟೊಂದು ಅಪಾಯಕಾರಿಯಾದ ಸಂಸ್ಕಾರವನ್ನು ಬೆಳೆಸಿಕೊಂಡು ಬಿಟ್ಟಿದ್ದೇವೆ ಎಂಬುದನ್ನು ಆತ್ಮಹಿತದೃಷ್ಟಿಯಿಂದ ಪ್ರತಿಯೊಬ್ಬರೂ ಚಿಂತಿಸಬೇಕು.

ಪ್ರಕೃತ ಈ ಗ್ರಂಥರಚನೆಗೆ ನಿರ್ವೇದ ಕಾರಣವೇ ಹೊರತು, ಪರನಿಂದೆ ಎಳ್ಳಷ್ಟೂ ಉದ್ದೇಶವಲ್ಲ. ಚಾರ್ವಾಕದರ್ಶನದಿಂದ ಮಾಧ್ಯಮಿಕ ದರ್ಶನವರೆಗಿನ ನಾಸ್ತಿಕದರ್ಶನಗಳನ್ನೂ, ಆಸ್ತಿಕದರ್ಶನಗಳೆಲ್ಲವನ್ನೂ ಆಳವಾಗಿ ನಾನು ಅಧ್ಯಯನ ಮಾಡಿರುವೆನು. ಪ್ರತಿಯೊಂದರ ಪ್ರಾಮಾಣಿಕತೆ ಸ್ಥಾನಮಾನಗಳನ್ನು ತಿಳಿದಿರುವೆನು. ಆದ್ದರಿಂದಲೇ ಯಾವುದನ್ನೂ ಹಠಾತ್ತಾಗಿ ಮನಸ್ವಿಯಾಗಿ ಬರೆಯಲು ನನಗೆ ಸಾಧ್ಯವಿಲ್ಲ. ಅನಿವಾರ್ಯವಾದ ಕಾರಣದಿಂದ ಅತ್ಯಾವಶ್ಯಕವಾಗಿ ಹೇಳಬೇಕಾದಷ್ಟನ್ನೇ ಹೇಳಿರುವೆನು. ಇಷ್ಟಾದರೂ ಇದರಿಂದ ಯಾರಿಗಾದರೂ 'ಉದ್ವೇಗ' ಆದರೆ ಅವರ ಕ್ಷಮೆಯನ್ನು ಈಗಲೇ ಪೂರ್ವಭಾವಿಯಾಗಿ ಬೇಡುತ್ತೇನೆ.

'ಅಥ' ಶಬ್ದಾರ್ಥನಿರೂಪಣೆ

ಈಗಿನ ಶಾಸ್ತ್ರ ಅಥವಾ ದರ್ಶನಗಳ ಸ್ವರೂಪ ವಿಭಾಗಾದಿಗಳು ಹೇಗಿದ್ದರೂ ಮಹರ್ಷಿಗಳು 'ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ । ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ' ಎಂದು ವಿದ್ಯಾಸ್ಥಾನಗಳು 14 ಎಂದು ಎಣಿಸಿರುವರು. 'ಅಂಗಾನಿ' ಎಂದು ಶಿಕ್ಷಾದಿಗಳನ್ನು ಹೇಳಿದ್ದರಿಂದ ವೇದ ಅಂಗಿಯಾಗುತ್ತದೆ. ಅಂಗಿಯಾದ ವೇದ 4. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಸೂತ್ರಗಳು 6 ಅಂಗಗಳು. ಮೀಮಾಂಸೆ, ನ್ಯಾಯವಿಸ್ತರ, ಪುರಾಣ, ಧರ್ಮಶಾಸ್ತ್ರ 4 ಉಪಾಂಗಗಳು. ಹೀಗೆ ವಿದ್ಯಾಸ್ಥಾನಗಳು 14.

ಇವುಗಳಲ್ಲಿ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಸಂಬಂಧಪಟ್ಟ ನ್ಯಾಯವನ್ನು ನ್ಯಾಯವಿಸ್ತರಶಾಸ್ತ್ರ ಪ್ರದರ್ಶಿಸಿದರೆ ಮೀಮಾಂಸೆಯು ವಾಕ್ಯಕ್ಕೆ ಸಂಬಂಧಪಟ್ಟ ನ್ಯಾಯವನ್ನು ಪ್ರದರ್ಶಿಸುತ್ತದೆ.

ಶಬ್ದಪ್ರಮಾಣದ ವಿಚಾರ ನ್ಯಾಯಶಾಸ್ತ್ರಕ್ಕೆ ಸಂಬಂಧಪಟ್ಟಿದ್ದಾದರೂ, ವಾಕ್ಯಕ್ಕೆ ಸಂಬಂಧಪಟ್ಟ ನ್ಯಾಯಗಳನ್ನು ವಿಸ್ತಾರವಾಗಿ ಪ್ರದರ್ಶಿಸಬೇಕಾಗಿ ಬಂದಿದ್ದರಿಂದಲೂ, ಶಬ್ದಪ್ರಮಾಣಗಳ ಪೈಕಿ 'ವೇದ' ಎಂಬ ಶಬ್ದವೇ ಭಾರತೀಯರಿಗೆ ಅತಿಮುಖ್ಯವಾಗಿ ಆಗಿರುವುದರಿಂದಲೂ, ಆ ಗೌರವದಿಂದ ವಾಕ್ಯನ್ಯಾಯಶಾಸ್ತ್ರ 'ಮೀಮಾಂಸೆ' ಎಂದೆನಿಸಿಕೊಂಡು ಪ್ರತ್ಯೇಕವಾಗಿ ಪರಿಗಣಿತವಾಯಿತು. ಆದ ಕಾರಣದಿಂದಲೇ ಪೂರ್ವೋತ್ತರ ಮೀಮಾಂಸಾ ಸೂತ್ರಗಳನ್ನು 'ನಯಸೂತ್ರಗಳು' ಎಂದು ಹೇಳುವರು.

ಕರ್ಮಭಾಗ, ಬ್ರಹ್ಮಭಾಗ ಎಂದು ವೇದ ಎರಡಾಗಿರುವುದರಿಂದ ವೇದವಾಕ್ಯಗಳಿಗೆ ಸಂಬಂಧಪಟ್ಟ ನ್ಯಾಯಗಳನ್ನು ಪ್ರದರ್ಶಿಸುವ ಮೀಮಾಂಸೆಯೂ, ಕರ್ಮಮೀಮಾಂಸೆ, ಬ್ರಹ್ಮಮೀಮಾಂಸೆ ಎಂದು ಎರಡಾಯಿತು. ವೇದದಲ್ಲಿ ಕರ್ಮಭಾಗ, ಬ್ರಹ್ಮಭಾಗ ಎಂದು ಎರಡಿದ್ದರೂ ಎಲ್ಲವೂ ವೇದವೇ. ಎರಡೂ ಸೇರಿಯೇ ಪೂರ್ಣವೇದ. ಋಗ್ವೇದ ಎಂದಾಗ ಅದರ ಸಂಹಿತೆ, ಅದರ ಐತರೇಯಬ್ರಾಹ್ಮಣ, ಅದರ ಐತರೇಯ ಆರಣ್ಯಕ, ಅದರ ಐತರೇಯ ಉಪನಿಷತ್ತು ಇವೆಲ್ಲವೂ ಸೇರಿಯೇ ಋಗ್ವೇದವಾಗುತ್ತದೆ.

ಯಜುರ್ವೇದವೂ ಅದರ ಸಂಹಿತೆ, ಅದರ ಬ್ರಾಹ್ಮಣ, ಅದರ ಆರಣ್ಯಕ, ಅದರ ಉಪನಿಷತ್ತು ಈ ನಾಲ್ಕು ಸೇರಿಯೇ ಯಜುರ್ವೇದವಾಗುತ್ತದೆ. ಹೀಗೆಯೇ ಎಲ್ಲ ವೇದಗಳಲ್ಲಿ ನಾಲ್ಕು ಭಾಗ ಸೇರಿಯೇ ಒಂದು ವೇದ.

ವೇದವೆಲ್ಲವೂ ಒಂದೇಯಾಗಿತ್ತೆಂದೂ, ಮನುಷ್ಯರ ಶಕ್ತಿಹ್ರಾಸವನ್ನು ನೋಡಿ ಶ್ರೀಕೃಷ್ಣದ್ವೈಪಾಯನರೇ ನಾಲ್ಕಾಗಿ ವಿಂಗಡಿಸಿ 'ವೇದವ್ಯಾಸ'ರು ಎಂದೆನಿಸಿಕೊಂಡರೆಂಬುದೂ ಸರ್ವವಿದಿತ. ಹೀಗೆ ವೇದವೆಲ್ಲವೂ ಒಂದೇ ಗ್ರಂಥವಾದ್ದರಿಂದ ಅದಕ್ಕೆ ಸಂಬಂಧಪಟ್ಟ ನ್ಯಾಯಗಳನ್ನು ಪ್ರದರ್ಶಿಸುವ ಮೀಮಾಂಸೆಯು ಒಟ್ಟು ಒಂದೇ ವಿದ್ಯಾಸ್ಥಾನ. ಆದ್ದರಿಂದಲೇ 'ಮೀಮಾಂಸಾ' ಎಂಬ ಒಂದೇ ಪದದಿಂದಲೇ ಅವೆರಡನ್ನೂ ಹೇಳಿದೆ. ಮೂಲಗ್ರಂಥ ಒಂದೇಯಾಗಿದ್ದು, ಅದರ ವ್ಯಾಖ್ಯಾನವನ್ನು ಅನೇಕರು ಸೇರಿ ಮಾಡಿದ್ದರೂ ವ್ಯಾಖ್ಯಾನ ಒಂದೇ ಆಗುತ್ತದೆ.

ಉತ್ತರಭಾಗದ ವೈಶಿಷ್ಟ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ವ್ಯಾಸರು ಉತ್ತರಭಾಗದ ಸೂತ್ರರಚನೆಯನ್ನು ತಾವೇ ವಹಿಸಿಕೊಂಡರು. ಜೈಮಿನಿಗೆ

ಪೂರ್ವಭಾಗದ ಸೂತ್ರರಚನೆಯನ್ನು ಬಿಟ್ಟುಕೊಟ್ಟರು. ಇಷ್ಟು ಮಾತ್ರಕ್ಕೆ ಅವು ಬೇರೆ ಶಾಸ್ತ್ರವಲ್ಲ.

ವಾಚಸ್ಪತಿಮಿಶ್ರರೊಬ್ಬರೇ ಭಾಮತಿಯನ್ನೂ ನ್ಯಾಯವಾರ್ತಿಕ ತಾತ್ಪರ್ಯ ಟೀಕೆಯನ್ನೂ ಬರೆದಿರುವರು. ಇವೆರಡೂ ಒಂದು ಶಾಸ್ತ್ರವಲ್ಲ. ಜಯಾದಿತ್ಯ ಮತ್ತು ವಾಮನ ಇವರಿಬ್ಬರಿಂದ ರಚಿತವಾದ ಕಾಶಿಕಾವೃತ್ತಿ ಒಂದೇ ಶಾಸ್ತ್ರ, ವಿಷಯಾನುಗುಣವಾಗಿ ಇದನ್ನು ನಿಷ್ಕರ್ಷಿಸಬೇಕೆ ಹೊರತು, ಕರ್ತೃೈಕ್ಯದಿಂದ ಒಂದು ಶಾಸ್ತ್ರವೆಂದೂ, ಕರ್ತೃಭೇಧವಿದ್ದರೆ ಬೇರೆ ಶಾಸ್ತ್ರವೆಂದೂ ನಿಶ್ಚಯಿಸಲಾಗುವುದಿಲ್ಲ.

ವೇದಭಾಗವೆಲ್ಲ ಒಂದೇ ಎಂಬುದರಿಂದ ಅದರ ನ್ಯಾಯ ಪ್ರತಿಪಾದಕ-ಶಾಸ್ತ್ರವನ್ನು ಇಬ್ಬರು ಮಾಡಿದ್ದರೂ ಅದು ಒಂದೇಯಾಗುತ್ತದೆ. ಹೆಚ್ಚಿನ ವಿಷಯಗಳನ್ನು ಹಿಂದಿನ ಕಾಲದ ಗ್ರಂಥಗಳಲ್ಲೇ ವಿವರಿಸಲಾಗಿದೆ.

ಹೀಗೆ ಮೀಮಾಂಸೆ ಎಂಬುದು ಒಂದೇ ಶಾಸ್ತ್ರ ಎಂದ ಮೇಲೆ 'ಅಥಾಽತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಲ್ಲಿ 'ಅಥ' ಶಬ್ದಕ್ಕೆ 'ಕರ್ಮವಿಚಾರಾನಂತರ' ಎಂಬ ಅರ್ಥ ಸಹಜವಾಗಿಯೇ ಆಗುತ್ತದೆ.

ಇವೆರಡೂ ಒಂದೇ ಶಾಸ್ತ್ರವಾದರೆ, ಪರಸ್ಪರ ಖಂಡನೆ ಹೇಗೆ ಸರಿ ಹೋಗುವುದು? ಎಂದು ಶಂಕಿಸಬಹುದು. ಸೇಶ್ವರ ಮೀಮಾಂಸಾದಿ ಅನೇಕ ಗ್ರಂಥಗಳಲ್ಲಿ ಇದನ್ನು ವಿಮರ್ಶಿಸಿ, ಯಾವ ವಿಷಯದಲ್ಲಿ ಪರಸ್ಪರ ಖಂಡನೆ ಇರುವುದಿಲ್ಲವೆಂದು ವಿಸ್ತಾರವಾಗಿ ನಿರೂಪಿಸಲಾಗಿದೆ.

ಉಳಿದ ವಿಷಯಗಳನ್ನು ಏನೇ ಸಮರ್ಥಿಸಿದರೂ, ಬ್ರಹ್ಮಮೀಮಾಂಸೆಯ ಮೊದಲನೆಯ ಸೂತ್ರದಲ್ಲಿ, ಪೂರ್ವಮೀಮಾಂಸಕರಿಗೆ ಸಮ್ಮತವಾದ ಕಾರ್ಯವ್ಯುತ್ಪತ್ತಿಯನ್ನೇ ಪೂರ್ವಪಕ್ಷವಾಗಿಟ್ಟು, ಅದನ್ನು ಖಂಡಿಸಿ, ಸಿದ್ಧವ್ಯುತ್ಪತ್ತಿಯನ್ನು ಸಮರ್ಥಿಸುವುದರಿಂದ ಪೂರ್ವಮೀಮಾಂಸೆಯ ಖಂಡನೆಯಿಂದಲೇ ಉತ್ತರಮೀಮಾಂಸೆ ಪ್ರಾರಂಭಿಸುವಾಗ ಎರಡೂ ಒಂದು ಶಾಸ್ತ್ರ ಎಂದು ಹೇಳುವುದು ಹೇಗೆ? ಎಂದು ಶಂಕಿಸಬಹುದು.

ವೇದದ ಪೂರ್ವಕಾಂಡ ಕರ್ಮಪ್ರಧಾನವಾದುದೆಂಬುದು ಸ್ಪಷ್ಟ. 'ಕರ್ಮ' ಪ್ರಧಾನವಾದಾಗ ಉಳಿದವೆಲ್ಲವೂ ಅದಕ್ಕೆ ಶೇಷಭೂತವಾಗಿಯೇ ಇರಬೇಕಾಗುತ್ತದೆ. ಆದ್ದರಿಂದ ಸಿದ್ಧಪರಪದಗಳೆಲ್ಲವೂ ಕಾರ್ಯದಲ್ಲಿ ಅನ್ವಿತವಾಗಿಯೇ

ಸಾರ್ಥಕವಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಪೂರ್ವಮೀಮಾಂಸೆಯಲ್ಲಿ ಕಾರ್ಯವ್ಯುತ್ಪತ್ತಿಯನ್ನು ಹೇಳುವುದು ಸಹಜ.

ಉತ್ತರಕಾಂಡವಾದ ಉಪನಿಷತ್ತುಗಳಲ್ಲಿ ಬ್ರಹ್ಮವೇ ಪ್ರಧಾನ. ಬ್ರಹ್ಮ ಸಿದ್ಧರೂಪವಾದ ಪದಾರ್ಥವಾದ್ದರಿಂದ ಅದರಲ್ಲಿ ಪದಗಳಿಗೆ ತಾತ್ಪರ್ಯವನ್ನು ಹೇಳಲೇಬೇಕು. ವ್ಯವಹಾರಕಾಂಡವೆಲ್ಲವೂ ಕಾರ್ಯಪರ, ಜ್ಞಾನಕಾಂಡ ಸಿದ್ಧಪರ, ಈ ಎರಡು ಕಾಂಡಗಳಿಗೂ ಖಂಡ್ಯಖಂಡನಭಾವಕ್ಕೆ ಪ್ರಸಕ್ತಿಯೇ ಇಲ್ಲ. ವ್ಯವಹಾರವೆಂದರೆ ಹಾನತ್ಯಾಗ ಅಥವಾ ಉಪಾದಾನ ಸ್ವೀಕಾರ. ಲೋಕದಲ್ಲಿ ಶಬ್ದಪ್ರಯೋಗವೆಲ್ಲವೂ ವ್ಯವಹಾರಾವಸ್ಥೆಯಲ್ಲಿ ಕಾರ್ಯವಿಶೇಷಕ್ಕಾಗಿಯೇ ಇರುವುವು. ಇದನ್ನು ಉತ್ಸರ್ಗನ್ಯಾಯವೆಂದು ಭಾವಿಸಿ, ಬ್ರಹ್ಮಭಾಗದಲ್ಲಿ ಇದಕ್ಕೆ 'ಅಪವಾದ' ವನ್ನು ಪ್ರದರ್ಶಿಸಲಾಗಿದೆ.

ಬ್ರಹ್ಮಮೀಮಾಂಸೆಯಲ್ಲಿ 'ಸಿದ್ಧೇ ವ್ಯುತ್ಪತ್ತಿ' ಯನ್ನು ಸಮರ್ಥನ ಮಾಡಿದ ಮಾತ್ರಕ್ಕೆ 'ಕಾರ್ಯೇ ವ್ಯುತ್ಪತ್ತಿ'ಯನ್ನು ಖಂಡಿಸಿದಂತಾಗುವುದಿಲ್ಲ. 'ಸಿದ್ಧೇಽಪಿ ವ್ಯುತ್ಪತ್ತಿ' ಎಂಬುದು ಮಾತ್ರ ಇಲ್ಲಿ ವಿವಕ್ಷಿತವೇ ಹೊರತು, ಕಾರ್ಯವ್ಯುತ್ಪತ್ತಿಯನ್ನು ಖಂಡಿಸಿದೆ ಎಂದರ್ಥವಲ್ಲ. ಕಾರ್ಯವ್ಯುತ್ಪತ್ತಿಗೆ ಅಪವಾದವನ್ನು ನಿರೂಪಿಸಿದೆ ಎಂದೇ ಅರ್ಥ.

ವಸ್ತುಗಳು ಎರಡು ವಿಧ. ಸ್ವತಃ ಪುರುಷಾರ್ಥರೂಪವಾದವು ಕೆಲವು. ಪರಂಪರೆಯಾಗಿ ಪುರುಷಾರ್ಥಪರ್ಯವಸಾಯಿಯಾಗಿ ಆಗುವುವು ಕೆಲವು. ಅನ್ನ ಸ್ವತಃ ಪುರುಷಾರ್ಥವಲ್ಲ. ಪುರುಷಾರ್ಥವಾದ ತೃಪ್ತಿಗೆ ಸಾಧನ. ಅನ್ನತೃಪ್ತಿ ಸಾಧನವಾಗಬೇಕಾದರೆ ಭೋಜನರೂಪವಾದ ಕ್ರಿಯೆಯಲ್ಲಿ ಅನ್ವಿತವಾಗಲೇಬೇಕು. ತೃಪ್ತಿಗೆ ಮತ್ತೊಂದು ಗುರಿ ಇರುವುದಿಲ್ಲ. ಅದು ಸ್ವಯಂ ಪುರುಷಾರ್ಥ.

ಲೋಕದಲ್ಲಿ ಸ್ವಯಂ ಪುರುಷಾರ್ಥವಾಗದ ವಸ್ತುಗಳನ್ನು ಬೋಧಿಸುವ ಪದಗಳು ಯಾವುದಾದರೊಂದು ಕ್ರಿಯೆಯಲ್ಲಿ ಅನ್ವಿತವಾಗಿಯೇ ತನ್ನ ಸಾರ್ಥಕ್ಯವನ್ನು ಸಂಪಾದಿಸಿಕೊಳ್ಳಬೇಕು. ಸ್ವಯಂ ಪುರುಷಾರ್ಥರೂಪವಾದ ವಸ್ತುವನ್ನು ಬೋಧಿಸುವ ಪದಗಳಿಗೆ ಕ್ರಿಯಾನ್ವಯದ ಆವಶ್ಯಕತೆ ಇರುವುದಿಲ್ಲ. ಬ್ರಹ್ಮ ಸ್ವಯಂ ಪುರುಷಾರ್ಥಭೂತವಾದ ವಸ್ತು. ಅದನ್ನು ಬೋಧಿಸುವ ಪದಕ್ಕೆ ಕ್ರಿಯಾನ್ವಯದ ಅಪೇಕ್ಷೆ ಇರುವುದಿಲ್ಲ. ಹೀಗೆ ಕರ್ಮಕಾಂಡದಲ್ಲಿ ಪ್ರದರ್ಶಿತವಾದ ನ್ಯಾಯಕ್ಕೆ ಅಪವಾದವನ್ನು ಪ್ರದರ್ಶಿಸುವುದು ಜಿಜ್ಞಾಸಾಧಿಕರಣದ ಉದ್ದೇಶವೇ ಹೊರತು ಕರ್ಮಕಾಂಡದ ನ್ಯಾಯವನ್ನು ಖಂಡಿಸುವುದು ಅದರ ಉದ್ದೇಶವಲ್ಲ.

ಅಪವಾದ ಶಾಸ್ತ್ರಗಳೆಲ್ಲವೂ ಹೀಗೆಯೇ ಪ್ರವರ್ತಿಸುತ್ತವೆ. ಅವು ಉತ್ಸರ್ಗಶಾಸ್ತ್ರವನ್ನು ಖಂಡಿಸುವವೆಂದು ಯಾರೂ ಒಪ್ಪುವುದಿಲ್ಲ. ಉತ್ಸರ್ಗಶಾಸ್ತ್ರಕ್ಕೆ ಕೆಲವು ಕಡೆ ಸಂಕೋಚವನ್ನು ಪ್ರದರ್ಶಿಸುವುದೇ ಅಪವಾದಶಾಸ್ತ್ರದ ಗುರಿ. ಆದ್ದರಿಂದ ಪೂರ್ವೋತ್ತರ ಮೀಮಾಂಸೆಗಳಿಗೆ ಯಾವ ಖಂಡ್ಯಖಂಡನಭಾವವೂ ಇರುವುದಿಲ್ಲ.

ಹೀಗೆ ವಿದ್ಯಾಸ್ಥಾನದಲ್ಲಿ ಪರಿಗಣಿತವಾಗಿರುವ ಕ್ರಮದಲ್ಲಿ ಪೂರ್ವೋತ್ತರ ಮೀಮಾಂಸೆಗಳು ಒಟ್ಟು ಒಂದೇ ಶಾಸ್ತ್ರ ಎಂಬುದೇ ವ್ಯಾಸಯಾಜ್ಞವಲ್ಕ್ಯಾದಿಗಳಿಗೆ ಸಮ್ಮತ. ವಿದ್ಯಾಸ್ಥಾನದಲ್ಲಿ ಹಾಗೆ ಹೇಳುವುದಕ್ಕೂ ವಿಚಾರ್ಯವಾದ ವೇದ ಒಂದಾಗಿರುವುದೇ ಮೂಲ ಕಾರಣ.

ಮತ್ತೊಂದಂಶವನ್ನು ನಾವು ಇಲ್ಲಿ ಗಮನಿಸಬೇಕು. 'ಷಡಂಗೋ ವೇದೋಽಧ್ಯೇಯಃ' ಇತ್ಯಾದ್ಯಾಗಮಗಳಿಂದ ಬ್ರಾಹ್ಮಣನಿಗೆ ಸಾಂಗವೇದಾಧ್ಯಯನ ವಿಹಿತವಾಗಿರುವ ವಿಷಯ ಸರ್ವಸಮ್ಮತ. ಸತ್ಸಂಸ್ಕಾರಸಂಪನ್ನನಾದ ಬ್ರಾಹ್ಮಣನ ಪ್ರವೃತ್ತಿಗಳೆಲ್ಲ ಸಹಜವಾಗಿಯೇ ನಿವೃತ್ತಿಮಾರ್ಗದಲ್ಲಿ ಇರುವುದೆಂಬುದೂ ಸರ್ವವಿದಿತ. ನಿವೃತ್ತಿ ಎಂದರೆ, ಶಾಂತಿಮಾರ್ಗ. ಇದರಲ್ಲೇ ನಿತ್ಯನಿರತಿಶಯ ಸುಖ ಸಾಧ್ಯ ಎಂಬುದು ಸತ್ಸಂಸ್ಕಾರಿಗೆ ರಕ್ತಗತವಾಗಿರುತ್ತದೆ.

ಇಂತಹ ಸನ್ನಿವೇಶದಲ್ಲಿ ಕ್ರಮಪ್ರಾಪ್ತವಾದ ಉಪನಯನ ನಡೆದು ಸಾಂಗವೇದಾಧ್ಯಯನ ಮಾಡುತ್ತಾನೆ. ಇವನ ಜನ್ಮದಲ್ಲೇ ಹುದುಗಿದ್ದ ನಿರತಿಶಯ ಸುಖಾಭಿಲಾಷೆ ಸಾಂಗವೇದಾಧ್ಯಯನ ಕಾಲದಲ್ಲಿ ಪೋಷಿತವಾಗಿ, ಅದಕ್ಕೆ ಒಂದು ಮಾರ್ಗ ವೇದದಲ್ಲಿ ಸಿಕ್ಕಬಹುದೆಂಬ ಸಾಮಾನ್ಯ ಪ್ರಜ್ಞೆ ಆ ವಿಪ್ರನಿಗೆ ಹುಟ್ಟುತ್ತದೆ.

ಶಿಕ್ಷಾ ವ್ಯಾಕರಣ ನಿರುಕ್ತಾದಿಗಳೊಂದಿಗೆ ವೇದಾಧ್ಯಯನ ಮಾಡಿರುವುದರಿಂದ ಅಲ್ಲಿನ ಪದಗಳಿಗೆ ಸಾಮಾನ್ಯರೂಪವಾದ ಅರ್ಥ ಅವನಿಗೆ ತಾನಾಗಿಯೇ ತೋರುತ್ತದೆ. ಇದರಿಂದ ಸಾಂಗವೇದಾಧ್ಯಯನ ಮುಗಿದಾಗ ಇವನ ಜಿಜ್ಞಾಸೆ ಮತ್ತಷ್ಟು ತೀವ್ರವಾಗಿ ಅದರ ನಿರ್ಣಯಕ್ಕಾಗಿ ಕಾತರಪಡುವ ಸ್ಥಿತಿಯಲ್ಲಿ ಆ ಉತ್ತಮಾಧಿಕಾರಿ ಇರುತ್ತಾನೆ.

ಸಾಂಗವೇದಾಧ್ಯಯನಕಾಲದಲ್ಲಿ 'ಅಪಾಮ ಸೋಮಮಮೃತಾ ಅಭೂಮ' 'ಅಕ್ಷಯ್ಯಂ ಹ ವೈ ಚಾತುರ್ಮಾಸ್ಯಯಾಜಿನಃ ಸುಕೃತಂ ಭವತಿ' 'ಯನ್ನ ದುಃಖೇನ ಸಂಭಿನ್ನಂ ನ ಚ ಗ್ರಸ್ತಮನಂತರಮ್ । ಅಭಿಲಾಷೋಪನೀತಂ ಯತ್ ತತ್ಸುಖಂ ಸ್ವಃಪದಾಸ್ಪದಂ' ಇತ್ಯಾದಿ ಕರ್ಮಕಾಂಡವಾಕ್ಯಗಳಿಂದ ಕರ್ಮದಿಂದಲೇ

ನಿರತಿಶಯವಾದ ಸುಖಸಾಧ್ಯ ಎಂದು ತೋರುತ್ತದೆ. 'ತಮೇವಂ ವಿದ್ವಾನಮೃತ ಇಹ ಭವತಿ' 'ಅಭಯಂ ಪ್ರತಿಷ್ಠಾಂ ವಿಂದತೇ''ಆನಂದಂ ಬ್ರಹ್ಮಣೋ ವಿದ್ವಾನ್, ನ ಬಿಭೇತಿ ಕದಾಚನ' ಇತ್ಯಾದಿ ಉಪನಿಷದ್ವಾಕ್ಯಗಳಿಂದ ಬ್ರಹ್ಮಜ್ಞಾನ ಅಮೃತತ್ವಕ್ಕೆ ಸಾಧನ ಎಂಬುದೂ ತೋರುತ್ತದೆ. ಈ ವಿಷಯಗಳು ಮನಸ್ಸಿನಲ್ಲಿ ಆವೃತ್ತವಾಗುತ್ತಿರುತ್ತವೆ. 'ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾಃ' 'ಅಮುತ್ರ ಪುಣ್ಯಚಿತಃ ಲೋಕಃ ಕ್ಷೀಯತೇ' 'ಪರೀಕ್ಷ್ಯ ಲೋಕಾನ್ ಕರ್ಮಚಿತಾನ್' ಇತ್ಯಾದಿ ವಾಕ್ಯಗಳಿಂದ ಸ್ಪಷ್ಟವಾಗಿ ಕರ್ಮಗಳ ಸ್ವರೂಪ ವರ್ಣಿತವಾಗಿರುವಾಗ ಇವರು ಮೊದಲು ಕರ್ಮವಿಚಾರದಲ್ಲಿ ಹೇಗೆ ಪ್ರವರ್ತಿಸುವರು? ಎಂದು ಕೇಳಬಹುದು?

'ಅಪಾಮ ಸೋಮಮಮೃತಾ ಅಭೂಮ' ಎಂಬ ವಾಕ್ಯವೂ ಇರುವುದರಿಂದ, ಪರಸ್ಪರ ವಿರುದ್ಧವಾದ ವಾಕ್ಯಶ್ರವಣದಿಂದ ಸಂಶಯ ಬರುವುದೇ ಹೊರತು ನಿಶ್ಚಯ ಬರಲು ಸಾಧ್ಯವಿಲ್ಲ.

ಇದರಂತೆಯೇ 'ವೀರಹಾ ವಾ ಏಷ ದೇವಾನಾಂ ಯೋಽಗ್ನಿಮುದ್ವಾಸಯತೇ' ಇತ್ಯಾದಿಗಳಲ್ಲಿ ಯಾವಜ್ಜೀವಕರ್ಮಾನುಷ್ಠಾನ ವಿಹಿತವಾಗಿರುವುದೂ, ಒಂದು ನಿರ್ಣಯಕ್ಕೆ ಬರುವುದಕ್ಕೆ ತಡೆಯಾಗಿರುತ್ತದೆ. ಕರ್ಮಗಳು ಅಷ್ಟೊಂದು ಹೇಯವಾಗಿದ್ದರೆ, ಯಾವಜ್ಜೀವ ಅದರ ವಿಧಾನ ಹೇಗೆ ಸಾಧ್ಯ? ಒಂದೇ ವೇದದಲ್ಲೇ ಪರಸ್ಪರ ವಿರುದ್ಧವಾದ ಎರಡು ಅಂಶ ಕಂಡುಬಂದರೆ, ಎರಡೂ ಅಧಿಕಾರಿಭೇದಾದಿಗಳಿಂದ ಪ್ರಮಾಣವಾಗುವುದನ್ನು ಶ್ರೌತಪ್ರಕ್ರಿಯೆಯಲ್ಲೇ ಕಂಡ ಅವನು ಇಲ್ಲೂ ಹಾಗೆಯೇ ಇರಬಹುದು ಎಂದು ಸಾಮಾನ್ಯವಾಗಿ ಭಾವಿಸುತ್ತಾನೆ.

ಒಟ್ಟಿನಲ್ಲಿ ನಾನಾವಿಧವಾಕ್ಯಶ್ರವಣಗಳಿಂದ ಸ್ವತಃ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲದಿದ್ದಾಗ ಈ ಅಧಿಕಾರಿಯು. ಅವರ ನಿರ್ಣಯಕ್ಕಾಗಿ ಪ್ರಯತ್ನಿಸುತ್ತಾನೆ.

ಈ ಪ್ರಯತ್ನ ಇವನ ಅಧ್ಯಯನಕ್ರಮವನ್ನು ಅನುಸರಿಸಿ ಮೊದಲು ಪೂರ್ವಭಾಗವಿಷಯದಲ್ಲಿ ಇಳಿಯುವುದು ಸಹಜ. ಮಾನವನ ಪ್ರಕೃತಿ ಸಹಜವಾಗಿಯೇ ಕರ್ಮಪ್ರವಣವೇ ಆಗಿರುತ್ತದೆ. 'ಕರ್ಮದಿಂದಲೇ ಇಂತಹ ನಿತ್ಯ ನಿರತಿಶಯ ಪುರುಷಾರ್ಥ ದೊರೆಯುವುದಾದರೆ. ಸರ್ವೇಂದ್ರಿಯ ಉಪರತ್ಯಾದಿಗಳಿಗಾಗಿ ಹೊಡೆದಾಡಬೇಕಾಗಿ ಬರುವುದಿಲ್ಲ' ಎಂಬ ಭಾವನೆಯಿಂದ. ಕರ್ಮಸ್ವರೂಪಾದಿಗಳ ವಿಚಾರವನ್ನು ಪ್ರತಿಪಾದಿಸುವ ಕರ್ಮಮೀಮಾಂಸೆಯ ವಿಚಾರದಲ್ಲಿ ತೊಡಗುತ್ತಾನೆ.

ಆದರೆ, ಇದರಿಂದ ಅವನಿಗೆ ವಿಪರೀತ ಫಲವೇ ದೊರೆಯುತ್ತದೆ. ಆವೃತ್ತಿವಿಧಾನಾದಿಗಳಿಂದ ಅಗ್ನಿಹೋತ್ರಾದಿಗಳ ಫಲವಾದ ಸ್ವರ್ಗದಲ್ಲೂ ತಾರತಮ್ಯ ಇರುವುದನ್ನು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಕಂಡ ಅವನು 'ಕರ್ಮದಿಂದ ಸಾತಿಶಯ ಫಲ ದೊರೆಯುವುದೇ ಹೊರತು, ನಿರತಿಶಯವಾದ ಫಲ ದೊರೆಯುವುದಿಲ್ಲ' ಎಂಬ ನಿರ್ಣಯಕ್ಕೆ ಬರುತ್ತಾನೆ.

ಈ ಸ್ಥಿತಿಯಲ್ಲಿ, 'ಹಾಗಾದರೆ, ಉತ್ತರಭಾಗದಲ್ಲಿ ಹೇಳಿರುವುದನ್ನು ವಿಮರ್ಶಿಸೋಣ' ಎಂಬ ಭಾವನೆ ಬರುವುದು ಸಹಜ. ಇಂತಹವನೇ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಅಧಿಕಾರಿಯಾಗುತ್ತಾನೆ. ಇದನ್ನೇ 'ಕರ್ಮವಿಶೇಷ್ಯಕ-ಅಲ್ಪಾಸ್ಥಿರಫಲತ್ವ-ನಿರ್ಣಯಪೂರ್ವಕ- ಬ್ರಹ್ಮವಿಶೇಷ್ಯಕ-ಅನಂತಸ್ಥಿರಫಲಾಪಾತಪ್ರತೀತೇಃ ಸತ್ತ್ವಾತ್ ಬ್ರಹ್ಮವಿಚಾರೇ ಪ್ರವರ್ತತೇ' ಎಂದು ಹೇಳಿದ್ದಾರೆ.

ಇವೆಲ್ಲವೂ ವಸ್ತುಸ್ಥಿತಿಕಥನವೇ ಹೊರತು ಹೊಸದಾದ ವಿಷಯ ಯಾವುದೂ ಇದರಲ್ಲಿ ಇಲ್ಲ. ವೇದವೆಲ್ಲವೂ ಒಂದೇ ಆದ್ದರಿಂದ ಇದಕ್ಕೆ ಸಂಬಂಧಪಟ್ಟ ನ್ಯಾಯಶಾಸ್ತ್ರವೂ ಸಹ ಒಂದೇ ಆಗಬೇಕಾಗುತ್ತದೆ ಎಂಬುದೇ ಐಕಶಾಸ್ತ್ರ್ಯಕ್ಕೆ ಮೂಲವಾಗಿದೆ.

ಸಾಂಗವೇದಾಧ್ಯಯನ, ಇದರಿಂದ ಕರ್ಮಕಾಂಡ ಜ್ಞಾನಕಾಂಡ ಎರಡರಲ್ಲೂ ನಿರತಿಶಯಫಲಾಪಾತಪ್ರತೀತಿ, ಪ್ರಕೃತಿಸಹಜವಾದುದರಿಂದ ಮೊದಲು ಕರ್ಮವಿಚಾರದಲ್ಲಿ ಪ್ರವೃತ್ತಿ. ಇದರಿಂದ ನಿರತಿಶಯ ಪುರುಷಾರ್ಥ ಕರ್ಮಗಳಿಂದ ಸಾಧ್ಯವಿಲ್ಲ ಎಂಬ ನಿರ್ಣಯ. ಇದರ ಫಲವಾಗಿ ಉತ್ತರಭಾಗದಲ್ಲಿ ಪ್ರವೃತ್ತಿ. ಇಷ್ಟೆಲ್ಲವೂ ಎಷ್ಟು ಸಹಜವಾದ ವಿಷಯಗಳು! ಇಂತಹ ಸ್ಥಿತಿಯಲ್ಲಿ 'ಅಥ'ಶಬ್ದಕ್ಕೆ ಕರ್ಮವಿಚಾರಾನಂತರ್ಯವನ್ನು ಬಿಟ್ಟು ಬೇರೆ ಅರ್ಥವನ್ನು ಸ್ವರಸವಾಗಿ ಹೇಳಲು ಸಾಧ್ಯವೇ?

ಗುರೂಪದೇಶದಿಂದಲೇ 'ಕರ್ಮಗಳಿಂದ ದೊರೆಯುವ ಫಲ ನಿರತಿಶಯವಾದ್ದಲ್ಲ' ಎಂದು ತಿಳಿಯುವವನು, ಮೊದಲೇ ಬ್ರಹ್ಮವಿಚಾರದಲ್ಲಿ ಪ್ರವರ್ತಿಸಬಹುದಲ್ಲವೆ? ಆವಾಗ 'ಕರ್ಮವಿಚಾರಾನಂತರ್ಯ'ವನ್ನು ಹೇಗೆ ಹೇಳಲು ಸಾಧ್ಯ? ಎಂದು ಪ್ರಶ್ನಿಸಬಹುದು. ಬ್ರಹ್ಮವಿಚಾರವನ್ನು ಗುರುಮುಖದಿಂದಲೇ ಒಬ್ಬನು ತಿಳಿಯುವುದಾದರೆ, ಬ್ರಹ್ಮಮೀಮಾಂಸಾಶಾಸ್ತ್ರವೇ ವ್ಯರ್ಥ ಎಂದು ಒಬ್ಬನು ಹೇಳಿದರೆ, ಆವಾಗ ಏನು ಉತ್ತರ?

'ಕೇವಲ ಉಪದೇಶ ಮಾತ್ರವೇ ಸಾಲದು, ಯುಕ್ತಿಯಿಂದಲೂ ಅದನ್ನು ಸ್ಥಿರಪಡಿಸಿಕೊಳ್ಳಬೇಕು, ಎಂಬುವವನಿಗಾಗಿಯೇ ಬ್ರಹ್ಮಮೀಮಾಂಸಾ ಹೊರಟಿದೆ' ಎಂದರೆ ಈ ನ್ಯಾಯ ಕರ್ಮವಿಚಾರಕ್ಕೂ ಸಮಾನ.

ಒಬ್ಬ ವಿಶಿಷ್ಟಾಧಿಕಾರಿಗೆ 'ಸಾಧನಾಧ್ಯಾಯ, ಫಲಾಧ್ಯಾಯ ಎರಡೇ ಸಾಕು, ಉಳಿದವು ಬೇಡ' ಎಂದು ತೋರಬಹುದು. ಅಷ್ಟು ಮಾತ್ರಕ್ಕೆ ಈ ಎರಡು ಅಧ್ಯಾಯಗಳು ಬೇರೆ ಶಾಸ್ತ್ರ, ಮೊದಲೆರಡು ಅಧ್ಯಾಯಗಳು ಬೇರೆ ಶಾಸ್ತ್ರ ಎಂದಾಗುವುದಿಲ್ಲ. ಸಹಜವಾಗಿ ಆಗುವ ಬೆಳವಣಿಗೆಯ ಮೇಲೆಯೇ ಶಾಸ್ತ್ರಗಳನ್ನು ರಚಿಸಬೇಕಾಗುತ್ತದೆ.

ಶಾಸ್ತ್ರಗಳು ಉತ್ಸರ್ಗಸಿದ್ಧವಾದ ಸಾಧಾರಣ ಸೃಷ್ಟಿನಿಯಮಸಿದ್ಧವಾದ ವಿಷಯದ ಮೇಲೆ ಹೊರಡುವವೇ ಹೊರತು, ಯಾರೋ ಒಬ್ಬನ ಅಪವಾದವನ್ನು ಇಟ್ಟುಕೊಂಡು ಹೊರಡುವುದಿಲ್ಲ. ಯಾರೋ ಒಬ್ಬನು ಮೂರನೆಯ ಕಾಂಡವನ್ನು ಮೊದಲು ಅಧ್ಯಯನ ಮಾಡಬಹುದು. ಇದರಿಂದ ವೇದದ ಕ್ರಮ ಬದಲಾಗುವುದಿಲ್ಲ.

ಇದರಂತೆ ಉತ್ತರಭಾಗಕ್ಕೂ ಅನೇಕ ಪೂರ್ವಮೀಮಾಂಸಾನ್ಯಾಯಗಳು ಸಮಾನ ಎಂಬುದನ್ನು ಅನೇಕ ಕಡೆಗಳಲ್ಲಿ ನಾವು ನೋಡಬಹುದು. ಇದರ ವಿಸ್ತಾರವನ್ನು ಪ್ರಾಚೀನ ಗ್ರಂಥಗಳಲ್ಲೇ ನೋಡಬಹುದು.

ಹೀಗೆ ವಿದ್ಯಾಸ್ಥಾನದಲ್ಲಿ ಮೀಮಾಂಸೆ ಒಂದೇ ಆಗಿರುವುದರಿಂದಲೂ, ಈ ಸೂತ್ರಗಳಿಗೆ ವಿಷಯವಾಗಿರುವ ವೇದ ಒಂದೇಯಾಗಿರುವುದರಿಂದಲೂ ಪೂರ್ವೋತ್ತರಮೀಮಾಂಸೆಗಳು ಒಂದೇ ಆಗುತ್ತವೆ. ಆದ ಕಾರಣ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬಲ್ಲಿ ಅಥಶಬ್ದಕ್ಕೆ 'ಕರ್ಮವಿಚಾರಾನಂತರ' ಎಂಬ ಅರ್ಥವನ್ನು ಹೇಳುವುದರಲ್ಲೇ ಪೂರ್ಣ ಔಚಿತ್ಯವಿರುತ್ತದೆ.

ಹೀಗೆ ಕರ್ಮಬ್ರಹ್ಮ ವಿಚಾರಗಳಿಂದ ಕರ್ಮ ನಿತ್ಯನಿರತಿಶಯಪುರುಷಾರ್ಥ-ಸಾಧನವಲ್ಲ, ಬ್ರಹ್ಮೋಪಾಸನೆಯೇ ನಿತ್ಯನಿರತಿಶಯಪುರುಷಾರ್ಥಸಾಧನ ಎಂದು ಒಂದು ನಿರ್ಣಯಕ್ಕೆ ಬರಲು ಸಾಧ್ಯ.

ಈ ಕರ್ಮ ಬ್ರಹ್ಮವಿಚಾರಾನಂತರವೇ ಅವನಿಗೆ ನಿತ್ಯಾನಿತ್ಯವಸ್ತುವಿವೇಕ ಏರ್ಪಡುತ್ತದೆ. ಪೂರ್ವಕಾಂಡದಲ್ಲಿ ಕರ್ಮಗಳಿಗೆ ಅಂಗವಾದ ಪ್ರಯಾಜಾದಿಗಳನ್ನು ಹೇಳಿರುವಂತೆ ಬ್ರಹ್ಮೋಪಾಸನೆಗೆ ಶಮದಮಾದಿಗಳು ಅತ್ಯಾವಶ್ಯಕ ಎನ್ನುವುದನ್ನು

ಉತ್ತರಮೀಮಾಂಸೆಯ ಅಧ್ಯಯನದಿಂದಲೇ ನಿಶ್ಚಯಿಸಿಕೊಳ್ಳುತ್ತಾನೆ.

ಬ್ರಹ್ಮವಿಚಾರ ಬೇರೆ, ಬ್ರಹ್ಮೋಪಾಸನೆ ಬೇರೆ. ಎರಡನ್ನೂ ಸಾಂಕರ್ಯ ಮಾಡಿಕೊಳ್ಳಬಾರದು. ಬ್ರಹ್ಮೋಪಾಸನೆಗೆ ಪೂರ್ವವೃತ್ತವಾಗಿ ನಿತ್ಯಾನಿತ್ಯವಸ್ತುವಿವೇಕಾದಿಗಳು ನಮಗೂ ಸಮ್ಮತವೇ. ಬ್ರಹ್ಮವಿಚಾರಕ್ಕೆ ಪೂರ್ವವೃತ್ತವಂತೂ ಕರ್ಮವಿಚಾರವೇ ಎಂಬುದು ಎಳ್ಳಷ್ಟೂ ಅಪಲಾಪಾರ್ಹವಲ್ಲ.

'ಬ್ರಹ್ಮವಿಚಾರಕ್ಕೂ ಸ್ವಲ್ಪಮಟ್ಟಿಗಾದರೂ ಶಮದಮಾದಿಗಳು ಬೇಡವೆ?' ಎಂದು ಕೇಳಬಹುದು. ಪ್ರತಿಯೊಂದು ಕರ್ಮಕ್ಕೂ ಅದಕ್ಕೆ ತಕ್ಕಂತೆ ಮನಸ್ಸಮಾಧಾನಾದಿಗಳು ಅತ್ಯಾವಶ್ಯಕ. ಆದರೆ ಸಾಧನಚತುಷ್ಟಯದಲ್ಲಿ ಸೇರಿರುವ ಶಮದಮಾದಿಗಳು 'ಶಾಂತೋ ದಾಂತಃ ಆತ್ಮನ್ಯೇವಾತ್ಮಾನಂ ಪಶ್ಯೇತ್' ಇತ್ಯಾದಿಗಳಲ್ಲಿ ಹೇಳಿರುವ ಉಪಾಸನಾಂಗಗಳೆಂಬುದು 3ನೇ ಅಧ್ಯಾಯದಲ್ಲಿ ಸ್ಪಷ್ಟ. ಬ್ರಹ್ಮೋಪಾಸನೆ ಬ್ರಹ್ಮವಿಚಾರ ಎರಡೂ ಒಂದಲ್ಲ.

ಕೇವಲ ಶ್ರದ್ಧೆಗೆ ಸೇರಿದ ಬ್ರಹ್ಮತರ್ಕಾನಂತರ್ಯಾದಿಗಳನ್ನು ಖಂಡಿಸುವ ಉದ್ದೇಶ ನಮಗಿಲ್ಲ. 'ನ ಬುದ್ಧಿಭೇದಂ ಜನಯೇತ್' ಎಂಬುದು ನ್ಯಾಯ. ಭಗವದ್ರಾಮಾನುಜರ ಆಶಯವನ್ನು ಪ್ರದರ್ಶಿಸುವುದಷ್ಟೇ ನಮ್ಮ ಉದ್ದೇಶ.

ಆ ಮಹಾಚಾರ್ಯರೇ ಹೇಳಿರುವಂತೆ 'ಸಾರಾಸಾರವಿವೇಕಜ್ಞಾಃ ಗರೀಯಾಂಸೋ ವಿಮತ್ಸರಾಃ । ಪ್ರಮಾಣತಂತ್ರಾಃ ಸಂತೀತಿ'– 'ಸಾರಾಸಾರ–ವಿವೇಕಿಗಳೂ, ಮಾತ್ಸರ್ಯರಹಿತರೂ, ಪ್ರಮಾಣಪರವಶರಾಗಿ ಮನಸ್ಸಾಕ್ಷಿಯನ್ನು ಪೋಷಿಸಿಕೊಂಡಿರುವವರೂ ಆದ ಮಹನೀಯರು ಇದ್ದೇ ಇರುತ್ತಾರೆ' ಎಂಬ ಭಾವನೆಯಲ್ಲಿ ಈ ಕಿರುಹೊತ್ತಿಗೆಯನ್ನು ರಚಿಸಿ, ಆ ಪರಮಾಚಾರ್ಯರ ಪಾದದಲ್ಲಿ ಸಮರ್ಪಿಸಿ ಧನ್ಯನಾಗುತ್ತೇನೆ.

ಇದರ ಮೇಲೂ ಮತ್ತೆ ಮತ್ತೆ ಏನಾದರೂ ಯಾರಾದರೂ ಬರೆಯಬಹುದು. ಆದರೆ 'ಪುಂಸ್ತ್ವೇ ತತ್ತ್ವೇನ ದೃಷ್ಟೇ ಪುನರಪಿ ನ ಖಲು ಪ್ರಾಣಿತಃ ಸ್ಥಾಣುತಾದಿಃ" ಎದುರಿನಲ್ಲಿರುವ ವಸ್ತು ಮನುಷ್ಯನೇ' ಎಂದು ನಿಶ್ಚಯವಾಗಿ ತಿಳಿದ ಮೇಲೆ, 'ಅದು ಮೋಟುಮರವೆ?' ಎಂಬ ಸಂಶಯ ಮತ್ತೆ ಏಳುವುದಿಲ್ಲ ಎಂಬುದು ನ್ಯಾಯ. ಇದರಂತೆ 'ವಿಷಯ ಇಷ್ಟೇ' ಎಂಬುದನ್ನು ಸ್ಪಷ್ಟವಾಗಿ ಇಲ್ಲಿ ನಿರೂಪಿಸಲಾಗಿದೆ. 'ಒಬ್ಬರು ಹೇಳಿದ್ದನ್ನು ಒಪ್ಪಿಕೊಂಡು ಬಿಡುವುದೆ?' ಎಂಬ ಭಾವನೆ ವಿದ್ವಾಂಸರಿಗೆ ಸಹಜ. ಇದಕ್ಕೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದಲೇ

ಮಧ್ಯಸ್ಥರು ಸರಿಯಾಗಿ ತಿಳಿಯಲಿ! ಚಿಂತಿಸಲಿ! ತೀರ್ಮಾನಿಸಿಕೊಳ್ಳಲಿ! ಎಂಬ ಭಾವನೆಯಿಂದ ಇದನ್ನು ಬರೆಯಲಾಗಿದೆ. ಇದರಲ್ಲಿ ತಟಸ್ಥರಾದ ವಿದ್ವಾಂಸರೇ ಪ್ರಮಾಣ.

****

ಗ್ರಂಥ–ಋಣ

'ವಿಶ್ವಧರ್ಮವಿಮರ್ಶೆ'
ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ
ಮೈಸೂರು – 1979

ಜ್ಯೋತಿಷ್ಯ

ಪ್ರತ್ಯಕ್ಷಂ ಜ್ಯೌತಿಷಂ ವೈದ್ಯಮ್ ಎಂಬುದು ಪ್ರಸಿದ್ಧವಾದ ನಾಣ್ಣುಡಿ. ನ್ಯಾಯ ವ್ಯಾಕರಣ ಮೊದಲಾದ ಶಾಸ್ತ್ರಗಳಿಂದ ಏನು ಪ್ರಯೋಜನ? ಎಂಬ ಪ್ರಶ್ನೆಗೆ ಉತ್ತರ ಸ್ವಲ್ಪ ಕಷ್ಟವೇ. ಆದರೆ ಜ್ಯೋತಿಷ್ಯಶಾಸ್ತ್ರ ಮತ್ತು ವೈದ್ಯಶಾಸ್ತ್ರ ಇವೆರಡರ ಪ್ರಯೋಜನವಂತೂ ಪ್ರತ್ಯಕ್ಷ ಸಿದ್ಧ.

ಅಷ್ಟು ಮಾತ್ರವಲ್ಲ ಆ (ನ್ಯಾಯ, ವ್ಯಾಕರಣ) ಶಾಸ್ತ್ರ ಓದಿದವರ ಹತ್ತಿರಕ್ಕೂ ಯಾರೂ ಹೋಗುವುದೂ ಇಲ್ಲ.

ಜ್ಯೋತಿಷ್ಯ ಮತ್ತು ವೈದ್ಯಶಾಸ್ತ್ರವನ್ನು ಓದುವಾಗಲೇ ಅದರಿಂದ ಏನು ಆಗುತ್ತದೆ ಎಂಬುದನ್ನು ತಿಳಿದುಕೊಂಡೇ ಓದುತ್ತಾನೆ. ಪ್ರತ್ಯಕ್ಷಮ್ ಜ್ಯೌತಿಷಂ ವೈದ್ಯಂ ಎಂಬುದಕ್ಕೆ ಇದನ್ನು ಓದುವುದರಿಂದ ಫಲ ಪ್ರತ್ಯಕ್ಷವಾಗಿ ಸಿಗುತ್ತದೆ ಎಂದರೆ ಓದಿದವರಿಗೆ ಎಂದರ್ಥವಲ್ಲ, ಜನರಿಗೆ ಇವುಗಳಿಂದ ಆಗುವ ಉಪಕಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಗಾದೆ ಹುಟ್ಟಿಕೊಂಡಿದೆ.

ಅಂದರೆ ಜ್ಯೋತಿಷ್ಕರನ್ನಾಗಲೀ ವೈದ್ಯರನ್ನಾಗಲೀ ಸಂಪರ್ಕಿಸುವವರು ಪರಲೋಕಕ್ಕಾಗಿ ಸಂಪರ್ಕಿಸುವುದಿಲ್ಲ. ಈ ಜನ್ಮದಲ್ಲೇ ಈ ಲೋಕದಲ್ಲೇ ತಮಗೆ ಆಗಬೇಕಾದ ಸಹಾಯಕ್ಕಾಗಿ ಸಂಪರ್ಕಿಸುತ್ತಾರೆ. ಇವರ ಹತ್ತಿರ ಜನ ಹೋಗುತ್ತಾರೆ.

ರಾಮಾಯಣ, ಮಹಾಭಾರತ, ಭಾಗವತ ಈ ಮೂರು ಮಹಾಗ್ರಂಥಗಳ ಸ್ಥಾನ

ಭೂಮಿಕೆ

ಭಗವಂತನು ಕರುಣಾಸಾಗರನು. ತಾನು ಸೃಷ್ಟಿಸಿದ ಜಗತ್ತು, ತನ್ನ ಗುರಿಯನ್ನು ಸಾಧಿಸುವುದರಲ್ಲಿ ಸದಾ ಜಾಗೃತನಾಗಿದ್ದುಕೊಂಡು ಅದಕ್ಕಾಗಿ ಆಯಾ ಕಾಲದಲ್ಲಿ ಏನೇನು ಮಾಡಬೇಕೊ ಅದನ್ನೆಲ್ಲಾ ತಪ್ಪದೇ ಮಾಡುವುದಲ್ಲದೆ, ಅದನ್ನು ಯಥಾವತ್ತಾಗಿ ತಿಳಿದು ಜಗತ್ತಿಗೆ ಕೊಡುವುದಕ್ಕಾಗಿ ಅಂಶಪುರುಷರನ್ನೂ ಕಳುಹಿಸಿಕೊಟ್ಟು ಅದರಿಂದ ಲೋಕೋದ್ಧಾರವನ್ನು ನಿರೀಕ್ಷಿಸುತ್ತಾನೆ ಕರುಣಾಮಯ ಹೃದಯನಾದ ಆ ಭಗವಂತನು. ಇಂತಹ ಭಗವಂತನ ಲೋಕೋದ್ಧಾರ ಕಾರ್ಯದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಈ ಮೂರು ಮಹಾಗ್ರಂಥಗಳ ಸ್ಥಾನ ಅಪಾರವಾದುದು.

ಶ್ರೇಯೋಮಾರ್ಗಿಗಳ ದುರ್ಲಭತೆ

ಈ ಮಹಾಗ್ರಂಥಗಳನ್ನು ದೂಷಿಸುವರೂ ಇಲ್ಲದಿಲ್ಲ ! ಜಗತ್ತಿಗೆ ಬೆಳಕನ್ನು ಕೊಡುವ ಸೂರ್ಯನನ್ನು ಕಂಡು ಕಣ್ಣು ಬೇನೆಯವನು ಕಣ್ಣನ್ನು ಮುಚ್ಚಿಕೊಳ್ಳುವುದು ಸಹಜವಲ್ಲವೆ ! ಮಾನವನಿಗೆ ಪ್ರಾಣವಾಗಿರುವ ಅನ್ನವೇ ಒಂದು ಘಟ್ಟದಲ್ಲಿ ಹಿಡಿಯದೆ ಹೋಗುವುದಲ್ಲವೆ! ಕರ್ಮಗತಿ ವಿಚಿತ್ರ. ಭಗವಂತನಿಗೆ ಹತ್ತಿರದ ಬಂಧುವಾಗಿದ್ದು ಜೊತೆಯಲ್ಲೇ ಬೆಳೆದ ಶಿಶುಪಾಲಾದಿಗಳು ಸದಾ ಭಗವಂತನನ್ನು ನಿಂದಿಸುತ್ತಿದ್ದುದನ್ನೂ ಋಷಿಗಳೇ ಚಿತ್ರಿಸಿರುವರು. ಸೃಷ್ಟಿಯ ಮೂಲ, ಸೃಷ್ಟಿಯ ಉದ್ದೇಶ, ಶ್ರೇಯೋಮಾರ್ಗ – ಇವುಗಳನ್ನು ಸರಿಯಾಗಿ ಅರಿತು ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದೆಂಬುದು ಅಷ್ಟು ಸುಲಭವಲ್ಲ !

ಋಷಿಗಳ ಮಾರ್ಗ

ಪ್ರಕೃತಿಪುರುಷ ಮಿಶ್ರಣವೇ ಜಗತ್ತೆಲ್ಲವೂ. ಇವೆರಡೂ ಬೇರೆ ಬೇರೆಯಾದರೆ

ಸಂಸಾರ ಇಲ್ಲ. ಹೀಗೆ ಮಿಶ್ರಿತವಾಗಿಬಿಟ್ಟಿದ್ದನ್ನು ಬೇರ್ಪಡಿಸುವುದು ಹೇಗೆಂಬುದೇ ಪ್ರಶ್ನೆ. ಇದಕ್ಕೆ ನಮ್ಮ ಋಷಿಗಳು ಕಂಡುಹಿಡಿದ ಉಪಾಯವೇ ತಪಸ್ಸು ಮತ್ತು ಸ್ವಾಧ್ಯಾಯ. ತಪಸ್ಸಿನಿಂದ ಪ್ರಕೃತಿಯ ಶುದ್ಧೀಕರಣ, ಸ್ವಾಧ್ಯಾಯದಿಂದ ಪುರುಷನ ಶುದ್ಧೀಕರಣ. ಈ ಶರೀರವಿರುವತನಕ ಇವೆರಡೂ ಅತ್ಯವಶ್ಯಕ. ಚೇತನರ ಶಕ್ತಿಕ್ಷಯ ಈ ಸೃಷ್ಟಿಯಲ್ಲಿ ಅನಿವಾರ್ಯವಾದ ಕಾರಣ ತಪಸ್ಸು ಮತ್ತು ಸ್ವಾಧ್ಯಾಯ ಪದಗಳ ಅರ್ಥ ಬದಲಾಗುತ್ತಿದ್ದರೂ ಗುರಿಮಾತ್ರ ಎಂದೂ ಒಂದೇ ಆಗಿದೆ.

ಹೀಗೆ ತನ್ನ ಜೀವನವನ್ನು ಅರ್ಥವತ್ತಾಗಿ ರೂಪಗೊಳಿಸಿಕೊಳ್ಳುವವರಿಗೆ ಸಹಾಯಕವಾಗಿ ನಮ್ಮ ಭಾರತದಲ್ಲಿ ಎಷ್ಟೋ ಉಪಾಯಗಳನ್ನು ಮಹರ್ಷಿಗಳು ಕಂಡು ಉಪದೇಶಿಸಿರುವರು. ವೇದಗಳು, ಕಲ್ಪ ಸೂತ್ರಗಳು, ಪುರಾಣ, ಆಗಮ, ತಂತ್ರಮಂತ್ರಶಾಸ್ತ್ರ ಇತಿಹಾಸ ಇವೆಲ್ಲ ಜೀವೋದ್ಧಾರ ದೃಷ್ಟಿಯಿಂದ ಕಾಲಕಾಲಕ್ಕೆ ಹೊರ ಬಂದವು.

ರಾಮಾಯಣದ ಸ್ಥಾನ

ಆದರೆ ಅವುಗಳನ್ನು ಆಚರಣೆಗೆ ತರುವುದಕ್ಕೆ ಬೇಕಾದ ಅಂತಸ್ಸತ್ತ್ವವನ್ನು ಚೇತನರು ಸಂಪೂರ್ಣವಾಗಿ ಕಳೆದುಕೊಂಡಾಗ ಏನು ಮಾಡುವುದು? ದಯಾಮಯನಾದ ಭಗವಂತನು ಎಲ್ಲ ಅರ್ಹತೆಯನ್ನು ಕಳೆದುಕೊಂಡರೂ, ಒಂದಿಷ್ಟು ಒಳ್ಳೆಯ ಅಂಶವಿದ್ದರೆ ಅದನ್ನೇ ವ್ಯಾಜವಾಗಿಟ್ಟು ಚೇತನರನ್ನು ಉದ್ಧರಿಸುತ್ತಾನೆ.

ಅಪಿ ಚೇತ್ಸುದುರಾಚಾರಃ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥

"ಈ ಪಾಪಿಯಾದರೂ ದುರಾಚಾರಿಯಾದರೂ ಏಕನಿಷ್ಠೆಯಿಂದ ನನ್ನನ್ನು ಭಜಿಸುವನೇ ಸಾಧು, ಉತ್ತಮಸಾಧಕನು. ಏಕೆಂದರೆ, ಅವನು 'ನಾನೇ ಎಲ್ಲವೂ' ಎಂದು ಒಂದು ನಿರ್ಣಯಕ್ಕೆ ಬಂದುಬಿಟ್ಟಿದ್ದಾನೆ" ಎಂದು ಹೇಳುವನು ದಯಾಮಯನಾದ ಭಗವಂತನು. ಆದರೆ ನಾವು ಅಂತಹ ಒಂದು ನಿರ್ಣಯಕ್ಕೆ ಬರುವುದಾದರೂ ಅಷ್ಟು ಸುಲಭವೆ! ಇದಕ್ಕೆ ಒಳ್ಳೆಯ ಸಂಸ್ಕಾರ ಆವಶ್ಯಕ.

ಆದ್ದರಿಂದ ಮೊದಲು ಬುದ್ಧಿಗೆ ನೀತಿ ನಿಯಮಗಳ ಒಂದು ಶಿಕ್ಷಣ ಬೇಕು. ಇದೇ ರಾಮಾಯಣದ ಪ್ರಧಾನ ಗುರಿ.

ಲೋಕದಲ್ಲಿ ನಾನಾತರಹ ಜೀವಿಗಳು. ಅನೇಕ ವಿಧ ಘಟನೆಗಳು.

ಇವುಗಳೆಲ್ಲದರಲ್ಲೂ ಒಬ್ಬನು ಯಶಸ್ವಿಯಾಗಬೇಕಾದರೆ ನೀತಿ ನಿಯಮಗಳ ಪರಿಚಯ ಮತ್ತು ಆಚರಣೆ ಅವಶ್ಯಕ. ಶ್ರೀ ರಾಮಾಯಣದಲ್ಲಿ ಇವೆಲ್ಲವನ್ನೂ ನೋಡಬಹುದು. ರಾಮಾಯಣ ನೀತಿಪ್ರಧಾನವಾದ ಗ್ರಂಥ. ಆದರೆ ಎಲ್ಲಿ ನಿಯಮಗಳಿಗೂ ಒಂದು ಕಡೆ ಅಪವಾದ ಇದ್ದೇ ಇರುತ್ತದೆ. 'ಸತ್ಯವನ್ನೇ ನುಡಿ' ಎಂದು ಒಂದುಕಡೆ ಹೇಳಿದರೆ, 'ಆಪತ್ಕಾಲದಲ್ಲಿ ಅಸತ್ಯ ದೋಷವಲ್ಲ' ಎಂದೂ ಮತ್ತೊಂದು ಕಡೆ ಹೇಳುತ್ತದೆ. ಅವರವರಿಗೆ ಅವರವರದೇ ಮಹಾ ಆಪತ್ತಾಗಿ ತೋರಬಹುದು. ನಿರ್ಣಯ ಹೇಗೆ? ಇದಕ್ಕೆ 'ಧರ್ಮಪ್ರಜ್ಞೆ' ಅವಶ್ಯಕ.

ಧರ್ಮ ಮತ್ತು ನೀತಿಯ ವೈಲಕ್ಷಣ್ಯ

ಧರ್ಮ–ನೀತಿ ಅಥವಾ ನ್ಯಾಯ ಎರಡೂ ಒಂದಲ್ಲ. ಎರಡಕ್ಕೂ ಬಹಳ ವ್ಯತ್ಯಾಸವಿದೆ. ನ್ಯಾಯಾನ್ಯಾಯನಿರ್ಣಯವೇ ಧರ್ಮಾಧೀನ, ಧರ್ಮಾಧರ್ಮ ನಿರ್ಣಯ ನ್ಯಾಯಾಧೀನವಲ್ಲ, ಧರ್ಮ ಸ್ವತಂತ್ರವಾದದ್ದು. ಧರ್ಮ ಅತ್ಯಂತ ಆಂತರ ಪದಾರ್ಥ, ನ್ಯಾಯ ಬಾಹ್ಯವಾದುದು, ಧರ್ಮ ಪುರುಷನಿಗೆ ಸೇರಿದ್ದು, ನ್ಯಾಯ ಬುದ್ಧಿಗೆ ಸೇರಿದ್ದು, ಧರ್ಮ ಆತ್ಮನಿಷ್ಠ, ನೀತಿ ಪ್ರಕೃತಿನಿಷ್ಠ, ಧರ್ಮ ಹೃದಯವೇದ್ಯ, ನ್ಯಾಯ ಬುದ್ಧಿವೇದ್ಯ, ಧರ್ಮ ಆತ್ಮದಂತೆ, ನೀತಿ ಶರೀರದಂತೆ. ಆದ್ದರಿಂದಲೇ ಧರ್ಮ ಅತಿಸೂಕ್ಷ್ಮ, ಅತೀಂದ್ರಿಯ, ನೀತಿ ಸ್ಥೂಲವಾದುದು, ಧರ್ಮಶಾಸ್ತ್ರವೇ ಬೇರೆ, ನೀತಿಶಾಸ್ತ್ರವೇ ಬೇರೆ.

ನೀತಿಯಿಂದ ಸುಶಿಕ್ಷಿತನಾದವನಿಗೆ ಧರ್ಮಪ್ರಜ್ಞೆ ಉಂಟಾಗಲು ಅವಕಾಶವಿದೆ. ಇಂತಹವನಿಗೆ ಸಹಜವಾಗಿಯೇ ಮನಸ್ಸು ಪರಮಾತ್ಮನ ಕಡೆಗೆ ಹರಿಯುತ್ತದೆ. ಇದೇ ಚಿತ್ತಶುದ್ಧಿಯ–ಪ್ರಕೃತಿಶುದ್ಧಿಯ ಗುರುತು.

ಪರಮಾತ್ಮ ಮತ್ತು ಜೀವಾತ್ಮ ಎರಡೂ ಅಂಶಿ ಮತ್ತು ಅಂಶ. ಎರಡಕ್ಕೂ ಆಕರ್ಷಣೆಯೇ ಸಹಜ, ಮಾನವನಿಗೆ ಆಹಾರದ ಅಪೇಕ್ಷೆಯಂತೆ. ಆ ಆಕರ್ಷಣೆ ಇಲ್ಲದಿದ್ದರೆ, ಅದೇ ರೋಗ–ಭವರೋಗರೋಗಿಗೆ ಆಹಾರ ಹಿಡಿಯದಂತೆ. ಆರೋಗ್ಯವಾದರೆ ತಾನಾಗಿಯೇ ಆಹಾರ ಹಿಡಿಯುವಂತೆಯೇ ಚಿತ್ತ ಶುದ್ಧವಾದರೆ ಪರಮಾತ್ಮನ ಆಕರ್ಷಣೆಗೆ ಒಳಗಾಗಲೇ ಬೇಕು.

ರಾಮಾಯಣದಲ್ಲಿ ನೀತಿಗೆ ವಿರುದ್ಧವಾದ ಘಟನೆಗಳನ್ನು ಕಾಣಲು ಸಾಧ್ಯವಿಲ್ಲ. ನೀತಿಗೆ ಬಾಹ್ಯವಾಗಿ ಕಾಣುವ ವಾಲಿವಧೆಯ ಘಟನೆಯೂ ಮಾನವನ ಸತ್ವಪರೀಕ್ಷೆಗಾಗಿ. ಧರ್ಮದ ಸೂಕ್ಷ್ಮತೆಯ ಪರಿಚಯಕ್ಕಾಗಿಯೇ

ಏರ್ಪಟ್ಟಿದೆ. ಈ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾದವನಿಗೇ ಮಹಾಭಾರತದ ಪಠನದಲ್ಲಿ ಅರ್ಹತೆ.

ಮಹಾಭಾರತದ ಸ್ಥಾನ

ಏಕೆಂದರೆ, ಭಾರತದಲ್ಲಿ ನಮ್ಮ ಬುದ್ಧಿಗೆ ಅರ್ಥವಾಗದ ಘಟನೆಗಳು ಅನಂತ. ದ್ರೌಪದಿ ಐದು ಜನರ ಪತ್ನಿ, ಬ್ರಾಹ್ಮಣನಾದ ವ್ಯಾಸನಿಗೆ ಹುಟ್ಟಿದ ಧೃತರಾಷ್ಟ್ರಾದಿಗಳು ಕ್ಷತ್ರಿಯರು. ವ್ಯಾಸನ ತಾಯಿ ಬೆಸ್ತನ ಕನ್ಯೆ, ಅವಳ ತಾಯಿತಂದೆಯರಿಗೆ ತಿಳಿಯದೆಯೇ, ವಿವಾಹವಿಲ್ಲದೆಯೇ ವ್ಯಾಸನ ಜನನ, ಶ್ರೀ ಕೃಷ್ಣನ ಕಾರ್ಯಗಳೆಲ್ಲವೂ ನೀತಿಬಾಹಿರವೆಂದು ಶಿಶುಪಾಲ, ದುರ್ಯೋಧನಾದಿಗಳು ಬಾರಿಬಾರಿಗೂ ಹೇಳುವರು. ಧರ್ಮದ ಸೂಕ್ಷ್ಮ ಪರಿಚಯವಿಲ್ಲದಿದ್ದರೆ ಇವು ಯಾವುದಕ್ಕೂ ಉತ್ತರ ಅಸಾಧ್ಯ.

ಆದ್ದರಿಂದ ಭಾರತ ಧರ್ಮ ಪ್ರಧಾನವಾದ ಗ್ರಂಥ. ಎಲ್ಲದರಲ್ಲಿ ಎಲ್ಲವೂ ಇದ್ದರೂ ಒಂದೊಂದರಲ್ಲಿ ಒಂದೊಂದು ಪ್ರಧಾನ.

ಭಾಗವತದ ಸ್ಥಾನ

ಹೀಗೆ ನೀತಿ-ಧರ್ಮಗಳ ಪರಿಚಯದಿಂದ ಸುಶಿಕ್ಷಿತನಾದ ಜೀವಾತ್ಮನ ಬುದ್ಧಿ ತಾನಾಗಿಯೇ ಪರಮಾತ್ಮನ ಕಡೆಗೆ ವಾಲುತ್ತದೆ. ಈ ಸ್ಥಿತಿಯಲ್ಲೇ ಭಾಗವತ ಸಹಕರಿಸುತ್ತದೆ. ಭಾಗವತ ಭಕ್ತಿ ಪ್ರಧಾನವಾದ ಗ್ರಂಥ. ಪರಮಾತ್ಮನೇ ಭಕ್ತಿಯ ಕೇಂದ್ರ, ಪರಮಾತ್ಮತತ್ತ್ವದ ವಿಸ್ತಾರವಾದ, ಅದ್ಭುತವಾದ ಪರಿಚಯವನ್ನು ಮಾಡಿಕೊಡುವುದರಲ್ಲಿ ಭಾಗವತಕ್ಕೆ ಸಮಾನವಾದ ಮತ್ತೊಂದು ಗ್ರಂಥವಿಲ್ಲ.

ಪರಮಹಂಸ ಸಂಹಿತೆ

ಭಾಗವತಕ್ಕೆ 'ಪರಮಹಂಸಸಂಹಿತೆ' ಎಂಬ ಹೆಸರು ಇರುವುದು ಪ್ರಸಿದ್ಧ. 'ಪರಮಹಂಸ' ಎಂಬ ಪದ ಈ ಕಾಲದಲ್ಲಿ ಸಂನ್ಯಾಸ ಪರ್ಯಾಯವಾಗಿದ್ದರೂ ಅದು ವಿಷಯದ ದೃಷ್ಟಿಯಿಂದ ಜೀವನದ ತುತ್ತತುದಿಯ ವಿಕಾಸವನ್ನು ಪಡೆದ ಒಂದು ಜೀವಕ್ಕೆ ಅನ್ವಯಿಸುವ ಪದ. ದೇವಭಾಷೆಯಾದ ಸಂಸ್ಕೃತದಲ್ಲಿ ಅನೇಕ ಪದಗಳು ತನ್ನ ನಿಜ ಅರ್ಥವನ್ನು ಕಳೆದುಕೊಂಡು ಕೇವಲ ರೂಢ ಶಬ್ದವಂತೆ ಈ ಕಾಲದಲ್ಲಿ ಕಂಡುಬರುತ್ತವೆಂಬುದು ವಿಮರ್ಶಕರಿಗೆ ತಿಳಿದ ವಿಷಯ. ಪರಮಹಂಸ ಪದವು ಅಂತಹುದೇ ಆಗಿದೆ.

ಜೀವಾತ್ಮನು ಪರಮಹಂಸ ಮಟ್ಟಕ್ಕೇರಲು ಸಾಧನವಾದ ವಿದ್ಯೆ 'ಹಯಗ್ರೀವ

ಬ್ರಹ್ಮ ವಿದ್ಯೆ: ಭಾಗವತವನ್ನು 'ಹಯಗ್ರೀವಬ್ರಹ್ಮವಿದ್ಯೆ' ಎಂದು ಹೇಳಿರುವುದು ಪ್ರಸಿದ್ಧ.

ಹಯಗ್ರೀವ ಬ್ರಹ್ಮವಿದ್ಯೆ

ಶ್ರೀ ಹಯಗ್ರೀವನನ್ನು 'ಜ್ಞಾನಾನಂದಮಯನು' ಎಂದು ವರ್ಣಿಸಿರುವಂತೆಯೇ 'ವಿಶುದ್ಧ ವಿಜ್ಞಾನಘನಸ್ವರೂಪಂ' ಎಂದು ವರ್ಣಿಸಿರುವುದೂ ಪ್ರಸಿದ್ಧ. ಶ್ರೀಹಯಗ್ರೀವನು ಜ್ಞಾನ ವಿಜ್ಞಾನಮೂರ್ತಿ, 'ಜ್ಞಾನ' ಎಂದರೆ ಅನುಭವ. ವಿಜ್ಞಾನವೆಂಬ ಒರೆಗಲ್ಲಿನಲ್ಲಿ ಹಚ್ಚಿನೋಡಿದಾಗಲೇ ಜ್ಞಾನದ ಯಥಾರ್ಥತೆ ತಿಳಿಯುವುದು. ಆದ್ದರಿಂದ ಕೇವಲ ಜ್ಞಾನಿಗಿಂತ ಜ್ಞಾನವಿಜ್ಞಾನಸಂಪನ್ನನು ಶ್ರೇಷ್ಠ, ಗೀತೆಯಲ್ಲಿ ಈ 'ಜ್ಞಾನ ವಿಜ್ಞಾನ' ಪದಗಳು ಅನೇಕ ಕಡೆಯಲ್ಲಿ ಬಂದಿರುವುದನ್ನು ನೋಡಬಹುದು. ಜ್ಞಾನವಿಜ್ಞಾನಸಂಪನ್ನನೇ ಉತ್ತಮ 'ಭಕ್ತ', ಇವನೇ ಪರಮಹಂಸ.

ಭಾಗವತದ ಅವತಾರ

ಪರಮಾತ್ಮನು ಜೀವಿಗಳ ಶ್ರೇಯಸ್ಸಿಗಾಗಿ ನಾನಾವತಾರಗಳನ್ನು ಎತ್ತಿದನು. ವೇದಾದಿಗಳನ್ನು ಉಪದೇಶಿಸಿದನು. ಜನರ ಶಕ್ತಿ ಕ್ಷಯಿಸುತ್ತಾ ಕರುಣಾಮಯನಾದ ಭಗವಂತನೂ ಶ್ರೇಯೋಮಾರ್ಗವನ್ನು ಸರಳಗೊಳಿಸುತ್ತಾ ಬರುತ್ತಾನೆ. ಆದರೂ ಜೀವಿಗಳಿಗೆ ಶಾಪವೊ! ಏನೋ! ಅದರಿಂದ ಪ್ರಯೋಜನವನ್ನು ಪಡೆಯುವುದಿಲ್ಲ. ಯಾವ ಕೆಲಸಕ್ಕೂ ಬಾರದ ವ್ಯರ್ಥ ಚರ್ಚೆಯಲ್ಲಿ ಜೀವನವನ್ನೆಲ್ಲ ಕಳೆದುಬಿಡುತಾರೆ.

ಜಗತ್ತಿಗೂ ಪರಮಾತ್ಮನಿಗೂ ಇರುವ ಸಂಬಂಧ ಎಂತಹದ್ದು ? ಜಗತ್ತು ಸತ್ಯವೊ, ಮಿಥ್ಯೆಯೊ? ಪರಮಾತ್ಮನು ಸಗುಣನೆ, ನಿರ್ಗುಣನೆ ? ಸಾಕಾರನೆ, ನಿರಾಕಾರನೆ ? ಅವನನ್ನು ಪಡೆಯುವ ಮಾರ್ಗವಾದರೂ ಯಾವುದು ? ಭಕ್ತಿಯೆ, ಜ್ಞಾನವೆ ? ಮೂರ್ತಿ ಪೂಜೆ ಸರಿಯೆ, ತಪ್ಪೆ ? ಇಂತಹ ಪ್ರಶ್ನೆಗಳು ಅನಂತ. ಇವಕ್ಕೆಲ್ಲಾ ಉತ್ತರಗಳೂ ಅನಂತ, ಎಲ್ಲರಿಗೂ, ಸಾಮಾನ್ಯ ಜ್ಞಾನಿಗೂ ಇಂತಹ ಪ್ರಶ್ನೆಗಳವೆ ? ಇಂತಹ ಒಂದು ಗೊಂದಲಮಯವಾದ ಕಾಲದಲ್ಲಿ ಈ ಭಾಗವತ ಅವತರಿಸಿದೆ.

ಭಾಗವತ 'ಜ್ಞಾನಕೋಶ'

ಏಕೆಂದರೆ, ಈ ಭಾಗವತದಲ್ಲಿ ನಿರೂಪಿತವಾಗದ ಸಿದ್ಧಾಂತವಿಲ್ಲ, ತತ್ತ್ವವಿಲ್ಲ. ಇದೊಂದು ಮಹಾಜ್ಞಾನಕೋಶ. ಧರ್ಮ ಮತ್ತು ದೈವದ ಸೂಕ್ಷ್ಮ ಜಿಜ್ಞಾಸುವಿಗೆ

ನಾನಾ ಸಿದ್ಧಾಂತ ಸಂಪ್ರದಾಯಗಳ ಗೊಂದಲದಲ್ಲಿ ಸಿಕ್ಕಿಕೊಂಡವನಿಗೆ, ಆಮೂಲಾಗ್ರವಾಗಿ ನೋಡಿದರೆ ಈ ಗ್ರಂಥ ಎಂತಹ ಅದ್ಭುತವಾದುದೆಂದು ವ್ಯಕ್ತವಾಗುವುದು.

ವಿದ್ಯಾವತಾಂ ಭಾಗವತೇ ಪರೀಕ್ಷಾ

ಆದರೂ ಜೀವಿಗಳ ಕಷ್ಟ ಎಂತಹದ್ದು ! ಈ ಗ್ರಂಥ ಭಾಷೆಯ ದೃಷ್ಟಿಯಿಂದಲೂ ವಿಷಯದ ದೃಷ್ಟಿಯಿಂದಲೂ ಅತಿ ಗಂಭೀರಶೈಲಿಯಲ್ಲಿ ಅವತರಿಸಿಬಿಟ್ಟಿದೆ. ಅನೇಕ ಕಡೆಗಳಲ್ಲಿ ಋಗ್ವೇದದ ಶೈಲಿಯೇ ಫಲ ! "ವಿದ್ಯಾವತಾಂ ಭಾಗವತೇ ಪರೀಕ್ಷಾ" ವಿದ್ಯಾವಂತರ ಒರೆಗಲ್ಲು ಭಾಗವತ ಎಂಬ ಗಾದೆ.

ವಿದ್ಯಾವಂತರೆಂದರೆ ಪುಸ್ತಕ ಪಂಡಿತರು ಮಾತ್ರವಲ್ಲ. ವಾಸ್ತವವಾದ ಅಧ್ಯಾತ್ಮ ವಿದ್ಯಾಸಂಪನ್ನರಿಗೂ ಇದು ಒರೆಗಲ್ಲು.

ಮನುಷ್ಯಾಣಾಂ ಸಹಸ್ರೇಷು ಕಶ್ಚಿತ್ ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥

ತತ್ತ್ವವನ್ನರಿಯಲು ಪ್ರಯತ್ನಿಸುವವರೇ ವಿರಳ ಅವರಲ್ಲೂ ಯಥಾವತ್ತಾಗಿ ತತ್ತ್ವವನ್ನರಿಯುವವರು ಮತ್ತಷ್ಟು ವಿರಳ' ಎನ್ನುತ್ತಾನೆ ಭಗವಂತನು.

ಜ್ಞಾನಿಗಳೂ ಅನೇಕ ವಿಧ

ಇಲ್ಲಿ ಒಂದು ವಿಶೇಷ. 'ಕೋ ತತ್ತ್ವತಃ'– ಯಾರು ಒಬ್ಬನೇ ನನ್ನನ್ನು ಯಥಾವತ್ತಾಗಿ ಅರಿಯುತ್ತಾನೆ' ಎಂದು ಹೇಳಿರುವುದರಿಂದ, 'ತಿಳಿಯುವವರೆಲ್ಲ ಯಥಾವತ್ತಾಗಿ ತಿಳಿಯದವರೇ ಹೆಚ್ಚು' ಎಂಬ ಅರ್ಥ ಧ್ವನಿತವಾಗುತ್ತದೆ ಎಂದು ಒಪ್ಪುವಂತಹ ವ್ಯಾಖ್ಯಾನ ಮಾಡಿರುತ್ತಾರೆ.

ಭಗವಂತನನ್ನು ಅರಿಯುವವರಲ್ಲೂ ಅರ್ಧಮರ್ಧ ಅರಿಯುವರು ಅನೇಕರು. ಆದ್ದರಿಂದಲೇ 'ಜ್ಞಾನಿಗಳು' ಎಂದೆನಿಸಿಕೊಂಡವರಲ್ಲೂ ಅಭಿಪ್ರಾಯಭೇದ ಕಂಡು ಬರುತ್ತದೆ. ಎಲ್ಲವೂ ಭಗವಂತನ ಮಾಯೆಯ ವೈಭವವೇ ಸರಿ! ಇದು ಯಾರನ್ನೂ ನಿಂದಿಸುವ ಮಾತಲ್ಲ, ವಿಷಯದ ಗಹನತೆಯನ್ನು ಕುರಿತ ಮಾತಾಗಿದೆ.

ಭಾಗವತ ಪುರಾಣವೆ !

ಶ್ರೀಮದ್ಭಾಗವತ ಹದಿನೆಂಟು ಪುರಾಣಗಳಲ್ಲಿ ಒಂದೆಂದು ಪ್ರಸಿದ್ಧಿ. ಆದರೆ

ಕೆಲವರು ದೇವೀಭಾಗವತವೇ 18 ಪುರಾಣಗಳಲ್ಲಿ ಸೇರಿದ್ದು, ಇದಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಭಾಗವತದಲ್ಲಿ ಪ್ರತಿಪಾದ್ಯವಾದ ವಿಷಯಗಳನ್ನು ನೋಡಿದರೆ, ಇದು ಉಳಿದ ಪುರಾಣಗಳಂತಿರದೇ ಸಕಲ ಅಧ್ಯಾತ್ಮಶಾಸ್ತ್ರ ರಹಸ್ಯಗರ್ಭಿತವಾದ ಒಂದು ಪೂರ್ಣಗ್ರಂಥ ಎಂಬುದು ಸ್ಪಷ್ಟವಾಗುವುದು. ಇದಕ್ಕೆ 'ಪರಮಹಂಸಸಂಹಿತೆ' 'ಹಯಗ್ರೀವಬ್ರಹ್ಮವಿದ್ಯೆ' ಎಂಬ ಹೆಸರುಗಳೂ ಇದನ್ನು ಸೂಚಿಸುತ್ತವೆ. ಆದ್ದರಿಂದ ಈ ಭಾಗವತ ಪುರಾಣಗಳ ಗುಂಪಿಗೆ ಸೇರದ ಮಾತ್ರಕ್ಕೆ ಇದರ ಮಹತ್ತ್ವಕ್ಕೆ ಯಾವ ಧಕ್ಕೆಯೂ ಇಲ್ಲ. ಏಕೆಂದರೆ ಇದು ಕೇವಲ ಪುರಾಣವಲ್ಲ, ಒಂದು 'ಜ್ಞಾನಕೋಶ'.

ಭಾಗವತದ ವೈಶಿಷ್ಟ್ಯ

ಭಾಗವತವನ್ನು ಹೇಳಿದವನು 'ಶುಕನು'-ಗಿಣಿ-ಯಾವ ಕೃತ್ರಿಮವೂ ಗೊತ್ತಿಲ್ಲದ ಮುದ್ದಾದ ಜೀವ, ಕೇಳಿದವನು 'ಪರೀಕ್ಷಿತ'- ಒಳ್ಳೆಯ ವಿಮರ್ಶಕನು. ಈ ಗ್ರಂಥದ ಒಳಗಡೆಯಲ್ಲಿ, ಪರೀಕ್ಷಿತನ ಪ್ರಶ್ನೆಗಳನ್ನೂ, ಅವಕ್ಕೆ ಶುಕನ ಉತ್ತರಗಳನ್ನೂ ನೋಡಿದರೆ, ಈ ಗ್ರಂಥದ ವೈಶಿಷ್ಟ್ಯ ಮತ್ತು ವೈಜ್ಞಾನಿಕತೆ ಸ್ಪಷ್ಟವಾಗುವುದು.

ಒಟ್ಟಿನಲ್ಲಿ ಭಾಗವತ ಸೈದ್ಧಾಂತಿಕವಾಗಿಯೂ, ಮತೀಯವಾಗಿಯೂ ಎಲ್ಲ ಸಮಸ್ಯೆಗಳನ್ನೂ ಪರಿಹಾರ ಮಾಡಿ ಒಂದು ನಿರ್ಣಯಾತ್ಮಕವಾದ ನಿಲುವನ್ನು ಕೊಡುವಂತಹ ಅಪೂರ್ವ ಗ್ರಂಥ. ಆದಕಾರಣ ಪೂರ್ವಾಗ್ರಹಗಳನ್ನು ಬಿಟ್ಟು ಯಾವ ಸಂಕೇತಕ್ಕೂ ಸಿಕ್ಕಿಕೊಳ್ಳದೆ ಈ ಗ್ರಂಥವನ್ನು ನೋಡುವುದು ಅತ್ಯಾವಶ್ಯಕ. ಇಲ್ಲದಿದ್ದರೆ ಇದರಿಂದ ಸರಿಯಾದ ಪ್ರಯೋಜನ ಸಿಕ್ಕಲಾರದು.

ಬುದ್ಧಿಯೇ ಮಾಯೆ, ಎಚ್ಚರಿಕೆ !

ಯಶ್ಚ ಮೂಢತಮೋ ಲೋಕೇ ಯಶ್ಚ ಬುದ್ಧೇಃ ಪರಂ ಗತಃ ।
ತಾವುಭೌ ಸುಖಮೇಧೇತೇ ಕ್ಲಿಶ್ಯತ್ಯಂತರಿತೋ ಜನಃ ॥

(ಭಾಗವತ-3-7-17)

['ಯಾವನ ಬುದ್ಧಿ ಉಚ್ಛೃಂಖಲವಾಗಿ ಕೆಲಸ ಮಾಡುವುದಿಲ್ಲವೋ, ಯಾವನು ಬುದ್ಧಿಯನ್ನು ದಾಟಿಬಿಟ್ಟಿರುವನೋ, ಈ ಇಬ್ಬರೇ ಈ ಲೋಕದಲ್ಲಿ ಸುಖಪಡುವರು. ಮಧ್ಯದಲ್ಲಿ ಸಿಕ್ಕಿಕೊಂಡವರೆಲ್ಲರೂ (ಎಡ ಪಟ್ಟುಗಳು)

ದುಃಖಕ್ಕೀಡಾಗುತ್ತಾರೆ. ಎಂದು ಈ ಭಾಗವತವೇ ಎಚ್ಚರಿಕೆ ಕೊಡುತ್ತದೆ.

ಇದಕ್ಕಿಂತಲೂ ಮಾನವನ ಕ್ಲೇಶಗಳಿಗೆ ಕಾರಣವನ್ನು ವೈಚಾರಿಕವಾಗಿ ಚಿತ್ರಿಸಲು ಸಾಧ್ಯವೇ ಇಲ್ಲ. ಲೌಕಿಕ ವಿಷಯದಲ್ಲೇ ಈ ಎಚ್ಚರಿಕೆ ಅವಶ್ಯಕವಾದರೆ ಬುದ್ಧ್ಯತೀತವಾದ 'ಧರ್ಮ'ದ ವಿಷಯದಲ್ಲಿ ಮತ್ತಷ್ಟು ಆವಶ್ಯಕ.

ಶುಭಾಶಂಸನ

ಇಂತಹ ದುಃಸ್ಥಿತಿಗೆ ಜೀವಿಗಳು ಸಿಕ್ಕಿಕೊಳ್ಳದಿರಲಿ! ಭಗವಂತನು ಎಲ್ಲರಿಗೂ ಸದ್ಬುದ್ಧಿಯನ್ನು ಕರುಣಿಸಲಿ !! ಶ್ರೀಮದ್ರಾಮಾಯಣದಿಂದ ನೀತಿಯ ಶಿಕ್ಷಣವನ್ನೂ, ಶ್ರೀಮನ್ಮಹಾಭಾರತದಿಂದ ಧರ್ಮದ ಗಹನತೆಯ ಪರಿವೆಯನ್ನೂ ಪಡೆದು ಶ್ರೀಮದ್ಭಾಗವತದಿಂದ ಭಕ್ತಿಯನ್ನು ಪೋಷಿಸಿಕೊಂಡು ಎಲ್ಲರೂ ಧನ್ಯರಾಗಲಿ !!!

'ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು'
(ಕಷ್ಟ ಕಾರ್ಪಣ್ಯಗಳಿಂದ ಎಲ್ಲರೂ ಪಾರಾಗಿ ಪರಮಾತ್ಮನನ್ನು ಪಡೆಯುವಂತಾಗಲಿ !)

ಬಿನ್ನಪ

"ಕಲಯೇತ ಹೃದಯೇ ತತ್ತ್ವಮುಕ್ತಾಕಲಾಪಮ್"

ಅತ್ಯಲ್ಪ ಪ್ರಾಜ್ಞನಾದ ಮಾನವನ ನಿರೀಕ್ಷಣೆ ತಪ್ಪಾಗುವುದು. ಅಥವಾ ಅಸಮಗ್ರವಾಗುವುದು ಸಹಜ ಮತ್ತು ನ್ಯಾಯವೇ ಆಗುತ್ತದೆ. ಪ್ರಕೃತ ತತ್ತ್ವಮುಕ್ತಾಕಲಾಪದ ಅನುವಾದ ಮತ್ತು ಮುದ್ರಣಕಾರ್ಯದಲ್ಲಿ ಇದನ್ನು ಮತ್ತಷ್ಟು ಮನಗಾಣುವಂತೆ ಆಯಿತು.

ಇಂತಹ ಪ್ರೌಢ ಗ್ರಂಥವನ್ನು ಅದರ ಮೂಲಭಾಷೆಯಾದ ಸಂಸ್ಕೃತದಲ್ಲಿ ಅಧ್ಯಯನಮಾಡುವುದೇ ಬಹಳ ಕಷ್ಟ. ಕನ್ನಡದಲ್ಲಿ ಅನುವಾದ ಮಾಡುವುದಂತೂ ಅತಿಶ್ರಮಸಾಧ್ಯ. ಆದ್ದರಿಂದಲೇ ಶ್ರೀ ಶ್ರೀಗಳವರು ನನಗೆ ಈ ಕಾರ್ಯವನ್ನು ಮಾಡುವಂತೆ ಆಜ್ಞಾಪಿಸಿದಾಗ ಬಹಳ ಹಿಂಜರಿದೆ. ಆದರೆ, ಶ್ರೀ ಶ್ರೀಗಳವರ ಪ್ರೋತ್ಸಾಹದಿಂದ ಈ ಮಹತ್ಕಾರ್ಯದಲ್ಲಿ ನಿರತನಾಗಬೇಕಾಯಿತು.

ಗ್ರಂಥ ಸ್ವತಃ ಅತಿ ಪ್ರೌಢ. ಎಲ್ಲಿ ಮುಟ್ಟಿದರೂ ಕ್ಲಿಷ್ಟವೇ. ದೈವದ ಎದುರಿನಲ್ಲಿ ಮಾನವನು ಏನು ತಾನೆ ಮಾಡಿಯಾನು! ಅಂತೂ ಹೇಗೋ, ಆ ದೈವವೇ ಈ ಜವಾಬ್ದಾರಿಯನ್ನು ನೆರವೇರಿಸಿಕೊಂಡಿದೆ ಎಂದೇ ಭಾವಿಸಬೇಕಾಗಿದೆ.

ಒಂದೆರಡು ದರ್ಶನವಲ್ಲ. ಒಂದೆರಡು ವಿಷಯವಲ್ಲ. ಶ್ರೀಮನ್ನಿಗಮಾಂತದೇಶಿಕರನ್ನು, ಶ್ರೀಹಯಗ್ರೀವ ದೇವರ ಮತ್ತೊಂದು ಮೂರ್ತಿ ಎನ್ನಬಹುದು. ಈ ಅಂಶವನ್ನು ಈ ತತ್ತ್ವಮುಕ್ತಾಕಲಾಪ ಮತ್ತು ಇದರ ವ್ಯಾಖ್ಯಾನವಾದ ಸರ್ವಾರ್ಥಸಿದ್ಧಿಯಲ್ಲಿ ನಾವು ಕಾಣಬಹುದು. ದೊಡ್ಡಯ್ಯಾಚಾರ್ಯರು "ಸರ್ವಜ್ಞತ್ವಂ ತತ್ತ್ವಮುಕ್ತಾಕಲಾಪೇ" ಎಂದು ಒಂದೇ ವಾಕ್ಯದಲ್ಲಿ ಇದನ್ನು ಹೇಳಿರುವುದು ಬಹಳ ಸಮಂಜಸವಾಗಿದೆ.

ಇಷ್ಟೊಂದು ಕಠಿಣವಾದ ಕೆಲಸವನ್ನು ಪೂರೈಸುವುದರಲ್ಲಿ ನನ್ನಲ್ಲಿ ಇರುವ ಸಾಮಗ್ರಿಯನ್ನು ನೋಡಿದರೆ ಖಂಡಿತವಾಗಿಯೂ ಈ ಕೆಲಸವನ್ನು ನಾನು ಮಾಡಿದ್ದೇನೆ ಎನ್ನುವುದಕ್ಕೆ ಯಾವ ಆಧಾರವೂ ಸಿಕ್ಕದು. ನನ್ನ ಪರಮ

ಗುರುಗಳಾಗಿದ್ದ ಶ್ರೀ ಶ್ರೀ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿಗಳ ಪರಿಪೂರ್ಣ ಅನುಗ್ರಹದ ಬಲದಿಂದಲೇ ಈ ಕೆಲಸ ನೆರವೇರಿದೆ.

ನನ್ನ ನಿರೀಕ್ಷೆಗಿಂತಲೂ ಕೆಲಸ ಬಹಳ ಕಷ್ಟಕರವಾಗಿತ್ತು. ಆದರೂ ಗುರುಗಳ ಅನುಗ್ರಹದಿಂದಲೂ, ದೇವರ ಕೃಪೆಯಿಂದಲೂ ಯಥಾಶಕ್ತಿ ನನ್ನ ಕರ್ತವ್ಯವನ್ನು ಪಾಲಿಸಿರುವೆನು. ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದನ್ನು ವಿದ್ವಾಂಸರೇ ನಿರ್ಣಯಿಸಬೇಕು.

ನನ್ನ ಪಾಲಿಗಂತು, ಹಗಲಿರುಳು ನನ್ನ ತಲೆಯಲ್ಲಿ ಈ ವಿಷಯವೇ ಇಲ್ಲಿಯವರೆಗೆ ತುಂಬಿಕೊಂಡಿತ್ತು. ಆ ಭಾರ ಇಳಿಯಿತು. ಅಷ್ಟಕ್ಕೆ ನನಗೆ ಈಗ ನೆಮ್ಮದಿ. ಇದರಲ್ಲಿ ಗುಣಗಳು ಏನಾದರಿದ್ದರೆ, ಅದು ಗುರುಗಳ ಆಶೀರ್ವಾದದ ಫಲ; ನನಗೆ ಈ ಮಹಾಗ್ರಂಥವನ್ನು ಅಕ್ಷರಶಃ ಪಾಠ ಹೇಳಿದ ಸುಪ್ರಸಿದ್ಧ ಮಹಾವಿದ್ವಾನ್ ಶ್ರೀ॥ ಉ॥ ವೇ॥ ಆತ್ಮಕೂರು ದಿಕ್ಷಾಚಾರ್ಯ ಸ್ವಾಮಿಗಳ ಅನುಗ್ರಹದ ಫಲ.

ಶ್ಲೋಕಗಳಿಗೆ ಪ್ರತಿಪದಾರ್ಥವನ್ನು ಕೊಟ್ಟು ಅರ್ಥ ಬರೆದರೆ ಗ್ರಂಥ ಬಹಳ ದೊಡ್ಡದಾಗುತ್ತಿತ್ತು ಮತ್ತು ಅರ್ಥ ದೃಷ್ಟಿಯಿಂದ ಅದರ ಸೌಂದರ್ಯ ಕೆಡುತ್ತಿತ್ತು ಎಂದು ಭಾವಿಸಿ ತಾತ್ಪರ್ಯಾನುವಾದವನ್ನೇ ಇಲ್ಲಿ ಮಾಡಲಾಗಿದೆ. ಸಾಧ್ಯವಾದ ಮಟ್ಟಿಗೆ ಸರಳ ಕ್ರಮವನ್ನೇ ಅನುಸರಿಸಲಾಗಿದೆ. ಆದರೂ ವಿಷಯ ಸ್ವತಃ ಬಹು ಕಠಿಣವಾದುದರಿಂದ "ಈ ಸರಳತೆ ಸಾಲದು" ಎಂದು ತೋರುವುದು ಸಹಜ. ಇನ್ನೂ ಸರಳೀಕರಣ ಮಾಡಬಹುದಾದರೂ ಸಾವಿರಾರು ಪುಟ ಅದಕ್ಕೆ ಹಿಡಿದೀತು. ಆದ್ದರಿಂದ ಪ್ರಕೃತ, ಸ್ವಲ್ಪ ಮಟ್ಟಿಗೆ ಸಂಸ್ಕೃತದ ತಳಹದಿ ಇರುವವರನ್ನು ಉದ್ದೇಶವಾಗಿಟ್ಟುಕೊಂಡು ಈ ಅನುವಾದವನ್ನು ಮಾಡಲಾಗಿದೆ. ಕಠಿಣ ಪದಗಳಿಗೆ ವಿವರಣೆಯನ್ನು ಕೊಡಲಾಗಿದೆ. ವಿಷಯಗಳನ್ನು ಸುಲಭವಾಗಿ ದೊರಕಿಸಿಕೊಳ್ಳುವ ಉದ್ದೇಶದಿಂದ ಅಕಾರಕ್ರಮದಲ್ಲೂ ಒಂದು ವಿಷಯಾನುಕ್ರಮಣಿಕೆಯನ್ನು ಕೊಡಲಾಗಿದೆ.

ನನ್ನ ಪರಿಮಿತ ಪ್ರಜ್ಞೆ, ಶಕ್ತಿ ಮತ್ತು ಸಾಮಗ್ರಿಯಲ್ಲಿ ನನ್ನ ಕರ್ತವ್ಯವನ್ನು ನಿರ್ವಂಚನೆಯಾಗಿ ನಾನು ಮಾಡಿದ್ದೇನೆ ಎಂಬ ಆತ್ಮತೃಪ್ತಿ ನನ್ನಲ್ಲಿ ಮೂಡಿದೆ. ಇದಕ್ಕೆ ಕಾರಣ ನನ್ನ ಪ್ರಾಮಾಣಿಕತೆ ಮಾತ್ರವೇ ಆಗಿರಲೂ ಸಂಭವ !

ಈ ಮಹತ್ಕಾರ್ಯದಲ್ಲಿ ನನ್ನನ್ನು ಪ್ರೇರಿಸಿ ಈ ಜ್ಞಾನಯಜ್ಞಕ್ಕೆ ನನಗೆ ಅವಕಾಶ ಮಾಡಿಕೊಟ್ಟ ಶ್ರೀಮತ್ ಪರಮ ಹಂಸೇತ್ಯಾದಿ ಶ್ರೀ ಶ್ರೀ ಶ್ರೀಮದಭಿನವರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳಿಗೆ ನಾನು ಸಂಪೂರ್ಣ ಆಭಾರಿ.

ದಾರ್ಶನಿಕ ಪಂಡಿತ
ವಿದ್ವಾನ್ ಕೆ.ಎಸ್. ವರದಾಚಾರ್ಯರು

ಸಂದರ್ಶನ

{ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಜುಲೈ 2011 ರ ವಾರ್ತಾಪತ್ರದಲ್ಲಿ ಪ್ರಕಟಿತವಾದ ಸಂದರ್ಶನದ ಭಾಗ, ಸಂದರ್ಶಕರು: ವಿದ್ವಾನ್ ಟಿ.ಎನ್. ಪ್ರಭಾಕರ}

ಸಂದರ್ಶಕ: ಪಂಡಿತೋತ್ತಮರಿಗೆ ಪ್ರಣಾಮಗಳು, ತ್ರೈಮಾಸಿಕ ವಾರ್ತಾಪತ್ರಿಕೆಗೆ ತಮ್ಮನ್ನು ಸಂದರ್ಶಿಸಲು ನನಗೆ ಬಹಳ ಸಂತೋಷವೆನಿಸಿದೆ. ನನ್ನ ಕೆಲವು ಪ್ರಶ್ನೆಗಳಿಗೆ ತಾವು ಉತ್ತರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಆಚಾರ್ಯರು: ಒಳ್ಳೆಯದು. ನನಗೆ ತಿಳಿದಷ್ಟು ಉತ್ತರಿಸುತ್ತೇನೆ.

ಸಂದರ್ಶಕ: ಸಂಸ್ಕೃತ ಇಂದು ಪ್ರಸ್ತುತವೇ ?

ಆಚಾರ್ಯರು: ಸಂಸ್ಕೃತವು ಇಂದಿಗೂ, ಮುಂದೆಯೂ, ಈ ಹಿಂದೆಯೂ ಎಂದೆಂದಿಗೂ ಪ್ರಸ್ತುತ. ಇಂದು ವಿಭಿನ್ನ ಕ್ಷೇತ್ರಗಳಲ್ಲಿ ಅಧ್ಯಯನ, ಸಂಶೋಧನೆಗಳು ವರ್ಧಿಸಿದಂತೆ ಹೊಸ ಹೊಸ ಜ್ಞಾನಶಾಖೆಗಳು ಹುಟ್ಟಿಕೊಂಡಿವೆ. ಈ ಎಲ್ಲಾ ಹೊಸಜ್ಞಾನ ಶಾಖೆಗಳೊಂದಿಗೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಂಸ್ಕೃತ ಭಾಷೆಯ, ಸಾಹಿತ್ಯದ, ಶಾಸ್ತ್ರಕಾಯದ ನಿಕಟ ಸಂಬಂಧವಿದೆ. ಆದರೆ ಈ ಎಲ್ಲವನ್ನು ತಿಳಿಯಲು ಬೇಕಾದ ನಾನಾ ಶಾಸ್ತ್ರಗಳನ್ನು ನಾವಿಂದು ಪಾತಾಳಕ್ಕೆ ತಳ್ಳಿದ್ದೇವೆಂಬುದು ಶೋಚನೀಯ ವಿಷಯ. ಇದಕ್ಕೆ ಒಂದೆರಡು ಉದಾಹರಣೆ ನೀಡಬಯಸುತ್ತೇನೆ. ನೋಡಿ, ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಮ್ಯಾನೇಜ್ಮೆಂಟ್ ತಂತ್ರಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಶುಕ್ರಾಚಾರ್ಯರ ಶುಕ್ರನೀತಿ ಸಾರದಲ್ಲಿ ಕಾಣಬಹುದಾಗಿದೆ. ಮಾನವಸಂಪನ್ಮೂಲದ ಬಳಕೆಯ ಬಗ್ಗೆ ರಾಮಾಯಣದಲ್ಲಿ ನೋಡಬಹುದಾಗಿದೆ. ಕೇವಲ ಮಾನವಸಂಪನ್ಮೂಲವೇ

ಮಾತ್ರವಲ್ಲ, ಶ್ರೀರಾಮನು ವಾನರಸೇನೆ ಹಾಗೂ ಕರಡಿಗಳ ಸೇನೆಯನ್ನು ರಚಿಸಿ, ಅದನ್ನು ಸಂಪನ್ಮೂಲವನ್ನಾಗಿ ಸಮರ್ಥವಾಗಿ ಬೆಳೆಸಿ ಬಳಸಿದ್ದನು. ಯಾವ ಋತುಮಾನದಲ್ಲಿ, ಯಾವ ಪ್ರದೇಶದಲ್ಲಿ ಹವಾಮಾನಕ್ಕೆ ತಕ್ಕಂತೆ ತರಕಾರಿ, ಹಣ್ಣು, ಧಾನ್ಯಾದಿಗಳನ್ನು ಬೆಳೆಸುವುದರ ಬಗ್ಗೆ ಶಾಸ್ತ್ರಗಳಲ್ಲಿ ವಿಪುಲ ಉಲ್ಲೇಖವಿದೆ. ಚಿಂತನೆಯಿದೆ. ಇವೆಲ್ಲ ಲೋಕೋಪಕಾರಕ ಚಿಂತನೆಯ ಸರಣಿ.

ಸಂದರ್ಶಕ: ದರ್ಶನಶಾಸ್ತ್ರಗಳ ಶಾಸ್ತ್ರೀಯಪರಂಪರೆ ಕ್ಷೀಣವಾಗುತ್ತಿರುವುದರ ಬಗ್ಗೆ ತಮ್ಮ ಅನಿಸಿಕೆಯೇನು?

ಆಚಾರ್ಯರು: ದರ್ಶನಶಾಸ್ತ್ರಗಳ ಉದ್ಗಮ, ವಿಕಾಸ, ಚಿಂತನೆ, ಅಪೂರ್ವವಾಗಿದೆ. ಸೂತ್ರ ಭಾಷ್ಯ, ವಾರ್ತಿಕ, ವ್ಯಾಖ್ಯಾನ, ಟೀಕೆ, ಕಾರಿಕೆ ಮುಂತಾದ ಪ್ರಕಾರಗಳನ್ನು ಗಮನಿಸಿದಾಗ ನಮ್ಮ ಪ್ರಾಚೀನರು ಎಷ್ಟೊಂದು ಸ್ವತಂತ್ರವಾಗಿ ವಸ್ತುನಿಷ್ಠವಾಗಿ ಚಿಂತನಶೀಲ ಪ್ರವೃತ್ತಿಯುಳ್ಳವರಾಗಿದ್ದರು ಎಂಬುದನ್ನು ಊಹಿಸಬಹುದು. ಇಂತಹ ನೂರಾರು ಕೃತಿಗಳನ್ನು ಗಮನಿಸಿದಾಗ ಸಂಸ್ಕೃತಜ್ಞರು ಅದೆಷ್ಟು ತೀಕ್ಷ್ಣಮತಿಗಳಾಗಿದ್ದರೆಂದು ಸ್ಪಷ್ಟವಾಗುತ್ತದೆ. ಆದರೆ ಅತ್ಯಂತ ಶೋಚನೀಯ ವಿಷಯವೆಂದರೆ ಇಂದು ಇಂತಹ ಶಾಸ್ತ್ರೀಯವಾದ ಆಳವಾದ ಅಧ್ಯಯನ, ನಿರ್ದಿಷ್ಟ ವಿಷಯದ ಬಗ್ಗೆ ವಾಕ್ಯಾರ್ಥಸಭೆಗಳು ಕಡಿಮೆಯಾಗುತ್ತಿವೆ. ಅಪರೂಪಕ್ಕೆ ಒಂದೊಂದು ಕಡೆ ಒಂದೊಂದು ಶಾಸ್ತ್ರದ ಅಧ್ಯಯನ, ಅಧ್ಯಾಪನ, ನಡೆಯುತ್ತಿದ್ದರೂ ಅದು ಸಮರ್ಪಕವಾಗಿಲ್ಲ. ಶಾಸ್ತ್ರಗಂಥಗಳಿಗೆ ನೇರವಾದ ಭಾಷ್ಯ ವ್ಯಾಖ್ಯಾನಗಳಿವೆ. ಅವುಗಳ ಅಧ್ಯಯನವು ಈಗ ನಡೆಯುತ್ತಿಲ್ಲ. ಅದರ ಬದಲಿಗೆ ಮಧ್ಯಕಾಲದ ವ್ಯಾಖ್ಯಾನ ಗ್ರಂಥಗಳ ಕೆಲವು ಭಾಗಗಳ ಪಾಠ ಪ್ರವಚನ ಮಾತ್ರ ನಡೆಯುತ್ತಿದೆ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಆ ದಿನಗಳು ಈ ಶತಕದಲ್ಲಿ ಬರುವ ಸಂಭವವಿಲ್ಲ. ಆ ದಿನಗಳು ಕಳೆದುಹೋದವು.

ಸಂದರ್ಶಕ: ಹಿಂದಿನ ದಿನಗಳಿಗಿಂತಲೂ ಈಗ ಸಂಸ್ಕೃತಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿದೆಯೆನಿಸುತ್ತಿದೆಯೇ?

ಆಚಾರ್ಯರು: ಹೌದು. ಇಂದು ಸಂಸ್ಕೃತಕ್ಕೆ ಸರ್ಕಾರಗಳು ವಿಶೇಷವಾಗಿ ಪ್ರೋತ್ಸಾಹ ನೀಡುತ್ತಿವೆ. ಭಾರತಸರ್ಕಾರವು ಸಂಸ್ಕೃತಕ್ಕಾಗಿ ನೂರಾರು ಕೋಟಿರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಕಾದಿರಿಸಿದೆ. ಆದರೆ ದರ್ಶನಶಾಸ್ತ್ರ, ಇನ್ನಿತರ ಜ್ಞಾನಪ್ರಕಾರಗಳನ್ನು ತಲಸ್ಪರ್ಶಿಯಾಗಿ

ಪಾಠಮಾಡಬಲ್ಲವರು ಇಲ್ಲ. ಪಾಠ ಕಲಿಯುವವರೂ ಇಲ್ಲದಂತಾಗಿದೆ. ಹೀಗಾಗಿ ಶಾಸ್ತ್ರಗಳ ಪ್ರೌಢಹಂತದ ಅಧ್ಯಯನ ಕನಸಿನ ವಿಷಯ. ಎಲ್ಲೆಡೆ ಸಂಸ್ಕೃತವನ್ನು ಭಾಷೆಯಾಗಿ ಪ್ರಾಥಮಿಕ ಹಂತದಲ್ಲಿ ಕಲಿಸುವ ಕೆಲಸ ಅತ್ಯಲ್ಪ ಪ್ರಮಾಣದಲ್ಲಿ ನಡೆಯುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ಕೂಡ ಸಂಸ್ಕೃತವನ್ನು ಭಾಷೆಯ ರೂಪದಲ್ಲಿ ಕಲಿಸಲು ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕು. ಹೀಗಾದಾಗ ಸಂಸ್ಕೃತದ ಪ್ರಥಮಸೋಪಾನವನ್ನಾದರೂ ಉಳಿಸಿಕೊಂಡಂತಾಗುತ್ತದೆ.

ಸಂದರ್ಶಕ: ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ವೇದಾಂತಶಾಖೆಗಳು ಅನುಭವದ ವಿಷಯವಾಗಬೇಕಿತ್ತು. ಆದರೆ ಇಂದು ಅನುಭವವಿಲ್ಲದೆಯೇ ಕಾದಾಟ ನಡೆಯುತ್ತಿದೆಯಲ್ಲ.

ಆಚಾರ್ಯರು: ಇದೊಂದು ಅತ್ಯಂತ ಸಾಮಯಿಕ ಪ್ರಶ್ನೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ ಎಂಬ ಪ್ರಸ್ಥಾನತ್ರಯಕ್ಕೆ ಆಚಾರ್ಯರು ತಾವು ಹೊಂದಿದ ಕಾಣ್ಕೆಯಂತೆ ಭಾಷ್ಯವನ್ನು ಅನುಗ್ರಹಿಸಿದ್ದಾರೆ. ಅದನ್ನು ಅಧ್ಯಯನ ಮಾಡಿ ತತ್ತ್ವಾನುಸಂಧಾನ ಮಾಡಿ ಸಾಕ್ಷಾತ್ಕಾರವನ್ನು ಹೊಂದಬೇಕು. ಇದು ಜೀವನದ ಚರಮ ಧ್ಯೇಯ. ಸಾಕ್ಷಾತ್ಕಾರ ನೂರನೇ ಮೆಟ್ಟಿಲಾಗಿರಬಹುದು. ಆದರೆ ನಾವು ಇನ್ನೂ ಎರಡು ಅಥವಾ ಮೂರನೇ ಮೆಟ್ಟಿಲನ್ನು ಏರಿದ್ದೇವೆ. ಕಾಣದ ದೃಶ್ಯದ ಬಗ್ಗೆ ಊಹಾಪೋಹಮಾಡಿಕೊಂಡು ವಾದ ವಿವಾದಗಳನ್ನು ನಡೆಸುತ್ತಿದ್ದೇವೆ. ಖಂಡನೆ ಮಂಡನೆಗಾಗಿ ಲೆಕ್ಕವಿಲ್ಲದಷ್ಟು ಲೇಖನಗಳು ಪುಸ್ತಕಗಳು ಪ್ರಕಟವಾಗಿವೆ. ರಾಗದ್ವೇಷಗಳು ಹೆಚ್ಚಾಗಿವೆ. ಮನಸ್ಸಮಾಧಾನವೆಂಬುದು ದೊರೆಯಲೇ ಇಲ್ಲ. ಈ ಹಂತದಲ್ಲಿ ಇದನ್ನು ನೆನಪಿಸಿ ಕೊಳ್ಳಬೇಕು –

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಮಿದಂ ಮನಃ ॥

ಸಂದರ್ಶಕ: ವೇದಶಾಸ್ತ್ರಗಳ ಅಧ್ಯಯನ ಕೆಲವರಿಗೆ ಮಾತ್ರ ಸೀಮಿತವೇ?

ಆಚಾರ್ಯರು: ಖಂಡಿತವಾಗಿಯೂ ಇಲ್ಲ. ಆಸಕ್ತರೆಲ್ಲರೂ ಇದಕ್ಕೆ ಅರ್ಹರು. ಜನರ ಮನಸ್ಸನ್ನು ಹದಗೊಳಿಸಲೆಂದೆ ಸಂಸ್ಕಾರಕೊಡಲು ವೇದಶಾಸ್ತ್ರಗಳು ಪ್ರವೃತ್ತವಾಗಿವೆ. ಆದ್ದರಿಂದ ವೇದಶಾಸ್ತ್ರಾಧ್ಯಯನವನ್ನು ಆಸಕ್ತರೆಲ್ಲರೂ ಮಾಡಬಹುದು. ಸ್ತ್ರೀಯರೂ ಅಧ್ಯಯನ ಮಾಡಬಹುದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸಂದರ್ಶಕ: ತಮ್ಮ ಅಧ್ಯಯನ ದಿನಗಳ ಬಗ್ಗೆ ಬೆಳಕು ಹಾಕಬಹುದಲ್ಲ?

ಆಚಾರ್ಯರು: ಓಹೋ! ಅವಶ್ಯವಾಗಿ. ನನ್ನದೇ ಹೆಸರಿನ ಇನ್ನೂ ಇಬ್ಬರು ದಿವಂಗತ ಇ.ಎಸ್. ವರದಾಚಾರ್ಯರು (ಮೀಮಾಂಸಾ). ಎಸ್. ಎಮ್.ಎಸ್. ವರದಾಚಾರ್ಯರು (ವ್ಯಾಕರಣ) ನನ್ನ ಸಹಪಾಠಿಗಳಾಗಿದ್ದರು. ಹೀಗಾಗಿ ನಮ್ಮನ್ನು ವರದತ್ರಯರೆಂದು ಎಲ್ಲರೂ ಗೌರವಿಸುತ್ತಿದ್ದರು. ನಮ್ಮ ಗುರುಗಳು ದೀಕ್ಷಾಚಾರ್ ಎಂಬುವವರು. ನಾವು ಮನೆಯಿಂದ ಸಂಸ್ಕೃತ ಪಾಠಶಾಲೆಗೆ ನಡೆದುಕೊಂಡೇ ಹೋಗುತ್ತಿದ್ದೆವು. ದಾರಿಯುದ್ದಕ್ಕೂ ಸೂತ್ರ ಹಾಗೂ ಭಾಷ್ಯಗಳ ವಾಕ್ಯಗಳನ್ನು ಆವೃತ್ತಿಮಾಡುವುದು ನಮ್ಮ ಪ್ರವೃತ್ತಿಯಾಗಿತ್ತು. ಇದನ್ನು ನೋಡುತ್ತಿದ್ದ ಗೃಹಸ್ಥರು ಈ ರಸ್ತೆಯ ಗಿಡಮರಗಳಿಗೂ ಸೂತ್ರಭಾಷ್ಯ ಕಂಠಸ್ಥವಾಗಿದೆ ಎಂದು ಹಾಸ್ಯಮಾಡುತ್ತಿದ್ದರು. ಆಗ ನಮಗೆ ಶಾಸ್ತ್ರಚಿಂತನೆ ಎಂಬ ಏಕಾಂಶಕಾರ್ಯಕ್ರಮ ಮಾತ್ರ ಇರುತ್ತಿತ್ತು. ಭೂತ ಭವಿಷ್ಯದ ಬಗ್ಗೆ ಚಿಂತೆ ಇರುತ್ತಿರಲಿಲ್ಲ. ಸ್ವಾಧ್ಯಾಯವನ್ನು ನಾವು ತಪಸ್ಸನ್ನಾಗಿಯೇ ಭಾವಿಸಿದ್ದೆವು.

ಸಂದರ್ಶಕ: ತಾವು ಸ್ಥಾಪಿಸಿರುವ ಗುರುಕುಲದ ಗುರಿ ಏನು?

ಆಚಾರ್ಯರು: ಇದೊಂದು ಪ್ರಾಯೋಗಿಕ ಗುರುಕುಲ ಮಾತ್ರ ನೇಪಾಳದ ಉದ್ಯಮಿಯೊಬ್ಬರು ಪ್ರತಿ ತಿಂಗಳು 20000 ರೂ. ಧನಸಹಾಯ ಮಾಡುತ್ತಾರೆ. ಅವರ ಸದಾಶಯದಂತೆ ಈ ಗುರುಕುಲವು ನಡೆಯುತ್ತಿದೆ. ಇಲ್ಲಿ ಬಹುತೇಕ ನೇಪಾಳದ ವಿದ್ಯಾರ್ಥಿಗಳೇ ಶಾಸ್ತ್ರ ವ್ಯಾಸಂಗ ಮಾಡುತ್ತಾರೆ. ಜ್ಞಾನ ದೃಷ್ಟಿಯಿಂದಲೇ ಹೊರತು ಪರೀಕ್ಷಾ ದೃಷ್ಟಿಯಿಂದಲ್ಲ.

(ಇಲ್ಲಿಗೆ ಸಂದರ್ಶನ ಮುಗಿದಿದೆ)

****

ಗ್ರಂಥ–ಋಣ

ವಾರ್ತಾಪತ್ರ

ಸಂಚಿಕೆ – ಜುಲೈ – 2011

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು – 18

APPENDIX

Regards.....Congratulations.....

"स गुरुः यः अधिगततत्वः शिष्यहिताय उद्यतः सततम्" ("Sa guruḥ yaḥ adhigatatatvaḥ śiṣyahitāya udyataḥ satatam") – "He who knows the principle and is ready for the continuous welfare of the disciple is truly a Guru" - this is the saying of Adi Guru Acharya Shankara. Such Gurus are available in life only through Sukrita. Similarly, it is also through Sukrita that a worthy disciple is available to the Guru. That is why the Upanishad orders – ".....प्राप्य वरान् निबोधत" (".....Prāpya Varān Nibōdhata").

`A worthy disciple for a master, a great master for a disciple' - this is a rare combination. Such a rare "Guru-Śiṣya Samāgama" can be found among "Panditaratnam K.S.Varadacharya and Shrimad Jagadguru Shankaracharya Sonda Swarnavalli Shri Gangadharendra Saraswati Mahaswamiji". Panditaratnam K.S.Varadacharya of Mysuru was the one who imparted the secret of knowledge to the disciples as an authority. Shri Shri Gangadharendra Saraswati Mahaswamiji is the one who has acquired the knowledge from Shriyuta Varadacharya and has elevated himself to the pinnacle of achievement and also involved in Ātmōddhāra and Dharmōddhāra. Such a Guru-Śiṣya Tradition is the ideology of Sanātana Dharma.

Panditaratnam K.S.Varadacharya was a scholar from his teaching-speech-research-writing works. He gave the world, the fragrance of knowledge like a flower hidden behind the leaves. It is a fortune to have such a scholar as teacher to our Swamiji before and after his Sanyāsāshrama. When Swamiji decided to reveal the greatness of his Sadhguru to the world, the `Corona pandemic' spread everywhere and the world came to a standstill. By the time the world became active again, Panditaratnam had departed the mortal world at the age of 100. Undeterred by his resolve, our Swamiji decided to pay his admiration to the Acharya in Mysuru, the Karmabhumi of Panditaratnam K. S. Varadacharya.

Swamiji had arrived to Mangaladhama (Brahmin Street) of Shrirangapattanam, near Mysuru for holy work on 26th January 2022, also, organized a meeting with his and Acharya's disciples, scholars and dignitaries. Consensus after optimistic discussion – "Panditaratnam K.S.Varadacharya Centenary Celebration Committee" was formed. Heeding to the unanimous prayers of all, Swamiji agreed to become the honorary president of the committee and provide guidance. The committee was extended to have three more honorary presidents, a president, a working president, eight vice presidents, a treasurer, an organizer, a chief secretary and two secretaries. Shri B.V.Ilaiy Alwar Swamyji, who is active in cultural and social field of Mysuru was selected as the Working President and

Vidwan A.M.Chandrasekhar, the secretary of Veda Shastra Poshini Sabha, Mysuru was selected as the Treasurer of the Committee.

It was decided to make the Centenary Committee a unit of the Vedashastra Poshini Sabha and to open a separate bank account, so that, the financial affairs of the Committee would be conducted in a regular and transparent manner. A savings account was opened in Karnataka Bank, Ramanuja Road, Mysuru. It was also decided that the bank account will be jointly operated by the Treasurer Vidwan A.M.Chandrasekhara and the Chief Secretary Vidwan Heramba R Bhat. Further, regular online meetings were held every week under the presidency of Swamiji, and the outline of the program was decided.

The committee decided that this centenary celebration shall include an opening ceremony, release of a commemorative volume, a seminar consisting of three academic sessions namely "Matatraya Samanwaya", "Jīvana Samanwaya" and "Darśan Samanwaya", felicitation of four senior Vedic-Shastra scholars, a valedictory and recitations of Chaturveda and Tamil Divine Essays. Four sub-committees were formed namely Resource Mobilization Committee, Commemorative Volume Editorial Committee, Seminar Organising Committee and Parayana Organising Committee to facilitate the implementation of the above resolutions. Shri.H.V.Rajeev, Chairman, MUDA, Mysuru, Vidwan Dr. H. V. Nagaraja Rao, renowned scholar,

Vidwan Dr. T. V. Satyanarayana, Eminent Scholar, Ve. Venkataramana Bhatta (Magodu), Purohit, were selected as head of the sub-committees respectively to accomplish the centenary celebration successfully.

Further, it was scheduled to organise the Veda and Prabandha Parayanas from 19th to 23rd October 2022, for five days at Shri Sitaraghava Prarthana Mandira, Krishnamurthypuram, Mysuru. The release of Commemorative Volume, Seminars, Awards for Scholars etc. were scheduled on 22nd and 23rd, October 2022 at Sharada Vilas Centenary Hall, Mysuru.

Decision was made to arrange for accommodation and catering for the scholars, priests and the invited dignitaries, breakfast for the volunteers, lunch and afternoon snacks for the spectators participating in the programs for five days. In regular meeting presided over by our Swamiji, all these matters were thoroughly discussed and ensured that specific responsibilities were given to the members of the committee. As a result of this preliminary preparation, the centenary celebration was a success beyond expectations and praised by all.

Heartfelt thanks and congratulations to all the committee members who contributed to the unprecedented success of the program.

There is no doubt that the success of the program is due to the determination, guidance, divine presence and blessings of Shri Shri Gangadharendra Saraswati

Mahaswamiji. Humble Pranamas to Honourable Swamiji who engaged us in this noble cause and made us credible.

Heartfelt thanks to the president of the committee Dr. Prof. K E Devanathan, Vice Chancellor, Karnataka Samskrita University, Bengaluru who guided all the way.

The enthusiasm of Shri Ilaiy Alwar Swamiji, the working president of the committee, and his ability to encourage, unite and lead us to accomplish this great task will not be forgotten. Pranamas to Ilaiy Alwar Swamiji who was our source of inspiration to achieve each task, including resource gathering, and have contributed to the success of the celebration.

Heartfelt thanks to Shri B.S.Sundaresh, Shri Satish Bhat, Shri N.T.Hegde, Ve. Venkataramana Bhatta (Magodu) and members of Vaidika Group, who put efforts for resource mobilisation.

Heartfelt gratitude to Dr. Swami Sathyaprasad Dasji, Co-editor and Dr. B.V.Ramapriya Bhattacharya, Secretary, who approached the disciples and admirers of Acharya in Gujarat and mobilized a large quantity of resource for the centenary celebration, due to which the centenary events could be held with grandeur.

Vidwan Dr.T.V.Satyanarayana, an eminent scholar, who cooperated in all the activities of the centenary celebration and was successful in organizing the seminar, along with his associates Prof. T.N.Prabhakara, Vidwan Ganapathi

Bhat (Sankadagundi), Vidwan Dr.N.Subrahmanya Bhatta, Vidwan Venkataramana Bhatta (Manadur), Vidwan Sripada Bhatta, Vidwan Dr.Chakravarti Ramachandra, Vidwan Dr.N.R.Muralidhara, Vidwan Nagaraja Bhatta (Hirikai), Vidwan V.L.Hegde deserve a heartfelt gratitude.

Heartfelt congratulations to the committee member Shri Shriharsha Bhatta (Software Engineer) who videographed the entire two-day stage program held at the Sharada Vilasa Centenary Hall and uploaded it to YouTube.

Ve.Venkataramana Bhat (Magodu), Vidwan Venkataramana Bhatta (Pushkarani), Ve.Murari Bhat (Tarimakki), Ve.Ananta Bhat (Gunda), Ve.Narasimha Bhat (Hegadakatta), and the team of Vaidikas are praiseworthy for organising the recitation of Rigveda, Shukla-Krishna Yajurveda, Samaveda, Atharvaveda and Tamil Divine Essays in a regular and classical manner.

The members of Swarnavalli Seva Pratishthanam of Mysuru and the members of Matru Mandali have given their cooperation for the success of the celebration and are grateful.

Hygienic and delicious food was served in a befitting manner for centenary celebration on all five days by Shri N.Nagendra Bhat, Proprietor, NNB Catering, who is a also a member of the committee. Admiration to Shri Nagendra Bhat and his team.

Swamiji visited Mysuru thrice, including the six days during centenary celebration to provide guidance for the success of the event. Vidwan V.L.Hegde, Shri Satish Bhat and Shrimati Sandhya Ravi are admirable for arranging the accommodation and food for Swamiji and his disciples during this entire period.

Abundant thanks to Shri Sindhoora Bhat, Personal Secretary to Swamiji who made the centenary celebration a success by communicating between the Centenary Celebration Committee and Swamiji as facilitator.

The centenary celebration of Panditaratnam K.S.Varadacharya, which was unprecedentedly and meaningfully accomplished, will remain a record forever from the Commemorative Volume which was released during the inauguration held on 22nd October 2022 by Shri Vishweshwara Hegde Kageri, Hon'ble Speaker of the Legislative Assembly, Government of Karnataka. Presently, the work of including rare photographs of the centenary celebration and unpublished & valuable articles of Varadacharya in this volume are under progress. The size of the present volume is more than a thousand pages, and for convenience, it was decided to divide this volume and publish Varadacharya's articles as a separate book with the title "Sathyānveśanam". It is a proud privilege that, both these volumes will be published under the editorship of Dr.H.V.Nagaraja Rao.

Adorations to all the honourable Seers, who gave the auspicious message and blessed the success of the Centenary Celebration. Appreciation to all the respected authors who have contributed valuable articles timely and enhanced the significance of the commemorative volume. Abundant thanks to the editors and co-editors who worked hard to publish the volume. Respectful appreciations to Vidwan Dr.T.V. Satyanarayana, who worked hard to prepare the report of the program and revise the draft of the articles. Prof. T.N.Prabhakara, Vidwan K.R. Sridhara, Dr. Sridhara Bhat Ainakai, Dr. Venkataramana Hegde, Dr. Udaya Bhat, Vidwan Viswanatha Bhat Agnihotri, Vidwan Ganapati Bhat (Sankadagundi), Vidwan Narayan Desai, Dr. Shrikrishna Bhat, Vidwan Nagaraja Bhat (Hirikai), Vidwan Venkataramana Bhat (Pushkarani) are praiseworthy for the scrutiny of the articles.

Heartfelt greetings to Vidwan Dr. H.V.Nagaraja Rao, Editor-in-Chief, Vidwan Dr. Umakanta Bhat, Vidwan Gangadhara Bhat, Vidwan Dr.M.A. Alwar, Editors and Vidwan Dr. Guruprasad, Sub-Editor & Co-ordinator, who put the best effort to bring the volume in a befitting way.

Resources are essential to make a program successful. Heartfelt salutations to gentlemen who have responded to the appeal of the committee by contributing money generously and sponsoring for centenary celebration to make it a success. Revered Pranamas to all the Paramapujya Acharyas who have wished for the success of the celebration

with "Swarna Mantrakshata".

Apart from the accumulation of resources, its protection and utilization also play an important role in good deeds. A trustworthy in financial dealings, Vidwan A.M.Chandrasekhara, Treasurer of the Committee, performed this responsible task and is commendable for managing the budgets in an orderly, accurate and transparent manner, with unquestionable distribution of resources.

Heartfelt thanks to Sri K.Lokesh for illustrating the photographs of K.S.Varadacharya and Smt. Vanishree and Smt. Gowri for digitizing the volume.

Gratitude and appreciation to Shri Suvrateendra Acharya and Shri A. Srinivasa, Proprietors of Vani Press, Mysuru for printing elegantly the volume "Samanvaya Varada" and Smt.B.C.Meerra, Proprietrix of Annapoorna Press, Mysuru for printing attractively the volume "Satyanveshanam"

This article would not be complete without mentioning one of the secretaries of the committee, Shri Manjunath Hegde (Golikai), who has worked diligently in all the activities of the centenary celebration. Expressing that - "we both discussed regularly about the pending and future tasks and worked together for the success of the celebration without differences" would not be an exaggeration. "क्लेशःफलेन हि पुनर्नवतां विधत्ते" ("Klēśaḥ phalēna hi

punarnavatāṁ vidhatte") - this is the verse of poet Kalidasa. To sum up, the success of the centenary celebration has kept away our distress and renewed our spirit with gratitude.

Regards and Congratulations to One and All.

Vidwan Heramba R. Bhat
Chief Secretary
Panditaratnam K.S.Varadacharya
Centenary Celebration Committee,
Mysore

Panditaratnam K. S. Varadacharya Centenary Celebration Committee, Mysuru

Honorary Presidents

Jagadguru Shri Gangadharendra Sarasvathi Mahaswamiji
Shri Svarnavalli Mahasamsthanam, Sonda, Shirasi

Jagadguru ShrimadAbhinava Vageesha
Brahmatantra Swatantra Parakala Mahaswamiji,
Sri Parakala Matha, Mysuru

Shri Yadugiri Yatiraja Narayana Ramanuja Jeeyar Swamiji
Sri Yaduguri Yatirajamatha, Melukote

Sadguru Shri Madhavapriya Dasji Swamiji
Shri Swamy Narayana Gurukula, Gujarat

President - **Dr. Prof. K. E. Devanathan**
Vice Chancellor, Karnataka Samskrita University, Bangaluru

President Welcome Committee - **Sri S.A. Ramadas**
MLA, Krishnaraja Constituency, Mysuru

Working President - **Sri B. V. Ilaiy Alwar Swamiji**
Sri Vangipuram Nambi Matha,
Melukote

Vice Presidents- **Sri M. K. Gopala Iyengar**
President, Sri VaishnavaSabha, Mysuru

Vid. Dr. Bhanuprakasha Sharma,
Dharmika Leader, Srirangapattana

Sri H. N. Ramatirtha
Aravinda Parimala Works, Mysuru

Sri D. T. Prakash
President, City and District Brahmana Sangha, Mysuru

Prof. B. N. Nagaraja Bhat
President Veda Shashtra Poshini Sabha, Mysuru

Sri B. V. Manjunatha
Chairman, Bhagavadgita Abhiyana Samiti, Mysuru

Sri G. M. Hegde
Industrialist, Chamarajanagara

Sri D. N. Krishnamurthy
Former President Haveeka Sangha, Mysuru

Treasurer - **Vid. A. M. Chandrashekhara**, Mysuru

Organizer - **Sri Krishna Kashyap**, Bengaluru

Chief Secretary - **Vid. Heramba R. Bhatta**, Mysuru

Secretaries - **Vid. Dr. B. V. Ramapriya**, Gujarat
Sri Manjunatha Hegde, Mysuru

Resource Mobilisation Committee

President - **Shri H. V. Rajeev**
Former President, MUDA, Mysuru

Vice President - **Poojya Shri Shastri Nirmal Dasji Swamy**
President, Sadvidya Dham, Rajkot

Secretary - **Shri B. S. Sundaresh**
Academic Adviser, Sapient College of Commerce and Management, Mysuru

Co-Ordinator - **Shri Satish Bhat** President,
President, Swarnavalli Seva Pratisthana, Mysuru

Members - **Shri M. V. Ramaprasad**
Corporator, MCC, Mysuru

Shri M. V. Ravishankara
Former President, Lac and Paints, Mysuru

Dr. Raghuram Vajpayee
Senior Social Worker, Mysuru

Shri R. Raghuvira
Treasurer, Sri Vaishanava Sabha, Mysuru

Shri Shrinivasa Bhatta
Dhatri Properties, Mysuru

Shri N. V. Hegade
Hotel Srinagara, Mysuru

Shri N. Nagendra Bhatta
President, Havika Sangha, Mysuru

Shri N. T. Hegade
President, Swarnavalli Seema Parishat, Mysuru

Commemoration Volume Editorial Committee

Chief Editor - **Vid. Dr. H. V. Nagaraja Rao**, Mysuru

Editors - **Vidyavachaspati. Umakantha Bhat**, Kerekai
Vid. Gangadhara. V. Bhat, Aggere
Vid. Dr. M. A. Alwar, Mysuru

Co-Editors - **Dr. Satyaprasad Swamiji,** Gujarat
Dr. Raghunathacharya, Gujarat
Vid. Dr. V. D. Hegde, Mysuru
Vid. Dr. Vijayaraghavan, Hyderabad
Vid. Dr. K. L. Prasannakshi, Mysuru
Dr. K. V. Ramapriya, Mysuru
Dr. M. A. Jayashri, Mysuru
Vid. H. S. Varadarajan, Mysuru
Vid. Vishwanath Bhat, Agnihotri , Mysuru
Vid. Dr. Subramanya Bhat, Mysuru
Vid. Dr. N. R. Muralidhara, Mysuru
Vid. Venkataramana Bhat, Mysuru

Sub Editor &
Coordinator -**Vid. Dr. Guruprasad**, Mysuru

Committee for organise the Seminars

Chief Convener - **Vid. Dr. T. V. Satyanarayana**, Mysuru
Convener - **Prof. T. N. Prabhakara**, Mysuru
Co-ordinator - **Vid. Ganapathi Bhatta**, Sankada Gundi, Mysuru
Members - **Vid. Shripada Bhatta**, Mysuru
Shri Shriharsha Bhatt, Mysuru
Vid. Dr. Chakravarthi Ramachandra, Mysuru

Vid. V. L. Hegde, Mysuru
Vid. Narayana Desayi, Mysuru
Vid. Nagaraja Bhatta, Hirikai, Mysuru

Committee for organise the Paaraayana

Chief Convener - **Ve. Venkataramana Bhatta**, (Magodu), Mysuru

Convener - **Ve. Venkataramana Bhatta,** (Pushkarini) Mysuru

Members - **Ve. Murari Bhatta,** (Tarimakki),Mysuru
Ve. Ananta Bhatta, (Gunda),Mysuru
Ve. Narasimha Bhatta, (Hegadekatta),Mysuru



अनूक्तिः

श्रीमतां दिवङ्गत के.एस्. वरदाचार्याणां शतमानोत्सवसन्दर्भे संस्मरणग्रन्थः प्रकाशनीयः इति तेषां शिष्यनिवहः प्रवृतः । विद्वज्जनाः परमादरेण गुरुवर्याणां तत्त्वसमन्वयरुचिमादृत्य तस्य ग्रन्थस्य 'समन्वयवरदः' इति संज्ञां कर्तुमैच्छन् । तेषां साहचर्येण मुदिता अनेके विद्वांसः विविधविषयमधिकृत्य लेखनान्यलिखन् । तेषां लेखनानां समूहेन एको ग्रन्थः प्रकाशितः । श्रीमदाचार्याणां प्रतिभासम्पत् पृथक् प्रदर्शयितुं ग्रन्थान्तरं प्रकाशनीयमिति मतिरुदिता । तदर्थं द्वितीयोयं ग्रन्थः प्रकाश्यते ।

सुदीर्घगम्भीराध्ययनतपसा आचार्यैः श्रीमद्वाल्मीकिरामायण-ब्रह्मसूत्रवृत्ति-न्यायमञ्जरीप्रभृतयः उद्ग्रन्थाः सम्पादिताः । तत्तपोभूमिकया तत्र तत्र ग्रन्थेषु प्रस्तावनाव्याजेन तेषां तेषां ग्रन्थानां सारिष्ठमंशं सविमर्शं न्यवेदयन् । बृहत्कृतीनां सारग्रहणं दुष्करम् । गृहीतसारप्रसारणन्तु सुदुस्तरम् । तत्रापि सरलं सरसं ससारं लेखनं प्रतिभावतामपि निकषायते । तत्रोत्तीर्णा आचार्यचरणाः । यद्यपि तत्तद्ग्रन्थाङ्गतया प्रकाशिता इमे लेखाः स्वतन्त्रतयापि पठिताः विभिन्नानुभवाय कल्पन्ते । अतः नूतनोऽयमुपक्रमः समादृतः ।

अनेनानेकेषां ग्रन्थानां भावार्थः एकत्रोपलभ्यते । अत्र कतिपयलेखाः प्रकाशितपूर्वाः कतिपयलेखाः पूर्वममुद्रिताः । ये च अमुद्रिताः ते सन्दर्भविशेषे विलिखिता अत्र सन्निवेशिताः । लेखनकलाभिज्ञाः सदा जागरूका भवन्ति । तत्रापि प्रस्तावनारचनायां तेषां प्रतिभादीप्तयः विशेषतया विद्योतन्ते । तासां प्रतिभादीप्तीनां सङ्कलनमत्रैकत्र उपलभ्यते । एतेन आचार्यचरणानां प्रतिभावल्लर्याः विविधवर्णरञ्जितानि ससंस्कारगन्धीनि वाक्कुसुमानि सुमनसां प्रीत्यै भवेदेवेति विचिन्त्य पुनरुक्तिः न दोषाय अपि तु मननाय मन्यत इति अत्र उद्युक्ता वयम् । एतेन आचार्यविचारधारा बहूनां वाचकानां विचारपथमारोहतु इत्याशास्महे ।

आचार्यवशंवदः

विद्वान् ॥ गङ्गाधर. वि. भट्ट